ಶ್ರೀಃ

ಉಭಯ ವೇದಾನ್ತ ಪ್ರವರ್ತನ ಸಭಾ

ಪುರುಷಾರ್ಥಕಲ್ಪದ್ರುಮ

ವೇದಾನ್ತಭಾಗ

೨.

ವಿಶಿಷ್ಟಾದ್ವೈತದೀಪಿಕೆ

ಆಸ್ಥಾನ ವಿದ್ವಾನ್ ಮಂ. ಅ. ಜಯರಾಮ ವೆಂಕಟಾಚಾರ್ಯರಿಂದ
ವಿರಚಿತವಾದುದು

ಉಭಯವೇದಾಂತ ಪ್ರವರ್ತನ ಸಭೆಯವರಿಂದ ಪ್ರಕಟಿಸಲ್ಪಟ್ಟಿದೆ.

ಬೆಂಗಳೂರು. ಸಿಟಿ.

ವಿ. ಬಿ. ಸುಬ್ಬಯ್ಯ ಅಂಡ್ ಸನ್ಸ್ ಯವರ ಮುದ್ರಾಕ್ಷರ ಶಾಲೆಯಲ್ಲಿ
ಮುದ್ರಿಸಲ್ಪಟ್ಟಿತು.

1933

ಅವತರಣಿಕೆ

ಪುಣ್ಯತಮವಾದ ಈ ಭಾರತಭೂಮಿಯಲ್ಲಿ ಅನಾದಿಕಾಲದಿಂದಲೂ ಸಕಲ ಚೇತನರಿಗೂ ಅವರವರ ಅಧಿಕಾರಾನುಗುಣವಾಗಿ ಐಹಿಕಾಮುಷ್ಮಿಕಫಲಸಾಧಕವಾದ ವಿದ್ಯಾಭ್ಯಾಸ, ಭಗವದ್ಭಕ್ತಿ, ಆತ್ಮಗುಣಸಂಪತ್ತಿ, ಅದಕ್ಕೆ ತಕ್ಕ ಆಚರಣೆ ಇವುಗಳು ಅವಿಚ್ಛಿನ್ನವಾಗಿ ನಡೆದುಬರುತ್ತಿದ್ದುವು. ಈಗ ಕಾಲವೈಪರೀತ್ಯದಿಂದಲೂ, ವಿದೇಶೀಯರ ಸಹವಾಸದಿಂದಲೂ ಈ ಭಾರತಮಂಡಲದಲ್ಲಿಯೇ ನಾಸ್ತಿಕ್ಯಬುದ್ಧಿ, ಸ್ವಧರ್ಮಭ್ರಂಶ, ಪರಧರ್ಮಾವಲಂಬನ ಇವು ಜನರಲ್ಲಿ ಹರಡುತ್ತ ಬಂದಿವೆ. ಆದುದರಿಂದ ಅನೇಕ ಜನರಿಗೆ ತಾವು ಈ ಮಾನವಜನ್ಮವನ್ನು ಪಡೆದುದಕ್ಕೆ ಏನನ್ನು ತಿಳಿಯಬೇಕು, ಯಾವುದನ್ನು ಸಾಧಿಸಬೇಕು, ಹೇಗೆ ಇದ್ದರೆ ತಮಗೆ ಇಹಪರಸಾಧನವಾಗುವುದು ಎಂಬ ಯೋಚನೆಯೇ ಇರುವಂತೆ ತೋರುವುದಿಲ್ಲ. ಈ ಅವದ್ಯಗಳನ್ನು ಪರಿಹರಿಸಿ ಜನರಲ್ಲಿ ಸ್ವಮತಶ್ರದ್ಧೆ ಸದಾಚಾರಗಳನ್ನು ಉಂಟುಮಾಡಬೇಕೆಂದು ಆಗಾಗ್ಗೆ ಮಹಾಜನರು ಪ್ರಯತ್ನಗಳನ್ನು ಮಾಡುತ್ತಲೇ ಇರುವರು. ಅವುಗಳಲ್ಲಿ ಮುಖ್ಯವಾಗಿ ಉಭಯವೇದಾಂತಪ್ರವರ್ತನ ಸಭೆಯವರು ನಮ್ಮ ವೈದಿಕವಿದ್ಯೆಗಳಿಗೆ ಪಾಠಪ್ರವಚನ, ಪಾಠಶಾಲಾಸ್ಥಾಪನ, ಪರೀಕ್ಷೆ, ಉತ್ತೀರ್ಣರಾದವರಿಗೆ ಬಹುಮಾನ ಇವುಗಳ ಮೂಲಕವಾಗಿ ಬಾಲಕರಿಗೆ ಪ್ರೋತ್ಸಾಹಪಡಿಸುತ್ತ ಬಂದಿರುವುದು ಸಫಲವಾಗಿಯೂ ಶ್ಲಾಘಾರ್ಹವಾಗಿಯೂ ಇದೆ. ವೈದಿಕಧರ್ಮಸೇವಾಭಿಲಾಷೆಯಿಂದ ನಾನೂ ಅನೇಕವರ್ಷಗಳಿಂದಲೂ ವೈದಿಕವಿದ್ಯೆಗಳನ್ನು ಪಾಠಪ್ರವಚನಾದಿಗಳಿಂದ ಉಪದೇಶಿಸುತ್ತಲೂ, ಅಲ್ಲಲ್ಲಿ ಅನೇಕ ಜನರಿಂದ ಪ್ರಾರ್ಥಿತನಾಗಿ ಆಸ್ತಿಕ್ಯ, ಧರ್ಮಶ್ರದ್ಧೆ, ಭಗವದ್ಭಕ್ತಿ, ಆಚಾರ ಮುಂತಾದ ವಿಷಯಗಳನ್ನು ಉಪನ್ಯಾಸಾದಿಗಳಿಂದ ಬೋಧಿಸುತ್ತಲೂ, ಮಿತ್ರಗೋಷ್ಠಿಗಳಲ್ಲಿ ಚರ್ಚೆಗಳಿಂದ ಧರ್ಮತತ್ತ್ವರಹಸ್ಯಗಳ ಸಂಶಯಗಳನ್ನು ನೀಗಿಸುತ್ತಲೂ, ಯಥಾಶಕ್ತಿ ವೈದಿಕಧರ್ಮಸೇವೆಯನ್ನು ಮಾಡುತ್ತಲೇ ಇದ್ದೆನು. ಇವುಗಳನ್ನು ನೋಡಿ ಕೇಳಿ ಸಂತೋಷಿಸಿದ ಆಸ್ತಿಕಮಹಾಜನರು "ತಾವು ಇವುಗಳನ್ನೆಲ್ಲಾ ಕ್ರೋಡೀಕರಿಸಿ ಪಂಡಿತಪಾಮರ ಸಾಧಾರಣವಾಗಿ ಸುಬೋಧವಾಗುವಂತೆ ದೇಶೀಯಭಾಷೆಗಳಲ್ಲಿ ಈ ವೈದಿಕಸಿದ್ಧಾಂತ ಗ್ರಂಥಗಳನ್ನು ರಚಿಸಿ, ಧರ್ಮಶ್ರದ್ಧಾಳುಗಳಾದ ಆಸ್ತಿಕ ಜನರುಗಳಿಗೆ ಉಪಕಾರ ಮಾಡಬೇಕು" ಎಂದು ಒತ್ತಾಯಮಾಡಿ ನಿಯೋಗಿಸಿದರು. ಸಮಾಜ ಹಿತೈಷಿಗಳಾದ ನಮ್ಮ ಮಿತ್ರಮಂಡಲಿಯವರಿಂದಲೂ, ಮುಖ್ಯವಾಗಿ

ಉಭಯವೇದಾಂತಪ್ರವರ್ತನ ಸಭಾ ಕಾರ್ಯದರ್ಶಿಗಳಾದ ರಾವ್ ಬಹಾದುರ್ ಆರ್. ನರಸಿಂಹಾಚಾರ್ಯರಿಂದಲೂ ಪ್ರೇರಿತನಾಗಿ ವಿಶಿಷ್ಟಾದ್ವೈತದೀಪಿಕೆ ಎಂಬ ಹೆಸರಿಂದ ಈ ವೇದಾಂತಪ್ರಕರಣ ಗ್ರಂಥವನ್ನು ಬರೆದೆನು.

ಈ ಗ್ರಂಥವು ಪ್ರಕಾಶ ಎಂಬ ನಾಲ್ಕು ಸ್ಥೂಲ ವಿಭಾಗಗಳಿಂದಲೂ, ಪರಿಚ್ಛೇದ ಎಂಬ ಅಂತರಾಳಿಕ ವಿಭಾಗಗಳಿಂದಲೂ, ಪ್ರಕರಣ ಎಂಬ (ಲೆಕ್ಕಹಾಕಿದ) ಘಟ್ಟಾರ್ಥವನ್ನು ತೋರಿಸುವ ಚಿಕ್ಕ ವಿಭಾಗಗಳಿಂದಲೂ ವಿಂಗಡಿಸಲ್ಪಟ್ಟು ಆ ಆ ವಿಷಯಗಳನ್ನು ಸಾಂಗವಾಗಿ ವಿವರಿಸುತ್ತವೆ. ಒಂದನೆಯದಾದ ಪ್ರಮಾಣ ಪ್ರಕಾಶದಲ್ಲಿ ಪ್ರತ್ಯಕ್ಷಾನುಮಾನಶಬ್ದಗಳೆಂಬ ಪ್ರಮಾಣಗಳ ಸ್ವರೂಪವು ವಿವರಿಸಿದೆ. ಎರಡನೆಯದಾದ ಪ್ರಮೇಯಪ್ರಕಾಶದ ಚಿತ್ಪರಿಚ್ಛೇದದಲ್ಲಿ ಜೀವಾತ್ಮರ ವಿಷಯವಾಗಿ ತಿಳಿಯಬೇಕಾದ ಅಂಶಗಳೆಲ್ಲಾ ನಿರೂಪಿಸಿವೆ. ಅಚಿತ್ಪರಿಚ್ಛೇದದಲ್ಲಿ ಈ ಪ್ರಪಂಚವಾಗಿ ಪರಿಣಮಿಸಿರುವ ಮೂಲಪ್ರಕೃತಿಯು ೨೪ ವಿಧವಾದ ತತ್ತ್ವಗಳ ಪರಿಣಾಮವನ್ನೂ, ಅದರಿಂದುಂಟಾದ ನಾನಾವಿಧ ಶರೀರಭೇದವನ್ನೂ, ಇವೆಲ್ಲಕ್ಕಿಂತ ವಿಲಕ್ಷಣವಾಗಿ ಶುದ್ಧಸತ್ತ್ವಮಯವಾದ ನಿತ್ಯವಿಭೂತಿ ಎಂಬ ಮುಕ್ತಿಸ್ಥಾನವನ್ನೂ ವಿವರಿಸಿದೆ. ಈಶ್ವರಪರಿಚ್ಛೇದದಲ್ಲಿ ಸರ್ವೇಶ್ವರನು ಸಕಲ ಜಗದೇಕಕಾರಣ, ಸರ್ವಜ್ಞ, ಸರ್ವಶಕ್ತ, ಸರ್ವರಕ್ಷಕ ಎಂದು ವಿವರಿಸಿ, ಅವನ ಸ್ವಾಮಿತ್ವ ಸೌಶೀಲ್ಯ ವಾತ್ಸಲ್ಯಾದಿಗುಣಗಳು ನಿರೂಪಿಸಿವೆ. ಅರ್ಥಪಂಚಕ ಪರಿಚ್ಛೇದದಲ್ಲಿ ಆ ಸರ್ವೇಶ್ವರನನ್ನು ಸೇರಲು ಉಪಾಯವಾದ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ, ಪ್ರಪತ್ತಿಯೋಗಗಳೂ ಅವುಗಳ ಸಾಧನಗಳೂ ನಿರೂಪಿಸಿವೆ. ಮೂರನೆಯದಾದ ಸಮನ್ವಯಪ್ರಕಾಶದಲ್ಲಿ ವೇದಗಳ ಸಮುದಾಯಾರ್ಥ, ವೇದಾಂತವಾಕ್ಯಗಳ ಸ್ವರೂಪಕಾರ್ಯವಿಭಾಗ, ಅದ್ವೈತಮತನಿರಾಸಾಂಶ, ವಿಶಿಷ್ಟಾದ್ವೈತಸಿದ್ಧಾಂತ ಪ್ರಮೇಯ, ವಿಶಿಷ್ಟಾದ್ವೈತ ಶಬ್ದಾರ್ಥ, ವಿಶಿಷ್ಟಾದ್ವೈತಸಿದ್ಧಾಂತವೊಂದರಲ್ಲಿಯೇ ಸರ್ವವೇದಾಂತ ವಾಕ್ಯಾರ್ಥಸಮನ್ವಯ ಇವೇ ಮುಂತಾದ ವಿಷಯಗಳು ಪೂರ್ವಪಕ್ಷಸಿದ್ಧಾಂತ ಸರಣಿಯಿಂದ ವಿಶದವಾಗಿ ವಿವರಿಸಲ್ಪಟ್ಟಿವೆ. ನಾಲ್ಕನೆಯದಾದ ಫಲಪ್ರಕಾಶದಲ್ಲಿ ನಾನಾಮತಪ್ರೋಕ್ತ ಮೋಕ್ಷಸ್ವರೂಪೋಪಾಯಗಳನ್ನೂ ವಿಶಿಷ್ಟಾದ್ವೈತಮತದಲ್ಲಿ ಸಿದ್ಧಾಂತಿತವಾದ ಮೋಕ್ಷಸ್ವರೂಪೋಪಾಯಗಳನ್ನೂ ವಿವರಿಸಿ, ಭಗವದನುಭವಪೂರ್ವಕವಾದ ಕೈಂಕರ್ಯವೇ ಪುರುಷಾರ್ಥವೆಂದೂ, ಇದನ್ನೇ ನಮ್ಮಾಳ್ವಾರವರು ತಮ್ಮ ದಿವ್ಯಪ್ರಬಂಧಗಳಲ್ಲಿ ನಿರೂಪಿಸಿರುತ್ತಾರೆಂದೂ ಹೇಳಿ ಪ್ರಸಂಗವಶದಿಂದ ದಿವ್ಯಪ್ರಬಂಧಗಳ ಅವತಾರಕ್ರಮ, ಸಮುದಾಯಾರ್ಥ, ಶತಕಾರ್ಥಸಂಗ್ರಹ ಇವುಗಳು ವಿವರಿಸಲ್ಪಟ್ಟಿವೆ. ಈ ಗ್ರಂಥವು ಪೂರ್ವಾಚಾರ್ಯಸಂಪ್ರದಾಯ ಗ್ರಂಥಗಳ ತಾತ್ಪರ್ಯಸಾರವನ್ನೆಲ್ಲಾ ನ್ಯೂನಾತಿರೇಕವಿಲ್ಲದಂತೆ ಒಳಗೊಂಡಿದೆ. ಸಕಲ ವೇದಾಂತಸಾರವಾದ ವಿಶಿಷ್ಟಾದ್ವೈತಸಿದ್ಧಾಂತವನ್ನು ತಿಳಿಯ

ಬೇಕೆಂಬ ಅಪೇಕ್ಷೆಯುಳ್ಳವರಿಗೆ ಸುಲಲಿತವಾಗಿಯೂ ಸಂಗ್ರಹವಾಗಿಯೂ ಅದರ ಒಳಗುಟ್ಟನ್ನು ತಿಳಿಯಪಡಿಸುವುದಕ್ಕಾಗಿ ಈ ಗ್ರಂಥವು ಬರೆಯಲ್ಪಟ್ಟಿದೆ.

ಇದರ ಪ್ರಥಮ ಮುದ್ರಣಾಧಿಕಾರವನ್ನು ಈ ಉಭಯವೇದಾಂತಪ್ರವರ್ತನ ಸಭೆಯವರಿಗೇ ಸಮರ್ಪಿಸಿರು ಸಭೆಯವರ ಸಮ್ಮತಿಯಿಂ ಈ ಗ್ರಂಥವು ಮುದ್ರಿತವಾಗಿದೆ. ಶ್ರೀ. ಬಿ. ಸೇ|| ಪ್ರಾಕ್ತನವಿಮರ್ಶವಿಚಕ್ಷಣ ರಾವ್ ಬಹಾದುರ್ ಆರ್. ನರಸಿಂಹಾಚಾರ್ಯರವರು ತಮ್ಮ ಅಮೋಘವಾದ ಕಾಲದೊಳಗೆ ಈ ಪುಸ್ತಕವನ್ನು ಆಮೂಲಾಗ್ರವಾಗಿ ಪರಿಶೋಧಿಸಿಯೂ, ಮುದ್ರಣಕ್ಕೆ ತಕ್ಕಂತೆ ಪರಿಷ್ಕರಿಸಿಯೂ ಮಾಡಿದ ಉಪಕಾರಕ್ಕಾಗಿ ಅನೇಕ ವಂದನೆಗಳನ್ನು ಅರ್ಪಿಸುವೆನು. ಇದನ್ನು ಮುದ್ರಿಸಿ ಪ್ರಕಾಶಗೊಳಿಸಿದ ಈ ಸಭೆಯವರಿಗೂ ಧನ್ಯವಾದಗಳನ್ನು ಅರ್ಪಿಸುವೆನು. ತೆಲುಗುದೇಶದ ನಮ್ಮ ರಾಮಾನುಜೀಯ ಛಾತ್ರರುಗಳ ಪ್ರಾರ್ಥನಾನುಸಾರವಾಗಿ ಈ ವಿಶಿಷ್ಟಾದ್ವೈತಸಿದ್ಧಾಂತ ಪ್ರಕರಣ ಗ್ರಂಥವನ್ನು ತೆಲುಗುಭಾಷೆಯಲ್ಲಿ [illegible] ಪ್ರಕಾಶಪಡಿಸುವ ಮನೋರಥವಿದ್ದುದರಿಂದ ಪ್ರಥಮ ಮುದ್ರಣಾಧಿಕಾರವನ್ನು ಈ ಸಭೆಯವರಿಗೆ ಒಪ್ಪಿಸಿದ್ದೆನು. ತೆಲುಗು ಮುಂತಾದ ದೇಶಗಳಲ್ಲಿಯೂ ರಾಮಾನುಜ ಸಿದ್ಧಾಂತ ಪ್ರಚಾರಣವು ಈ ಸಭೆಯ ಉದ್ದೇಶಗಳಲ್ಲಿ ಸೇರಿದೇ ಇರುವುದರಿಂದ ಈ ಕಾರ್ಯವನ್ನೂ ಸಭೆಯವರೇ ವಹಿಸಿಕೊಂಡು ನೆರವೇರಿಸಿದರೆ ನನ್ನ ಮನೋರಥವು ಕೈಗೂಡಿ ನಿರ್ಭರನಾಗಿ, ಪುನರ್ಮುದ್ರಣಾಧಿಕಾರವನ್ನು ಸಭೆಯವರಿಗೇ ಸಂತೋಷದಿಂದ ಒಪ್ಪಿಸಲು ಸಿದ್ಧನಾಗಿರುವೆನು.

ನಮ್ಮ ಶ್ರೀವೈಷ್ಣವ ಸಮುದಾಯದ ಬಾಲಕರೂ, ಮಹಿಳೆಯರೂ, ಮತ್ತ ಶ್ರದ್ಧೆಯುಳ್ಳ ಎಲ್ಲಾ ಜನರೂ ಈ ವಿಶಿಷ್ಟಾದ್ವೈತದೀಪಿಕೆಯನ್ನು ಆಗಾಗ ಓದಿಯೂ, ಸನ್ನಿಹಿತರಾದ ಗುರುಜನರಲ್ಲಿ ಅಜ್ಞಾತಾಂಶಗಳನ್ನು ಕೇಳಿ ತಿಳಿದುಕೊಂಡೂ, ಭಗವದ್ಭಕ್ತಿ, ಆತ್ಮಗುಣಸಂಪತ್ತಿ, ಸ್ವಮತಶ್ರದ್ಧೆ, ಪೂರ್ವಾಚಾರ ಇವುಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಅಭಿವೃದ್ಧಿಯನ್ನು ಪಡೆದರೆ ನನ್ನ ಶ್ರಮವು ಸಾರ್ಥಕವಾಯಿತೆಂದೂ, ಆ ಮೂಲಕ ಭಗವನ್ಮುಖೋಲ್ಲಾಸರೂಪವಾದ ಅಲಭ್ಯ ಲಾಭವುಂಟಾಯಿತೆಂದೂ ಭಾವಿಸುವೆನು.

ಮಂ. ಅ. ಜಯರಾಮ ವೆಂಕಟಾಚಾರ್ಯ.

ವಿಶಿಷ್ಟಾದ್ವೈತದೀಪಿಕೆಯ ವಿಷಯಸೂಚಿಕೆ

I ಪ್ರಮಾಣ ಪ್ರಕಾಶ

II ಪ್ರಮೇಯಪ್ರಕಾಶ

ವಿಷಯ	ಪುಟ
ಜೀವಾತ್ಮರು ಅಸಂಖ್ಯಾತರು, ಏಕಾತ್ಮವಾದ ಖಂಡನ ...	೩೩
ಜೀವಾತ್ಮರ ನಿಸ್ಸ್ಪೃಷ್ಟ ಲಕ್ಷಣಗಳು, ಆತ್ಮಸ್ವರೂಪಕ್ಕೂ, ಧರ್ಮಭೂತಜ್ಞಾನಕ್ಕೂ ಭೇದ ...	೩೪
ಜ್ಞಾನವು ದ್ರವ್ಯ, ಸ್ವಯಂಪ್ರಕಾಶ, ಆನಂದರೂಪ ಎಂಬುದರ ಸ್ಥಾಪನೆ	೩೭
ಅಚಿತ್ಪರಿಚ್ಛೇದ—ಅಚಿತ್ತಿನ ಲಕ್ಷಣ, ವಿಭಾಗ ...	೩೯
ಪ್ರಕೃತಿಯ ಲಕ್ಷಣ ಸ್ವರೂಪ	೪೦
ಪ್ರಕೃತಿಗೆ ಅವಿದ್ಯೆ, ಮಾಯೆ, ತಮಸ್ಸು, ವ್ಯಾತ್ಯ ಎಂಬ ಪರ್ಯಾಯ ನಾಮಗಳೂ ಅವಕ್ಕೆ ಕಾರಣವೂ ...	೪೧
ಪ್ರಕೃತಿ, ಮಹದಹಂಕಾರಗಳು, ಅಹಂಕಾರ ಶಬ್ದಾರ್ಥವಿವೇಚನೆ	೪೨-೪೩
ಇಂದ್ರಿಯ ಸಾಮಾನ್ಯಲಕ್ಷಣ-ಇಂದ್ರಿಯವಿಭಾಗ, ಜ್ಞಾನೇಂದ್ರಿಯಗಳು	೪೪-೪೬
ಕರ್ಮೇಂದ್ರಿಯ ವಿಚಾರ, ವಾಕ್ಪಾಣಿ ಪಾದಾದಿ ವಿಭಾಗ ...	೪೭
ವೈಶೇಷಿಕ ಮತಖಂಡನ	೪೯
ತನ್ಮಾತ್ರಗಳ ಸ್ವರೂಪ, ಲಕ್ಷಣ, ವಿಭಾಗ, ತನ್ಮಾತ್ರಗಳ ಲಘುಲಕ್ಷಣ	೫೦
ಪಂಚಭೂತಗಳ ಲಕ್ಷಣ, ಸ್ವರೂಪ ವಿಭಾಗ ...	೫೧
ವಾಯುಲಕ್ಷಣ ವಿಭಾಗ, ಪ್ರಾಣಾದಿವಾಯುಗಳ ಕೃತ್ಯವಿಶೇಷ...	೫೨
ತೇಜೋಲಕ್ಷಣ, ವಿಭಾಗ, ಪಚನವಿಚಾರ, ತೇಜಸ್ಸಿನ ಪ್ರಯೋಜನ	೫೪-೫೫
ಜಲ ಪೃಥಿವೀ ನಿರೂಪಣ, ಪಂಚೀಕರಣಪ್ರಕಾರ, ಅಂಡಸೃಷ್ಟಿಕ್ರಮ	೫೬-೫೮
ಶರೀರಲಕ್ಷಣ, ಅಪೃಥಕ್ಸಿದ್ಧಿವಿಚಾರ, ಶರೀರವಿಭಾಗ ...	೫೯
ನಿತ್ಯವಿಭೂತಿಲಕ್ಷಣ ವಿಚಾರ, ಪಂಚಶಕ್ತಿಮಯ ...	೬೩
ತತ್ತ್ವಸಂಖ್ಯೆಯ ವಿವೇಚನೆ	೬೫
ಈಶ್ವರಪರಿಚ್ಛೇದ—ಈಶ್ವರನಿಗೆ ೩ ವಿಧ ಪರಿಚ್ಛೇದವೂ ಇಲ್ಲ ...	೬೬
ಕಾರಣವಿಚಾರ, ಈಶ್ವರನೇ—ಜಗದೇಕಕಾರಣ; ಜೈನ,ಬೌದ್ಧ, ನೈಯಾಯಿಕ ಮತಖಂಡನ ...	೬೭-೬೯
ಪರಮಾತ್ಮನು ಅಖಿಲಹೇಯಪ್ರತ್ಯನೀಕ, ಇದರ ಅರ್ಥ, ಪ್ರಯೋಜನ, ಸಮಸ್ತ ವಸ್ತುಗಳ ಹೇಯನಿರೂಪಣ	೭೦
ಸರ್ವೇಶ್ವರನು ಸಕಲ ಕಲ್ಯಾಣಗುಣಾಕರ; ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯ ಮುಂತಾದ ಗುಣವಿವೇಚನೆ	೭೨-೭೩
ಮಹಾಲಕ್ಷ್ಮೀನಾರಾಯಣ ಸಂವಾದದಿಂದ ಈ ಗುಣಪ್ರಕಾಶ ...	೭೬
ಸರ್ವೇಶ್ವರನೇ ಸರ್ವರಕ್ಷಕನು, ಇದಕ್ಕೆ ದೃಷ್ಟಾಂತ ವಿವರಣೆ...	೭೮-೮೦
ದ್ರವ್ಯವಿಭಾಗ ಸಾಮಂಜಸ್ಯ, ಪ್ರತ್ಯಕ್, ಪರಾಕ್, ಜಡಾದಿ ದ್ರವ್ಯವಿವರಣ	೮೧-೮೨

III ಸಮನ್ವಯಪ್ರಕಾಶ

IV ಫಲಪ್ರಕಾಶ



ಶೋಧನ

ಪುಟ	ಪಙ್ಕ್ತಿ	ಅಶುದ್ಧ	ಶುದ್ಧ
೭	೧೧	ಜನತ್ಕಾ	ಜಗತ್ಕಾ
೧೮	೧೪	ಯೋಗಭ್ಯಾಸ	ಯೋಗಾಭ್ಯಾಸ
೧೮	೧೫	ಯೋಗಾಪ್ರಭಾ	ಯೋಗಪ್ರಭಾ
೪೯	೧೨	ಜ್ಞಾನೇಂದ್ರಿಯಶರೀರಗಳು	ಜ್ಞಾನೇಂದ್ರಿಯಗಳು
೫೧	೩೦	ಸ್ಪರ್ಶನ್ಯಕೇ	ಸ್ಪರ್ಶನ್ಯೈಕೇಂದ್ರಿ
೫೫	೨೯	ಹ್ಯವಿನಶ್ಯ	ಹವಿನಶ್ಯತಿ
೬೮	೨೪	ಕಾರಣವೂ ಆಗಿ	ಕಾರಣವೂ ತಾನೇ ಆಗಿ
೬೮	೨೭	'ಸ್ಯಾಂ'	ಸ್ಯಾಂ
೭೧	೧೨	ಪತಮಾತ್ಮನ	ಪರಮಾತ್ಮನು
೮೦	೧೧	ಈಶ್ವರಪರಿಚ್ಛೆದಂ	ಈಶ್ವರ ನಿರೂಪಣಂ
೮೧	೨೯	ಪ್ರಕ್ಯಕ್	ಪ್ರತ್ಯಕ್
೮೯	೧೯	ಭಕ್ತಿಯಲ್ಲಿ	ಭಕ್ತಿಯಲ್ಲಿ)
೯೮	೩೦	ವೃತತು	ವೃತ್ಯತು
೧೦೭	೨೪	ಇತರ್ಥ	ಇತ್ಯರ್ಥಃ
	೨೫	ಇತಃ	ಇತ್ಯರ್ಥಃ
೧೦೮	೪	ಭರ್ತ್ಯಮಿತ್ರ	ಭರ್ತ್ಯಪ್ರಪಂಚ
೧೧೮	೧೮	ಪ್ರಕೃತಂಶ	ಪ್ರಕೃತ್ಯಂಶ
೧೧೯	೨೧	ಪ್ರಕ್ಯಾರಭೇದ	ಪ್ರಕಾರ್ಯಭೇದ
೧೨೦	೨೮	ಶ್ರುಶಿಸ್ವಾ	ಶ್ರುತಿಸ್ವಾ
೧೨೬	೨೯	ವರಾದ	ವರಾಹ
೧೩೫	೨೬	ವೇಡ	ವೇದ
	೨೯	೧೫—೧೧೭೮	೧೫೧—೧೭೮
೧೩೬	೭	ನೆಯೇ	ನೆಯೇ'

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ವಿಶಿಷ್ಟಾದ್ವೈತ ದೀಪಿಕೆ

I ಪ್ರಮಾಣಪ್ರಕಾಶ

i ವಿದ್ಯಾಪರಿಚ್ಛೇದ.

ಅಶೇಷ ಚಿದಚಿದ್ವಸ್ತು ಶೇಷಿಣೇ ಶೇಷಶಾಯಿನೇ ।
ನಿರ್ಮಲಾನಂತಕಲ್ಯಾಣ ನಿಧಯೇ ವಿಷ್ಣವೇ ನಮಃ ॥

ಪ್ರಕರಣ ಸಂಖ್ಯೆ

೧. ವಿದ್ಯೆ-ಎಂದರೆ ಅರಿವು, ಶ್ರೇಯಸ್ಸಾಧನದ* ಅರಿವು, ಎಂದು ಫಲಿತವಾಗುವುದು. ಆ ಶ್ರೇಯಸ್ಸು ಲೌಕಿಕವೆಂದೂ ಅಲೌಕಿಕ (ಪಾರತ್ರಿಕ) ವೆಂದೂ ಎರಡು ತೆರನಾಗಿರುವುದು ; ಲೌಕಿಕ ಶ್ರೇಯಸ್ಸಾಧನಗಳನ್ನು ತಿಳಿಯಪಡಿಸುವ ವೈದ್ಯ, ಶಿಲ್ಪ, ಕೃಷಿ, ವಾಣಿಜ್ಯ ಮುಂತಾದ ಲೌಕಿಕವಿದ್ಯೆಗಳನ್ನು ಆ ಆ ಶಾಸ್ತ್ರಗಳಲ್ಲಿ ವಿಶೇಷವಾಗಿಯೇ ವಿಚಾರಿಸಿರುವರು. ಅಲೌಕಿಕ ಶ್ರೇಯಸ್ಸಾಧನಗಳನ್ನು ತಿಳಿಯಪಡಿಸುವ ವಿದ್ಯೆಯೇ ವೇದವಿದ್ಯೆ.

ವೇದ† ಶಬ್ದಕ್ಕೆ ಅರಿಯಬೇಕಾದ ಸಕಲಾರ್ಥಗಳನ್ನೂ ಚೆನ್ನಾಗಿ ತಿಳಿಯಪಡಿಸುವುದು, ಎಂದು ಅರ್ಥ. ವೇದವು ನಿತ್ಯನಿರ್ದೋಷವಾಗಿ ಸ್ವತಃ ಪ್ರಮಾಣವಾಗಿಯೂ ಸರ್ವಶಾಸ್ತ್ರಮೂಲವಾಗಿಯೂ ಸರ್ವಾದರಣೀಯವಾಗಿಯೂ ಇರುವುದು. ವೇದಕ್ಕೆ ಋಕ್, ಯಜುಸ್, ಸಾಮ, ಅಥರ್ವಣ ಎಂಬ ನಾಲ್ಕು ಭೇದಗಳೂ, ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಎಂಬ ಆರು

---

* ಶ್ರೇಯಸ್ಸಾಧನವೇದನಂ ವಿದ್ಯಾ, ವಿದ್ಯಾ ತತ್ತ್ವಯಥಾರ್ಥಜ್ಞಾನಂ, ಎಂಬ ಶಾಸ್ತ್ರೀಯ ಲಕ್ಷಣವಚನಗಳ ಫಲಿತಾರ್ಥವಾಗಿದೆ.

† ವೇದಯತಿ ಇತಿ ವೇದಃ, ಎಂದು ವೇದಶಬ್ದದ ವ್ಯುತ್ಪತ್ತಿ.

ಅಂಗಗಳೂ ಇರುವುವು; ಒಂದೊಂದು ವೇದದಲ್ಲಿಯೂ ಕರ್ಮಕಾಂಡ, ಬ್ರಹ್ಮಕಾಂಡ ಎಂಬ ಎರಡು ಭಾಗಗಳೂ ಇರುವುವು.

ವೇದಾಂಗಗಳೊಳಗೆ—ಶಿಕ್ಷೆ ಎಂಬುದು ಸ್ವರ ವರ್ಣ ಮಾತ್ರಾದಿ ವಿಭಾಗಗಳನ್ನೂ, ವರ್ಣೋಚ್ಚಾರಣಕ್ರಮಗಳನ್ನೂ, ವರ್ಣೋತ್ಪತ್ತಿ ಸ್ಥಲ ಮುಂತಾದುವನ್ನೂ ನಿರೂಪಿಸುವುದು. ವ್ಯಾಕರಣವೆಂಬುದು ಪ್ರಕೃತಿ ಪ್ರತ್ಯಯಾದಿಗಳ ಮೂಲಕವಾಗಿ ಅರ್ಥವನ್ನು ಹೇಳುವ ಪದಗಳನ್ನು ವಿವರಿಸುವುದು. ಛಂದಶ್ಶಾಸ್ತ್ರ ಎಂಬುದು ಪಾದಗಳಲ್ಲಿ ಅಕ್ಷರಸಂಖ್ಯಾ ನಿಯಮಗಳನ್ನೂ, ಗಾಯತ್ರಿ, ಅನುಷ್ಟುಪ್, ತ್ರಿಷ್ಟುಪ್ ಮುಂತಾದ ಛಂದಸ್ಸುಗಳ ಲಕ್ಷಣವನ್ನೂ ತಿಳಿಯಪಡಿಸುವುದು. ನಿರುಕ್ತ* ವೆಂಬುದು ಪ್ರಕೃತಿಪ್ರತ್ಯಯಾದಿ ವಿಭಾಗಗಳನ್ನು ಅಪೇಕ್ಷಿಸದೆಯೇ ವೈದಿಕಪದಗಳಿಗೆ ನಿರ್ವಚನದಿಂದ ವಿಶೇಷಾರ್ಥವನ್ನು ನಿರೂಪಿಸುವುದು. ಕಲ್ಪಸೂತ್ರವೆಂಬುದು ವೇದದಲ್ಲಿ ವಿಧಿಸಿದ ಕರ್ಮಗಳ ಪ್ರಯೋಗಕ್ರಮಗಳನ್ನು ವಿವರಿಸುವುದು, ಜ್ಯೋತಿಷವೆಂಬುದು ಆ ಕರ್ಮಗಳನ್ನು ಆಚರಿಸುವುದಕ್ಕೆ ತಕ್ಕ ಕಾಲವನ್ನು ವಿವರಿಸುವುದು.

೨. ವೇದಗಳು ಸಂಗ್ರಹವಾಗಿ ಗಹನವಾಗಿರುವುದರಿಂದ ಇವುಗಳ ಅರ್ಥವು ಮಂದಬುದ್ಧಿಗಳಿಗೆ ತಿಳಿವುದಿಲ್ಲವೆಂದು ಭಾವಿಸಿ ಪುರಾತನ ಮಹರ್ಷಿಗಳು ವೇದದ ಒಂದೊಂದು ಭಾಗದ ತಾತ್ಪರ್ಯವಿವರಣೆಗಾಗಿ ಬೇರೆಬೇರೆ ಶಾಸ್ತ್ರಗಳನ್ನು ಮಾಡಿದರು. ಕರ್ಮಕಾಂಡಕ್ಕೆ ಜೈಮಿನಿಮಹರ್ಷಿ ಪೂರ್ವಮೀಮಾಂಸಾ ಶಾಸ್ತ್ರವನ್ನೂ, ಬ್ರಹ್ಮಕಾಂಡಕ್ಕೆ ವ್ಯಾಸಮಹರ್ಷಿ ಉತ್ತರಮೀಮಾಂಸಾ (ಬ್ರಹ್ಮಮೀಮಾಂಸಾ) ಶಾಸ್ತ್ರವನ್ನೂ, ಮನು, ಯಾಜ್ಞವಲ್ಕ್ಯಮುಂತಾದ ಇನ್ನೂ ಅನೇಕ ಮಹರ್ಷಿಗಳು ವೇದದಲ್ಲಿರುವ ವಿಧಿಭಾಗಕ್ಕೆ ಧರ್ಮಶಾಸ್ತ್ರಗಳನ್ನೂ, ಪ್ರಯೋಗಭಾಗಕ್ಕೆ ಕಲ್ಪಸೂತ್ರಗಳನ್ನೂ ರಚಿಸಿ ಅರ್ಥವಿವರಣೆಯನ್ನು ಮಾಡಿರುವರು. ಹೀಗೆ ವೇದವಿವರಣರೂಪವಾದ ಈ ಶಾಸ್ತ್ರಗಳೂ ಅಂಗಸಹಿತವಾದ ಆ ಮೂಲವೇದಗಳೂ ಸಹ ಹದಿನಾಲ್ಕು† ವಿದ್ಯಾಸ್ಥಾನಗಳೆಂದು ಪ್ರಸಿದ್ಧವಾಗಿರುವುವು. ಹೀಗೆ ಆರು ಅಂಗಗಳು, ಪೂರ್ವಮೀಮಾಂಸೆ, ಉತ್ತರಮೀಮಾಂಸೆ, ನ್ಯಾಯವಿಸ್ತರವೆಂಬ ಸತ್ತರ್ಕ, ಪುರಾಣಗಳು, ಧರ್ಮಶಾಸ್ತ್ರಗಳು ಎಂಬ ಈ ಉಪಾಂಗಗಳು—ಇವುಗಳ ಸಹಾಯದಿಂದ ವೇದಗಳ ಅರ್ಥವನ್ನು ಅರಿಯಬೇಕೆಂದು ಫಲಿತವಾಯಿತು.

---

* ನಿರುಕ್ತ (Etymological interpretation)

† ವಿದ್ಯಾಸ್ಥಾನಗಳು—

ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾನ್ಯಾಯವಿಸ್ತರಃ |
ಪುರಾಣಂ ಧರ್ಮಶಾಸ್ತ್ರಂ ಚ ವಿದ್ಯಾಹ್ಯೇತಾಶ್ಚತುರ್ದಶ ||

೩. ಪ್ರಶ್ನೆ—ಒಂದುವಸ್ತುವಿನ ಸ್ವರೂಪ ಸ್ವಭಾವಗಳನ್ನು ತಿಳಿಯಬೇಕಾದರೆ ಪ್ರತ್ಯಕ್ಷ ಮುಂತಾದ ಪ್ರಮಾಣಗಳಿಂದ ತಿಳಿಯಬೇಕು. "ಸರ್ವೇಶ್ವರನು ಇರುವನು, ಅವನ ಸ್ವರೂಪ ಸ್ವಭಾವಗಳು ಇಂಥವು, ಅವನಲ್ಲಿ ನಾವು ಹೀಗೆ ನಡೆದುಕೊಳ್ಳಬೇಕು, ಎಂಬುವನ್ನು ಅರಿಯಲು ಪ್ರಮಾಣವೇನು ?" ಎಂದು ಅನೇಕರು ಪ್ರಶ್ನೆ ಮಾಡಬಹುದು.

ಉತ್ತರ—ಪ್ರಮಾಣಗಳುಂಟು ; ವೇದಗಳೇ ಈ ವಿಷಯದಲ್ಲಿ ಪ್ರಬಲ ಪ್ರಮಾಣವು ಎಂದು ಧೃಢಪಟ್ಟಿವೆ. ಒಬ್ಬನು ಯಾವುದಾದರೂ ಒಂದು ವಿಷಯವನ್ನು ಹೇಳಿದರೆ ಅವನು ಜ್ಞಾನಶಕ್ತಿಯುಳ್ಳವನಾಗಿಯೂ ಆಪ್ತನಾಗಿಯೂ ಇದ್ದರೆ ಆ ಅಂಶದಲ್ಲಿ ಆ ಹೇಳಿಕೆ ಪ್ರಮಾಣವಾಗಬಲ್ಲುದು. ಹಾಗಲ್ಲದೆ ಅವನಲ್ಲಿ ಅಜ್ಞಾನ, ಅಪ್ರತ್ಯಕ್ಷಸಂದೇಹ ಮುಂತಾದ ದೋಷಗಳು ಇದ್ದಲ್ಲಿ ಅವನ ವಾಕ್ಯಗಳು ಪ್ರಮಾಣವಾಗಲಾರವಷ್ಟೆ ? ವೇದಗಳೋ ಎಂದರೆ—"ವಾಚಾವಿರೂಪನಿತ್ಯಯಾ" ಎಂದೂ, "ಅನಾದಿನಿಧನಾಹ್ಯೇಷಾ ವಾಗುತ್ಸೃಷ್ಟಾಸ್ವಯಂಭುವಾ" ಎಂದೂ ಯಾವನೊಬ್ಬ ಪುರುಷನಿಂದಲೂ ನಿರ್ಮಿಸಲ್ಪಡದೆ, ಭಗವಂತನಂತೆಯೇ ಸ್ವಯಂವ್ಯಕ್ತವಾಗಿ, ಅನಾದಿಯಾಗಿ ಅವಿಚ್ಛಿನ್ನಸಂಪ್ರದಾಯಪರಂಪರಾ ಪ್ರಾಪ್ತವಾಗಿರುವುದರಿಂದ ಪುರುಷಬುದ್ಧಿಗೆ ಸಹಜವಾದ ಭ್ರಮಪ್ರಮಾದಾದಿ ದೋಷಗಳೊಂದೂ ಇಲ್ಲದೆಯೂ, ನಿತ್ಯನಿರ್ದೋಷವಾಗಿಯೂ, ಆಪ್ತತಮವಾಗಿಯೂ, ಮುಖ್ಯ ಪ್ರಮಾಣವಾಗಿಯೂ ಇವೆ. ಮತ್ತು ಮಿಕ್ಕ ಪ್ರಮಾಣಗಳಿಗೆ ಅಗೋಚರವಾದ ಅತೀಂದ್ರಿಯಾರ್ಥಗಳನ್ನೇ ತಿಳುಹಲು ಪ್ರವರ್ತಿಸಿರುವುದರಿಂದ ಆ ಅತೀಂದ್ರಿಯಾರ್ಥ ವಿಷಯದಲ್ಲಿ ವೇದಗಳಲ್ಲದೆ ಮತ್ತೆ ಯಾವ ಪ್ರಮಾಣವೂ ಇವುಗಳಂತೆ ನಿಲ್ಲಲಾರದು. ಈ ವೇದದಲ್ಲಿ ಕರ್ಮಕಾಂಡವಾದ ಪೂರ್ವಭಾಗವು ವರ್ಣಾಶ್ರಮಾಚಾರ ಯಜ್ಞ ದಾನ ತಪೋರೂಪವಾದ ನಿತ್ಯನೈಮಿತ್ತಿಕ ಕರ್ಮಗಳನ್ನೂ, ಭಗವದಾರಾಧನ ಕ್ರಮವನ್ನೂ ವಿವರಿಸುವುದು. ಉತ್ತರಕಾಂಡವಾದ ಉಪನಿಷದ್ಭಾಗವು ಈ ಕರ್ಮಗಳಿಂದ ಆರಾಧ್ಯನಾದ ಭಗವಂತನ ಸ್ವರೂಪ, ರೂಪ, ವಿಭವ, ಕಾರ್ಯಗಳನ್ನು ಉಪದೇಶಿಸುವುದು. ಆರಾಧನಸ್ವರೂಪವಾದ ಕರ್ಮಗಳಿಂದ ಪರಂಪರೆಯಾಗಿ ಭಗವಂತನನ್ನು ತಿಳಿಸುವ ಪೂರ್ವಭಾಗಕ್ಕಿಂತಲೂ ಸಾಕ್ಷಾತ್ತಾಗಿ ಭಗವಂತನನ್ನು ಪ್ರತಿಪಾದಿಸುವ ಉತ್ತರಭಾಗವು ಶ್ರೇಷ್ಠವೆನಿಸುವುದು. ಆದುದರಿಂದ "ಸರ್ವೇಶ್ವರನು ಇರುವನು, ಅವನ ಸ್ವರೂಪ ಸ್ವಭಾವಗಳು ಇಂಥವು' ಎಂದು ಉತ್ತರಭಾಗದಿಂದಲೂ, "ಅವನಲ್ಲಿ ನಾವು ಹೀಗೆ ನಡೆದುಕೊಳ್ಳಬೇಕು" ಎಂಬುವನ್ನು ಪೂರ್ವಭಾಗದಿಂದಲೂ ವೇದವು ತಿಳಿಯಪಡಿಸುವುದು.

ಹೀಗೆ ವೇದಾನುಸಾರಿಯಾದ ಶಾಸ್ತ್ರಗಳಲ್ಲಿ ಹೇಳಿರುವಂತೆ ಪ್ರಮಾಣಗಳಿಂದ

ಪ್ರಮೇಯಗಳನ್ನು ತಿಳಿದು, ತತ್ತ್ವಜ್ಞಾನವನ್ನು ಪಡೆದು, ಭಗವಂತನನ್ನು ಭಜಿಸಿ, ಅವನ ಅನುಗ್ರಹವನ್ನು ಸಂಪಾದಿಸಿ ಕೃತಾರ್ಥರಾಗಬೇಕು.

೨. ಪ್ರತ್ಯಕ್ಷಪರಿಚ್ಛೇದ

೪. ಪ್ರಮಾಣವೆಂದರೇನು?—'ಪ್ರಮಾಕರಣಂ ಪ್ರಮಾಣಂ' * ಎಂದು ಅದರ ಲಕ್ಷಣವನ್ನು ಸಕಲ ಶಾಸ್ತ್ರಕಾರರೂ ಹೇಳಿರುವರು. ಪ್ರಮಾ = ಯಥಾರ್ಥಜ್ಞಾನ, ಕರಣ=ಅದನ್ನು ಉಂಟುಮಾಡಿಕೊಡುವುದು. ಯಥಾರ್ಥಜ್ಞಾನವು ಯಾವುದರಿಂದ ಉಂಟಾಗುವುದೋ ಅದು ಪ್ರಮಾಣವು. ಯಥಾರ್ಥಾನುಭವ=ಪ್ರಮಾ=ಪ್ರಮಿತಿ: ಯಥಾರ್ಥಾನುಭವಸಾಧನ=ಪ್ರಮಾಣ ಎಂದೂ ಫಲಿತವಾಯಿತು.

ಯಥಾರ್ಥಾನುಭವ ಎಂಬಲ್ಲಿ ಯಥಾರ್ಥ ಪದಕ್ಕೆ, ಇದ್ದುದನ್ನು ಇದ್ದಂತೆಯೇ ವ್ಯವಹರಿಸುವುದಕ್ಕೆ ಕಾರಣ ಎಂದೂ, ಅನುಭವಪದಕ್ಕೆ ಸ್ಮೃತಿವ್ಯತಿರಿಕ್ತಜ್ಞಾನ ಎಂದೂ ಅರ್ಥ; ಆದುದರಿಂದ 'ಇದ್ದುದನ್ನು ಇದ್ದಂತೆಯೇ ವ್ಯವಹರಿಸಲು ಕಾರಣವಾದ ಅನುಭವ' ಎಂದು ಪ್ರಮಾಪದದ ಅರ್ಥವು; ಈ ಪ್ರಮೆಗೆ ಕಾರಣ, ಎಂದು ಪ್ರಮಾಣಪದಕ್ಕೆ ಅರ್ಥವು. ಯಥಾರ್ಥಾನುಭವ ಸಾಧನ ಎಂಬ ಪ್ರಮಾಣಲಕ್ಷಣವಾಕ್ಯದಲ್ಲಿ, ಯಥಾರ್ಥ ಎಂಬ ಪೂರ್ವಪದವನ್ನು ಭ್ರಮಸಂಶಯನಿವಾರಣೆಗಾಗಿಯೂ, ಅನುಭವ ಎಂಬ ಪದವನ್ನು ಸ್ಮೃತಿನಿವಾರಣೆಗಾಗಿಯೂ, ಸಾಧನ ಎಂಬ ಪದವನ್ನು ಪ್ರಮಿತಿ ಎಂಬ ಫಲವ್ಯಾವೃತ್ತಿ†ಗಾಗಿಯೂ ಪ್ರಯೋಗಮಾಡಿದೆ.

* ೧. ಕುಮಾರಿಲಭಟ್ಟ—"ಪ್ರಮಾಕರಣಮೇವಾತ್ರ ಪ್ರಮಾಣಂ ತರ್ಕಪಕ್ಷವತ್ ಪ್ರಮಾ ಚಾಜ್ಞಾತತತ್ತ್ವಾರ್ಥಜ್ಞಾನಮೇವಾಭಿಧೀಯತೇ । ತಸ್ಮಾದಜ್ಞಾತ ತತ್ತ್ವಾರ್ಥ ಜ್ಞಾನಸಾಧನಮೇವನಃ ॥ ಪ್ರಮಾಣ ಇತಿ ನಿರ್ಣೀತಂ ೨. ಸಾಂಖ್ಯ—ಅಸಂದಿಗ್ಧಾವಿಪರೀತಾನಧಿಗತವಿಷಯಾ ಚಿತ್ತವೃತ್ತಿಃ ಬೋಧಶ್ಚ ಪೌರುಷೇಯಃ ಫಲಂ ಪ್ರಮಾ, ತತ್ಸಾಧನಂ ಪ್ರಮಾಣಂ ಇತಿ ೩. ನೈಯಾಯಿಕ—ಯಥಾರ್ಥಾನುಭವಃ ಪ್ರಮಾ, ಅನುಭವಶ್ಚ ಸ್ಮೃತಿವ್ಯತಿರಿಕ್ತಂ ಜ್ಞಾನಂ. ೪. ನ್ಯಾಯಸಾರೇ—ಭಾಸರ್ವಜ್ಞಃ—ಸಮ್ಯಗನುಭವಸಾಧನಂ ಪ್ರಮಾಣಂ, ಸಮ್ಯಕ್‌ಗ್ರಹಣಂ ಸಂಶಯವಿಪರ್ಯಯಾಪೋಹಾರ್ಥಂ, ಸ್ಮೃತಿವ್ಯವಚ್ಛೇದಾರ್ಥಂ ಅನುಭವ ಇತಿ.

ಹೀಗೆ ಲಕ್ಷಣವಾಕ್ಯಗಳಲ್ಲಿ ಭೇದವಿದ್ದರೂ, ಭ್ರಮ, ಸಂಶಯ, ಸ್ಮೃತಿ, ಅನುವಾದ ಇವುಗಳನ್ನು ಪ್ರಮಿತಿಸ್ವರೂಪದಿಂದ ಬಹಿಷ್ಕಾರಮಾಡುವ ವಿಷಯದಲ್ಲಿ ಎಲ್ಲರೂ ಸಮ್ಮತಿಸಿರುವರು. ಆದುದರಿಂದ ಮೇಲೆ ಹೇಳಿದ ಲಕ್ಷಣವು ನಿರ್ದುಷ್ಟವಾಗಿರುವುದು.

† ವ್ಯಾವೃತ್ತಿ=ನಿರಾಸ=ಹೊರಗುಮಾಡುವಿಕೆ. ಅತಿವ್ಯಾಪ್ತಿಯನ್ನು ತಪ್ಪಿಸುವುದು ಎಂದರ್ಥ.

ಹಗ್ಗವನ್ನು ನೋಡಿ ಸರ್ಪವೆಂದು ತಿಳಿದ ಭ್ರಮೆಯೂ, ಇದು ಹಗ್ಗವೋ ಸರ್ಪವೋ ಎಂಬ ಸಂಶಯವೂ ಯಥಾರ್ಥವಲ್ಲ; ಪೂರ್ವದಲ್ಲಿ ಅನುಭವಿಸಿದ ಯಾವುದೋ ಒಂದು ಪದಾರ್ಥವನ್ನು ಈಗ ನೆನೆಸಿಗೆ ತಂದುಕೊಂಡರೆ ಆ ಸ್ಮರಣೆ ಅನುಭವವಲ್ಲ. ಹಗ್ಗವನ್ನು ನೋಡಿ ಹಗ್ಗವೆಂದೂ, ಸರ್ಪವನ್ನು ನೋಡಿ ಸರ್ಪವೆಂದೂ, ಹೀಗೆ ಇದ್ದುದನ್ನು ಇದ್ದಂತೆಯೇ ವಾಸ್ತವವಾಗಿ ತಿಳಿವ ಅನುಭವವೇ ಯಥಾರ್ಥಾನುಭವ. ಆ ಯಥಾರ್ಥಾನುಭವವೇ ಪ್ರಮಾ (ಪ್ರಮಿತಿ), ಅಂಥ ಪ್ರಮೆಗೆ ಕಾರಣವೇ ಪ್ರಮಾಣ ಎಂದು ಫಲಿತವಾಯ್ತು. ಅಂಥ ಪ್ರಮಿತಿಯುಳ್ಳವನೇ ಪ್ರಮಾತಾ; ಆ ಪ್ರಮಾವಿಷಯವೇ ಪ್ರಮೇಯ (ಆ ಪ್ರಮೆಯಿಂದ ತಿಳಿದ ವಿಷಯ) ಎಂದೂ ಫಲಿತವಾಯಿತು.*

ಹೀಗೆ ಪ್ರಮಾಕರಣಂ ಪ್ರಮಾಣಂ ಎಂದು ಪ್ರಮಾಣಲಕ್ಷಣವನ್ನು ಎಲ್ಲಾ ಶಾಸ್ತ್ರಕಾರರೂ ಏಕರೂಪವಾಗಿ ಹೇಳಿದ್ದರೂ, ಆ ಪ್ರಮಾಸ್ವರೂಪವಿಷಯದಲ್ಲಿ ಭಿನ್ನಾಭಿಪ್ರಾಯಪಟ್ಟಿದ್ದಾರೆ. ಅವುಗಳನ್ನು ಹಿಂದಣಪುಟದ ಟಿಪ್ಪಣಿಯಲ್ಲಿ ವಿವರಿಸಿದೆ.

೫. ಲಕ್ಷಣ ಎಂದರೆ ಅಸಾಧಾರಣ ಧರ್ಮ, ಲಕ್ಷ್ಯ ಎಂದರೆ ಯಾವುದಕ್ಕೆ ಲಕ್ಷಣವನ್ನು ಹೇಳಬೇಕಾಗಿದೆಯೋ ಅದು. ಲಕ್ಷಣವು ಅಸಾಧಾರಣ ಧರ್ಮವಾಗಿರಬೇಕು; ಎಂದರೆ ಲಕ್ಷ್ಯ ಹೊರತು ಮಿಕ್ಕುವುಗಳಲ್ಲಿ ಇರಕೂಡದು, ಮತ್ತು ಲಕ್ಷ್ಯಗಳೊಳಗೆಲ್ಲಾ ಯಾವ ವ್ಯಕ್ತಿಯನ್ನೂ ಬಿಡದೆ ಇರಬೇಕು; ಹೀಗಿದ್ದರೆ ಅಸಾಧಾರಣವೆನಿಸುವುದು. ಲಕ್ಷಣಕ್ಕೆ ಅತಿವ್ಯಾಪ್ತಿ, ಅವ್ಯಾಪ್ತಿ, ಅಸಂಭವ ಎಂಬ ಈ ಮೂರು ದೋಷಗಳಲ್ಲಿ ಯಾವದೋಷವೂ ತಟ್ಟದೆ ಇದ್ದರೆ ಅದು ಅಸಾಧಾರಣಧರ್ಮ, ಲಕ್ಷಣ, ಎನಿಸಿಕೊಳ್ಳುವುದು; ಯಾವದೋಷ ತಟ್ಟಿದರೂ ಲಕ್ಷಣವಾಗುವುದಿಲ್ಲ.

(೧) ಅತಿವ್ಯಾಪ್ತಿ—ಲಕ್ಷ್ಯವಲ್ಲದೆ ಮಿಕ್ಕುವುಗಳಲ್ಲಿಯೂ ಈ ಲಕ್ಷಣವಿದ್ದರೆ ಅತಿವ್ಯಾಪ್ತಿ ಎಂಬ ದೋಷ. (ಲಕ್ಷ್ಯಾದನ್ಯತ್ರ ವರ್ತಮಾನತ್ವಂ ಅತಿವ್ಯಾಪ್ತಿಃ)

(೨) ಅವ್ಯಾಪ್ತಿ—ಲಕ್ಷ್ಯಗಳೊಳಗೆ ಕೆಲವು ವ್ಯಕ್ತಿಗಳಲ್ಲಿ ಇದ್ದು ಕೆಲವು ವ್ಯಕ್ತಿಗಳಲ್ಲಿ ಇಲ್ಲದಿದ್ದರೆ ಅವ್ಯಾಪ್ತಿದೋಷ. (ಲಕ್ಷ್ಯೈಕದೇಶೇ ಲಕ್ಷಣಸ್ಯ ಅವರ್ತನಂ ಅವ್ಯಾಪ್ತಿಃ).

---

* ಪ್ರಮಾಣ is the cause of correct experience or knowledge (ಪ್ರಮಾ or ಪ್ರಮಿತಿ). Knowledge is the result, but ಪ್ರಮಾಣ is the source of that knowledge. The word 'ಸಾಧನ' was also necessary in the definition to show the distinction between the cause and the effect. One who has got correct knowledge is ಪ್ರಮಾತಾ. That which is got (or observed) by correct knowledge (or ಪ್ರಮಾ) is ಪ್ರಮೇಯ.

(೩) ಅಸಂಭವ—ಲಕ್ಷ್ಯದೊಳಗೆ ಎಲ್ಲಿಯೂ ಲಕ್ಷಣವು ಇಲ್ಲದೆಯೇ ಇದ್ದರೆ ಅಸಂಭವದೋಷ. (ಲಕ್ಷ್ಯೈಕಸ್ಮಿನ್ನಪಿ ಅವರ್ತನಂ ಅಸಂಭವಃ).

ಗೋವಿಗೆ ಲಕ್ಷಣವನ್ನು ಹೇಳಬೇಕಾದ ಸಂದರ್ಭದಲ್ಲಿ ಗೋವು ಲಕ್ಷ್ಯವಾಯಿತು; ಲಕ್ಷಣ ಯಾವುದು ಎಂದು ವಿಚಾರಿಸುವ.

(೧) ಕೊಂಬುಳ್ಳದು ಗೋವು, ಆದುದರಿಂದ ಕೊಂಬು ಗೋವಿಗೆ ಲಕ್ಷಣ, ಎಂದು ಒಬ್ಬನು ಹೇಳಿದರೆ, ಅದು ತಪ್ಪು; ಗೋಜಾತಿಗೆ ಸೇರದ ಆಡು, ಟಗರು, ಎಮ್ಮೆ ಮುಂತಾದುವುಗಳಲ್ಲಿಯೂ ಕೊಂಬು ಇದೆ, ಆದುದರಿಂದ ಅತಿವ್ಯಾಪ್ತಿ ದೋಷಕ್ಕೆ ಗುರಿಯಾಯಿತು.

(೨) ಕಪ್ಪುಬಣ್ಣವು ಗೋವಿನ ಲಕ್ಷಣವು, ಎಂದು ಒಬ್ಬನು ಹೇಳಿದರೆ ಇದೂ ತಪ್ಪಾಗುವುದು; ಬಿಳಿಯಗೋವು, ಕಪಿಲೆಗೋವು, ಇವುಗಳಲ್ಲಿ ಕಪ್ಪುಬಣ್ಣವಿಲ್ಲ: ಈ ಲಕ್ಷಣವು ಎಲ್ಲಾ ಗೋವ್ಯಕ್ತಿಗಳಲ್ಲಿಯೂ ಇಲ್ಲವಾಗಿ ಅವ್ಯಾಪ್ತಿ ದೋಷದಿಂದ ದುಷ್ಟವಾಯಿತು.

(೩) ಒಂದೇ ಗೊರಸು ಇರುವಿಕೆ ಗೋವಿಗೆ ಲಕ್ಷಣ, ಎಂದು ಒಬ್ಬನು ಹೇಳಿದರೆ, ಗೋವುಗಳಿಗೆಲ್ಲಾ ಗೊರಸು ಸೀಳಿದಂತೆ ಎರಡೆರಡಾಗಿರುವುದರಿಂದ, ಒಂದೇ ಗೊರಸು ಯಾವ ಗೋವಿನಲ್ಲಿಯೂ ಇಲ್ಲವಾಗಿ ಇದು ಅಸಂಭವದೋಷಕ್ಕೆ ಗುರಿಯಾಯಿತು. ಆದುದರಿಂದ ಇವು ಮೂರೂ ಅಸಾಧಾರಣವಲ್ಲವಾಗಿ ಲಕ್ಷಣವಲ್ಲ.

ಮತ್ತೆ ಯಾವುದು ಲಕ್ಷಣ ಎಂದರೆ, (ಸಾಸ್ನಾ) ಗಂಗದೊವಲು, ಲಕ್ಷಣ. ಇದರಲ್ಲಿ ಅತಿವ್ಯಾಪ್ತಿ, ಅವ್ಯಾಪ್ತಿ, ಅಸಂಭವ ಎಂಬ ಈ ಮೂರು ದೋಷಗಳೂ ಇಲ್ಲವಾಗಿ ಸಲ್ಲಕ್ಷಣವಾಗಿದೆ.

ಆದುದರಿಂದ ಮೇಲೆ ಹೇಳಿದ ಯಥಾರ್ಥಾನುಭವಸಾಧನಂ ಪ್ರಮಾಣಂ, ಸಮ್ಯಗನುಭವಸಾಧನಂ ಪ್ರಮಾಣಂ, ಎಂಬ ಪ್ರಮಾಣಲಕ್ಷಣದಲ್ಲಿ ಯಾವ ದೋಷವೂ ಇಲ್ಲವಾಗಿ ಸಲ್ಲಕ್ಷಣವಾಗಿದೆ. ಇದರಂತೆ ಮುಂದೆ ಹೇಳುವ ಎಲ್ಲಾ ಲಕ್ಷಣಗಳಲ್ಲಿಯೂ ಅತಿವ್ಯಾಪ್ತಿ, ಅವ್ಯಾಪ್ತಿ, ಅಸಂಭವ ಎಂಬ ಈ ದೋಷಗಳನ್ನು ತಪ್ಪಿಸುವುದಕ್ಕಾಗಿಯೇ ಆ ಆ ಪದಗಳನ್ನು ಲಕ್ಷಣದಲ್ಲಿ ಹಾಕಿದೆ ಎಂದು ತಿಳಿಯಬೇಕು. ಇದಕ್ಕೆ ದಳಪ್ರಯೋಜನ, ಪದಕೃತ್ಯ ಎಂದು ಹೇಳುವ ವಾಡಿಕೆಯುಂಟು. ಹೀಗೆ ಇಲ್ಲಿಲ್ಲಿ ಹೇಳುವ ಲಕ್ಷಣವು ಆ ಆ ಲಕ್ಷ್ಯದಲ್ಲಿದೆ ಎಂದು ನಿರೂಪಿಸಿ ತೋರಿಸುವುದೇ ಲಕ್ಷಣಸಮನ್ವಯ (Application) ಎನಿಸುವುದು.

೬. ಕಾ ರ ಣ ವಿ ವ ರ ಣ

ಕಾರ್ಯವನ್ನು ಉಂಟುಮಾಡುವ ವಸ್ತು ಕಾರಣ ಎನಿಸುವುದು. ಅದು

ಉಪಾದಾನಕಾರಣ, ನಿಮಿತ್ತಕಾರಣ, ಸಹಕಾರಿಕಾರಣ ಎಂದು ಮೂರು ತೆರನಾಗಿರುವುದು.

(೧) ತಾನೇ ಕಾರ್ಯರೂಪವಾಗಿ ಪರಿಣಮಿಸುವ ವಸ್ತುವೇ ಉಪಾದಾನ ಕಾರಣ (Material cause). ಬಟ್ಟೆಗೆ ನೂಲೂ, ಮಡಕೆಗೆ ಮಣ್ಣೂ ಉಪಾದಾನ ವಾಗಿವೆ. ನೂಲೇ ಬಟ್ಟೆಯಾಗುವುದು, ಮಣ್ಣೇ ಮಡಕೆಯಾಗುವುದು.

(೨) ಉಪಾದಾನವನ್ನು ಕಾರ್ಯರೂಪವಾಗಿ ಪರಿಣಾಮಗೊಳಿಸುವ ಕರ್ತೃ ವಸ್ತು ನಿಮಿತ್ತಕಾರಣ (Instrumental cause). ನೆಯ್ಗೆಯವನು ಕುಂಬಾರನು.

(೩) ಕಾರ್ಯವನ್ನು ಮಾಡುವುದಕ್ಕೆ ಉಪಕರಣವಾದ ನಾನಾ ಸಹಕಾರಿ ಕಾರಣ (Auxiliary cause). ಲಾಳಿ, ಚಕ್ರ, ಅಚ್ಚು.

ಇವುಗಳ ವಿಷಯವು ಈಶ್ವರಪ್ರಕರಣದ ಜಗತ್ಕಾರಣತ್ವವಿಚಾರದಲ್ಲಿ ವಿಶದವಾಗುವುದು.

೭. ಪ್ರಮಾಣವಿಭಾಗ

ಪ್ರಮಾಣವು ಪ್ರತ್ಯಕ್ಷ, ಅನುಮಾನ, ಶಬ್ದ ಎಂದು ಮೂರುವಿಧವಾಗಿರು ವುದು. ಇವುಗಳಿಂದುಂಟಾದ ಪ್ರಮಿತಿಯೂ (ಪ್ರಮ) ಪ್ರತ್ಯಕ್ಷ, ಅನುಮಿತಿ, ಶಾಬ್ದ ಎಂದು ಮೂರುವಿಧವಾಗಿದೆ ಎಂದು ಹೇಳಿದಹಾಗೆಯೇ ಆಯಿತು. ಇಲ್ಲಿ ಪ್ರತ್ಯಕ್ಷ ಎಂಬ ಪದವು ಪ್ರಮಿತಿಯಲ್ಲಿಯೂ ಪ್ರಮಾಣದಲ್ಲಿಯೂ ಏಕರೂಪವಾಗಿಯೇ ವಾಚಕವಾಗಿರುವುದರಿಂದ ಭೇದ ತಿಳಿವುದಕ್ಕಾಗಿ ಪ್ರತ್ಯಕ್ಷ ಪ್ರಮಿತಿ, ಪ್ರತ್ಯಕ್ಷ ಪ್ರಮಾಣ ಎಂಬ ಪದಗಳನ್ನು ಕೂಡಿಸಿ ಹೇಳಬೇಕಾಗಿದೆ. ಅನುಮಿತಿ, ಶಾಬ್ದ ಎಂಬಿವು ಪ್ರಮಿತಿಯನ್ನೂ, ಅನುಮಾನ, ಶಬ್ದ ಎಂಬಿವು ಪ್ರಮಾಣಮಾತ್ರವನ್ನೂ ಹೇಳುವುವೆಂದು ಸ್ಪಷ್ಟವಾಗಿಯೇ ತೋರಿಬರುತ್ತದೆ.

ಪ್ರಮಾಣಲಕ್ಷಣಗಳನ್ನು ಹೇಳುವಾಗ ಪ್ರಮಿತಿಯ ಸ್ವರೂಪವೂ ಅದರಲ್ಲಿ ತಿಳಿಯಲೇ ಬೇಕಾಗಿರುವುದರಿಂದ ಪ್ರಮಿತಿಯ ಸ್ವರೂಪವನ್ನು ಮೊದಲು ಹೇಳಿ, ಆ ಮೂಲಕವಾಗಿ ಪ್ರಮಾಣಲಕ್ಷಣಗಳನ್ನು ವಿವರಿಸಬೇಕಾಗಿದೆ. ಹೀಗೆಯೇ ಮುಂದೆಯೂ ತಿಳಿಯಬೇಕು.

೮. ಪ್ರತ್ಯಕ್ಷಲಕ್ಷಣ

ಸಾಕ್ಷಾತ್ಕಾರಿ ಪ್ರಮಾಕರಣಂ ಪ್ರತ್ಯಕ್ಷಂ, ಪ್ರತಿಗತಂ ಅಕ್ಷಂ ಪ್ರತ್ಯಕ್ಷಂ ಎಂದು ಅವಯವಾರ್ಥ (Cause of immediate and right Cognition).

ನಮ್ಮ ಇಂದ್ರಿಯಗಳಿಗೂ ಪದಾರ್ಥಗಳಿಗೂ ಸಂಬಂಧವುಂಟಾಗಿ ಅದರಿಂದ ಸಾಕ್ಷಾತ್ತಾಗಿ ನಮಗೆ ಗೋಚರವಾಗುವ ಅನುಭವವೇ ಪ್ರತ್ಯಕ್ಷಾನುಭವ (ಪ್ರತ್ಯಕ್ಷ ಪ್ರಮಿತಿ)ವೆನಿಸುವುದು. ಇಂಥ ಪ್ರತ್ಯಕ್ಷಾನುಭವಕ್ಕೆ ಸಾಧನವಾದ ಇಂದ್ರಿಯಗಳು ಪ್ರತ್ಯಕ್ಷಪ್ರಮಾಣವೆನಿಸುವುವು. (ದೋಷದುಷ್ಟವಲ್ಲದಿದ್ದರೆ ಪ್ರಮಾಣ ಎನಿಸುವುದು) ಬೆಳಕಿರುವ ಜಾಗದಲ್ಲಿ ಕಣ್ಣು ಬಿಟ್ಟು ನೋಡಿದೊಡನೆಯೇ ಮುಂದಿರುವ ಪದಾರ್ಥಗಳಿಗೂ ನಮ್ಮ ಕಣ್ಣಿಗೂ ಸನ್ನಿಕರ್ಷವೆಂಬ ಸಂಬಂಧವುಂಟಾಗಿ ಆಗ ತೋರಿಬರುವ—ಇದು ಬೆಟ್ಟ, ನದಿ, ಪಶು, ಪಕ್ಷಿ, ಮಣ್ಣು, ನೀರು ಎಂದು ವಸ್ತುಗಳ ಅನುಭವವೂ, ಇದು ಬಿಳಿದು, ಕರಿದು, ಹಳದಿ ಎಂದು ಬಣ್ಣಗಳ ಅನುಭವವೂ ಇದು ದುಂಡು, ಚೌಕ, ಡೊಂಕು ಎಂದು ಆಕಾರಗಳ ಅನುಭವವೂ ಉಂಟಾಗುತ್ತಿರುವುವಷ್ಟೆ. ಈ ಅನುಭವವೇ ಪ್ರತ್ಯಕ್ಷಪ್ರಮಿತಿ, ಸಾಕ್ಷಾತ್ಕಾರಿಪ್ರಮಾ ಎನಿಸುವುದು. ಇದನ್ನು ಗ್ರಹಿಸಿ ತೋರಿಸುವ ಚಕ್ಷುರಿಂದ್ರಿಯವೇ (ಕಣ್ಣು) ಪ್ರತ್ಯಕ್ಷ ಪ್ರಮಾಣವೆನಿಸುವುದು.

ಇಲ್ಲಿ ಕಣ್ಣು ದೋಷಗಳಿಂದ ಕೆಡದೆ ಸರಿಯಾಗಿದ್ದರೆ ಯಥಾರ್ಥಾನುಭವವುಂಟಾಗುವುದು. ಪಿತ್ತರೋಗ, ಕಾಮಿಲಾದಿ (ಕಾಮಾಲೆ) ಗಳಿಂದ ಕೆಟ್ಟು ಹೋಗಿದ್ದರೆ ಕಾರಣದೋಷದಿಂದ ಭ್ರಮ, ಅನ್ಯಥಾಜ್ಞಾನ ಮುಂತಾದ ಅಯಥಾರ್ಥಜ್ಞಾನವುಂಟಾಗುವುದು. ಆಗ ಅದು ಪ್ರಮಾಣಸ್ಥಾನದಲ್ಲಿ ಸೇರಲಾರದು. ಕಾಮಿಲಾರೋಗದವನಿಗೆ ಪ್ರಪಂಚವೆಲ್ಲಾ ಹಳದಿಬಣ್ಣ ಹಚ್ಚಿದಂತೆಯೂ, ಪಿತ್ತರೋಗದವನಿಗೆ ಪ್ರಪಂಚವೆಲ್ಲಾ ಗಿರ್ರನೆ ಸುತ್ತುವಂತೆಯೂ ತೋರಿಬಂದರೂ, ಮಿಕ್ಕವರಿಗೆ ಯಥಾವಸ್ಥಿತವಾಗಿ ತಿಳಿಯಬರುವುದರಿಂದ ಇವರ ಶುದ್ಧೇಂದ್ರಿಯಗಳಿಂದ ಉಂಟಾದ ಅನುಭವವು ಯಥಾರ್ಥಾನುಭವವೇ ಹೊರತು ಅವರ ದುಷ್ಟೇಂದ್ರಿಯ ಜನ್ಯಾನುಭವವು ಯಥಾರ್ಥವೂ ಅಲ್ಲ, ವ್ಯವಹಾರೋಪಯೋಗಿಯೂ ಅಲ್ಲವಾದುದರಿಂದ ಪ್ರಮಾರೂಪವೂ ಅಲ್ಲ. ಅಂಥ ದುಷ್ಟೇಂದ್ರಿಯವು ಪ್ರಮಾಣವೂ ಅಲ್ಲ. ಹೀಗೆಯೇ ಎಲ್ಲಾ ಇಂದ್ರಿಯವಿಷಯದಲ್ಲಿಯೂ ತಿಳಿಯಬೇಕು.

ಸಾಕ್ಷಾತ್ಕಾರಿಪ್ರಮಾಕರಣ ಎಂಬ ಪ್ರತ್ಯಕ್ಷಲಕ್ಷಣದಲ್ಲಿ – ಸಾಕ್ಷಾತ್ಕಾರಿ ಎಂಬ ಪದವನ್ನು ಬಿಟ್ಟು ಪ್ರಮಾಕರಣ ಎಂದು ಇಷ್ಟುಮಾತ್ರ ಹೇಳಿದರೆ, ಅನುಮಾನ ಶಬ್ದಪ್ರಮಾಣಗಳಲ್ಲಿಯೂ ಪ್ರಮಾಕರಣತ್ವವಿರುವುದರಿಂದ ಅತಿವ್ಯಾಪ್ತಿ ಬರುವುದು, ಅದರ ನಿರಾಸಕ್ಕಾಗಿ 'ಸಾಕ್ಷಾತ್ಕಾರಿ'' ಎಂಬ ಪದವನ್ನೂ ದುಷ್ಟೇಂದ್ರಿಯ ಜನ್ಯಜ್ಞಾನನಿರಾಸಕ್ಕಾಗಿ "ಪ್ರಮಾ" ಎಂಬ ಪದವನ್ನೂ ಸೇರಿಸಿದೆ. ಸಾಕ್ಷಾತ್ಕಾರಿ ಪ್ರಮಾಕರಣತ್ವವು ಎಲ್ಲಾ ಇಂದ್ರಿಯಗಳಲ್ಲಿಯೂ ಇರುವುದರಿಂದ ಲಕ್ಷಣಕ್ಕೆ ಸಮನ್ವಯವಾಯಿತು. ಇಂಥ ಲಕ್ಷಣಸಮನ್ವಯ (ಪದಕೃತ್ಯ) ಗಳನ್ನು ಮುಂದೆಯೂ ತಿಳಿದುಕೊಳ್ಳಬೇಕು.

೯. ಇಂದ್ರಿಯಗಳಿಂದ ಪದಾರ್ಥಗಳ ಗ್ರಹಣಪ್ರಕಾರವು.

ಜೀವಾತ್ಮನು ಮನಸ್ಸಿನೊಂದಿಗೆ ಸೇರುತ್ತಾನೆ; ಆ ಮನಸ್ಸು ಇಂದ್ರಿಯ ವೊಂದಿಗೆ ಸೇರುತ್ತದೆ; ಆ ಇಂದ್ರಿಯವು ಪದಾರ್ಥಗಳೊಂದಿಗೆ ಸೇರುತ್ತದೆ. ಆ ಇಂದ್ರಿಯಪದಾರ್ಥಗಳ ಸೇರುವಿಕೆಯೇ ಇಂದ್ರಿಯಸನ್ನಿಕರ್ಷವೆಂದು ಹೇಳಲ್ಪ ಡುವುದು. ಈ ಸನ್ನಿಕರ್ಷವೆಂಬ ಸಂಬಂಧದಮೂಲಕವಾಗಿ ಇಂದ್ರಿಯವು ಪದಾರ್ಥ ಗಳನ್ನು ಗ್ರಹಿಸಿ, ತನಗೆ ಸಂಬಂಧಿಸಿದ್ದ ಮನಸ್ಸಿನ ಮೂಲಕವಾಗಿ ಆತ್ಮನಿಗೆ ಒಪ್ಪಿಸುತ್ತದೆ ಆಗ ಆತ್ಮನಿಗೆ ಆ ಆ ಪದಾರ್ಥಗಳ ಪ್ರತ್ಯಕ್ಷವುಂಟಾಗುವುದು. ಈ ಆತ್ಮ, ಮನಸ್ಸು, ಇಂದ್ರಿಯ, ಪದಾರ್ಥ ಇವುಗಳ ಸಂಬಂಧದಲ್ಲಿ ಯಾವ ಕುಣಿಕೆ ತಪ್ಪಿದರೂ ಪ್ರತ್ಯಕ್ಷವುಂಟಾಗಲಾರದು.

ನಾವು ಇದಿರಿಗೆ ಇರುವ ಹಣ್ಣು ಮುಂತಾದ ಪದಾರ್ಥವನ್ನು ನೋಡಿ, ಮುಟ್ಟಿ, ಮೂಸಿ, ತಿನ್ನುತ್ತೇವೆಂದು ಭಾವಿಸೋಣ. ಆತ್ಮನು ಮನಸ್ಸಿನೊಂದಿಗೂ, ಆ ಮನಸ್ಸು ಕಣ್ಣು ಎಂಬ ಇಂದ್ರಿಯದೊಂದಿಗೂ, ಆ ಕಣ್ಣು ಮಾವಿನಹಣ್ಣಿ ನೊಂದಿಗೂ ಸಂಬಂಧಿಸಿ, ಮೊದಲು 'ಇದು ಹಳದಿ, ದುಂಡಗಿದೆ' ಎಂದು ಕಣ್ಣು ಗ್ರಹಿಸುವುದು ; ಇದೇ ಚಾಕ್ಷುಷಪ್ರತ್ಯಕ್ಷವು. ಅದನ್ನು ಮುಟ್ಟಿದಾಗ ಆತ್ಮ ಮನ ಸ್ಸಂಯೋಗವಾದಮೇಲೆ ಮನಸ್ಸು ತ್ವಗಿಂದ್ರಿಯದೊಡನೆಯೂ, ಆ ತ್ವಗಿಂದ್ರಿಯವು ಹಣ್ಣಿನೊಡನೆಯೂ ಸಂಬಂಧಿಸಿ, 'ಇದು ತಣ್ಣಗಿದೆ, ಮೆತ್ತಗಿದೆ' ಎಂದು ತ್ವಗಿಂ ದ್ರಿಯವು ಗ್ರಹಿಸುವುದು ; ಇದೇ ತ್ವಾಚಪ್ರತ್ಯಕ್ಷ (ಸ್ಪಾರ್ಶನಪ್ರತ್ಯಕ್ಷ). ಅದನ್ನು ತೆಗೆದು ಮೂಸಿನೋಡಿದಾಗ ಘ್ರಾಣೇಂದ್ರಿಯವು ಅದರಲ್ಲಿ ವಾಸನೆಯನ್ನು ಗ್ರಹಿ ಸುವುದು ; ಇದೇ ಘ್ರಾಣಜಪ್ರತ್ಯಕ್ಷವು. ಆ ಹಣ್ಣನ್ನು ತಿಂದಾಗ ಅದರಲ್ಲಿರುವ ಸವಿಯನ್ನು (ರಸ) ನಾಲಗೆ (ರಸನೆ) ಗ್ರಹಿಸುವುದು; ಇದೇ ರಾಸನಪ್ರತ್ಯಕ್ಷವು. ಹೀಗೆಯೇ ಎಲ್ಲಾ ಇಂದ್ರಿಯಗಳಲ್ಲಿಯೂ ತಿಳಿಯಬೇಕು. ಕಣ್ಣು, ಕಿವಿ, ನಾಲಗೆ, ಮೂಗು, ತ್ವಕ್ಕು ಎಂಬ ಬಹಿರಿಂದ್ರಿಯಗಳಿಂದ ಉಂಟಾದ ಸಾಕ್ಷಾತ್ಕಾರವನ್ನು ಬಾಹ್ಯಪ್ರತ್ಯಕ್ಷವೆಂದೂ, ಮನಸ್ಸಿನಿಂದಮಾತ್ರ ತಿಳಿಯಬರುವ (ನೋವು, ಇಂಪು ಮುಂತಾದ ಅನುಭವ) ಪ್ರತ್ಯಕ್ಷವನ್ನು ಮಾನಸಪ್ರತ್ಯಕ್ಷವೆಂದೂ ಹೇಳುವ ವಾಡಿಕೆಯುಂಟು.

ಮನಸ್ಸು ಜ್ಞಾನಸಾಮಾನ್ಯವನ್ನು ಕುರಿತು ಕಾರಣವಾಗಿದೆ; ಅದರೂ ಕಣ್ಣು, ಕಿವಿ ಮುಂತಾದ ಬಹಿರಿಂದ್ರಿಯಗಳು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಿರುವಾಗ ಆ ಆಪ್ರತ್ಯಕ್ಷದಲ್ಲಿಯೂ ಮನಸ್ಸು ಸಹಕಾರಿಯಾಗಿದೆ ; ತನ್ನಿಂದ ಮಾತ್ರ ಆಗತಕ್ಕ ಮಾನಸಪ್ರತ್ಯಕ್ಷಗಳಲ್ಲಿ ಸ್ವತಂತ್ರಕಾರಣವಾಗಿದೆ. ತನ್ನಿಂದ ಮಾತ್ರ ಆಗತಕ್ಕ ಮಾನಸಪ್ರತ್ಯಕ್ಷಕಾಲದಲ್ಲಿಯಾಗಲಿ, ಮತ್ತೆ ಯಾವುದಾದರೂ

ಒಂದು ಇಂದ್ರಿಯದಿಂದ ಪ್ರತ್ಯಕ್ಷವಾಗುವುದಕ್ಕೆ ತಾನು ಸಹಕಾರಿಯಾಗಿರುವಲ್ಲಿ ಯಾಗಲಿ, ಇನ್ನೊಂದು ಇಂದ್ರಿಯಕಾರ್ಯವೂ ಬಂದೊದಗಿದರೆ, ಆ ಎರಡನೆಯ ಇಂದ್ರಿಯದ ಕಾರ್ಯ ನಡೆವುದರಲ್ಲಿ ಮನಸ್ಸು ಬೇರೆ ಕೆಲಸದಲ್ಲಿರುವುದರಿಂದ ಆ ಇಂದ್ರಿಯ ಮನಸ್ಸಂಯೋಗವೆಂಬ ಕುಣಿಕೆ ಬಿಟ್ಟುಹೋಗಿರುವಕಾರಣ ಆ ಎರಡನೆಯ ಇಂದ್ರಿಯದಿಂದ ಪ್ರತ್ಯಕ್ಷವುಂಟಾಗಲಾರದು. ಹೀಗೆಯೇ ಗಾಢನಿದ್ರೆಯ ಕಾಲದಲ್ಲಿ ಆತ್ಮಮನಸ್ಸಂಯೋಗವಿಲ್ಲವಾದುದರಿಂದ ಯಾವ ಜ್ಞಾನವೂ ಉಂಟಾಗುವುದಿಲ್ಲ. ಆದುದರಿಂದ ಇವುಗಳಿಗೆ ಕಾರಣವಾದ ಆತ್ಮ, ಮನಸ್ಸು, ಇಂದ್ರಿಯ, ಪದಾರ್ಥ ಇವುಗಳ ಸಂಬಂಧವನ್ನು ತಿಳುಹುವ ಈ ಕ್ರಮವನ್ನು* ಅವಧಾನದಿಂದ ಮನದಟ್ಟು ಮಾಡಿಕೊಂಡಿರಬೇಕು.

೧೦. ಪ್ರತ್ಯಕ್ಷವಿಭಾಗ

ಪ್ರತ್ಯಕ್ಷಾನುಭವವು ಚಾಕ್ಷುಷ, ತ್ವಾಚ, ಘ್ರಾಣಜ, ರಾಸನ, ಶ್ರಾವಣ, ಮಾನಸ ಎಂದು ಆರುವಿಧವಾಗಿರುವುದು.

(೧) ಚಾಕ್ಷುಷ—ಕಣ್ಣಿಂದ ಹುಟ್ಟಿದ ಪ್ರತ್ಯಕ್ಷಾನುಭವ (ಪ್ರತ್ಯಕ್ಷಪ್ರಮಿತಿ). ಕಣ್ಣು–ಕೆಂಪು, ಕಪ್ಪು ಮುಂತಾದ ಬಣ್ಣಗಳನ್ನೂ ಬಣ್ಣವುಳ್ಳ ಪದಾರ್ಥಗಳನ್ನೂ, ದೊಡ್ಡದು, ಚಿಕ್ಕದು, ದುಂಡು, ಚೌಕ, ಡೊಂಕು, ಸರಳ ಮುಂತಾದ ಆಕಾರಗಳನ್ನೂ ಆಕಾರವುಳ್ಳ ಪದಾರ್ಥಗಳನ್ನೂ, ಆ ಬಣ್ಣವುಳ್ಳ ವಸ್ತುಗಳಲ್ಲಿರುವ ಜಾತಿ, ಕ್ರಿಯೆ ಮುಂತಾದುವುಗಳನ್ನೂ ಗ್ರಹಿಸುವುದು. ಇದೇ ಚಕ್ಷುಸ್ಸಿಂದುಂಟಾದ ಪ್ರತ್ಯಕ್ಷಾನುಭವ. ಇದಕ್ಕೆ ಕಾರಣವಾದ ಚಕ್ಷುರಿಂದ್ರಿಯವೇ ಪ್ರತ್ಯಕ್ಷ ಪ್ರಮಾಣವು. ಈ ಗ್ರಹಿಸಲ್ಪಟ್ಟ ವಸ್ತುವೇ ಪ್ರತ್ಯಕ್ಷ ಪ್ರಮೇಯವು.

(೨) ತ್ವಾಚಪ್ರತ್ಯಕ್ಷ—ತ್ವಗಿಂದ್ರಿಯದಿಂದ ಹುಟ್ಟಿದ ಪ್ರತ್ಯಕ್ಷಾನುಭವವು ತ್ವಗಿಂದ್ರಿಯವು ಶೀತ, ಉಷ್ಣ, ಮೃದು, ಕಠಿನ ಮುಂತಾದ ಉದ್ಭೂತ† ಸ್ಪರ್ಶವನ್ನೂ, ಈ ಸ್ಪರ್ಶವುಳ್ಳ ವಸ್ತುಗಳನ್ನೂ, ಬಣ್ಣವೊಂದು ಹೊರತು ಮಿಕ್ಕ ಕಣ್ಣಿಗೆ ಗೋಚರಿಸುವ ಸಕಲ ವಿಷಯಗಳನ್ನೂ ಗ್ರಹಿಸುವುದು. ವಾಯುವೂ ತ್ವಾಚ ಪ್ರತ್ಯಕ್ಷವಿಷಯವೇ; ಅಪ್ರತ್ಯಕ್ಷವಲ್ಲ.

(೩) ಘ್ರಾಣಜಪ್ರತ್ಯಕ್ಷ — ಮೂಗಿನಿಂದುಂಟಾದ ಪ್ರತ್ಯಕ್ಷಾನುಭವವು;

---

* ಆತ್ಮಾ ಮನಸಾ ಸಂಯುಜ್ಯತೇ, ಮನ ಇಂದ್ರಿಯೇಣ, ಇಂದ್ರಿಯಮರ್ಥೇನ, ತತಃ ಪ್ರತ್ಯಕ್ಷಂ

† ಇಂದ್ರಿಯಗೋಚರವಾಗಬಲ್ಲ

ಮೂಗು ಹೂ, ಚಂದನ ಮುಂತಾದುವುಗಳ ವಾಸನೆಯನ್ನು ಗ್ರಹಿಸುವುದು. ಇದರಿಂದ ಇದು ಸುಗಂಧ, ಇದು ದುರ್ಗಂಧ ಎಂಬ ಪ್ರತ್ಯಕ್ಷವುಂಟಾಗುವುದು. ಮೂಗು ದ್ರವ್ಯಗ್ರಾಹಕವಲ್ಲ, ದ್ರವ್ಯಾಶ್ರಿತಗುಣಗ್ರಾಹಕವು.

(೪) ರಾಸನಪ್ರತ್ಯಕ್ಷ—ರಸನೆಯಿಂದ (ನಾಲಗೆಯಿಂದ) ಹುಟ್ಟಿದ ಪ್ರತ್ಯಕ್ಷಾನುಭವವು; ರಸನೇಂದ್ರಿಯವು ಸಿಹಿ, ಕಹಿ, ಉಪ್ಪು ಮುಂತಾದ ರಸಗಳನ್ನೂ ರಸದ ಜಾತಿಗಳನ್ನೂ ಪ್ರಭೇದಗಳನ್ನೂ ಗ್ರಹಿಸುವುದು. ದ್ರವ್ಯಗ್ರಾಹಕವಲ್ಲ.

(೫) ಶ್ರಾವಣಪ್ರತ್ಯಕ್ಷ—ಕಿವಿಯಿಂದ ಹುಟ್ಟಿದ ಪ್ರತ್ಯಕ್ಷಾನುಭವವು. ಕಿವಿ ಸದ್ದು, ಸದ್ದಿನ ಜಾತಿಭೇದಗಳು, ಸ್ವರವರ್ಣಾದಿಗಳು ಇವುಗಳನ್ನು ಗ್ರಹಿಸುವುದು. ಮೇಲೆಹೇಳಿದ ಇವುಗಳೆಲ್ಲವೂ ಬಹಿರಿಂದ್ರಿಯ ಜನ್ಯಪ್ರತ್ಯಕ್ಷಗಳು.

(೬) ಮಾನಸಪ್ರತ್ಯಕ್ಷ—ಮನಸ್ಸೆಂಬ ಅಂತರಿಂದ್ರಿಯದಿಂದ ಹುಟ್ಟಿದ ಅನುಭವವು. ಮನಸ್ಸು ಇಂಪು, ನೋವು, ಇಚ್ಛೆ, ದ್ವೇಷ ಮುಂತಾದುವುಗಳನ್ನು ಗ್ರಹಿಸುವುದು ದ್ರವ್ಯಗ್ರಾಹಕವೂ ಆಗಿದೆ ಸಕಲ ಜ್ಞಾನಕ್ಕೂ ಸಹಕಾರಿಯಾಗಿರುವುದು.

೧೧. ಪ್ರತ್ಯಕ್ಷಾನುಭವವು—ನಿರ್ವಿಕಲ್ಪಕ, ಸವಿಕಲ್ಪಕ ಎಂದೂ, ಅನರ್ವಾಚೀನ, ಅರ್ವಾಚೀನ ಎಂದೂ, ಸ್ವಯಂಸಿದ್ಧ ದಿವ್ಯ ಎಂದೂ ಇತ್ಯಾದಿಯಾಗಿ ಜತೆಜತೆಯಾದ ಅನೇಕ ಭೇದಗಳುಳ್ಳದು ಎಂದು ಬಹುವಾಗಿ ವಿಂಗಡಿಸಿ ನಿರೂಪಿಸಿರುವದು

ನಿರ್ವಿಕಲ್ಪಕವೆಂದರೆ ಇಂದ್ರಿಯಸನ್ನಿಕರ್ಷವಾದಬಳಿಕ ಮೊತ್ತಮೊದಲು ಉಂಟಾದ ವಸ್ತುಗ್ರಹಣವು; ಸವಿಕಲ್ಪಕವೆಂದರೆ ಆ ವಸ್ತುವಿನ ಗುಣಾದಿ ವಿಮರ್ಶೆ ದೊಡನೆ ಕೂಡಿದ ಎರಡನೆಯಸಲದ ವಸ್ತುಗ್ರಹಣವು. "ಇಂದ್ರಿಯಾರ್ಥಸನ್ನಿಕರ್ಷೋತ್ಪನ್ನಂ" ಇತ್ಯಾದಿಯಾಗಿ ನೈಯಾಯಿಕರು ಹೇಳಿದ ಪ್ರತ್ಯಕ್ಷಲಕ್ಷಣವು ಸಾಧಾರಣ ಜನರ ಪ್ರತ್ಯಕ್ಷಲಕ್ಷಣವಾಗಿದೆ. ಇದು ಇಷ್ಟಿಮಾತ್ರ ಸಂಗತವಾದರೂ ಸಿದ್ಧಯೋಗಿಗಳ ಪ್ರತ್ಯಕ್ಷದಲ್ಲಿ ಸಂಗತವಾಗಲಾರದು ಸಿದ್ಧಯೋಗಿಗಳಿಗೆ ಇಂದ್ರಿಯಾಪೇಕ್ಷೆಯಿಲ್ಲದಂತೆಯೇ ಸರ್ವವೂ ವಿಶದ ಪ್ರತ್ಯಕ್ಷ ವಿಷಯವಾಗಿದೆ ಎಂದು ಶಾಸ್ತ್ರಗಳಲ್ಲಿ ಹೇಳಿದೆ. ಆ ಇಂದ್ರಿಯಾಪೇಕ್ಷೆಯೇ ಇಲ್ಲದ ಪ್ರತ್ಯಕ್ಷವು ಸ್ವಯಂಸಿದ್ಧ, ದಿವ್ಯ ಎಂದು ಎರಡುವಿಧವಾಗಿರುವುದು. ಸ್ವಯಂಸಿದ್ಧವೆಂಬುದು ಯೋಗಜನ್ಯವಾದ ಸನಕಾದಿಗಳ ಅನುಭವವು; ದಿವ್ಯವೆಂಬುದು ಭಗವದನುಗ್ರಹದಿಂದ ಲಬ್ಧವಾದ ಪರಾಂಕುಶಪರಕಾಲಾದಿದಿವ್ಯಸೂರಿಗಳ ಅನುಭವವು;

ಇವೆರಡೂ ಅರ್ವಾಚೀನಗಳು. ಇಂದ್ರಿಯಾಪೇಕ್ಷೆಯೇ ಇಲ್ಲದ ನಿತ್ಯಮುಕ್ತೇಶ್ವರರ ಅನುಭವವು ಅನರ್ವಾಚೀನವೆನಿಸುವುದು. ಈ ಎಲ್ಲಾ ವಿಧವಾದ ಅನುಭವಗಳಲ್ಲಿಯೂ ಸಂಗತವಾಗುವಂತೆ ಸರ್ವಾನುಗತವಾದ ಲಕ್ಷಣವು "ಸಾಕ್ಷಾತ್ಕಾರಿ ಪ್ರಮಾಕರಣಂ ಪ್ರತ್ಯಕ್ಷಂ" ಎಂದು ನಾವು ಮೇಲೆ ಹೇಳಿ ನಿರೂಪಿಸಿದುದೊಂದೇ. ಆದುದರಿಂದ ಈ ಲಕ್ಷಣವು ಸರ್ವಪ್ರತ್ಯಕ್ಷಾನುಗತವಾಗಿಯೂ ನಿರ್ದೋಷವಾಗಿಯೂ ಇರುವುದು.

ಸ್ಮರಣವೂ ಲೌಕಿಕ ವ್ಯವಹಾರಕ್ಕೆ ಅನುಗುಣವಾದ ಜ್ಞಾನವಾದುದರಿಂದ ಪ್ರಮಾಣವಾಗಬಹುದು. ಆ ಸ್ಮರಣಕ್ಕೆ ಪ್ರಾಮಾಣ್ಯವನ್ನು ನಾವೂ ಅಂಗೀಕರಿಸಿದ್ದರೂ, ಸ್ಮರಣಕ್ಕೆ ಸಂಸ್ಕಾರವು ಕಾರಣವಾಗಿಯೂ ಆ ಸಂಸ್ಕಾರಕ್ಕೆ ಪ್ರತ್ಯಕ್ಷವು ಕಾರಣವಾಗಿಯೂ ಇರುವುದರಿಂದ ಮೂಲಭೂತವಾದ ಪ್ರತ್ಯಕ್ಷದಲ್ಲಿಯೇ ಅಂತರ್ಭೂತವಾಗಿರುವುದು. ಆದುದರಿಂದ ಪ್ರತ್ಯಕ್ಷಾನುಮಾನ ಶಬ್ದಗಳೆಂಬ ಮೂರೇ ಪ್ರಮಾಣಗಳೆಂದು ಸಿದ್ಧವಾಯಿತು

ಇಂತು ಶಿಷ್ಯಾಸ್ತ್ರಿತದೀಪಿಕೆಯ ಪ್ರಮಾಣಪ್ರಕಾಶದಲ್ಲಿ
ಪ್ರತ್ಯಕ್ಷಪರಿಚ್ಛೇದವು ಸಮಾಪ್ತವಾಯಿತು.

೨ ಅನುಮಾನ ಪರಿಚ್ಛೇದ

೧೩. ಅನುಮಾನಪ್ರಮಾಣಲಕ್ಷಣ—ಅನುಮಿತಿ ಎಂಬ ಪ್ರಮೆಗೆ ಕಾರಣವು ಅನುಮಾನಪ್ರಮಾಣ ಎನಿಸುವುದು. ಅನುಮಿತಿ ಎಂದರೆ—ಯಾವುದಾದರೂ ಎರಡುವಸ್ತುಗಳು ಒಂದನ್ನೊಂದು ಎಡೆಬಿಡದೆ ಜತೆಜತೆಯಲ್ಲಿಯೇ ಇರುವುದನ್ನು ಕಂಡಿದ್ದು, ಅವೆರಡರೊಳಗೆ ಒಂದು ವಸ್ತುವನ್ನು ಎಲ್ಲಿಯೋ ಕಂಡು, ಮತ್ತೊಂದು ವಸ್ತುವೂ ಅಲ್ಲಿ ಇರಲೇಬೇಕು ಎಂದು ನಿರ್ಣಯಿಸುವುದು ಆ ಅನುಮಿತಿಗೆ ಕಾರಣವೇ ಅನುಮಾನಪ್ರಮಾಣವು ಹೇಗೆಂದರೆ—ಎಲ್ಲೆಲ್ಲಿ ಹೊಗೆ ಕಾಣುತ್ತದೆಯೋ ಅಲ್ಲೆಲ್ಲ ಬೆಂಕಿ ಇದ್ದೇ ಇರುವುದನ್ನು, ಅಡುಗೆಮನೆ, ಬಿಸಿನೀರುಮನೆ ಮುಂತಾದ ನೂರಾರುಕಡೆಗಳಲ್ಲಿ ಕಂಡು ಬೆಂಕಿಹೊಗೆಗಳಿಗೆ ವ್ಯಾಪ್ತಿ (ಸಾಹಚರ್ಯನಿಯಮ—Concomitance) ಇರುವುದೆಂದು ಗ್ರಹಿಸಿದ್ದ ಮನುಷ್ಯನು ಎಲ್ಲಿಯೋ ಹೋಗುತ್ತಿರುವಾಗ ಪರ್ವತದಲ್ಲಿ ಹೊಗೆಯಾಡುವುದನ್ನು ಕಂಡರೆ, ಒಡನೆಯೇ ಅವನಿಗೆ ಈ ವ್ಯಾಪ್ತಿಸ್ಮರಣೆಯುಂಟಾಗುವುದು. ಬಳಿಕ, ಬೆಂಕಿಯನ್ನು ಅಗಲದೆ ಇರುವ ಹೊಗೆ ಈ ಬೆಟ್ಟದಲ್ಲಿದೆ ಎಂಬ ಪರಾಮರ್ಶಜ್ಞಾನವು ಉಂಟಾಗುವುದು. ಬಳಿಕ 'ಈ ಪರ್ವತದಲ್ಲಿ ಬೆಂಕಿಯಿದೆ' ಎಂದು ನಿರ್ಣಯಿಸುವನು.

ಇಲ್ಲಿ ಸಾಹಚರ್ಯ ನಿಯಮವೆಂಬ ವ್ಯಾಪ್ತಿಜ್ಞಾನವೇ ಅನುಮಾನಪ್ರಮಾಣವು, ಈ ಪರಾಮರ್ಶಜ್ಞಾನವೇ ವ್ಯಾಪಾರ (Medium=ದ್ವಾರ) ವೆಂಬುದು. ಇಲ್ಲಿ ಬೆಂಕಿ ಯಿದ್ದೇ ಇರುವುದು ಎಂಬ ನಿರ್ಣಯವೇ ಅನುಮಿತಿ ಎಂಬ ಫಲಜ್ಞಾನ ವಾಗಿದೆ. ಈ ಅನುಮಾನ ಪ್ರಮಾಣವು ಸ್ವಾರ್ಥಾನುಮಾನವೆಂದೂ ಪರಾರ್ಥಾನು ಮಾನವೆಂದೂ ಎರಡು ಬಗೆಯಾಗಿರುವುದು. ಮೇಲೆಹೇಳಿದುದೇ ಸ್ವಾರ್ಥಾನು ಮಾನವು. ಇದು ತನ್ನ ನಿರ್ಣಯಕ್ಕೆಮಾತ್ರ ಸಾಧನವಾಯಿತು.

ಪರಾರ್ಥಾನುಮಾನವೆಂದರೆ—ಪರೋಪದೇಶಕ್ಕಾಗಿ ಹೊರಟುದು, ಎಂದರೆ ಇನ್ನೊಬ್ಬರಿಗೆ ತಿಳುಹಿಸುವುದಕ್ಕಾಗಿ ಪ್ರಯೋಗಿಸಲ್ಪಟ್ಟ ಅನುಮಾನವು. ಹೇಗೆಂದರೆ—ಹೀಗೆ ಹೊಗೆಯಾಡುವುದರಿಂದ 'ಪರ್ವತದಲ್ಲಿ ಬೆಂಕಿಯಿದೆ' ಎಂದು ತನ್ನ ಮಟ್ಟಿಗೆ ತಿಳಿದುಕೊಂಡ ಮನುಷ್ಯನು, ಮತ್ತೊಬ್ಬನಿಗೆ ಸಂಶಯಹೋಗಲಾಡಿಸುವುದಕ್ಕಾಗಲಿ, ಅಥವಾ ವಾದಮಾಡಿ ಸ್ಥಾಪಿಸುವುದಕ್ಕಾಗಲಿ, ತಾನು ಕಂಡುಹಿಡಿದ ಪ್ರಕಾರವನ್ನು ತಿಳಿಸುವ ಪಂಚಾವಯವವಾಕ್ಯಗಳು ಎಂಬ ನ್ಯಾಯವಾಕ್ಯಗಳನ್ನು ಪ್ರಯೋಗಿಸುತ್ತಾನೆ ; ಈ ಪಂಚಾವಯವವಾಕ್ಯಗಳಿಂದ ಕಾರಣಗಳನ್ನು ತಿಳಿದುಕೊಂಡು ಇನ್ನೊಬ್ಬನೂ 'ಈ ಬೆಟ್ಟದಲ್ಲಿ ಬೆಂಕಿಯಿದೆ' ಎಂದು ನಿರ್ಣಯಿಸಿಕೊಳ್ಳುವನು ; ಈ ಪಂಚಾವಯವವಾಕ್ಯಗಳೇ ಪರಾರ್ಥಾನುಮಾನ ವೆನಿಸುವುವು. ಈ ಪರಾರ್ಥಾನುಮಾನದಲ್ಲಿ ಪ್ರಯೋಗಿಸಲ್ಪಡುವ ಅವಯವವಾಕ್ಯಗಳು—ಪ್ರತಿಜ್ಞೆ, ಹೇತು, ಉದಾಹರಣ, ಉಪನಯ, ನಿಗಮನ ಎಂಬ ಐದು ಅಂಗಗಳುಳ್ಳುವಾದುದರಿಂದ ಪಂಚಾವಯವವಾಕ್ಯಗಳು ಎಂಬ ಹೆಸರನ್ನು ಪಡೆದಿರುವುವು. ಇವುಗಳ ವಿಷಯವು—ಈ ವಿವರಣೆಯಿಂದಲೂ ಮುಂದಣಪಟ್ಟಿಯಿಂದಲೂ ವಿಶದವಾಗುವುದು.

(೧) ಪ್ರತಿಜ್ಞಾವಾಕ್ಯ—ತಾನುಸಾಧಿಸಬೇಕಾದ ವಿಷಯ (ಸಾಧ್ಯ) ವನ್ನು ತಿಳಿಯಪಡಿಸುವ ವಾಕ್ಯ (ಉದಾಹರಣೆ—ಈ ಪರ್ವತದಲ್ಲಿ ಬೆಂಕಿಯಿದೆ).

(೨) ಹೇತುವಾಕ್ಯ—ಇದಕ್ಕೆ ತಕ್ಕಕಾರಣವನ್ನು ತಿಳುಹುವ ವಾಕ್ಯ (ಉದಾ—ಇಲ್ಲಿ ಹೊಗೆಯಾಡುವುದರಿಂದ).

(೩) ಉದಾಹರಣವಾಕ್ಯ—ಈ ಹೇತುಸಾಧ್ಯಗಳೆರಡೂ ಒಂದನ್ನು ಬಿಟ್ಟು ಮತ್ತೊಂದು ಅಗಲದೆ ನೂರಾರುಕಡೆ ಜತೆಜತೆಯಲ್ಲಿರುವುದರಿಂದ ಇವೆರಡಕ್ಕೂ ವ್ಯಾಪ್ತಿ ಇದೆ ಎಂಬುದನ್ನು ದೃಷ್ಟಾಂತಮೂಲಕ ತಿಳುಹುವ ವಾಕ್ಯ (ಉದಾ—ಎಲ್ಲೆಲ್ಲಿ ಹೊಗೆಯಾಡುವುದೋ ಅಲ್ಲಿ ಬೆಂಕಿಯಿರುವುದು ; ಅಡುಗೆಯಮನೆ ದೃಷ್ಟಾಂತ.)

(೪) ಉಪನಯವಾಕ್ಯ—ಈ ಸಾಧ್ಯವನ್ನು ಅಗಲದ ಹೇತು ಇಲ್ಲಿದೆ-ಎಂದು ವ್ಯಾಪ್ತಿಯುಳ್ಳ ಹೇತುವನ್ನು ಪ್ರಕೃತದಲ್ಲಿ ಸೇರಿಸುವವಾಕ್ಯ (ಉದಾ· ಬೆಂಕಿಯಿಲ್ಲದೆ ಹುಟ್ಟಲಾರದ ಹೊಗೆ ಇಲ್ಲಿದೆ.)

(೫) ನಿಗಮನವಾಕ್ಯ—ಆದುದರಿಂದ ಇಲ್ಲಿ ಸಾಧ್ಯವು ಇರುವುದು ಎಂದು ಸ್ಥಾಪಿಸುವವಾಕ್ಯ (ಉದಾ—ಆದುದರಿಂದ ಇಲ್ಲಿ ಬೆಂಕಿಯಿರುವುದು) ಇದರ ವಿಶೇಷಸಂಗತಿಯನ್ನು ಮುಂದಣ ವಿವರಣದಿಂದ ವಿಶದವಾಗಿ ತಿಳಿದುಕೊಳ್ಳಬಹುದು.

ಈವ್ಯಾಪ್ತಿ ಅನ್ವಯವ್ಯಾಪ್ತಿ ವ್ಯತಿರೇಕವ್ಯಾಪ್ತಿ ಎಂದು ಎರಡು ಬಗೆಯಾಗಿರುವುದು ಹೇತುಸಾಧ್ಯಗಳಿಗೆ ಇರುವ ವ್ಯಾಪ್ತಿಯೇ ಅನ್ವಯವ್ಯಾಪ್ತಿ ಉದಾ—ಎಲ್ಲಿ ಹೊಗೆಯಿದೆಯೋ ಅಲ್ಲಿ ಬೆಂಕಿ ಇರುವುದು. ಸಾಧ್ಯಾಭಾವ ಹೇತ್ವಭಾವಗಳಿಗಿರುವ ವ್ಯಾಪ್ತಿಯೇ ವ್ಯತಿರೇಕವ್ಯಾಪ್ತಿ. ಉದಾ—ಬೆಂಕಿಯಿಲ್ಲದಕಡೆ ಹೊಗೆ ಇಲ್ಲವೇ ಇಲ್ಲ. ಹೀಗೆ ಸರಿಯಾದ ವ್ಯಾಪ್ತಿಯುಳ್ಳ ದೋಷಗಳಿಲ್ಲದ ಹೇತುವೇ ಸದ್ಧೇತುವಾಗಿ ಎಲ್ಲಾ ವಿಷಯಗಳನ್ನೂ ಸಾಧಿಸುವುದು, ದುಷ್ಟಹೇತುಗಳಿಂದ ಉಂಟಾದ ಅನುಮಿತಿ ಪ್ರಮಾಣವಾಗಲಾರದು.

ಸಾಧ್ಯ is the thing to be proved, and corresponds with the Major term of the Western system of logic. ಸಾಧನ or ಲಿಂಗ or ಹೇತು is the middle term. ಅವಿನಾಭಾವ or ವ್ಯಾಪ್ತಿ is the state of being together of the major and middle terms by their nature (such as would occur between the cause and the effect).

Pervasion (Vyapti) is twofold: Positive (Anvaya) and Negative (Vyatireka). Where, by an Inferrant (Sadhana) the Inferred (Sadhya) is attempted, that Pervasion is called Positive, for example: 'Whatever is smoky is fiery' Where, by the denial of the Inferred (Sadhya), the denial of the Inferrant (Sadhana) is attempted, that Pervasion is Negative, for example: 'What is non-fiery is non-smoky'.

The five members of a syllogism are ಪ್ರತಿಜ್ಞಾ, ಹೇತು,

ಉದಾಹರಣ, ಉಪನಯ and ನಿಗಮನ When interpreted in English they would be—an assertion; the ground (for it); the illustration (or the instance); the application; and the conclusion.

ಪ್ರತಿಜ್ಞಾ:—It is a statement of the major term with the desire of asserting (something) of it [Proposition].

ಹೇತು:—This is the expression of the ground which leads us to the conclusion to be arrived at.

ಉದಾಹರಣ:—This gives the affirmative general proposition known as 'ಅನ್ವಯವ್ಯಾಪ್ತಿ'. This proposition affirms that wherever there is smoke there is fire. The same proposition in the negative form is known as 'ವ್ಯತಿರೇಕವ್ಯಾಪ್ತಿ'. Wherever there is no fire there is no smoke.

ಉಪನಯ:– This refers to the applicatiou of the previous processes to arrive at the conclusion.

ನಿಗಮನ:—This is the conclusion so arrived at.

೧೩. ಅನುಮಾನಪ್ರಮಾಣಸ್ಥಿತಿ ಎಲ್ಲರಿಗೂ ಮನದಟ್ಟಾಗಲೆಂದು ಶಾಸ್ತ್ರಕಾರರು ಸುಲಭವಾದ ಸುಪ್ರಸಿದ್ಧವಾದ ಉದಾಹರಣೆಗಳಿಂದ ತಿಳಿಯಪಡಿಸಿದ್ದಾರೆ. ನಮಗೆ ತಿಳಿದಿಲ್ಲದ ಅತ್ಯಾವಶ್ಯಕವಾಗಿ ತಿಳಿಯಲೇಬೇಕಾದ ನೂರಾರು ವಿಷಯಗಳನ್ನು ಈ ಪ್ರಮಾಣವು ತಿಳಿಯಪಡಿಸುವುದು. ಈ ಪ್ರಮಾಣದ ಮೂಲಕವಾಗಿಯೇ ಆ ಆ ಶಾಸ್ತ್ರಕಾರರು ಲೋಕೋಪಯುಕ್ತವಾದ ಪರಮಾಶ್ಚರ್ಯಕರವಾದ ಸಾವಿರಾರು ಸಂಗತಿಗಳನ್ನು ಗೊತ್ತುಮಾಡಿರುವರು. ಅವುಗಳಲ್ಲಿ ಉದಾಹರಣೆಗಾಗಿ ಕೆಲವನ್ನು ಇಲ್ಲಿ ಸೂಚಿಸುತ್ತೇವೆ:—

(೧) ವೈದ್ಯರು ನಾಡೀಪರೀಕ್ಷೆಯಿಂದಲೂ, ಯಂತ್ರ (Stethoscope etc.) ಗಳ ಸಹಾಯದಿಂದಲೂ ರೋಗ ನಿದಾನಗಳನ್ನು ಕಂಡುಹಿಡಿಯುತ್ತಾರೆ.

(೨) ಶರೀರದಲ್ಲಿ ಗಂಧಕವಿದೆ ಎಂದು ವೈದ್ಯಶಾಸ್ತ್ರಗಳಲ್ಲಿ ಹೇಳಿದೆ; ಎಲ್ಲಿ

ನೋಡಿ, ಮುಟ್ಟಿ ಹುಡುಕಿದರೂ ಗಂಧಕವು ಸಿಕ್ಕುವುದಿಲ್ಲ; ಬೆಳ್ಳಿಯ ಬಳೆಗಳನ್ನು ಹಾಕಿದ ಕೈಕಾಲು ಭಾಗಗಳಲ್ಲಿ ಕಪ್ಪಗೆ ಕರೆಗಳು ನಿಲ್ಲುವುದರಿಂದ ಗಂಧಕವಿದೆ ಎಂದು ಸ್ಪಷ್ಟಪಡಿಸಬಹುದಾಗಿದೆ

(೩) ರಸತಂತ್ರದ ಪರೀಕ್ಷಾಕಾರ್ಯಗಳೆಲ್ಲವೂ (Chemical deductions) ಈ ಪ್ರಮಾಣದ ಆಧಾರದಮೇಲೆ ನಿಂತಿವೆ.

(೪) ಜ್ಯೋತಿಷಸಿದ್ಧಾಂತಪಂಡಿತರು-ಸೂರ್ಯ ಭೂಮಿ ಚಂದ್ರರ ಗತಿಜ್ಞಾನದಿಂದ ಮುಂದಕ್ಕೆ ಇಂಥ ದಿವಸದಲ್ಲಿಯೇ ಗ್ರಹಣವು ಉಂಟಾಗುವುದೆಂದು ಮೊದಲೇ ಕಂಡುಹಿಡಿಯುತ್ತಾರೆ.

(೫) ಸೂರ್ಯಬಿಂಬದಮೇಲೆ ಕೆಲಕೆಲವು ಕಳಂಕಗಳು (Sun-spots) ತೋರಿ ಬಂದು ಪೂರ್ವದಿಂದ ಪಶ್ಚಿಮಕ್ಕೆ ದಾಟಿಹೋಗುವುದನ್ನು ಅವಲಂಬಿಸಿ ಸೂರ್ಯನಿಗೆ ತನ್ನ ಅಕ್ಷದಮೇಲೆ ಪರಿಭ್ರಮಣವು (rotation) ಇದೆ ಎಂದು ನಿಶ್ಚಯಿಸಿರುತ್ತಾರೆ.

(೬) ನೈಯಾಯಿಕರು ಈಶ್ವರ ಸಾಧನಮಾಡುವುದೂ ಇತರ ಶರೀರಗಳಲ್ಲಿ ಜೀವಾತ್ಮ ಸಾಧನಮಾಡುವುದೂ ಈ ಅನುಮಾನ ಪ್ರಮಾಣದಿಂದಲೇ.

ಹೀಗೆ ಅನೇಕವಿಧವಾಗಿ ಈ ಪ್ರಮಾಣವು ಆಶ್ಚರ್ಯಕರವಾಗಿ ಉಪಕಾರಕವಾಗಿದೆ

ವಿಶಿಷ್ಟಾದ್ವೈತದೀಪಿಕೆಯ ಪ್ರಮಾಣಪ್ರಕಾಶದಲ್ಲಿ ಅನುಮಾನಪರಿಚ್ಛೇದವು ಮುಗಿದುದು.

೪. ಶಬ್ದಪರಿಚ್ಛೇದ

೧೪. ಶಬ್ದಪ್ರಮಾಣಲಕ್ಷಣ

ಆಪ್ತವಾಕ್ಯವು ಶಬ್ದ ಪ್ರಮಾಣ*ವೆನಿಸುವುದು. ಆಪ್ತನೆಂದರೆ ಇದ್ದುದನ್ನು ಇದ್ದಂತೆ ತಿಳಿದು ಅದರಂತೆ ಹೇಳುವವನು. ಪ್ರಕೃತ ವಿಷಯದ ಯಥಾರ್ಥ ಜ್ಞಾನದಿಂದ ಉಂಟಾದ ವಾಕ್ಯವು ಶಬ್ದಪ್ರಮಾಣವೆಂದು ಫಲಿತವಾಯಿತು.

* ಆಪ್ತವಾಕ್ಯಂ ಶಬ್ದಃ; ಆಪ್ತತ್ವಂನಾಮ ಯಥಾರ್ಥದರ್ಶಿತ್ವೇ ಸತಿ ಯಥಾದೃಷ್ಟಾರ್ಥವಾದಿತ್ವಂ; ಪ್ರಕೃತವಾಕ್ಯಾರ್ಥಗೋಚರ ಯಥಾರ್ಥಜ್ಞಾನಜನ್ಯವಾಕ್ಯತ್ವಂ ಶಬ್ದಪ್ರಮಾಣಲಕ್ಷಣಂ ಇತಿ ಫಲಿತಂ.

ಇಲ್ಲಿ ಪದಜ್ಞಾನವೇ ಕರಣವು, ಪದಾರ್ಥಜ್ಞಾನವೇ ವ್ಯಾಪಾರ, ಶಾಬ್ದ ಬೋಧವು (ಆ ಶಬ್ದದಿಂದ ತಿಳಿಯಬಂದ ಒಟ್ಟು ಅರ್ಥಜ್ಞಾನವು) ಫಲವು. "ಈ ದಿನ ಮಹಾರಾಜರವರು ಈ ಊರಿಗೆ ಸಾಯಂಕಾಲದಲ್ಲಿ ಬರುವರು" ಎಂದು ರಾಜ ಸಮ್ಮುಖದ ದೊಡ್ಡ ಅಧಿಕಾರಿ ಬಂದು ಹೇಳಿದರೆ, ಆ ಮಾತಿನಿಂದ ಮಹಾರಾಜ ರವರು ಬರುವವಿಷಯವು ಊರಿನವರಿಗೆ ತಿಳಿಯುವು: ಇದು ಲೌಕಿಕಶಬ್ದ ಪ್ರಮಾಣಕ್ಕೆ ಲಕ್ಷಣವಾಗಿದೆ. ಲೌಕಿಕಶಬ್ದಪ್ರಮಾಣದಲ್ಲಿ— ಹೇಳುವ ಮನುಷ್ಯನು ಯಥಾರ್ಥಾಂಶವನ್ನು ತಿಳಿಯದೆ ಹೇಳಿದ್ದರೂ, ಅಥವಾ ತತ್ತ್ವಾಂಶವು ತಿಳಿದಿದ್ದರೂ ಮೋಸಕ್ಕಾಗಿ ಮರೆಮಾಚಿ ಹೇಳಿದ್ದರೂ, ಅದು ಕಾರಣದೋಷವಿರುವುದರಿಂದ ಪ್ರಮಾಣವಾಗಲಾರದು; ಹೀಗಲ್ಲದೆ ಸರಿಯಾಗಿದ್ದರೂ, ಮುಂದೆ ಬಾಧಕಜ್ಞಾನ ವುಂಟಾದರೆ ಆಗಲೂ ಪ್ರಮಾಣವಾಗಲಾರದು. ಲೌಕಿಕ ವೈದಿಕ ಸಾಧಾರಣವಾದ ಶಬ್ದಪ್ರಮಾಣ* ಲಕ್ಷಣವೇನೆಂದರೆ ಕಾರಣದೋಷವೂ ಮುಂದೆ ಬಾಧಕಜ್ಞಾನವೂ ಇಲ್ಲದ ವಾಕ್ಯವು. ವೇದದಲ್ಲಿಯಾದರೋ ಇಂಥ ದೋಷಗಳೊಂದೂ ಇರುವುದಿಲ್ಲ. ವೇದವನ್ನು ಒಬ್ಬ ಪುರುಷನೂ ಮಾಡಲಿಲ್ಲವಾಗಿ ಪುರುಷದೋಷದಿಂದ ಬರತಕ್ಕ ಭ್ರಮ ಪ್ರಮಾದಾದಿಗಳೂ ಮೋಸಗಳೂ ಇಲ್ಲ. ಪರತಂತ್ರರಾದ ರಾಜಾದಿಗಳ ವಚನಗಳಂತೆ ಮೇಲೆ ಬಾಧಕಜ್ಞಾನವೂ ಸ್ವತಃ ಪ್ರಮಾಣವಾದ ವೇದಕ್ಕೆ ಎಂದೂ ಎಂತೂ ಬರಲಾರದು ಎಂದು ಮನು ಪರಾಶರಾದಿಗಳು ಸ್ಥಾಪಿಸಿರುವರು. ಸೃಷ್ಟಿಯ ಆದಿಕಾಲದಲ್ಲಿ ಭಗವಂತನು ಪೂರ್ವಪೂರ್ವಾನುಪೂರ್ವೀಕ್ರಮವಿಶಿಷ್ಟವಾದ ವೇದಗಳನ್ನು ಸ್ಮರಿಸಿಕೊಂಡು ಚತುರ್ಮುಖಬ್ರಹ್ಮನಿಗೆ ತಾನಾಗಿ ಉಪದೇಶಿಸಿದ ನಾದುದರಿಂದ ಸ್ವಯಂವ್ಯಕ್ತವಾದ ಈ ವೇದದಲ್ಲಿ ಕಾರಣದೋಷವೂ ಇಲ್ಲ, ಬಾಧಕ ಜ್ಞಾನವೂ ಇಲ್ಲ; ಆದುದರಿಂದ ಮೇಲೆಹೇಳಿದ ಲಕ್ಷಣವಾಕ್ಯಕ್ಕೆ ಸಮನ್ವಯ ವಾಯಿತು. ವೇದದಲ್ಲಿ ಹೇಳಿರುವುದೆಲ್ಲವೂ ಯಥಾರ್ಥವೂ ಸ್ವತಃ ಪ್ರಮಾಣವೂ ಆಗಿರುವುದು ಎಂದು ಸಿದ್ಧವಾಯಿತು.

ಹೀಗೆಯೇ ವೇದಕ್ಕೆ ಅನುಸಾರಿಯಾಗಿಯೂ, ವೇದಕ್ಕೆ ಅವಿರುದ್ಧವಾಗಿಯೂ ಆಚಾರವ್ಯವಹಾರ ಪ್ರಾಯಶ್ಚಿತ್ತಾದಿ ಬೋಧಕವಾಗಿ ಆಪ್ತತಮರಾದ ಮನು ಯಾಜ್ಞವಲ್ಕ್ಯಾದಿಮಹರ್ಷಿಗಳಿಂದ ಮಾಡಲ್ಪಟ್ಟಿರುವ ಸ್ಮೃತಿಗಳೂ ಪ್ರಮಾಣ ವಾಗಿವೆ.

೧೫ ಅಲ್ಲದೆ ಸಾಂಖ್ಯ, ಯೋಗ, ಪಾಶುಪತ, ಶ್ರೀಪಾಂಚರಾತ್ರ ಎಂಬ ಈ

---

* ಲೌಕಿಕವೈದಿಕ ಸಾಧಾರಣಂ ಶಬ್ದಪ್ರಮಾಣಲಕ್ಷಣಂ ತು ಕಾರಣದೋಷಬಾಧಕ ಪ್ರತ್ಯಯಾ ಭಾವವತ್ ವಾಕ್ಯಂ ಶಬ್ದಃ ಇತಿ.

ತಂತ್ರಗಳೂ ವೇದಾವಿರುದ್ಧಾಂಶಗಳಲ್ಲಿ ಪ್ರಮಾಣವಾಗಿರುವುವು. ಈ ತಂತ್ರಗಳಿಗೆ ಸಿದ್ಧಾಂತಗಳೆಂದೂ ಆಗಮಗಳೆಂದೂ ಹೆಸರುಂಟು.

ಇವುಗಳಲ್ಲಿ ಸಾಂಖ್ಯತಂತ್ರ ಎಂಬುದು ಪಂಚವಿಂಶತಿ (೨೫) ತತ್ತ್ವಗಳನ್ನು ನಿರೂಪಿಸಲು ಹುಟ್ಟಿರುವುದರಿಂದ ಆ ತತ್ತ್ವನಿರೂಪಣಮಾಡುವುದರಲ್ಲಿ ಪ್ರಮಾಣವಾಗಿಯೇ ಇರುವುದು. ಈ ತತ್ತ್ವನಿರೂಪಣದಲ್ಲಿ ಎಲ್ಲರೂ ಪ್ರೀತಿಯಿಂದ ಪ್ರವರ್ತಿಸಲಿ ಎಂದು ಈ ಪಂಚವಿಂಶತಿತತ್ತ್ವಗಳ ಕೊಂಡಾಟವು ಮಿತಿಮೀರಿ, ಕೆಲವು ಕಡೆಗಳಲ್ಲಿ "ಈತತ್ತ್ವಗಳಿಂದಲೇ ಪ್ರಪಂಚವು ಹುಟ್ಟುವುದು; ಇಪ್ಪತ್ತಾರನೆಯ ತತ್ತ್ವವಾದ ಈಶ್ವರನನ್ನು ಕಂಡವರು ಯಾರು" ಎಂದು ಇವು ಮುಂತಾಗಿ ವೇದವಿರುದ್ಧವಾದ ಕೆಲವು ವಚನಗಳಿರುವುವು; ಈ ಅಂಶವು ಸ್ತುತಿರೂಪವೇ ಹೊರತು ಪ್ರಮಾಣವಲ್ಲ.

ಯೋಗಸಿದ್ಧಾಂತವೆಂಬುದು ಯಮನಿಯಮಾದಿ ಯೋಗಾಂಗಗಳನ್ನು ನಿರೂಪಿಸುವುದಕ್ಕಾಗಿ ಹುಟ್ಟಿರುವುದರಿಂದ ಯೋಗನಿರೂಪಣ ಮಾಡುವ ಅಂಶದಲ್ಲಿ ಪ್ರಮಾಣವಾಗಿಯೇ ಇರುವುದು. ಈ ಯೋಗಾಭ್ಯಾಸದಲ್ಲಿ ಎಲ್ಲರೂ ಪ್ರೀತಿಯಿಂದ ಪ್ರವರ್ತಿಸಬೇಕೆಂದು "ಜಗದೀಶ್ವರನಿಗೂಕೂಡ ಈ ಯೋಗಾಪ್ರಭಾವದಿಂದಲೇ ಜಗದೀಶ್ವರತ್ವವು ಉಂಟಾಯಿತು" ಎಂಬ ಇವು ಮುಂತಾದ ವೇದವಿರುದ್ಧವಾದ ಕೆಲವು ವಚನಗಳು ಅಲ್ಲಲ್ಲಿ ಇರುವುವು; ಈ ಅಂಶದಲ್ಲಿ ಸ್ತುತಿರೂಪವಲ್ಲದೆ ಅದೂ ಪ್ರಮಾಣವಲ್ಲ.

ಪಾಶುಪತವೆಂಬುದು ಧರ್ಮಾರ್ಥ ಕಾಮಗಳೆಂಬ ತ್ರಿವರ್ಗದ ಫಲಸಾಧನವಾದ ದೇವತಾಂತರೋಪಾಸನಕ್ರಮವನ್ನು ಹೇಳಲು ಹುಟ್ಟಿರುವುದರಿಂದ, ಆ ದೇವತೋಪಾಸನಕ್ರಮವನ್ನು ಹೇಳುವ ಅಂಶದಲ್ಲಿ ಪ್ರಮಾಣವಾಗಿರುವುದು; "ಆ ದೇವತೋಪಾಸನದಲ್ಲಿ ಎಲ್ಲರೂ ಪ್ರೀತಿಮಾಡಲಿ" ಎಂಬುದಕ್ಕಾಗಿ, 'ಈದೇವತಾಂತರಗಳೇ ಪರತತ್ತ್ವ' ಎಂದು ಇವುಮುಂತಾಗಿ ವೇದವಿರುದ್ಧವಾದ ಕೆಲವು ವಚನಗಳು ಅಲ್ಲಲ್ಲಿ ಇರುವುವು. ಈ ಅಂಶದಲ್ಲಿ ಸ್ತುತಿರೂಪವೇ ಹೊರತು ಅವೂ ಪ್ರಮಾಣವಲ್ಲ.

ಶ್ರೀ ಪಾಂಚರಾತ್ರಸಿದ್ಧಾಂತವೆಂಬುದು ವೇದಾಂತ ತಾತ್ಪರ್ಯವಾದ ಶ್ರೀಮನ್ನಾರಾಯಣನ ಉಪಾಸನಾರಾಧನಗಳ ಕ್ರಮನಿರೂಪಣಕ್ಕಾಗಿ ಹುಟ್ಟಿರುವುದರಿಂದ ಸರ್ವಾಂಶದಲ್ಲಿಯೂ ವೇದಾಂತಾನುಗುಣವಾಗಿ ಪ್ರಮಾಣವಾಗಿರುವುದು. ಈ ವಿಷಯವು ಮಹಾಭಾರತ ಶಾಂತಿಪರ್ವದಲ್ಲಿ ಮೋಕ್ಷಧರ್ಮದ ನಿಷ್ಠಾನಿರ್ಣಯಾಧ್ಯಾಯದಲ್ಲಿ ಪ್ರಶ್ನಪೂರ್ವಕವಾಗಿ ಸಿದ್ಧಾಂತಪಡಿಸಲ್ಪಟ್ಟಿರುವುದು.

ಮತ್ತು ವೇದಾಂತಾರ್ಥಗಳನ್ನು ನಿಶ್ಚಯಿಸುವದಕ್ಕಾಗಿ ಹೊರಟ ಶ್ರೀ ರಾಮಾಯಣ ಮಹಾಭಾರತಗಳೆಂಬ ಇತಿಹಾಸಗಳು ಸಾತ್ತ್ವಿಕಗಳಾಗಿ ಸರ್ವಾಂಶಗಳಲ್ಲಿಯೂ ಪ್ರಮಾಣವಾಗಿವೆ. ಅವುಗಳಲ್ಲಿಯೂ ಕೆಲವುಕಡೆ ಪೂರ್ವಾಪರ ವಿರೋಧಾಂಶಗಳು ಬಂದರೂ ಅವುಗಳನ್ನು ವೇದವಾಕ್ಯಗಳಂತೆ ಅವಿರೋಧ ಸಾಮಂಜಸ್ಯದಿಂದ (ವಿರೋಧವಿಲ್ಲದೆ ಹೊಂದಿಕೆಯಾಗುವಂತೆ) ಸಮನ್ವಯಿಸಿಕೊಳ್ಳಬೇಕು.

ಪುರಾಣಗಳೆಲ್ಲವೂ ಆದಿಯಲ್ಲಿ ಚತುರ್ಮುಖನಿಂದ ರಚಿತವಾದುದರಿಂದ ಅವನು ಆಪ್ತನಾಗಿದ್ದರೂ ನಮ್ಮಂತೆಯೇ ಸತ್ತ್ವರಜಸ್ತಮೋಗುಣಗಳಿಗೆ ವಶ್ಯನಾದುದರಿಂದ ಆತನಿಗೆ ಯಾವದಿನದಲ್ಲಿ ಯಾವಗುಣವು ತಲೆಯೆತ್ತಿದ್ದಿತೋ ಆ ದಿನದಲ್ಲಿ ಹೇಳಿದ ಪುರಾಣವು ಆ ಆ ಗುಣಾನುಸಾರವಾಗಿ ಸಾತ್ತ್ವಿಕ, ರಾಜಸ, ತಾಮಸ ಭೇದದಿಂದ ಬೇರೆ ಬೇರೆ ಯಾಗಿರುವುದು. ಆ ಪುರಾಣಗಳಲ್ಲಿ ಸಾತ್ತ್ವಿಕ ಪುರಾಣಗಳು ಪ್ರಮಾಣವಾಗಿರುವುದರಿಂದ ಅವುಗಳಿಗೆ ಅನುಸಾರವಾಗಿ ರಾಜಸ ತಾಮಸಾದಿ ಪುರಾಣಗಳ ತಾತ್ಪರ್ಯವನ್ನು ಸರಿಪಡಿಸಿಕೊಳ್ಳಬೇಕು. ವೇದಶಾಸ್ತ್ರಾದಿಗಳಿಗೆ ವಿರುದ್ಧವಾಗಿದ್ದರೆ ಅವುಗಳನ್ನು ತ್ಯಜಿಸಬೇಕು.

೧೬. ದಿವ್ಯಪ್ರಬಂಧಪ್ರಾಮಾಣ್ಯ.

ಪರಮಕಾರುಣಿಕನಾದ ಸರ್ವೇಶ್ವರನು ಸಕಲಜನೋಜ್ಜೀವನಾರ್ಥವಾಗಿ ನಿತ್ಯಸೂರಿಗಳನ್ನು ಆಳ್ವಾರುಗಳನ್ನಾಗಿ ಅವತಾರಮಾಡಿಸಿ, ಅವರಿಗೆ ದಿವ್ಯಜ್ಞಾನವನ್ನು ಅನುಗ್ರಹಿಸಿ, ಅವರ ಹೃದಯದಲ್ಲಿ ತಾನೇ ನಿಂತು ಭಗವದನುಭವ ಪರೀವಾಹರೂಪವಾದ ಈ (ನಾಲ್ಕುಸಾವಿರ) ದಿವ್ಯಪ್ರಬಂಧಗಳನ್ನು ಅವರ ಮೂಲಕವಾಗಿ ಪ್ರಚಾರಪಡಿಸಿರುವನು. ಇವು ವೇದಾಧಿಕಾರಿಗಳಲ್ಲದ ಸ್ತ್ರೀ ಶೂದ್ರಾದಿಗಳಿಗೂ ಸಕಲ ವೈಷ್ಣವಜನರಿಗೂ ಉಪಾದೇಯವಾಗಿರುವುವು. ಈ ಪ್ರಬಂಧಗಳು ದ್ರಾವಿಡವೇದಗಳೆಂದು ಪ್ರಖ್ಯಾತವಾಗಿ, ಉಪನಿಷತ್ಸಾರಸಂಗ್ರಹವಾಗಿ ಸಾಕ್ಷಾತ್ ಭಗವತ್ಪ್ರೀತಿಪಾವಕವಾಗಿ, ಭ್ರಮಪ್ರಮಾದಾದಿ ದೋಷಗಂಧವಿಲ್ಲದೆ ಸ್ವತಃಪ್ರಮಾಣವಾಗಿ ಸರ್ವಪರಿಗ್ರಾಹ್ಯವಾಗಿರುವುವು.

ಹೀಗೆ ದ್ರಾವಿಡ ಸಂಸ್ಕೃತರೂಪಗಳಾದ ವೇದಗಳ ಅರ್ಥವನ್ನು ಬೋಧಿಸುವ ತದನುಸಾರಿಯಾದ ಪೌರುಷೇಯಗ್ರಂಥಗಳೂ ಅವಿರುದ್ಧಾಂಶದಲ್ಲಿ ಪ್ರಮಾಣವಾಗಿರುವುವು.

೧೭. ಶಬ್ದಪ್ರಮಾಣಲಕ್ಷಣದಲ್ಲಿ ಆಪ್ತವಾಕ್ಯ ಎಂದು ಆಪ್ತಶಬ್ದವಿರುವುದರಿಂದ ಆಪ್ತರಲ್ಲದ ಶಾಕ್ಯಭಿಕ್ಷು, ನಿರ್ಗ್ರಂಥಕ, ಸಂಸಾರಮೋಚಕ, ಜೈನ, ಬೌದ್ಧ

ಮುಂತಾದವರಿಂದ ರಚಿತವಾದ ಆ ಆ ಆಗಮಾಭಾಸಗಳು ಅಯುಕ್ತಗಳಾಗಿರುವುದರಿಂದ ಪ್ರಮಾಣವೇ ಅಲ್ಲವೆಂದು ನಿರಾಕೃತವಾಗಿರುವುವು.*

ಇವು ದೋಷದೂಷಿತವಾಗಿಯೂ ಛಿನ್ನಮೂಲವಾಗಿಯೂ (ಬುಡಭದ್ರವಿಲ್ಲದೆ) ಪ್ರಮಾಣವಿರುದ್ಧಾರ್ಥಗಳನ್ನು ಹೇಳುವುವಾಗಿಯೂ ಎಲ್ಲಿಯೋ ಕೆಲವರು ಕಾಪುರುಷರಿಂದಮಾತ್ರವೇ ಪರಿಗ್ರಹಿಸಲ್ಪಟ್ಟು ಪ್ರಾಮಾಣಿಕಶಿಷ್ಟಪುರುಷರಿಂದ ಪರಿಗ್ರಹಿಸಲ್ಪಡದೆ ಇರುವುದರಿಂದ ಅಯುಕ್ತವಾಗಿವೆ. ಈ ಮತಗಳೊಳಗೆ ಒಬ್ಬರ ಮತವನ್ನು ಮತ್ತೊಬ್ಬರು ಅವರವರೇ ಖಂಡಿಸಿ ದೂಷಿಸಿರುವುದರಿಂದಲೂ, ಬ್ರಹ್ಮಸೂತ್ರದಲ್ಲಿ ಶ್ರೀ ವೇದವ್ಯಾಸರು ನಿರೂಪಿಸಿದಪ್ರಕಾರ ಶ್ರೀ ವೇದಾಂತದೇಶಿಕರು ಸರ್ವಾರ್ಥಸಿದ್ಧಿ, ಪರಮತಭಂಗ ಮುಂತಾದ ಗ್ರಂಥಗಳಲ್ಲಿ ವಿಶೇಷವಾಗಿ ಖಂಡಿಸಿರುವುದರಿಂದಲೂ ಅವುಗಳ ದೋಷಗಳು ಅಲ್ಲಲ್ಲಿ ವಿಶದವಾಗಿ ತಿಳಿಯಬರುವುವು. ಇಲ್ಲಿ ಲಂಬಿಸುವುದಕ್ಕೆ ಅವಕಾಶವಿಲ್ಲ. ಆದುದರಿಂದ ಬೌದ್ಧಾದ್ಯಾಗಮಗಳಲ್ಲಿ ಅವುಗಳನ್ನು ಮಾಡಿದ ಮೂಲಪುರುಷರ ಅಜ್ಞಾನಾನ್ಯಥಾಜ್ಞಾನರೂಪವಾದ ಕಾರಣದೋಷಗಳೂ ಅವುಗಳ ಖಂಡನಗಳಿಂದ ಮೇಲೆ ಬಾಧಕಜ್ಞಾನವೂ ಇರುವುದರಿಂದ ಅವು ಸರ್ವಥಾ ಪ್ರಮಾಣವಲ್ಲ. ವೇದಗಳಲ್ಲಿ ಕಾರಣದೋಷಗಳೂ ಇಲ್ಲ, ಬಾಧಕಜ್ಞಾನವೂ ಇಲ್ಲ; ಆದುದರಿಂದ ಅವು ಸರ್ವಾಂಶದಲ್ಲಿಯೂ ಪ್ರಮಾಣವಾಗಿ ಪರಿಗ್ರಾಹ್ಯವಾಗಿರುವುವು.

ಇಂತು ಶಬ್ದಪರಿಚ್ಛೇದವು ಮುಗಿದುದು.

ಇಂತು ವಿಶಿಷ್ಟಾದ್ವೈತದೀಪಿಕೆಯ ಪ್ರಮಾಣಪ್ರಕಾಶವು
ಸಂಪೂರ್ಣವಾದುದು.

---

* ಋಗಾದ್ಯಾ ಭಾರತಂ ಚೈವ ಪಾಂಚರಾತ್ರಮಥಾಖಿಲಂ ।
ಮೂಲರಾಮಾಯಣಂ ಚೈವ ಪುರಾಣಂ ಚೈತದಾತ್ಮಕಂ ॥
ಯೇ ಚಾನುಯಾಯಿನಸ್ತೇಷಾಂ ಸರ್ವೇ ಏತೇ ಸದಾಗಮಾಃ ।
ದುರಾಗಮಾಸ್ತದನ್ಯೇ ಯೇ ತೈರ್ನಜ್ಞೇಯೋ ಜನಾರ್ದನಃ ॥
ತಥೈವ ವ್ಯಾಸ-ವಿಶೇಷೇಭ್ಯೋಽಪಿ ಯದನ್ಯತ್ ಸ್ಯಾತ್ ಕಿಂಚಿದ್ಧರ್ಮಾಭಿಧಾಯಕಂ ।
ತತ್ ದೂರತರತೋ ವಿದ್ಧಿ ದೋಷಸ್ತಸ್ಯಾಶ್ರಯೋ ಮತಃ ॥ (ಬ್ರಹ್ಮಾಂಡಪುರಾಣೇ)

II ಪ್ರಮೇಯ ಪ್ರಕಾಶ.

i ಚಿತ್ಪರಿಚ್ಛೇದ

೧೮. ಹೀಗೆ ಪ್ರಮಾಣಗಳನ್ನು ನಿರೂಪಿಸಿದಮೇಲೆ ಪ್ರಮೇಯಗಳನ್ನು ನಿರೂಪಿಸುತ್ತೇವೆ.

ಪ್ರಮೇಯವೆಂದರೆ ಇಂಥ ಪ್ರಮಾಣಗಳಿಂದ ಯಥಾವತ್ತಾಗಿ ನಿಶ್ಚಯಿಸಲ್ಪಟ್ಟ ವಿಷಯವು; ಇದೇ ತತ್ತ್ವ ಎಂಬುದು. ಪ್ರಮೇಯ ಎಂಬ ಶಬ್ದಕ್ಕೆ ಮುಖ್ಯವಾಗಿ ಅರಿಯಬೇಕಾದುದು ಎಂದೂ ಯಥಾರ್ಥಜ್ಞಾನದಿಂದ ತಿಳಿಯಬಂದ ವಿಷಯವು ಎಂದೂ ಅರ್ಥವಾಗುವುದು.

೧೯. ಪ್ರಮೇಯ ವಿಭಾಗ

ಈ ಪ್ರಮೇಯವು—ದ್ರವ್ಯ, ಅದ್ರವ್ಯ ಎಂದು ಮೊದಲು ಎರಡುವಿಧವಾಗಿರುವುದು. ಅವುಗಳಲ್ಲಿ ದ್ರವ್ಯವು—ಪ್ರಕೃತಿ, ಕಾಲ, ಶುದ್ಧಸತ್ತ್ವ, ಧರ್ಮಭೂತಜ್ಞಾನ, ಜೀವ, ಈಶ್ವರ ಎಂದು ಆರುವಿಧವಾಗಿರುವುದು. ಅದ್ರವ್ಯವು—ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಸಂಯೋಗ, ಶಕ್ತಿ, ಸತ್ತ್ವ, ರಜಸ್ಸು, ತಮಸ್ಸುಎಂದು ಹತ್ತು ವಿಧವಾಗಿರುವುದು. ಹೀಗೆ ದ್ರವ್ಯ ಆರು, ಅದ್ರವ್ಯ ಹತ್ತು ; ಒಟ್ಟು ಪ್ರಮೇಯವು ಹದಿನಾರು ವಿಧವಾಗಿದೆ ಎಂದು ಹೇಳಿದಹಾಗಾಯಿತು.

ಈ ದ್ರವ್ಯವನ್ನು-ಚಿತ್, ಅಚಿತ್, ಈಶ್ವರ ಎಂದು ಮೂರುವಿಧವಾಗಿ ವಿವರಿಸುವುದೂ ಉಂಟು. ಅಗ ಚಿತ್=ಜೀವಾತ್ಮ, ಈಶ್ವರ=ಭಗವಂತನು ; ಅಚಿತ್ ಎಂಬುದು ಪ್ರಕೃತಿ, ಕಾಲ, ಶುದ್ಧಸತ್ತ್ವ, ಧರ್ಮಭೂತಜ್ಞಾನ ಇವುಗಳನ್ನೂ ಇವುಗಳ ವಿಭಾಗಗಳನ್ನೂ ಒಳಗೊಂಡಿದೆ ಎಂದು ತಿಳಿಯಬೇಕು.

ಈ ಚಿದಚಿದೀಶ್ವರ ಎಂಬ ವಿಭಾಗವೇ ಪ್ರಾಯಶಃ ಪೂರ್ವಾಚಾರ್ಯ ಗ್ರಂಥಗಳಲ್ಲಿ ಉಕ್ತವಾಗಿರುವುದರಿಂದ ಅದೇಕ್ರಮದಲ್ಲಿ ನಾವೂ ಮುಂದೆ ವಿವರಿಸುತ್ತೇವೆ

೨೦. ದ್ರವ್ಯಲಕ್ಷಣ.

ಗುಣಾಶ್ರಯವಾದುದು ದ್ರವ್ಯ ಎಂದೂ, ಅವಸ್ಥಾಶ್ರಯವಾದುದು ದ್ರವ್ಯ ಎಂದೂ, ಉಪಾದಾನವಾದುದು ದ್ರವ್ಯ ಎಂದೂ ದ್ರವ್ಯಕ್ಕೆ ಮೂರುವಿಧವಾದ ಲಕ್ಷಣಗಳನ್ನು ಹೇಳಬಹುದು.

(೧) ಗುಣಾಶ್ರಯವಾದುದು ದ್ರವ್ಯವು—ಬಣ್ಣ, ಪರಿಮಾಣ, ಸಂಯೋಗ ಮುಂತಾದ ಗುಣಗಳಿಗೆ ಆಶ್ರಯವಾದ ವಸ್ತು ದ್ರವ್ಯವೆನಿಸುವುದು. ಮಾವಿನ ಹಣ್ಣು ಬಾಳೆಯ ಹಣ್ಣುಗಳಲ್ಲಿ ಬಣ್ಣ, ರಸ, ವಾಸನೆ, ಪರಿಮಾಣಗಳು ಇವೆ; ಆ ಹಣ್ಣುಗಳು ಗುಣಾಶ್ರಯವಾದುದರಿಂದ ದ್ರವ್ಯವೆನಿಸಿದುವು ; ಲಕ್ಷಣಸಮನ್ವಯವಾಯಿತು.

(೨) ಅವಸ್ಥಾಶ್ರಯವಾದುದು ದ್ರವ್ಯವು—ಅವಸ್ಥೆ ಎಂದರೆ ಆಗಂತುಕವಾಗಿ ಅಪೃಥಕ್ಸಿದ್ಧವಾದ (ಆಶ್ರಯಕ್ಕೆ ಹೊರಗಾಗಿ ನಿಲ್ಲಲರಿಯದ) ಧರ್ಮವು ಇದಕ್ಕೆ ಆಶ್ರಯವಾದುದು ದ್ರವ್ಯವೆನಿಸುವುದು. ಅಕ್ಕಸಾಲೆ ಬೆಳ್ಳಿಯಗಟ್ಟಿಯಿಂದ ತಟ್ಟೆ, ಬಟ್ಟಲು, ಪಂಚಪಾತ್ರೆ, ಉದ್ಧರಣೆ, ಡಾಬು ಮುಂತಾದ ಆಕಾರಗಳನ್ನು ಮಾಡಿದಾಗ, ಬೆಳ್ಳಿಯಗಟ್ಟಿ ಎಂಬ ದ್ರವ್ಯಕ್ಕೆ ಇವೆಲ್ಲಾ ಅವಸ್ಥೆಗಳೆನಿಸುವುವು. ಡಾಬನ್ನು ಕರಗಿಸಿ ಗೊಲಸನ್ನು ಮಾಡಿದಾಗ ಡಾಬಿನ ಆಕಾರವು ಹೋಗಿ ಗೊಲಸಿನ ಆಕಾರವು ಬಂದಿತು. ಬೆಳ್ಳಿಯಗಟ್ಟಿಯಾವದೋ ಅದೇ ದ್ರವ್ಯವಾಗಿರುವುದು. ಬೆಳ್ಳಿಯಗಟ್ಟಿ ದ್ರವ್ಯ, ಈ ಆಕಾರವೆಲ್ಲಾ ಅವಸ್ಥೆ ; ಆ ಆ ಕಾರ್ಯೋಪಯೋಗಿಯಾದ ಆಕಾರಮಾತ್ರ ಬದಲಾಯಿಸುತ್ತಲೇ ಇರುವುದು ಹೀಗೆ ಅವಸ್ಥೆ ಎಂಬುದು ಎಲ್ಲಾ ದ್ರವ್ಯಗಳಲ್ಲಿಯೂ ಇರುವುದರಿಂದ ಲಕ್ಷಣಸಮನ್ವಯವಾಯಿತು

(೩) ಉಪಾದಾನವಾದುದು ದ್ರವ್ಯವೆನಿಸುವುದು—ಮಣ್ಣೇ ಮಡಕೆ, ಕುಡಿಕೆ ಮುಂತಾದುವಾಗಿ ಪರಿಣಾಮಹೊಂದುವುದರಿಂದ ಮಣ್ಣು ಉಪಾದಾನವಾಗಿದೆ. ಆ ಮಣ್ಣು ದ್ರವ್ಯ. ಆ ಮಣ್ಣಿನಿಂದಮಾಡಿದ ಮಡಕೆ, ಕುಡಿಕೆ ಮುಂತಾದುವೆಲ್ಲಾ ಮಣ್ಣಿನಕಾರ್ಯವಾಗಿವೆ.

ಹೀಗೆಯೇ ಪ್ರಕೃತಿಮೊದಲುಗೊಂಡು ಪೃಥಿವಿಕೊನೆಯಾದ ಇಪ್ಪತ್ತುನಾಲ್ಕು ಅಚಿತ್ತತ್ತ್ವಗಳಲ್ಲಿ ಸರ್ವೇಶ್ವರಾಧಿಷ್ಠಿತವಾದ ಹಿಂದುಹಿಂದಣ ತತ್ತ್ವಗಳಿಂದ ಮುಂದುಮುಂದಣ ತತ್ತ್ವಗಳು ಹುಟ್ಟುವುವು. ಆದುದರಿಂದ ಮುಂದುಮುಂದಣ ತತ್ತ್ವಗಳು ಹಿಂದುಹಿಂದಣ ತತ್ತ್ವಗಳಿಗೆ ಕಾರ್ಯಗಳು ; ಈ ಕಾರ್ಯರೂಪಾವಸ್ಥೆಗಳು ಹಿಂದುಹಿಂದಣ ತತ್ತ್ವಗಳಲ್ಲಿ ಇರುವುದರಿಂದ ಲಕ್ಷಣಸಮನ್ವಯವಾಯಿತು. ಪಂಚಭೂತಗಳ ಸೇರುವೆಯಿಂದ ಉಂಟಾದ ಸರ್ವಪ್ರಾಣಿಗಳ ಶರೀರವೆಂಬ ಅಚಿದ್ದ್ರವ್ಯದಲ್ಲಿ ಬಾಲ್ಯ, ಯೌವನ, ವಾರ್ಧಕಾದಿ ವಿಕಾರಗಳು ಹುಟ್ಟುವುದರಿಂದ ಆ ಅಚಿದ್ದ್ರವ್ಯದಲ್ಲಿ ಲಕ್ಷಣಸಮನ್ವಯವಾಯಿತು.

ಶಬ್ದಾದಿ ಗುಣಗಳು ಅಚಿತ್ತತ್ತ್ವಗಳಲ್ಲಿಯೂ, ಜ್ಞಾನಸುಖದುಃಖೇಚ್ಛಾದಿಗಳು ಜೀವಾತ್ಮರಲ್ಲಿಯೂ, ಜ್ಞಾನಾನಂದಶಕ್ತಿಬಲೈಶ್ವರ್ಯಾದಿಗಳು ಸರ್ವೇಶ್ವರನಲ್ಲಿ

ಯೂ ಇರುವುದರಿಂದ ಗುಣಾಶ್ರಯತ್ವವೆಂಬ ದ್ರವ್ಯಲಕ್ಷಣಕ್ಕೂ ಸಮನ್ವಯ ವಾಯಿತು.

ಹೀಗೆಯೇ ಎಲ್ಲಾ ಲಕ್ಷಣಗಳಿಗೂ ಸಮನ್ವಯವನ್ನು ತಿಳಿದುಕೊಳ್ಳಬೇಕು.

ಈ ತತ್ತ್ವತ್ರಯದಲ್ಲಿ ಮೊದಲನೆಯದಾದ ಚಿತ್ ಎಂಬ ಜೀವಾತ್ಮನ ಸ್ವರೂಪವನ್ನು ವಿವರಿಸುವೆವು.

೨೧. ಜೀವಾತ್ಮಸ್ವರೂಪವು—ದೇಹ, ಇಂದ್ರಿಯ, ಮನಃ, ಪ್ರಾಣ, ಬುದ್ಧಿ ಇವುಗಳಿಗಿಂತ ವಿಲಕ್ಷಣನಾಗಿ ಬೇರೆಯಾಗಿಯೂ ನಿತ್ಯವಾಗಿಯೂ ಜ್ಞಾನಾಶ್ರಯ ವಾಗಿಯೂ ಜ್ಞಾನಾನಂದಸ್ವರೂಪವಾಗಿಯೂ ಇರುವುದೆಂದು ಸಿದ್ಧಾಂತವಾಗುವುದು.

ಇದರ ವಿವರ ಹೇಗೆಂದರೆ:—'ನಾನು, ನಾನು' ಎಂದು ಎಲ್ಲರೂ ಹೇಳಿಕೊಳ್ಳುತ್ತಾರಲ್ಲವೇ ? ಅಲ್ಲಿ ನಾನು ಎಂದರೆ ಯಾರು ? ಆ ನಾನು ಎಂದು ಹೇಳಿಸಿಕೊಳ್ಳುವನೇ ಜೀವಾತ್ಮನು. ಅವನು ಈ ಕಾಣುವ ದೇಹವೂ ಅಲ್ಲ, ಇಂದ್ರಿಯಗಳೂ ಅಲ್ಲ, ಪ್ರಾಣವೂ ಅಲ್ಲ, ಮನಸ್ಸೂ ಅಲ್ಲ, ಬುದ್ಧಿಯೂ ಅಲ್ಲ; ಇವೆಲ್ಲಕ್ಕಿಂತಲೂ ವಿಲಕ್ಷಣನಾಗಿ ಬೇರೆಯಾಗಿರುವನು. ಅವನು ನಿತ್ಯ, ಅವನು ಜ್ಞಾನಾಶ್ರಯ, ಅವನು ಜ್ಞಾನಾನಂದಸ್ವರೂಪ, ಅವನು ಒಂದೊಂದು ಶರೀರದಲ್ಲಿಯೂ ಒಬ್ಬೊಬ್ಬನಿದ್ದುಕೊಂಡು ಅಸಂಖ್ಯಾತನಾಗಿರುವನು; ಸ್ವತಃ ಸುಖಿಯಾಗಿರುವನು.

೨೨. ಇಲ್ಲಿ ಸ್ವಲ್ಪ ವಿಚಾರಮಾಡುವುದು ಆವಶ್ಯಕವಾಗಿದೆ:

(೧) ಈ ವಿಷಯದಲ್ಲಿ ಚಾರ್ವಾಕರು (ನಾಸ್ತಿಕವಾದಿಗಳು) ಹೀಗೆ ಹೇಳುವರು—

ಇವೆಲ್ಲವೂ ಗೋಡೆಯಿಲ್ಲದೆ ಬರೆವ ಚಿತ್ರ ಹೇಗೆಂದರೆ, ಈ ದೇಹವೇ ಆತ್ಮನು, ಈ ದೇಹಕ್ಕಿಂತ ಬೇರೆ ಆತ್ಮನು ಇಲ್ಲವೇ ಇಲ್ಲ ; ಬೇರೆ ಆತ್ಮನು ಇರುವಪಕ್ಷಕ್ಕೆ ಸ್ತಂಭಕುಂಭಾದಿಗಳಂತೆ ಏಕೆ ಕಾಣಿಸುವುದಿಲ್ಲ ? ನಾನು ಹೋಗುತ್ತೇನೆ, ನಾನು ನಿಂತೆನು, ನಾನು ಸಣ್ಣಾಗಿದ್ದೇನೆ, ನಾನು ದಪ್ಪಗಿದ್ದೇನೆ, ನಾನು ಗಂಡಸು, ನಾನು ಹೆಂಗಸು, ನಾನು ಬ್ರಾಹ್ಮಣ, ನಾನು ಕ್ಷತ್ರಿಯ ಈ ಮುಂತಾದ ಸಾರ್ವತ್ರಿಕವಾಗಿ ಎಲ್ಲರೂ ಹೇಳುವ ವ್ಯವಹಾರಗಳಲ್ಲೆಲ್ಲಾ ನಾನು ಎಂಬುದು ಶರೀರವನ್ನು ಕುರಿತೇ ಬಂದಿರುವುದೆಂದು ಸ್ಪಷ್ಟವಾಗಿಯೇ ತೋರುತ್ತಿದೆ. ನೀವು ಹೇಳುವಂತೆ ಆತ್ಮನಿಗೆ—ಸಣ್ಣ, ದಪ್ಪ, ಗಂಡಸು, ಹೆಂಗಸು, ಬ್ರಾಹ್ಮಣ ಇತ್ಯಾದಿ ಭೇದಗಳು ಒಂದೂ ಇಲ್ಲ. ಆದುದರಿಂದ ಇವೊಂದೂ ಆತ್ಮಧರ್ಮವಲ್ಲ, ಇವೆಲ್ಲವೂ ಶರೀರಧರ್ಮ ವಾಗಿವೆ. ಮತ್ತು—ಅವನು ಹುಟ್ಟಿದನು, ಮುದುಕನಾದನು, ಸತ್ತನು ಇತ್ಯಾದಿ ವಿಕಾರ

ಗಳೂ ದೇಹವನ್ನು ಕುರಿತುವಾಗಿವೆ; ಜಾತಕರ್ಮ, ನಾಮಕರಣಾದಿ ಸಂಸ್ಕಾರಗಳೆಲ್ಲವೂ ದೇಹಕ್ಕೆ ಸಂಬಂಧಿಸಿವೆ. ಚಿರಂ ಜೀವ, ಶತಂ ಜೀವ ಮುಂತಾದ ಆಶೀರ್ವಾದಗಳೆಲ್ಲವೂ ಶರೀರವಿಷಯವಾಗಿವೆ.

(ಪ್ರಶ್ನೆ—cross question):—ದೇಹವೇ ಆತ್ಮನಾಗಿರುವಪಕ್ಷಕ್ಕೆ ಸತ್ತ ದೇಹದಲ್ಲಿ ಜ್ಞಾನಸುಖಾದಿಗಳು ಏಕೆ ತೋರಿಬರುವುದಿಲ್ಲ? ಮಣ್ಣು, ಕಲ್ಲು ಮುಂತಾದುವುಗಳಂತೆ ಪಾರ್ಥಿವವಾದ ಈ ದೇಹಕ್ಕೆ ಚೈತನ್ಯವುಂಟೆಂಬುದು ಸಂಗತವಲ್ಲವಲ್ಲಾ ಎಂದು ಶಂಕೆಪಡಬಾರದು. ವೀಳೆಯದೆಲೆ ಅಡಕೆ ಸುಣ್ಣಗಳನ್ನು ಸೇರಿಸಿ ಅಗಿದರೆ ಮೊದಲು ಅಲ್ಲಿ ಇಲ್ಲದ ಕೆಂಪುಬಣ್ಣ ಬರುವಂತೆಯೂ, ಮದ್ಯವನ್ನು ಮಾಡುವಾಗ ಮೊದಲು ಸೇರಿಸುವ ವಸ್ತುಗಳಲ್ಲಿಲ್ಲದ ಮದಶಕ್ತಿ ಸೇರಿಸಿದಮೇಲೆ ಬರುವಂತೆಯೂ, ಈ ಶರೀರವನ್ನು ಮಾಡಿರುವ ಭೂತಗಳ ಸೇರುವೆಯ ಶಕ್ತಿಯಿಂದ ಮೊದಲು ಅಲ್ಲಿಲ್ಲದ ಚೈತನ್ಯವು ಹುಟ್ಟಿದ್ದಿತು; ಸತ್ತ ಶರೀರದಲ್ಲಿ ಪ್ರಾಣವಾಯು ಹೋದುದರಿಂದ ಆ ಚೈತನ್ಯವೂ ಹೋಯಿತು. ಮೇಲೆ ಹೇಳಿದ ಕಾರಣಗಳಿಂದ, ನಾನು ಎಂದೆನಿಸುವ ಜೀವಾತ್ಮನು ದೇಹವೇ ಅಲ್ಲದೆ ಬೇರೆ ಇಲ್ಲ—ಎಂದು ಹೇಳುವರು.

(೨) ಮತ್ತೆ ಕೆಲವರು ಈ ಶರೀರಕ್ಕೆ ಮರಣವನ್ನು ಕಂಡಿದ್ದೇವೆಯಾದುದರಿಂದ ಈ ಶರೀರವೇ ಆತ್ಮನಲ್ಲ; ನಾನು ನೋಡುತ್ತೇನೆ, ನಾನು ಕೇಳಿದೆನು, ಹೀಗೆಂಬ ಹೇಳಿಕೆಯಿರುವುದರಿಂದ ನೋಡುವ, ಕೇಳುವ ಶಕ್ತಿಯುಳ್ಳ ಇಂದ್ರಿಯಗಳೇ ಆತ್ಮನು ಎಂದು ಹೇಳುವರು.

(೩) ಮತ್ತೆ ಕೆಲವರು—ಪ್ರಾಣಹೋದಮೇಲೆ ಶರೀರಕ್ಕೆ ನಾಶವುಂಟಾಗುವುದರಿಂದಲೂ, ಪ್ರಾಣವಿದ್ದಾಗ ಈ ಶರೀರವು ಜೀವಿಸಿರುವುದರಿಂದಲೂ, ಕಣ್ಣು ಕಿವಿ ಮುಂತಾದ ಇಂದ್ರಿಯಗಳಿಗೆ ನಾಶಬಂದರೂ ಪ್ರಾಣವಿದ್ದರೆ ಶರೀರವು ಜೀವಿಸಿ, ನನಗೆ ಹಸಿವು ಬಾಯಾರಿಕೆಗಳಾಗುವುವು ಇತ್ಯಾದಿಯಾಗಿ ಪ್ರಾಣವನ್ನು ಕುರಿತೇ ಈ ವ್ಯವಹಾರಗಳು ಬಂದಿರುವುದರಿಂದ ಪ್ರಾಣವೇ ಆತ್ಮನು ಎಂದು ಹೇಳುವರು.

(೪) ಇನ್ನು ಕೆಲವರು- ಈ ಪ್ರಾಣವಾಯುವೂ ಹೊರಗಣ ಗಾಳಿಯಂತೆ ಜಡವಾದುದರಿಂದ ಇದಕ್ಕೆ ಸುಖದುಃಖಾದಿಗಳು ಸಂಗತವಾಗಲಾರವು; ಸುಖದುಃಖಾದಿಗಳನ್ನು ತಿಳಿಯಬಲ್ಲ ಮನಸ್ಸೇ ಆತ್ಮನು ಎಂದು ವಾದಿಸುವರು.

(೫) ಮತ್ತೆ ಕೆಲವರು-- ನಾನು ಅರಿತೆನು ನಾನು ಮರೆತೆನು ಇವು ಮುಂತಾದ ವ್ಯವಹಾರಗಳಿಂದ ಬುದ್ಧಿಯೇ ಆತ್ಮನು ಎಂದು ವಾದಿಸುವರು.

೨೩. ಇವರೆಲ್ಲರೂ ಶಾಸ್ತ್ರತತ್ತ್ವವನ್ನೂ ಲೋಕವ್ಯವಹಾರವನ್ನೂ ತಿಳಿಯದವರು ; ಇವರ ಮತಗಳೆಲ್ಲವೂ ನಿಸ್ಸಾರವಾದುವು ಎಂಬುದನ್ನು ಕ್ರಮವಾಗಿ ವಿವರಿಸುತ್ತೇವೆ.

(೧) ದೇಹಾತ್ಮವಾದ ಖಂಡನ.

ಶರೀರಕ್ಕೆ ಚೈತನ್ಯವುಂಟು ಎಂಬುದನ್ನು ಎರಡುವಿಧವಾಗಿ ಹೇಳಬಹುದು. ಅವೆರಡೂ ಅಸಂಗತವಾಗುವುವು.

ಈ ದೇಹವು ಕೈ ಕಾಲು ಮುಂತಾದ ಅನೇಕಾವಯವಗಳ ಸಮುದಾಯರೂಪವಾಗಿರುವುದು ಎಂಬುದು ಸಿದ್ಧವು. ಈ ಶರೀರದಲ್ಲಿ ಎಲ್ಲೆಲ್ಲಿಯೂ ಸುಖದುಃಖಾನುಭವವು ಇರುವುದು ಎಂಬುದೂ ಸಿದ್ಧವಾಗಿ ಸರ್ವಸಮ್ಮತವಾಗಿರುವುದು. ಇದರಲ್ಲಿ ಪ್ರತಿಯೊಂದು ಅವಯವಕ್ಕೂ ಚೈತನ್ಯವುಂಟು ಎಂದು ಹೇಳಿದರೆ—ಒಂದೇ ದೇಹದಲ್ಲಿ ಅನೇಕ ಚೇತನರು ಇದ್ದಂತೆ ಆಗುವುದು; ಆಗ ಒಬ್ಬನು ಹೇಳಿದಂತೆ ಮತ್ತೊಬ್ಬನು ಕೇಳಲೇಬೇಕೆಂಬ ನಿರ್ಬಂಧವಿಲ್ಲ ಸಾಗಲಾರದು ಅವಯವಗಳಿಗೂ ಅನ್ಯೋನ್ಯವಾಗಿ ವಿವಾದವಿಲ್ಲದಂತೆ ಇರುವ ನಿಯಮವೂ ಬರಲಾರದು. ಅವಯವಗಳು ಒಬ್ಬನವೇ ಅಲ್ಲವಾದುದರಿಂದ ಅವುಗಳಲ್ಲಿ 'ಇದು ನನ್ನದು' ಎಂಬ ಮಮತಾಬುದ್ಧಿವ್ಯವಹಾರಗಳೂ ಬಾರದೆ ಹೋಗಬೇಕಾಗುವುದು. 'ಎಲ್ಲಾ ಅವಯವಕ್ಕೂ ಚೈತನ್ಯವಿಲ್ಲ, ಒಂದು ಅವಯವಕ್ಕೇ ಚೈತನ್ಯವಿರುವುದು' ಎಂದು ಅಂಗೀಕರಿಸಿದರೆ ಕೆಲವು ಕಾಲಾನಂತರದಲ್ಲಿ ಆ ಅವಯವವು ನಷ್ಟವಾದರೆ ಆಗ ಅದು ಅನುಭವಿಸಿದ್ದುದನ್ನು ಮತ್ತೊಂದು ಅವಯವವು ಸ್ಮರಿಸಕೂಡದೆ ಹೋಗಬೇಕಾಗಿಬರುವುದು; ಯಾವನು ಅನುಭವಿಸಿದನೋ ಅವನೇ ಅದನ್ನು ಸ್ಮರಿಸಬೇಕಲ್ಲದೆ, ಒಬ್ಬನು ಅನುಭವಿಸಿದುದನ್ನು ಮತ್ತೊಬ್ಬನು ಸ್ಮರಿಸಲಾರನಷ್ಟೇ? ಹಾಗೆ ಪ್ರಪಂಚದಲ್ಲಿ ಎಲ್ಲಿಯೂ ಕಂಡಿಲ್ಲ; ಮತ್ತು ಹಾಗೆ ಒಂದೇ ಅವಯವಕ್ಕೆ ಚೈತನ್ಯವೆಂದು ಹೇಳಿದರೆ—ಆಗ ಸರ್ವಶರೀರವ್ಯಾಪಿಯಾದ ಸುಖದುಃಖಾದ್ಯನುಭವವೂ ಕೂಡಲಾರದು ; ಆದುದರಿಂದ ಒಂದೊಂದು ಶರೀರಕ್ಕೂ ಅದರಲ್ಲಿರುವ ಅವಯವಗಳಿಗೂ ಇಂದ್ರಿಯಗಳಿಗೂ ನಿಯಾಮಕನಾಗಿ ಸುಖದುಃಖಾನುಭವಮಾಡತಕ್ಕ ಜೀವನು ಒಬ್ಬನು ದೇಹಾತಿರಿಕ್ತನಾಗಿ ಇರಲೇಬೇಕು ; ಆಗ ಮೇಲಣ ದೋಷಗಳೊಂದೂ ಬರಲಾರವು. ಈ ಕಾರಣಗಳಿಂದಲೂ, ವೇದಪ್ರಮಾಣದಿಂದಲೂ ಇದು ಸಿದ್ಧವಾಗುವುದು.

(೨) ಇಂದ್ರಿಯಾತ್ಮವಾದ ನಿರಾಸ—ಹೀಗೆಯೇ ಬಹಿರಿಂದ್ರಿಯಗಳೂ ಆತ್ಮವಾಗಲಾರವು. ಹೇಗೆಂದರೆ—ಕಣ್ಣು ಗ್ರಹಿಸುವ ವಿಷಯವನ್ನು ಕಿವಿಯೂ ನಾಲಗೆಯೂ, ಅವು ಗ್ರಹಿಸುವ ವಿಷಯವನ್ನು ಕಣ್ಣೂ ಗ್ರಹಿಸಲಾರವಷ್ಟೇ ?

ಇಲ್ಲಿ ಸಕಲೇಂದ್ರಿಯಗಳ ವಿಷಯಗಳನ್ನೆಲ್ಲವನ್ನೂ ಗ್ರಹಿಸಬಲ್ಲ ಒಬ್ಬನೇ ಗ್ರಹಿಸತಕ್ಕವನಿರಬೇಕು; ಆದುದರಿಂದ ಇವುಗಳಿಗೆ ಸಾಧ್ಯವಾಗದ ಕಾರ್ಯವನ್ನು ಮಾಡುವನು ಬೇರೆ ಒಬ್ಬನು ಇರಲೇಬೇಕು. ಹೀಗೆ ಅಂಗೀಕರಿಸದಿದ್ದರೆ 'ಮೊನ್ನೆ ಅದನ್ನು ಕೇಳಿದ ನಾನೇ ಈದಿನ ಅದನ್ನು ಕಂಡೆನು' ಎಂಬುದು ಮುಂತಾದ ಸಕಲೇಂದ್ರಿಯಕಾರ್ಯಪ್ರತಿಸಂಧಾನವು ಕೂಡಲಾಗದು. ಮತ್ತು ಚಕ್ಷುರಿಂದ್ರಿಯವು ಆತ್ಮನಾಗುವುದಾದರೆ ಕೆಲವುಕಾಲದಮೇಲೆ ಕಣ್ಣನ್ನು ಕಳೆದುಕೊಂಡವನು ಬಣ್ಣವನ್ನು ಸ್ಮರಿಸದೆ ಹೋಗಬೇಕಾಗುವುದು; ಹಾಗೆ ಅನುಭವದಲ್ಲಿ ಇಲ್ಲ. ಕಿವಿಯೇ ಆತ್ಮನಾಗಿರುವುದಾದರೆ ಕೆಲವುಕಾಲದಮೇಲೆ ಕಿವುಡಾದವನು ಶಬ್ದವನ್ನು ಸ್ಮರಿಸಲಾರದೆ ಹೋಗಬೇಕಾಗುವುದು. ಹಾಗಿಲ್ಲ. ಹೀಗೆಯೇ ಮಿಕ್ಕ ಇಂದ್ರಿಯಗಳಲ್ಲಿಯೂ ತಿಳಿಯಬೇಕು. ನಿದ್ರಾದಶೆಯಲ್ಲಿ ಬಾಹ್ಯೇಂದ್ರಿಯಗಳೆಲ್ಲವೂ ಅಡಗಿರುವಾಗ ಸ್ವಪ್ನಕಾಣುವುದರಿಂದ ಇಂದ್ರಿಯಗಳೊಂದೂ ಆತ್ಮನಲ್ಲ.

(೩) ಮನಸ್ಸೂ ಆತ್ಮನಾಗಲಾರದು—ಕರ್ತೃವಿನ ಸ್ಮರಣಾದಿ ಕಾರ್ಯಗಳಿಗೆ ಸಾಧನವಾಗಿ ಮನಸ್ಸು ಏರ್ಪಟ್ಟಿರುವುದರಿಂದ ಕರ್ತೃವೂ ಕರಣವೂ ಒಂದಾಗಲಾರವು.

(೪) ಸಂಘಾತರೂಪವಾದುದರಿಂದ ಪ್ರಾಣನೂ ಆತ್ಮನಲ್ಲ; ದೇಹಾತ್ಮವಾದ ಖಂಡನದಲ್ಲಿ ಹೇಳಿದ ದೂಷಣಗಳೆಲ್ಲಾ ಇಲ್ಲಿಯೂ ಬಂದು ಸೇರುವುವು

(೫) ಬುದ್ಧಿಯೂ ಆತ್ಮನಲ್ಲ; ನನಗೆ ಆಗ ಜ್ಞಾನವು ಹುಟ್ಟಿತ್ತು, ಈಗ ನಷ್ಟವಾಯಿತು, ಎಂದು ಕ್ಷಣಿಕವಾಗಿಯೂ ಆತ್ಮಧರ್ಮವಾಗಿಯೂ ತೋರುವುದರಿಂದ ಆತ್ಮನಲ್ಲ.

ಹೀಗೆ ದೇಹೇಂದ್ರಿಯಮನಃಪ್ರಾಣಬುದ್ಧಿಗಳೊಂದೂ ಆತ್ಮನಲ್ಲ*ಎಂಬುದಕ್ಕೆ ಒಟ್ಟಾಗಿ ಹೇಳತಕ್ಕುದಾದ ಸಮುದಾಯ ಖಂಡನವೂ ಬಹಳವಾಗಿರುವುದು. ಒಂದೆರಡನ್ನು ಇಲ್ಲಿ ಹೇಳುವೆವು— ನನ್ನ ಮನೆ, ನನ್ನಗದ್ದೆ, ನನ್ನಬಟ್ಟೆ ಎಂಬ ಈ ಹೇಳಿಕೆಗಳಲ್ಲಿ ಮನೆ, ಗದ್ದೆ, ಬಟ್ಟೆ ಇವುಗಳೆಲ್ಲಾ ನಾನೇ ಅಲ್ಲ, ನನಗಿಂತಲೂ ಬೇರೆಯಾಗಿವೆ ಎಂಬುದು ಸ್ಪಷ್ಟವಾಗಿಯೇ ಇದೆಯಷ್ಟೆ; ಇದರಂತೆಯೇ ನನ್ನ ದೇಹ, ನನ್ನಕಣ್ಣು, ನನ್ನ ಮನಸ್ಸು, ನನ್ನ ಬುದ್ಧಿ ಎಂಬ ಈ ಅನುಭವಗಳಲ್ಲಿಯೂ ನಾನು ಎಂಬುದೇ ಬೇರೆ, ದೇಹ, ಇಂದ್ರಿಯ, ಮನಸ್ಸು, ಪ್ರಾಣ ಎಂಬ ಇವೆಲ್ಲಾ ಬೇರೆ ಎಂಬುದೂ, ಇವೆಲ್ಲವೂ ಆತ್ಮನ ಮಮತಾಬುದ್ಧಿಗೂ ಮಮತಾವ್ಯವ

* ದೇಹೇಂದ್ರಿಯಮನಃಪ್ರಾಣ ಧೀಭ್ಯೋಽನ್ಯೋಽನನ್ಯಸಾಧನಃ ।
ನಿತ್ಯೋ ವ್ಯಾಪೀ ಪ್ರತಿಕ್ಷೇತ್ರಮಾತ್ಮಾ ಭಿನ್ನಃ ಸ್ವತಸ್ಸುಖೀ ॥
(ಯಾಮುನಾಚಾರ್ಯರ ಆತ್ಮಸಿದ್ಧಿ)

ಪಾಠಕ್ಕೂ ಗುರಿಯಾಗಿ ನಾನು—ಎನಿಸುವ ಆತ್ಮನಿಗಿಂತಲೂ ಬೇರೆ ಎಂಬುದೂ ಸ್ಪಷ್ಟವಾಗಿರುವುದು.

ಇಲ್ಲಿಯವರೆಗೆ ಜೀವಾತ್ಮನು ದೇಹ, ಇಂದ್ರಿಯ, ಮನಸ್ಸು, ಪ್ರಾಣಗಳಿಗಿಂತಲೂ ವಿಲಕ್ಷಣನಾಗಿ ಬೇರೆಯಾಗಿರುವನು ಎಂಬುದನ್ನು ವಿವರಿಸಿ ಆಯಿತು.

೨೪. ಜೀವಾತ್ಮನು ನಿತ್ಯ, ಅಜಡ, ಆನಂದರೂಪ, ಅಣುಸ್ವರೂಪ, ಅವ್ಯಕ್ತ, ನಿರವಯವ, ನಿರ್ವಿಕಾರ, ಜ್ಞಾನಾಶ್ರಯ, ಜ್ಞಾನಸ್ವರೂಪ, ಸರ್ವೇಶ್ವರನಿಗೆ ನಿಯಾಮ್ಯ ಮತ್ತು ಶೇಷ ಆಗಿರುವನು. ಇವುಗಳನ್ನು ಕ್ರಮವಾಗಿ ವಿವರಿಸುತ್ತೇವೆ.

ನಿತ್ಯನು—ಆತ್ಮನು, ಹುಟ್ಟು ಸಾವು ಮುಂತಾದುವುಗಳೊಂದೂ ಇಲ್ಲದೆ ಯಾವಾಗಲೂ ಇರುವನು; ಆದುದರಿಂದಲೇ ಮೊದಲು ಅನುಭವಿಸಿದುವುಗಳನ್ನು ನೆನೆಸಿಕೊಳ್ಳುವನು.

ಪ್ರಶ್ನೆ—ಜೀವಾತ್ಮನು ಯಾವಾಗಲೂ ಇರುವನು ಎಂಬ ಪಕ್ಷದಲ್ಲಿ "ಅವನು ಹುಟ್ಟಿದನು, ಅವನು ಸತ್ತನು" ಎಂಬ ಜನ್ಮಮರಣಗಳ ಲೋಕವ್ಯವಹಾರವು ಹೇಗೆ ಸಂಗತ?

ಉತ್ತರ—ಈ ಜನ್ಮಮರಣಗಳು ದೇಹಕ್ಕೇ ಹೊರತು ಜೀವಾತ್ಮನಿಗೆ ಅಲ್ಲ; ಜನ್ಮವೆಂದರೆ, ದೇಹಕ್ಕೂ ಜೀವಾತ್ಮನಿಗೂ ಸಂಬಂಧ; ಮರಣವೆಂದರೆ ದೇಹಕ್ಕೂ ಜೀವಾತ್ಮನಿಗೂ ವಿಯೋಗ. ಮರಣದಲ್ಲಿ ಜೀವಾತ್ಮನು ಈ ಶರೀರದಿಂದ ಅಗಲಿದ ಮೇಲೆ ಈ ಶರೀರವು ಕ್ಷಣಕ್ಷಣಕ್ಕೂ ವಿಕಾರಹೊಂದುವ ಸ್ವಭಾವವುಳ್ಳದಾದುದರಿಂದ ಘೋರರೂಪವಾಗಿ ಕೊಳೆತು ನಾತವೆತ್ತಿ ಹೋಗುವುದು; ಆತ್ಮನಾದರೋ ಪುಣ್ಯಪಾಪಾನುಗುಣವಾಗಿ ಯಾವ ಲೋಕಕ್ಕೋ ಹೋಗಿ ಮತ್ತೊಂದು ಶರೀರವನ್ನು ಪಡೆವನು. ಮನುಷ್ಯನು ಹಳೆಯಬಟ್ಟೆಗಳನ್ನು ಬಿಸುಟು ಹೊಸಬಟ್ಟೆಯನ್ನು ಧರಿಸಿಕೊಂಡರೂ ಅದೇಮನುಷ್ಯನೇ ಆಗಿರುವನೇ ಹೊರತು ಬೇರೆ ಮನುಷ್ಯನಾಗುವುದಿಲ್ಲ. ಹಾಗೆಯೇ ಆ ಜೀವನು ಎಷ್ಟೆಷ್ಟು ಶರೀರಗಳನ್ನು ಪರಿಗ್ರಹಿಸಿದರೂ ಶರೀರ ಭೇದಮಾತ್ರವೇ ಹೊರತು ಆ ಮೊದಲಿನ ಜೀವಾತ್ಮನೇ ಅಲ್ಲಿಯೂ ಇರುವನು. ಅವನು ನಿತ್ಯನು.

ಅಜಡ—ಆತ್ಮನು ಅಜಡ, ಎಂದರೆ ಸ್ವಯಂಪ್ರಕಾಶನು, ಜ್ಞಾನದ ಸಹಾಯವಿಲ್ಲದಿದ್ದರೂ ತಾನೇ ತೋರುವನು ಎಂದರ್ಥ. ಕತ್ತಲೆಯಲ್ಲಿ ಪದಾರ್ಥಗಳನ್ನು ನೋಡಬೇಕಾದರೆ ದೀಪದ ಸಹಾಯವು ಬೇಕಾಗಿದೆ. ದೀಪವನ್ನು ನೋಡಬೇಕಾದರೆ ಅದಕ್ಕಾಗಿ ಮತ್ತೊಂದು ದೀಪದ ಸಹಾಯವನ್ನು ಅಪೇಕ್ಷಿಸಬೇಕಾಗಿಲ್ಲ; ಆ ದೀಪವೇ ತನ್ನನ್ನೂ ತನ್ನ ಸುತ್ತಲೂ ಇರುವ ಪದಾರ್ಥಗಳನ್ನೂ ತೋರ್ಪಡಿಸಬಲ್ಲುದು. ಅದರಂತೆಯೇ ಆತ್ಮನೂ ಸ್ವಯಂಪ್ರಕಾಶನು. ಆದರೆ ದೀಪವು ಅಚೇತನ

ಆದುದರಿಂದ ತನ್ನನ್ನು ತಾನು ತಿಳಿದುಕೊಳ್ಳಲರಿಯದು; ಆತ್ಮನು ತನ್ನನ್ನು ತಾನೇ ತಿಳಿದುಕೊಳ್ಳಬಲ್ಲನು.

ಆನಂದರೂಪ—ಆತ್ಮನು ಸ್ವಯಂ ಸುಖರೂಪನಾಗಿರುವನು.

ಅಣುಸ್ವರೂಪ--ಆತ್ಮನು ಹೃದಯಪ್ರದೇಶದಲ್ಲಿ ಇರುವುದು, ಶರೀರವನ್ನು ಬಿಟ್ಟು ತೆರಳುವುದು, ಲೋಕಾಂತರಾದಿಗಳಿಗೆ ಹೋಗುವುದು ಬರುವುದು ಇತ್ಯಾದಿಗಳಿಂದಲೂ ಅಣುವೆಂದು ಶ್ರುತಿ ಹೇಳುವುದರಿಂದಲೂ ಅಣುರೂಪನು.

ಪ್ರಶ್ನೆ—ಆತ್ಮನು ಅಣುವಾಗಿ ಹೃದಯಪ್ರದೇಶದಷ್ಟರಲ್ಲಿಯೇ ಇರುವ ಪಕ್ಷಕ್ಕೆ "ಮುಳ್ಳು ತಗುಲಿ ನನಗೆ ಕಾಲಿನಲ್ಲಿ ನೋವು, ಚಂದನ ಹಚ್ಚಿ ನನ್ನ ಎದೆಯಲ್ಲಿ ಸುಖ" ಎಂದು ಶರೀರವೆಲ್ಲ ಆದ್ಯಂತ ವ್ಯಾಪಿಯಾದ ಸುಖದುಃಖಾದ್ಯನುಭವವು ಬರುವಬಗೆ ಹೇಗೆ? ವಿಭುವಾಗಿದ್ದರೆ ಶರೀರವೆಲ್ಲಾ ವ್ಯಾಪಿಸಿರುವುದರಿಂದ ಆತ್ಮನಿಗೆ ಇವೆಲ್ಲಾ ಸಂಗತವಾಗುವುದು; ಆದುದರಿಂದ ಆತ್ಮನು ವಿಭುವಾಗಬೇಕಲ್ಲವೇ ?

ಉತ್ತರ--ಸೂರ್ಯ, ಚಂದ್ರ, ದೀಪ, ರತ್ನ ಇವುಗಳು ಒಂದೇ ಜಾಗದಲ್ಲಿದ್ದರೂ ಅವುಗಳ ಬೆಳಕು ಎಲ್ಲೆಲ್ಲಿಯೂ ವ್ಯಾಪಿಸುವಂತೆಯೇ, ಆತ್ಮನು ಹೃದಯಪ್ರದೇಶದಲ್ಲಿದ್ದರೂ ಅವನ ಜ್ಞಾನವು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸುವುದರಿಂದ ಆ ಧರ್ಮಭೂತಜ್ಞಾನದ*ವ್ಯಾಪ್ತಿಯ ಮೂಲಕವಾಗಿ ಸರ್ವ ಶರೀರವ್ಯಾಪಿಯಾದ ಸುಖದುಃಖಾದ್ಯನುಭವವು ಬರಬಹುದು. ಇದೇ ವಿಷಯವನ್ನು ಬೃಹದಾರಣ್ಯಕೋಪನಿಷತ್ತು, ಬ್ರಹ್ಮಸೂತ್ರ ಇವುಗಳಲ್ಲಿ ಸ್ಥಾಪಿಸಿರುವರು.

ಪ್ರಶ್ನೆ—ಒಂದೇ ಶರೀರದಲ್ಲಿ ಹೀಗೆ ಉಪಪತ್ತಿಯಾಗಬಹುದಾದರೂ, ಸೌಭರಿ ಮುಂತಾದ ಋಷಿಗಳು ಯೋಗಶಕ್ತಿಯಿಂದ ಏಕಕಾಲದಲ್ಲಿ ಅನೇಕ ಶರೀರಪರಿಗ್ರಹ ಮಾಡಿದಾಗ ಅಷ್ಟು ಶರೀರಗಳಲ್ಲಿಯೂ ಸುಖದುಃಖಾದ್ಯನುಭವಗಳಿಗೆ ಸ್ವರೂಪವ್ಯಾಪ್ತಿ ಬೇಕಾಗಿರುತ್ತವೆಯಾಗಿ ಆಗಲಾದರೂ ಆತ್ಮಸ್ವರೂಪವು ವಿಭುವೆಂದು ಅಂಗೀಕರಿಸಬೇಕಾಗುವುದಿಲ್ಲವೇ ?

ಉತ್ತರ—ಅಲ್ಲಿಯೂ ಸೂರ್ಯ ಚಂದ್ರಾದಿ ಪ್ರಭಾಪ್ರಸರಣ ಕ್ರಮದಿಂದ ಜೀವಾತ್ಮನ ಧರ್ಮಭೂತಜ್ಞಾನ ವ್ಯಾಪ್ತಿಯಿಂದಲೇ ಅನೇಕ ಶರೀರಪರಿಗ್ರಹವೇ ಹೊರತು ಆತ್ಮನು ವಿಭುವಲ್ಲ. ಸೌಭರಿಯು ಯಾವುದೋ ಒಂದು ಶರೀರದಲ್ಲಿ

* ತಿಳಿದುಕೊಳ್ಳುವ ಜ್ಞಾತೃ ಸ್ವರೂಪ ಆತನ ಗುಣವಾದ (ವಿಶೇಷಣವಾದ) ತಿಳಿವಳಿಕೆಗೂ ಜ್ಞಾನ ಎಂಬ ಪದವು ಸಾಮಾನ್ಯವಾಗಿ ವಾಚಕವಾಗಿರುವುದರಿಂದ, ಇಲ್ಲಿ "ವಿಶೇಷಣವಾದ (ಧರ್ಮವಾದ) ತಿಳಿವಳಿಕೆ ಎಂಬುದು ಅರ್ಥ" ಎಂದು ತೋರಿಸುವುದಕ್ಕಾಗಿ ಧರ್ಮಭೂತಜ್ಞಾನ ಎಂದು ಹೇಳುವ ವಾಡಿಕೆಯಾಗಿದೆ. ಧರ್ಮಿಜ್ಞಾನ—ಆತ್ಮಾ; ಧರ್ಮಭೂತಜ್ಞಾನ–ತಿಳಿವಳಿಕೆ.

ಜೀವಾತ್ಮನು ನೆಲೆಸಿದ್ದು, ಮಿಕ್ಕ ನೂರಾರು ಶರೀರಗಳಲ್ಲಿ ಆ ಜ್ಞಾನವ್ಯಾಪ್ತಿಯಿಂದಲೇ ಸುಖ ದುಃಖಾದ್ಯನುಭವವುಂಟಾಗುವುದೇ ಹೊರತು ಪ್ರತಿಯೊಂದು ಶರೀರದಲ್ಲಿಯೂ ಜೀವಾತ್ಮನು ನೆಲೆಸಿರಬೇಕಾದುದಿಲ್ಲ. ಆದುದರಿಂದ ಆತ್ಮನು ವಿಭುವಲ್ಲ.

ಅವ್ಯಕ್ತ—ಬಾಹ್ಯಪದಾರ್ಥಗಳನ್ನು ಗ್ರಹಿಸಬಲ್ಲ ಕಣ್ಣು ಮುಂತಾದ ಇಂದ್ರಿಯಗಳಿಗೆ ಗೋಚರನಾಗುವುದಿಲ್ಲ. ಮಾನಸಜ್ಞಾನಕ್ಕೆ ಮಾತ್ರ ಗೋಚರನಾಗುವನು.

ನಿರವಯವ—ಅಚಿದ್ವಸ್ತುಗಳಂತೆ ಅವಯವ ಸಮೂಹರೂಪನಲ್ಲ.

ನಿರ್ವಿಕಾರ—ಕ್ಷಣಕ್ಷಣಕ್ಕೂ ವಿಕಾರಹೊಂದುತ್ತಿರುವ ಅಚೆತ್ತಿನಂತೆ ಅಲ್ಲದೆ [illegible] ಇಲ್ಲದೆ ಯಾವಾಗಲೂ ಏಕರೂಪನಾಗಿರುವನು. ಹೀಗೆ ಜೀವಾತ್ಮನನ್ನು ಶಸ್ತ್ರಗಳೂ ಕತ್ತರಿಸಲಾರವು, ಅಗ್ನಿಯೂ ಸುಡಲಾರದು, ಗಾಳಿಯೂ ಆರಿಸಲಾರದು, ಬಿರುಬಿಸಿಲೂ ಒಣಗಿಸಲಾರದು ; ಇವು ಯಾವುವುಗಳಿಂದಲೂ ಯಾವಾಗಲೂ ಯಾವ ವಿಕಾರವೂ ಇಲ್ಲದುದರಿಂದ ಸದಾ ಏಕರೂಪನಾಗಿರುವನು.

ಜ್ಞಾನಾಶ್ರಯ—ಧರ್ಮಭೂತಜ್ಞಾನಕ್ಕೆ ಆಧಾರವಾಗಿ ನೆಲೆಯಾಗಿರುವನು ; ಎಂದರೆ ದೀಪವು, ಅದರ ಬೆಳಕು ಇವೆರಡೂ ತೇಜಃಪದಾರ್ಥವಾಗಿದ್ದರೂ ದೀಪವು ಬೆಳಕಿಗೆ ಆಶ್ರಯವಾಗಿದೆ, ಬೆಳಕು ದೀಪವನ್ನು ಆಶ್ರಯಿಸಿದೆ, ದೀಪವನ್ನು ನೊಂದಿಸಿದಮೇಲೆ ಬೆಳಕು ಸ್ವತಂತ್ರವಾಗಿ ನಿಲ್ಲಲರಿಯದು, ದೀಪದೊಂದಿಗೇ ಹೋಗುತ್ತದೆ. ಅದರಂತೆ ಆತ್ಮನೂ ಜ್ಞಾನಸ್ವರೂಪನಾಗಿಯೂ ಸ್ವವಿಶೇಷಣವಾದ ಧರ್ಮಭೂತ ಜ್ಞಾನಕ್ಕೆ ಆಧಾರನಾಗಿಯೂ ಇದ್ದುಕೊಂಡು ತನ್ನ ಹೊರತು ಆ ಧರ್ಮಭೂತ ಜ್ಞಾನಕ್ಕೆ ಬೇರೆ ಸ್ಥಿತಿಯೂ ತೋರಿಕೆಯೂ ಇರಲಾಗದಂತೆ ಆಶ್ರಯನಾಗಿರುವನು.

ಇಲ್ಲಿ ಜ್ಞಾತಾ, ಜ್ಞಾನಾಶ್ರಯ ಎಂದು ಹೇಳಿದುದರಿಂದಲೇ ಆತ್ಮನು ಕರ್ತಾ, ಭೋಕ್ತಾ ಎಂದೂ ಹೇಳಿದಂತೆಯೇ ಆಯಿತು. ಏತಕ್ಕೆಂದರೆ ಕರ್ತೃತ್ವ ಭೋಕ್ತೃತ್ವಗಳು ಜ್ಞಾನಾವಸ್ಥಾಕಾರ್ಯವಾಗಿಯೇ ಇರುವುವು.

ಕರ್ತಾ—ಆತ್ಮನ ಜ್ಞಾತೃತ್ವವು ತ್ಯಾಜ್ಯೋಪಾದೇಯ ವಿವೇಕಕ್ಕೆ ಹೇತುವಾಗಿರುವುದರಿಂದ, ತನಗೆ ತ್ಯಾಜ್ಯಗಳನ್ನು ಬಿಡುವುದು, ಬೇಕಾದುವನ್ನು ಕೈಕೊಳ್ಳುವುದು ಈ ಮುಂತಾದ ಸಕಲ ಹಿತಕಾರ್ಯಗಳನ್ನೂ ಮಾಡಿಕೊಳ್ಳತಕ್ಕವನು

ಭೋಕ್ತಾ—ಭೋಗಾಶ್ರಯನು. ಸುಖದುಃಖಾನುಭವವು ಭೋಗವೆನಿಸುವುದು. ಇಂಥ ಭೋಗಕ್ಕೆ ಆಶ್ರಯನು.

ಇಲ್ಲಿ ಸಾಂಖ್ಯರು ಆತ್ಮನಿಗೆ ಸ್ವಾಭಾವಿಕವಾದ ಕರ್ತೃತ್ವವು ಇಲ್ಲ, ಮೂಲ ಪ್ರಕೃತಿಗೇ * ಕರ್ತೃತ್ವವಿರುವುದು, ಆತ್ಮನು ಭೋಕ್ತೃಮಾತ್ರವೇ ಆಗಿರುವನು ಎಂದು ಹೇಳುವರು. ಹಾಗೆ ಆತ್ಮನು ಕರ್ತೃವಲ್ಲ ಎಂದು ಒಪ್ಪಿದರೆ ಆತ್ಮನಿಗೆ ಶಾಸ್ತ್ರವಶ್ಯತೆಯೂ ಕೊನೆಗೆ ಭೋಕ್ತೃತ್ವವೂ ಸಹ ಇಲ್ಲವೆಂತಲೇ ಹೇಳಬೇಕಾಗಿ ಬರುವುದು.

ಜ್ಞಾನಸ್ವರೂಪ—ಎಂದರೆ ಧರ್ಮಭೂತಜ್ಞಾನ ಸಹಾಯವಿಲ್ಲದೆಯೇ ತನ್ನನ್ನು ತಾನೇ ಅರಿಯಬಲ್ಲವನಾಗಿರುವನು; ಸ್ವಯಂಪ್ರಕಾಶ ಎಂದರ್ಥ. ಅಲ್ಲದೆ ಜ್ಞಾನವು ಇವನಲ್ಲಿ ಸಾರಭೂತಗುಣವಾಗಿರುವುದರಿಂದಲೂ ಜ್ಞಾನಸ್ವರೂಪನೆನ್ನಬಹುದು.

ಈಶ್ವರನಿಯಾಮ್ಯ—ಆತ್ಮನು ಈಶ್ವರ ಬುದ್ಧ್ಯಧೀನನಾಗಿ ಎಲ್ಲಾ ವ್ಯಾಪಾರವೂ ಉಳ್ಳವನು. ಶರೀರದ ಸಕಲ ಕಾರ್ಯಗಳೂ ಶರೀರಿಯಾದ (ಶರೀರಕ್ಕೆ ಅಂತರಾತ್ಮನಾದ) ಜೀವಾತ್ಮನ ಬುದ್ಧ್ಯಧೀನವಾಗಿ ಉಂಟಾಗುವಂತೆಯೇ ಈಶ್ವರ ಶರೀರಭೂತನಾದ ಈ ಜೀವಾತ್ಮನ ಸಕಲ ವ್ಯಾಪಾರಗಳೂ ಶರೀರಿಯಾದ ಪರಮಾತ್ಮನ ಬುದ್ಧ್ಯಧೀನವಾಗಿಯೇ ಉಂಟಾಗುವುವು—ಎಂದರ್ಥ. ಜೀವಾತ್ಮನು ಪ್ರಕೃತಿಗೆ ಶರೀರಿಯಾಗಿಯೂ ಈಶ್ವರನಿಗೆ ಶರೀರವಾಗಿಯೂ ಇರುವನು.

ಈಶ್ವರಶೇಷ—ಈಶ್ವರನಿಗೆ ಇಷ್ಟಬಂದಂತೆ ಉಪಯೋಗಿಸಿಕೊಳ್ಳಲು ಅರ್ಹನಾಗಿರುವನು.

೨೫. ಈ ರೀತಿಯಾಗಿ ಸ್ವರೂಪವೈಲಕ್ಷಣ್ಯವುಳ್ಳ ಜೀವಾತ್ಮನಿಗೆ ಅವಿದ್ಯಾದಿ ದೋಷಸಂಬಂಧವೂ ಸಂಸಾರವೂ ಬಂದ ಬಗೆ ಹೇಗೆಂದರೆ— ಸ್ವತಃ ಜ್ಞಾನಾನಂದಾಮಲ ಸ್ವರೂಪರಾದ ಜೀವಾತ್ಮರಿಗೆ ಗುಣತ್ರಯಾಶ್ರಯವಾದ ಪ್ರಕೃತಿಯೊಡನೆ

* "ಸ್ವರ್ಗಕಾಮೋ ಯಜೇತ, ಮುಮುಕ್ಷುಃ ಬ್ರಹ್ಮೋಪಾಸೀತ" ಎಂದು ಸ್ವರ್ಗಮೋಕ್ಷಾದಿ ಫಲಭೋಕ್ತೃಗಳಾಗಿರುವವರನ್ನು ಕುರಿತಲ್ಲವೇ ಶಾಸ್ತ್ರವು—"ನೀನು ಇದನ್ನು ಮಾಡು, ಇದನ್ನು ಬಿಡು" ಎಂದು ಆಜ್ಞಾಪಿಸುತ್ತದೆ; ಆದುದರಿಂದ ಫಲಭೋಕ್ತೃವೇ ಕರ್ತಾ ಆಗಿರಬೇಕು. "ಆತ್ಮನಿಗೆ ಕರ್ತೃತ್ವವೇ ಇಲ್ಲ, ಪ್ರಕೃತಿಗೇ ಕರ್ತೃತ್ವ" ಎಂಬುದು ಒಪ್ಪುವುದಾದರೆ ಆಗ ಶಾಸ್ತ್ರವು ಚೇತನನನ್ನು ಕುರಿತು ಯಾವುದನ್ನೂ ವಿಧಿಸಲೇ ಕೂಡದು ಎಂದಾಗುವುದು. ಏತಕ್ಕೆಂದರೆ ಶಾಸನಮಾಡುವುದರಿಂದ ಶಾಸ್ತ್ರ ಎನಿಸಿಕೊಂಡಿತು; ಶಾಸನ ಎಂದರೆ ಪ್ರವರ್ತನ; ಆ ಪ್ರವರ್ತನವು ತಿಳಿವಳಿಕೆಯುಂಟುಮಾಡುವುದರ ಮೂಲಕವಾಗಿ ಆಗಬೇಕು; ಅಚೇತನವಾದ ಪ್ರಕೃತಿಗೆ ತಿಳಿವಳಿಕೆಯಿಲ್ಲ; ತಿಳಿವಳಿಕೆಯನ್ನು ಉಂಟುಮಾಡಲು ಆಗುವುದೂ ಇಲ್ಲ; ಆದುದರಿಂದ ವಿಧಿನಿಷೇಧರೂಪವಾದ ಶಾಸ್ತ್ರವು ಸಾರ್ಥಕ್ಯವನ್ನು ಹೊಂದಬೇಕಾದರೆ ಭೋಕ್ತೃವಾದ ಚೇತನನಿಗೇನೇ ಕರ್ತೃತ್ವವಿರಬೇಕು; ಪ್ರಕೃತಿಗೆ ಕರ್ತೃತ್ವ ಎಂದರೆ ಶಾಸ್ತ್ರವೆಲ್ಲವೂ ವ್ಯರ್ಥವಾಗಬೇಕಾಗುವುದು.

ಅನಾದಿಯಾಗಿ ಬಂದ ಸಂಬಂಧದಿಂದ * ಅವಿದ್ಯಾ ಕರ್ಮ ವಾಸನಾ ರುಚಿಗಳು † ಉಂಟಾಗುತ್ತ, ಅವರಿಂದ ಅನೇಕ ಜನ್ಮಪರಂಪರೆಗಳೂ ಬರುತ್ತ, ಆ ಜನ್ಮಗಳಲ್ಲಿಯೂ ಕರ್ಮವಾಸನೆಗಳು ಹೆಚ್ಚುತ್ತ ಸಂಸಾರಕ್ಲೇಶವು ಬಂದು ಒದಗುವುದು.

ಅವಿದ್ಯೆ—ಅನಿತ್ಯವಾದ ದೇವಲೋಕಾದಿಗಳಲ್ಲಿ ನಿತ್ಯತ್ವಭ್ರಾಂತಿಯೂ, ಅಶುಚಿಯಾದ ಶರೀರಾದಿಗಳಲ್ಲಿ ಶುಚಿತ್ವಭ್ರಾಂತಿಯೂ, ಪರಿಣಾಮದಲ್ಲಿ ದುಃಖಗಳನ್ನೇ ಕೊಡುವ ಭೋಗಗಳಲ್ಲಿ ಸುಖಭ್ರಾಂತಿಯೂ, ಆತ್ಮವಲ್ಲದ ಬುದ್ಧಿ, ಮನಸ್ಸು ಮುಂತಾದುವುಗಳಲ್ಲಿ ಇವೇ ಆತ್ಮನೆಂಬ ಭ್ರಾಂತಿಯೂ ಅವಿದ್ಯೆಯೆನಿಸುವುದು. ಈ ಅವಿದ್ಯೆಯೇ ಸರ್ವಾನರ್ಥಗಳಿಗೂ ಮೂಲವಾಗಿಯೂ ಮೋಹಸ್ವರೂಪವಾಗಿಯೂ ಇರುವುದು. ಈ ಅವಿದ್ಯೆಯೇ ರಾಗದ್ವೇಷಾದಿಗಳಿಗೆ ಮೂಲ

* ಅಡುಗೆ ಮಾಡುವಾಗ ತಪ್ಪಲೆಯಲ್ಲಿ ಶುದ್ಧವಾದ ನೀರನ್ನು ತುಂಬಿ ಕೆಳಗೆ ಬೆಂಕಿಹಾಕಿ ಉರಿಸಿದರೆ, ಸ್ವಲ್ಪಹೊತ್ತಿನಮೇಲೆ ನೀರು ಕಾವನ್ನು ಹೊಂದುತ್ತ ಉಕ್ಕುತ್ತ ಕುದಿಯುತ್ತ ರಸ ಬದಲಾಯಿಸುವುದನ್ನು ನಾವೆಲ್ಲರೂ ನೋಡಿದ್ದೇವೆ. ಮೊದಲು ನೀರು ತಣ್ಣಗೆ ಮಧುರವಾಗಿ ಸದ್ದೇ ಇಲ್ಲದೆ ಉಕ್ಕುವಿಕೆ ಮುಂತಾದ ವಿಕಾರಗಳೊಂದೂ ಇಲ್ಲದೆ ಇದ್ದುದು, ಈ ಬೆಂಕಿಯಿಂದ ಕಾವು ತಪ್ಪಲೆಯ ಸಂಬಂಧದಿಂದ ಉಷ್ಣಸ್ಪರ್ಶ, ಶಬ್ದ, ಉಕ್ಕುವಿಕೆ, ಕುದಿವಿಕೆಯೆಂಬ ವಿಕಾರ, ರಸಭೇದ ಇವುಗಳನ್ನು ಪಡೆಯುತ್ತಿಲ್ಲವೆ? ಅದರಂತೆಯೇ, ಸತ್ತ್ವರಜಸ್ತಮೋಗುಣಗಳೂ ದುಃಖಾಜ್ಞಾನ ಮಲಾದಿಗಳೂ ಪ್ರಕೃತಿಯಲ್ಲಿದ್ದೇ ಇರುವುವು; ಅಂಥ ಪ್ರಕೃತಿಯ ಸಂಬಂಧವು ಆತ್ಮನಿಗೆ ಬಹುಕಾಲದಿಂದ ಅಂಟಿರುವುದು; ಅಂಥ ಆತ್ಮನಿಗೆ ಪ್ರಕೃತಿಯಲ್ಲಿದ್ದ ಸತ್ತ್ವರಜಸ್ತಮೋಗುಣಕಾರ್ಯಗಳೂ ದುಃಖಾಜ್ಞಾನಮಲಾದಿಗಳೂ ಬಂದು ಅಂಟಿವುವು. ಇಲ್ಲಿ ಬೆಂಕಿಯ ಕಾವಿನಂತೆ ದುಃಖಾಜ್ಞಾನಮಲಗಳೂ ಸತ್ತ್ವರಜಸ್ತಮೋಗುಣಗಳೂ, ಕಾವು ತಪ್ಪಲೆಯಂತೆ ಪ್ರಕೃತಿ, ಶುದ್ಧ ಜಲದಂತೆ ಶುದ್ಧ ಜೀವಾತ್ಮಸ್ವರೂಪ, ಕಾಯ್ದು ವಿಕಾರಹೊಂದಿದ ಜಲದಂತೆ ಪ್ರಕೃತಿಬದ್ಧ ಜೀವಾತ್ಮರುಗಳು, ನೀರಿಗೆ ನಾನಾವಿಕಾರ ಬಂದಂತೆ ಜೀವಾತ್ಮರಿಗೆ ಅವಿದ್ಯಾ ಕರ್ಮವಾಸನಾರುಚಿಗಳು ಬಂದು ಸೇರಿದುವು. ಈ ಅಭಿಪ್ರಾಯವನ್ನು ಶ್ರೀ ವಿಷ್ಣುಪುರಾಣದಲ್ಲಿ ಪರಾಶರಮಹರ್ಷಿ—

ನಿರ್ವಾಣಮಯ ಏವಾಯಮಾತ್ಮಾ ಜ್ಞಾನಮಯೋಽಮಲಃ ।
ದುಃಖಾಜ್ಞಾನಮಲಾ ಧರ್ಮಾಃ ಪ್ರಕೃತೇಸ್ತೇ ನ ಚಾತ್ಮನಃ ।
ಜಲಸ್ಯ ಚಾಗ್ನಿಸಂಸ್ಪೃಷ್ಟಸ್ಥಾಲೀಸಂಗಾತ್ತಥಾಪಿ ಹಿ ।
ಶಬ್ದೋದ್ರೇಕಾದಿಕಾನ್ ಧರ್ಮಾನ್ ತತ್ಕರೋತಿ ಯಥಾ ಮುನೇ ।
ತಥಾತ್ಮಾ ಪ್ರಕೃತೌ ಸಂಗಾದಹಮ್ಮಾನಾದಿದೂಷಿತಃ ।
ಭಜತೇ ಪ್ರಾಕೃತಾನ್ ಧರ್ಮಾನನ್ಯಸ್ತೇಭ್ಯೋಽಪಿ ಸೋಽವ್ಯಯಃ । ಎಂದು ನಿರೂಪಿಸಿರುವರು.

† ಯೋಗಸೂತ್ರ—ಅವಿದ್ಯಾಽಸ್ಮಿತಾರಾಗದ್ವೇಷಾಭಿನಿವೇಶಾಃ ಪಂಚ ಕ್ಲೇಶಾಃ ॥ ಅನಿತ್ಯಾಶುಚಿ ದುಃಖಾನಾತ್ಮಸು ನಿತ್ಯಶುಚಿಸುಖಾತ್ಮಖ್ಯಾತಿರವಿದ್ಯಾ । ಅಸ್ಮಿತಾ ಅಹಮಭಿಮಾನಃ । ಸುಖಾನುಶಾಯೀ ರಾಗಃ। ದುಃಖಾನುಶಾಯೀ ದ್ವೇಷಃ। ಸ್ವರಸವಾಹೀ ವಿದುಷೋಽಪಿ ತಥಾರೂಢೋಽಭಿನಿವೇಶಃ ॥

(II ಅಧ್ಯಾಯ—೩, ೫, ೭, ೮, ೯ ಸೂತ್ರಗಳು)

ವಾಗಿ ಅವಕ್ಕೆ ತಕ್ಕ ಕರ್ಮಗಳನ್ನು ಮಾಡಿಸಿ ಜೀವಾತ್ಮರನ್ನು ಬಂಧನಕ್ಕೆ ಒಳಗು ಮಾಡುವುದು. ಹೇಗೆಂದರೆ—ಸ್ವರ್ಗಲೋಕವನ್ನು ಸ್ಥಿರವೆಂದು ಭಾವಿಸಿ ಅದನ್ನು ಪಡೆವುದಕ್ಕೆ ಇಲ್ಲಿ ಯಾಗಾದಿಗಳನ್ನೂ ಉಪವಾಸಾದಿಗಳನ್ನೂ ಮಾಡಿ, ಸ್ವರ್ಗದಲ್ಲಿ ಕೆಲವುಕಾಲ ಸುಖದಿಂದಿದ್ದು ಆ ಪುಣ್ಯವು ಕ್ಷೀಣವಾದೊಡನೆಯೇ ನೂಕಲ್ಪಟ್ಟು ಈ ಲೋಕಕ್ಕೆ ಬಂದು ಪೂರ್ವಕರ್ಮ ವಶದಿಂದ ಯಾವುವೋ ಜನ್ಮಗಳನ್ನು ಪಡೆವನು ಅಲ್ಲಿಯೆ ಅಶುಚಿಯಾದ ಈ ಶರೀರವನ್ನು ನಂಬಿ, ದೇಹಬಂಧುಗಳನ್ನು ರಕ್ಷಕರೆಂದೂ ಉತ್ತಾರಕರೆಂದೂ ಭ್ರಮಿಸಿ, ಅವರೊಂದಿಗೆ ಓಲಾಡಿ, ಅವರು ಅಗಲಿದರೆ ಗೋಳಾಡಿ, ಅವರ ಅನುಕೂಲ ಪ್ರತಿಕೂಲರಲ್ಲಿ ರಾಗದ್ವೇಷಗಳನ್ನು ಬೆಳೆಸಿ, ಕರ್ಮಗಳನ್ನು ಮಾಡಿ, ಆ ಕರ್ಮಫಲಗಳಿಗಾಗಿ ನಾನಾಜನ್ಮಗಳನ್ನು ಪಡೆಯಬೇಕಾಗುವುದು. ಈ ಶರೀರವು ಅಶುಚಿಮಯ ಎಂಬುದನ್ನು ಹೇಳಬೇಕಾದುವೇ ಇಲ್ಲ. ತಾಯಿಯ ಹೊಟ್ಟೆಯಲ್ಲಿ ಮಲಮೂತ್ರಕೋಶದ ಮಗ್ಗುಲಲ್ಲಿ ಅಶುಚಿಯಾದ ಮಾಸುಚೀಲದಲ್ಲಿ ವಾಸ, ಅನ್ನಪರಿಣಾಮವಾದ ಶ್ಲೇಷ್ಮಾದಿಗಳಿಂದ ಶರೀರವೃದ್ಧಿ, ತನ್ನಲ್ಲಿಯೇ ಸರ್ವದ್ವಾರಗಳಿಂದಲೂ ಸರ್ವದಾ ಮಲಗಳ ಜಿನುಗಾಟ, ಬಾಲ್ಯ ವಾರ್ಧಕಗಳಲ್ಲಿ ಇನ್ನೂ ಹೆಚ್ಚಾದ ಹೇಸಿಕೆ, ಹೀಗಿದ್ದರೂ ತಾನು ಶುಚಿ, ಸುಂದರ ಎಂದು ಬೀಗಿ ಬೆರೆತು ಕರ್ಮಗಳನ್ನು ಮಾಡಿ ಜನ್ಮಪರಂಪರೆಗಳಿಗೆ ಬರುವನು.

ಕರ್ಮ—ಎಂದರೆ ಮನೋವಾಕ್ಕಾಯಗಳೆಂಬ ಮೂರು ಕರಣಗಳಿಂದಲೂ ಮಾಡಿದ ಪುಣ್ಯಪಾಪರೂಪವಾದ ಕ್ರಿಯಾವಿಶೇಷವು. ಅದರಲ್ಲಿ ಪುಣ್ಯವು ಐಹಿಕಾಮುಷ್ಮಿಕವಾದ ನಾನಾಭೋಗಗಳಿಗೆ ಸಾಧಕವಾಗಿ ಬಹುವಿಧವಾಗಿರುವುದು. ಪಾಪವು ಅಕೃತ್ಯಕರಣ (ಶಾಸ್ತ್ರನಿಷಿದ್ಧವಾದ ಕೆಟ್ಟಕಾರ್ಯಗಳನ್ನು ಮಾಡುವುದು), ಕೃತ್ಯಾಕರಣ (ಮಾಡಬೇಕೆಂದು ಶಾಸ್ತ್ರಗಳಲ್ಲಿ ವಿಧಿಸಿರುವುದನ್ನು ಬಿಡುವುದು), ಭಗವದಪಚಾರ, ಭಾಗವತಾಪಚಾರ, ಅಸಹ್ಯಾಪಚಾರ (ನಿರ್ನಿಮಿತ್ತವಾಗಿ ಭಗವದ್ಭಾಗವತರನ್ನು ದ್ವೇಷಿಸಿ ಹಿಂಸಿಸುವುದು) ಮುಂತಾದ ರೂಪದಿಂದ ಅನೇಕವಾಗಿರುವುದು.

ವಾಸನೆ—ಎಂದರೆ ಹಿಂದೆ ಬಹಳ ಕಾಲದಿಂದಲೂ ಮಾಡುತ್ತ ಬಂದ ಒಳ್ಳೆಯ ಕೆಟ್ಟ ಕಾರ್ಯಗಳಲ್ಲಿ ನಮ್ಮ ಬುದ್ಧಿಪೂರ್ವಕವಾಗಿಯೇ ಅಲ್ಲದೆ ಪುನಃ ಪ್ರವರ್ತನೆ ಮಾಡಿಸುವ ಮನೋದೋಷವು. ಇದು ಕಾರಣಭೇದದಿಂದ ಬಹುವಿಧವಾಗಿರುವುದು.

ರುಚಿ—ಎಂದರೆ ಅಕೃತ್ಯಕರಣ ಕೃತ್ಯಾಕರಣಗಳಲ್ಲಿ ಬುದ್ಧಿಪೂರ್ವಕವಾಗಿಯೇ ಪ್ರವರ್ತನವನ್ನುಂಟುಮಾಡುವ ಮನೋದೋಷವು. ಈ ದೋಷವಿದ್ದವನ ಕೆಟ್ಟ ಪ್ರವರ್ತನವನ್ನು ಇದಕ್ಕಿಂತಲೂ ಸರಸವಾದ ವಿಷಯಗಳನ್ನು ತೋರಿಸಿದರೂ ಬಿಡಿಸಲಾಗುವುದಿಲ್ಲ.

ಪ್ರಕೃತಿಸಂಬಂಧ—ಈ ಅವಿದ್ಯಾ ಕರ್ಮ ವಾಸನಾ ರುಚಿಗಳಿಂದ ಪ್ರಕೃತಿ ಪ್ರಾಕೃತ ವಿಷಯಗಳನ್ನು ಅನುಭವಿಸುತ್ತ, ಅವುಗಳನ್ನು ಬಿಡಲಾರದೆ ಅಲ್ಲಿಯೇ ಬಿದ್ದು ಓಲಾಡುತ್ತ, ಅದರಿಂದ ಅನೇಕಕೋಟಿ ಪುಣ್ಯಪಾಪರೂಪವಾದ ಕರ್ಮಗಳನ್ನು ಮಾಡುತ್ತ, ಅವುಗಳ ಫಲಾನುಭವರೂಪವಾಗಿ ಅನೇಕ ಜನ್ಮಗಳನ್ನು ಪಡೆಯುತ್ತ, ರೇಷ್ಮೆಯ ಹುಳು ತನ್ನಿಂದಲೇ ಹೊರಟ ನೂಲಿನ ಗೋಜಲುಗಂಟಾಗಿ ಬಿಡಿಸಲಾಗದ ಬಲೆಯನ್ನು ಮಾಡಿಕೊಂಡು ಅದರೊಳಗೆ ಸಿಕ್ಕಿ ಈಚೆಗೆ ಬರಲಾರದೆ ನರಳುವಂತೆ, ಸಂಸಾರಚಕ್ರದಲ್ಲಿ ಸಿಕ್ಕಿಕೊಂಡು ಆ ಕರ್ಮಪಾಶವನ್ನು ಬಿಡಿಸಿಕೊಳ್ಳುವ ಉಪಾಯವನ್ನು ಕಾಣದೆ ನರಳುತ್ತಿರುವನು.

ಆತ್ಮನಿಗೆ ಈ ಅಚಿತ್ಸಂಬಂಧವು ಕಳೆದರೆ ಆ ಅವಿದ್ಯಾದಿಗಳೂ ತೊಲಗಿ ಹೋಗುವುವು.

೨೬. ಈ ಜೀವಾತ್ಮರುಗಳು ಪ್ರತಿಯೊಂದು ಶರೀರದಲ್ಲಿಯೂ ಒಬ್ಬೊಬ್ಬರು ಇದ್ದುಕೊಂಡು ತಮ್ಮ ಇಂದ್ರಿಯಾದಿ ಪರಿಕರಗಳಿಂದ ಭೋಗಗಳನ್ನು ಅನುಭವಿಸುತ್ತ ಅನಂತಾನಂತ ಸಂಖ್ಯೆಯಾಗಿರುವರು.

ಇಲ್ಲಿ ಕೆಲವರು—ಆತ್ಮಭೇದವಿಲ್ಲ, ಸಕಲ ಶರೀರಗಳಲ್ಲಿಯೂ ಒಂದೇ ಆತ್ಮನಿರುವನು ಎಂದು ಹೇಳುವರು; ಅದು ಸರಿಯಲ್ಲ. ಹಾಗೆ ಒಂದೇ ಆತ್ಮನು ಇರುವ ಪಕ್ಷಕ್ಕೆ ಒಬ್ಬನು ಸುಖಾನುಭವಮಾಡುವ ಕಾಲದಲ್ಲಿ ಮತ್ತೊಬ್ಬನು ದುಃಖಿಸದೆ ಇರಬೇಕು. ಹೀಗೆ ಲೋಕದಲ್ಲಿ ಎಲ್ಲಿಯೂ ಕಂಡಿಲ್ಲ. ಅಲ್ಲದೆ ಏಕಾತ್ಮವಾದ ಪಕ್ಷದಲ್ಲಿ ಒಬ್ಬ ಜೀವಾತ್ಮನು ಸಂಸಾರದಲ್ಲಿ ಸಿಕ್ಕಿಕೊಂಡು ನರಳುತ್ತಿರುವುದೂ, ಆಗಲೇ ಮತ್ತೊಬ್ಬನು ಮುಕ್ತನಾಗುವುದೂ ಸಂಗತವಾಗಲಾರವು. ಒಬ್ಬನು ಸಂಸಾರದಲ್ಲಿ ಸಿಕ್ಕಿಕೊಂಡಿದ್ದರೆ ಎಲ್ಲರೂ ಸಂಸಾರದಲ್ಲಿಯೇ ಸಿಕ್ಕಿ ನರಳಬೇಕು. ಯಾವನಿಗೂ ಮೋಕ್ಷವೆಂಬುದು ಕೂಡದು; ಅಥವಾ ಒಬ್ಬ ಜೀವನು ಮುಕ್ತನಾದರೆ ಎಲ್ಲರೂ ಮೋಕ್ಷಹೊಂದಿರಬೇಕು, ಯಾವನೂ ಸಂಸಾರದಲ್ಲಿರಲೇಕೂಡದು. ಆಗ ಈ ಪ್ರಪಂಚವೇ ಬರಿದಾಗಬೇಕಾಗುವುದು. ಈ ಪಕ್ಷದಲ್ಲಿ ಬಂಧಮೋಕ್ಷವ್ಯವಸ್ಥೆಯೇ ಇಲ್ಲದೆ ಹೋಗಬೇಕಾಗುವುದು. ಅದು ಅಸಂಗತ. ಇದೂ ಅಲ್ಲದೆ ಒಬ್ಬನು ಶಿಷ್ಯನಾಗಿರುವುದೂ ಮತ್ತೊಬ್ಬನು ಆಚಾರ್ಯನಾಗಿರುವುದೂ ಸಂಗತವಾಗಲಾರದು. ಒಬ್ಬನಿಗೆ ತತ್ತ್ವಜ್ಞಾನ ಹುಟ್ಟಿದರೆ ಎಲ್ಲರೂ ತತ್ತ್ವಜ್ಞಾನಿಗಳಾಗಬೇಕು; ಇದು ಲೋಕಾನುಭವವಿರುದ್ಧವಾಗಿದೆ ಮತ್ತು ವಿಷಮಸೃಷ್ಟಿಯೂ ಸಂಗತವಾಗಲಾರದು: ಎಂದರೆ, ಒಬ್ಬನು ದೇವತಾ ಜನ್ಮವನ್ನು ಹೊಂದಿ ಸುಖೋತ್ತರನಾಗಿರುವುದೂ ಮತ್ತೊಬ್ಬನು ಪಶುಪಕ್ಷ್ಯಾದಿ ಜನ್ಮಹೊಂದಿ ಕೇವಲ ದುಃಖಭೂಯಿಷ್ಠನಾಗಿರುವುದೂ ಮಗುದೊಬ್ಬನು ಮನುಷ್ಯಜನ್ಮವನ್ನು ಹೊಂದಿ ದುಃಖಮಿಶ್ರ ಸುಖಾನು

ಭವವನ್ನು ಮಾಡುತ್ತಿರುವುದೂ ಕೂಡದೇ ಹೋಗಬೇಕಾಗುವುದು. ಆತ್ಮಭೇದವುಂಟೆಂದೂ ಜೀವಾತ್ಮರುಗಳು ಅಸಂಖ್ಯಾತರೆಂದೂ ಸಾಕ್ಷಾತ್ತಾಗಿ ಹೇಳುವ ನೂರಾರು ಶ್ರುತಿವಾಕ್ಯಗಳೊಂದಿಗೆ ಈ ಏಕಾತ್ಮವಾದ ಪಕ್ಷವು ವಿರುದ್ಧವಾಗಿ ಪರಾಹತವಾಗುವುದು.

ಆದುದರಿಂದ ಹೀಗೆ ಹೇಳಿದೆ—

ದೇಹೇಂದ್ರಿಯಮನಃಪ್ರಾಣಧೀಭ್ಯೋಽನ್ಯೋಽನನ್ಯ ಸಾಧನಃ ।
ನಿತ್ಯೋ ವ್ಯಾಪೀ ಪ್ರತಿಕ್ಷೇತ್ರಮಾತ್ಮಾ ಭಿನ್ನಃ ಸ್ವತಸ್ಸುಖೀ ॥

ಎಂಬ ವಚನದಂತೆ ಜೀವಾತ್ಮರು ದೇಹೇಂದ್ರಿಯ ಮನಃಪ್ರಾಣವಿಲಕ್ಷಣರಾಗಿ, ನಿತ್ಯರಾಗಿ ಪ್ರತಿಶರೀರದಲ್ಲಿಯೂ ಒಬ್ಬೊಬ್ಬರಿದ್ದು ಅನಂತರಾಗಿ ಜ್ಞಾನಾನಂದ ಸ್ವರೂಪರಾಗಿರುವರು ಎಂಬುದನ್ನು ಸ್ಥಿರಪಡಿಸಿದಂತಾಯಿತು.

೨೭. ಜೀವಾತ್ಮರಿಗೆ ನಿಷ್ಕೃಷ್ಟವಾದ ಲಕ್ಷಣ

ಜೀವಾತ್ಮರುಗಳಿಗೆ ಲಕ್ಷಣಗಳನ್ನು ಬಹುವಿಧವಾಗಿ ಹೇಳಬಹುದು. ಇಲ್ಲಿ ಮೂರು ವಿಧಗಳನ್ನು ಹೇಳುತ್ತೇವೆ. ಜೀವಾತ್ಮನು ಅಣುವಾಗಿ ಚೇತನನಾಗಿರುವನು; ಶೇಷನಾಗಿ ಚೇತನನಾಗಿರುವನು; ಶೇಷನಾಗಿ ಜ್ಞಾತಾವಾಗಿರುವನು. ಈ ಲಕ್ಷಣಗಳಲ್ಲಿ, ಚೇತನ, ಜ್ಞಾತಾ ಎಂದು ಇಷ್ಟುಮಾತ್ರ ಹೇಳಿದರೆ ಈಶ್ವರನಲ್ಲಿಯೂ, ಶೇಷ, ಅಣು ಎಂದು ಇಷ್ಟುಮಾತ್ರ ಹೇಳಿದರೆ ಅಚಿದ್ವಸ್ತುಗಳಲ್ಲಿಯೂ ಪರಮಾಣುಗಳಲ್ಲಿಯೂ ಅತಿವ್ಯಾಪ್ತಿ ಬರುವುದರಿಂದ ಈ ಎರಡೆರಡು ಪದಗಳೂ ಮೂರು ಲಕ್ಷಣಗಳಲ್ಲಿಯೂ ಉಪಯೋಗಿಸಲ್ಪಟ್ಟಿವೆ.* ಈಗ ಯಾವದೋಷವೂ ಬರುವುದಿಲ್ಲ. ಸಕಲ ಜೀವಾತ್ಮರೂ ಅಣುವಾಗಿ ಚೇತನರಾಗಿಯೂ ಶೇಷರಾಗಿ ಜ್ಞಾನಾಶ್ರಯರಾಗಿಯೂ ಇರುವುದರಿಂದ ಲಕ್ಷಣಸಮನ್ವಯವಾಯಿತು.

೨೮. ಜೀವಾತ್ಮರುಗಳ **ಜ್ಞಾನವೂ ಆತ್ಮಸ್ವರೂಪದ ಹಾಗೆಯೇ ನಿತ್ಯ** ದ್ರವ್ಯವಾಗಿಯೂ ಅಜಡವಾಗಿಯೂ ಆನಂದರೂಪವಾಗಿಯೂ ಇರುವುದು.

ಪ್ರಶ್ನೆ — ಹಾಗಾದರೆ ಆತ್ಮಸ್ವರೂಪಕ್ಕೂ ಧರ್ಮಭೂತಜ್ಞಾನಕ್ಕೂ ಭೇದವೇನು ?

---

* ಅಣುತ್ವೇ ಸತಿ ಚೇತನತ್ವಂ, ಸ್ವತಶ್ಶೇಷತ್ವೇ ಸತಿ ಚೇತನತ್ವಂ, ಜ್ಞಾತೃತ್ವೇ ಸತಿ ಶೇಷತ್ವಂ ಇತಿ.

ಚೇತನತ್ವಂ, ಜ್ಞಾತೃತ್ವಂ ಏತಾವನ್ಮಾತ್ರೋಕ್ತೌ ಈಶ್ವರೇ ಅತಿವ್ಯಾಪ್ತಿಃ, ತದರ್ಥಂ ಅಣುತ್ವಂ, ಶೇಷತ್ವಂ, ಇತಿ; ಅಣುತ್ವ, ಶೇಷತ್ವ ಮಾತ್ರೋಕ್ತೌ ಅಚಿದ್ವಸ್ತುನಿ ಪರಮಾಣುಷ್ವಪಿ ಅತಿವ್ಯಾಪ್ತಿಃ, ತದರ್ಥಂ ಚೇತನತ್ವಂ, ಜ್ಞಾತೃತ್ವಮಿತಿ.

ಉತ್ತರ—ಆತ್ಮಸ್ವರೂಪವು ಧರ್ಮಿ†, ಸಂಕೋಚ ವಿಕಾಸರಹಿತ, ತನ್ನನ್ನು ಹೊರತು ಮಿಕ್ಕ ವಸ್ತುಗಳನ್ನೊಂದನ್ನೂ ತೋರ್ಪಡಿಸಲಾರದು, ಸ್ವಯಂಪ್ರಕಾಶ, ಅಣುಪರಿಮಾಣ. ಆತ್ಮನಿಗೆ ವಿಶೇಷಣವಾದ ಧರ್ಮಭೂತ ಜ್ಞಾನವೋ ಎಂದರೆ, ಧರ್ಮ, ಸಂಕೋಚವಿಕಾಸಯೋಗ್ಯ, ತನ್ನನ್ನು ಅಲ್ಲದೆ ಮಿಕ್ಕ ವಸ್ತುಗಳನ್ನು ತೋರ್ಪಡಿಸಬಲ್ಲುದು, ತನಗೆ ತಾನು ತೋರಿಬರುವುದಿಲ್ಲ, ಸ್ವಾಶ್ರಯವಾದ ಆತ್ಮನಿಗೆ ತನ್ನನ್ನು ತೋರ್ಪಡಿಸಿಕೊಡಬಲ್ಲುದು, ವಿಭುವಾಗಿರುವುದು. ಧರ್ಮಭೂತ ಜ್ಞಾನವು ಜ್ಞಾನರೂಪತೆಯಿಂದ ಚಿತ್ ಎನಿಸಿದರೂ, ತಾನು ಒಂದು ಜ್ಞಾನಕ್ಕೆ ಆಶ್ರಯವಲ್ಲವಾದುದರಿಂದ ಅಚಿತ್ ಎಂದೇ ಪರಿಗಣಿಸಲ್ಪಡುವುದು.

ನಿತ್ಯಸೂರಿಗಳ ಜ್ಞಾನವು ಸರ್ವದಾ ವಿಭು (ಸರ್ವವ್ಯಾಪಿ) ವಾಗಿರುವುದು.

ಬದ್ಧಸಂಸಾರಿಗಳ ಜ್ಞಾನವು ಕರ್ಮಾನುಗುಣವಾಗಿ ಆಗಾಗ ಸಂಕೋಚ ವಿಕಾಸಗಳೊಡನೆ ಕೂಡಿ ಯಾವಾಗಲೂ ಅವಿಭುವಾಗಿರುವುದು. ಮುಕ್ತರ ಜ್ಞಾನವು ಮೊದಲು ಸಂಸಾರಿಗಳಾಗಿದ್ದಾಗ ಅವಿಭುವಾಗಿದ್ದು ಮೋಕ್ಷಾನಂತರದಲ್ಲಿ ವಿಭುವಾಗಿರುವುದು.

ಪ್ರಶ್ನೆ—ಧರ್ಮಭೂತಜ್ಞಾನವು ನಿತ್ಯವಾಗಿರುವಪಕ್ಷಕ್ಕೆ "ನನಗೆ ಈಗ ಜ್ಞಾನವು ಹುಟ್ಟಿತು, ಆಗ ನಷ್ಟವಾಗಿತ್ತು" ಎಂಬ ವ್ಯವಹಾರಗಳು ಹೇಗೆ ಸಂಗತವಾಗುವುವು ?

ಉತ್ತರ—ಜ್ಞಾನವು ಜ್ಞಾನೇಂದ್ರಿಯ ಮೂಲಕವಾಗಿ ಪ್ರಸರಿಸಿ ವಿಷಯಗಳನ್ನು ಗ್ರಹಿಸುವುದು ಹಿಂದಿರುಗುವುದು ಈ ಕೆಲಸಗಳಿಂದ ಆ ಆ ವ್ಯವಹಾರಗಳು ಬಂದಿರುವುವು; ಇಂದ್ರಿಯಗಳ ಮೂಲಕ ಪ್ರಸರಿಸಿ ಪದಾರ್ಥಗಳನ್ನು ಗ್ರಹಿಸುವಾಗ ಜ್ಞಾನವು ಹುಟ್ಟಿತೆಂದೂ, ಅದಾದಮೇಲೆ ಹಿಂದಿರುಗಲು ಆಗ ಜ್ಞಾನವು ನಷ್ಟವಾಯಿತೆಂದೂ ಈ ಕೆಲಸಗಳಿಂದಲೇ ಆ ವ್ಯವಹಾರವು ಬಂದಿರುವುದು. ಅಲ್ಲದೆ ಧರ್ಮಭೂತಜ್ಞಾನವು ಒಂದೇ ಆಗಿದ್ದರೂ, ಕಣ್ಣು, ಕಿವಿ ಮುಂತಾದ ಅನೇಕೇಂದ್ರಿಯಗಳ ಮೂಲಕವಾಗಿ ಪ್ರಸರಿಸಿ, ಬಣ್ಣ, ಶಬ್ದ ಮುಂತಾದ ಅನೇಕ ವಿಷಯಗಳನ್ನು ಗ್ರಹಿಸುವಾಗ ದರ್ಶನ ಶ್ರವಣಾದಿ ಸಂಜ್ಞಾಭೇದವಾಗುವಂತೆ ತೋರುವುದೂ ಈ ಪ್ರಸರಣಭೇದದಿಂದಲೇ ಉಂಟಾಗಿರುವುದು.

† ಧರ್ಮಿ=ಧರ್ಮವುಳ್ಳುದು. ಧರ್ಮ—ಮತ್ತೊಂದನ್ನು ಆಶ್ರಯಿಸಿ ವಿಶೇಷಣವಾಗಿಯೇ ಇರುವುದು; ಆದುದರಿಂದಲೇ ಇದಕ್ಕೆ ಧರ್ಮಭೂತಜ್ಞಾನ ಎಂದು ಹೆಸರು. ಧರ್ಮಿಯಾದ ಆತ್ಮಸ್ವರೂಪ=ಚಿತ್ತು, ಧರ್ಮಭೂತಜ್ಞಾನ=ಅಚಿತ್ತು (attributive consciousness).

ಪ್ರಶ್ನೆ—ನೈಯಾಯಿಕರು ಮುಂತಾದ ಮಿಕ್ಕ ಶಾಸ್ತ್ರಕಾರರೆಲ್ಲರೂ ಜ್ಞಾನವನ್ನು 'ಗುಣ' ಎಂದು ಹೇಳುತ್ತಿರುವಾಗ ಇಲ್ಲಿ ಜ್ಞಾನವು 'ದ್ರವ್ಯ' ಎಂಬುದು ಹೇಗೆ ಸಂಗತವಾಗಬಹುದು ?

ಉತ್ತರ—ಗುಣಾಶ್ರಯವಾದುದು 'ದ್ರವ್ಯ' ಎಂದೂ ಕ್ರಿಯಾಶ್ರಯವಾದುದು 'ದ್ರವ್ಯ' ಎಂದೂ ಹೀಗಲ್ಲವೆ ದ್ರವ್ಯಲಕ್ಷಣವಿರುವುದು ? ಇಲ್ಲಿ ಧರ್ಮಭೂತಜ್ಞಾನವು ಸಂಕೋಚ ವಿಕಾಸರೂಪವಾದ ಕ್ರಿಯೆಗಳಿಗೂ ಸಂಯೋಗ ವಿಯೋಗಾದಿರೂಪವಾದ ಗುಣಗಳಿಗೂ ಆಶ್ರಯವಾಗಿರುವುದರಿಂದಲೂ ಅಜಡವಸ್ತುವಾಗಿರುವುದರಿಂದಲೂ ಜ್ಞಾನವು ದ್ರವ್ಯವೆಂದು ಹೇಳಲು ಯಾವ ಬಾಧಕವೂ ಇಲ್ಲ.

ಪ್ರಶ್ನೆ—ಹೀಗೆ ದ್ರವ್ಯವಾಗಿರುವಪಕ್ಷದಲ್ಲಿ ಇದಕ್ಕೆ ಆತ್ಮಗುಣತ್ವವು ಸಂಗತವಾಗುವುದು ಹೇಗೆ ?

ಉತ್ತರ—ಯಾವಾಗಲೂ ಆತ್ಮನನ್ನೇ ಆಶ್ರಯಿಸಿರುವುದರಿಂದ ಆತ್ಮಗುಣ ಎಂದು ಹೇಳಲು ಯಾವ ಅಡ್ಡಿಯೂ ಇಲ್ಲ.

ಪ್ರಶ್ನೆ—ಹೀಗೆ ಒಂದೇವಸ್ತು ದ್ರವ್ಯವಾಗಿಯೂ ಗುಣವಾಗಿಯೂ ಇರುವುದನ್ನು ಲೋಕದಲ್ಲಿ ಎಲ್ಲಿಯೂ ಕಂಡಿಲ್ಲವಲ್ಲಾ ?

ಉತ್ತರ—ದೀಪ ಮುಂತಾದ ತೇಜಃಪದಾರ್ಥಗಳ ಬೆಳಕು ದ್ರವ್ಯವೆಂದು ನೈಯಾಯಿಕರೂ ಒಪ್ಪುವರು. ಅದು ದೀಪಕ್ಕೆ ನಿತ್ಯಾಶ್ರಿತವಾಗಿರುವುದರಿಂದ ದೀಪಗುಣವೆಂದು ಹೇಳಲು ಯಾವ ಅಡ್ಡಿಯೂ ಇರುವುದಿಲ್ಲ. ಯಾವುದು ಯಾವ ವಸ್ತುವಿಗೆ ನಿತ್ಯಾಶ್ರಿತ ಸ್ವಭಾವವಾಗಿರುವುದೋ ಅದು ಆ ವಸ್ತುವಿಗೆ 'ಗುಣ' ಎಂದಲ್ಲವೇ ಗುಣಲಕ್ಷಣವಿರುವುದು? ಈ ಪ್ರಭೆಯಲ್ಲಿ ಅದು ಇರುವುದರಿಂದ ದೀಪಗುಣ ಎಂದು ಹೇಳಬಹುದು

ಪ್ರಶ್ನೆ—ಜ್ಞಾನವು ಅಜಡವಾಗಿ ಸ್ವಯಂಪ್ರಕಾಶವಾಗಿರುವುದಾದರೆ ಯಾವಾಗಲೂ ಪ್ರಕಾಶಿಸಬೇಕಲ್ಲವೇ? ಗಾಢನಿದ್ರೆ, ಮೂರ್ಛೆ ಮುಂತಾದ ಅವಸ್ಥೆಗಳಲ್ಲಿ ಏಕೆ ಪ್ರಕಾಶವಾಗುವುದಿಲ್ಲ ?

ಉತ್ತರ—ಆಗಲೂ ಜ್ಞಾನವು ಇದ್ದೇ ಇರುವುದು; ಆಗ ಜ್ಞಾನಕ್ಕೆ ಪ್ರಸರಣವಿಲ್ಲವಾದುದರಿಂದ ತೋರುವುದಿಲ್ಲವೇ ಹೊರತು ಜ್ಞಾನವೇ ಇಲ್ಲವೆಂದಲ್ಲ: ಎಂದರೆ, ಜ್ಞಾನವು ಸ್ವಾಶ್ರಯಕ್ಕೆ ತಾನಾಗಿ ತೋರುವುದು ವಿಷಯಗ್ರಹಣ ವೇಳೆಯಲ್ಲಿಯಲ್ಲವೇ? ಗಾಢನಿದ್ರಾದಿಗಳಾದ ಅವಸ್ಥೆಗಳಲ್ಲಿ ತಮೋಗುಣದಿಂದ

ಮುಚ್ಚಲ್ಪಟ್ಟು ಸಂಕುಚಿತವಾಗಿ ಮಾಣಿಕ್ಯರತ್ನದ ಮಣಿಯ, ಪ್ರಕಾಶದಂತೆ ಮರೆಸಲ್ಪಟ್ಟಿರುವುದರಿಂದ ಪ್ರಸರಣವಿಲ್ಲವಾಗಿ ಪ್ರಕಾಶವಾಗಲಿಲ್ಲ.

ಜ್ಞಾನವು ಆತ್ಮಸ್ವರೂಪದಹಾಗೆಯೇ ತಾನೂ ಆನಂದರೂಪವಾಗಿಯೇ ಇರುವುದು: ಎಂದರೆ—ಜ್ಞಾನವು ಸ್ವಾಶ್ರಯವಾದ ಆತ್ಮನಿಗೆ ವಿಷಯಗಳನ್ನು ತೋರಿಸುವಾಗ ಆ ಆ ವಿಷಯಗಳೆಲ್ಲವೂ ಅನುಕೂಲವಾಗಿಯೇ ತೋರುವುದರಿಂದ ಅವುಗಳನ್ನು ಗ್ರಹಿಸುವ ಜ್ಞಾನವೂ ಆತ್ಮನಿಗೆ ಸುಖರೂಪವಾಗಿಯೇ ಇರುವುದು.

ಪ್ರಶ್ನೆ—ಹಾಗಾದರೆ ವಿಷ ಶಸ್ತ್ರಾದಿಗಳನ್ನು ಕಂಡರೆ ಭಯವೂ ಪ್ರಾತಿಕೂಲ್ಯ ಬುದ್ಧಿಯೂ ಸರ್ವರಿಗೂ ಉಂಟಾಗುವುದು ಅನುಭವಸಿದ್ಧವಾಗಿಯೇ ಇದೆಯಲ್ಲವೇ? ಆ ವಿಷ ಶಸ್ತ್ರಾದಿಗಳನ್ನು ಗ್ರಹಿಸುವ ಆ ಜ್ಞಾನವು ಪ್ರತಿಕೂಲವಾಗಿ ತೋರಲು ಕಾರಣವೇನು ?

ಉತ್ತರ—ಆ ವಿಷ ಶಸ್ತ್ರಾದಿಗಳನ್ನು ಗ್ರಹಿಸಿದ ಜ್ಞಾನವು ದುಃಖರೂಪವಾಗಿರುವುದಕ್ಕೆ ಆ ವಿಷ ಶಸ್ತ್ರಾದಿಗಳಲ್ಲಿ ಬಾಧಕತ್ವಬುದ್ಧಿಗೆ ಮೂಲವಾದ ನಮ್ಮ ದೇಹಾತ್ಮಭ್ರಾಂತಿಯೂ, ಕರ್ಮವೂ ಆ ಆ ಪದಾರ್ಥಗಳಲ್ಲಿ ಈಶ್ವರಾತ್ಮಕವೆಂಬ ಜ್ಞಾನವಿಲ್ಲದಿರುವುದೂ ಕಾರಣವಾಗಿವೆ.

'ಜಗತ್ಸರ್ವಂ ಶರೀರಂತೇ',, 'ತಾನಿ ಸರ್ವಾಣಿ ತದ್ವಪುಃ', 'ತತ್ಸರ್ವಂ ವೈ ಹರೇಸ್ತನುಃ' ಎಂದರೆ ಸಕಲ ಪದಾರ್ಥಗಳೂ ಭಗವಂತನ ಶರೀರವಾಗಿವೆ ಎಂದು ವೇದಾಂತಶಾಸ್ತ್ರಗಳಲ್ಲಿ ಹೇಳಿರುವುದಲ್ಲವೇ ? ಆ ರೀತಿಯಾಗಿ ಆಚಾರ್ಯೋಪದೇಶಗಳಿಂದಲೂ ಮನನದಿಂದಲೂ ಈ ಪ್ರಪಂಚವೆಲ್ಲವನ್ನೂ ಭಗವದಾತ್ಮಕವಾಗಿ ಭಾವಿಸಿ ಹಾಗೆ ನೋಡುವವನಿಗೆ ಸಕಲವೂ ಅನುಕೂಲವಾಗಿಯೇ ತೋರುವುದು. ವಿಷ ಶಸ್ತ್ರಾದಿಗಳು ಪ್ರತಿಕೂಲವಾಗಿಯೂ ಚಂದನ ಕುಸುಮಾದಿಗಳು ಅನುಕೂಲವಾಗಿಯೂ ತೋರುವುದು ದೇಹಾತ್ಮಭ್ರಮದಿಂದುಂಟಾದುದು; ಭಗವದಾತ್ಮಕವಾಗಿರುವುದೆಂದು ತಿಳಿದುಕೊಂಡರೆ ಆ ಆಕಾರದಿಂದ ನೋಡುವಾಗ ಸರ್ವ ವಿಷಯಗ್ರಹಣದಲ್ಲಿಯೂ ಜ್ಞಾನವು ಆನಂದರೂಪವಾಗಿಯೇ ಇರುವುದು.

ಆತ್ಮಲಕ್ಷಣಗಳಲ್ಲಿ ಚೇತನ, ಜ್ಞಾತೃ ಎಂಬುದರಲ್ಲಿ ಸೇರಿದ ಜ್ಞಾನದ ಸ್ವರೂಪವನ್ನು ಪ್ರಸಂಗದಿಂದ ಇಲ್ಲಿಯವರೆಗೂ ವಿವರಿಸಿದುದಾಯಿತು. ಇದೇ ಧರ್ಮಭೂತ ಜ್ಞಾನದ ವಿವರಣೆ ಎಂದು ತಿಳಿಯಬೇಕು.

ಅಣುವಾಗಿ ಚೇತನನಾಗಿರುವವನು, ಎಂಬ ಲಕ್ಷಣದಂತೆಯೇ ಆಧೇಯನಾಗಿ ಚೇತನನು, ವಿಧೇಯನಾಗಿ ಚೇತನನು, ಪರತಂತ್ರನಾಗಿ ಚೇತನನು ಇತ್ಯಾದಿಯಾಗಿ

ಜೀವಾತ್ಮನಿಗೆ ಅನೇಕ ಲಕ್ಷಣಗಳನ್ನು ಹೇಳಲೂ ಬಹುದು. ಅಚಿತ್ತು, ಈಶ್ವರ ಇವರಿಬ್ಬರನ್ನೂ ಬೇರ್ಪಡಿಸುವ ಪದಗಳನ್ನು ಸೇರಿಸಿ ಎಷ್ಟು ಲಕ್ಷಣಗಳನ್ನು ಹೇಳಿದರೂ ಸಂಗತವಾಗಿಯೇ ಆಗುವದು.

ಜೀವಾತ್ಮ ವಿಭಾಗ

ಜೀವಾತ್ಮರು—ಬದ್ಧ, ಕೇವಲ, ಮುಮುಕ್ಷು, ಮುಕ್ತ, ನಿತ್ಯ ಎಂದು ಐದು ವಿಧವಾಗಿ ಇರುವರು. ಇವರಲ್ಲಿ ಬದ್ಧರು—ಮೇಲೆಹೇಳಿದ ಸಂಸಾರಿಗಳು. ಕೇವಲರು—ಈಸಂಸಾರದಲ್ಲಿ ಜಿಹಾಸೆಪಟ್ಟು ಆತ್ಮಾನುಭವದಲ್ಲಿ ತೃಪ್ತರಾಗಿರುವವರು. ಮುಮುಕ್ಷುಗಳು—ಮೋಕ್ಷಪಡೆಯಬೇಕೆಂದು ಇಚ್ಛೆಯುಳ್ಳವರು. ಮುಕ್ತರು—ಈ ಸಂಸಾರ ಸಂಬಂಧವನ್ನು ಕಳೆದುಕೊಂಡು ಮೋಕ್ಷಾನಂದವನ್ನು ಪಡೆದವರು. ನಿತ್ಯರು—ಯಾವ ಕಾಲದಲ್ಲಿಯೂ ಸಂಸಾರಕ್ಕೆ ಒಳಗಾಗದೆ ಪರಮಪದದಲ್ಲಿಯೇ ಇದ್ದುಕೊಂಡು ಭಗವದನುಭವ ಕೈಂಕರ್ಯಾದಿಗಳನ್ನು ಮಾಡುತ್ತಿರುವವರು.

ಇಲ್ಲಿ ಇನ್ನೂ ಹೇಳಬೇಕಾದ ವಿಷಯಗಳನ್ನು ಅರ್ಥಪಂಚಕ ಪರಿಚ್ಛೇದದ ಸ್ವಸ್ವರೂಪ ಪ್ರಕರಣದಲ್ಲಿ ವಿಶದಪಡಿಸುತ್ತೇವೆ.

ಹೀಗೆ ಚಿದಚಿದೀಶ್ವರ ಎಂಬ ಮೂರು ತತ್ತ್ವಗಳೊಳಗೆ ಚಿತ್ ಎಂಬ ಜೀವ ಸ್ವರೂಪವನ್ನು ನಿರೂಪಿಸಿದೆವು.

ವಿಶಿಷ್ಟಾದ್ವೈತ ದೀಪಿಕೆಯ ಪ್ರಮೇಯಪ್ರಕಾಶದಲ್ಲಿ ಚಿತ್ಪರಿಚ್ಛೇದವು ಸಂಪೂರ್ಣವಾಯಿತು.

II ಪ್ರ ಮೇ ಯ ಪ್ರ ಕಾ ಶ

ii ಅಚಿತ್ಪರಿಚ್ಛೇದ

೨೯. ಅಚಿತ್—ಎಂದರೆ ಚೇತನವಲ್ಲದ ವಸ್ತು, ಚೈತನ್ಯವಿಲ್ಲದ ವಸ್ತು. ಜ್ಞಾನಶೂನ್ಯವಾಗಿ ವಿಕಾರಾಸ್ಪದವಾಗಿರುವುದು ಎಂದು ಇದರ ಲಕ್ಷಣ.

ವಿಕಾರ ಎಂದರೆ ಮತ್ತೊಂದು ಅವಸ್ಥೆಯನ್ನು ಪಡೆವುದು. ಚೇತನರಾದ ಜೀವಾತ್ಮರುಗಳೂ ಈಶ್ವರನೂ ಸರ್ವದಾ ಏಕರೂಪರಾಗಿ ಜ್ಞಾನೈಕಾಕಾರರಾಗಿ ಇರುವರು. ಅಚಿತ್ತು ಹಾಗೆ ಇರದೆ ಹಿಂದೆ ತಾನು ಇದ್ದ ಸ್ಥಿತಿಯನ್ನು ಈಗ ಬಿಟ್ಟೂ ಈಗ ಇರುವ ಸ್ಥಿತಿಯನ್ನು ಮುಂದೆ ಬಿಡುತ್ತಲೂ ಬೇರೆ ಬೇರೆ ಅವಸ್ಥೆಗಳನ್ನು ಪಡೆಯುತ್ತಲೇ ಇರುವುದು ಸಮಸ್ತವಿಧವಾದ ಅಚಿತ್ತುಗಳಲ್ಲಿಯೂ ಹೀಗೆ ಯಾವುದಾದರೂ ಒಂದು ವಿಕಾರವು ಇದ್ದೇ ಇರುವುದರಿಂದಲೂ ಜ್ಞಾನವಿಲ್ಲದೆ ಇರುವುದರಿಂದಲೂ ಮೇಲೆಹೇಳಿದ ಲಕ್ಷಣವು ಸಮನ್ವಯವಾಯಿತು.

ಅಚಿತ್ತಿನ ವಿಭಾಗ

೩೦. ಅಚಿತ್ತು—ಮಿಶ್ರಸತ್ತ್ವ, ಸತ್ತ್ವಶೂನ್ಯ, ಶುದ್ಧಸತ್ತ್ವ ಎಂದು ಮೂರು ತೆರನಾಗಿರುವುದು.

ಮಿಶ್ರಸತ್ತ್ವ—ಈ ಲೀಲಾವಿಭೂತಿ (ಪ್ರಪಂಚ) ಯಲ್ಲಿರುವ ಅಚೇತನ ದ್ರವ್ಯವೆಲ್ಲವೂ ಮಿಶ್ರಸತ್ತ್ವವೆನಿಸುವುದು. ಸತ್ತ್ವಶೂನ್ಯವು ಕಾಲ. ಶುದ್ಧಸತ್ತ್ವ—ವೈಕುಂಠವೆಂಬ ಅಪ್ರಾಕೃತ ದಿವ್ಯಲೋಕ (ನಿತ್ಯವಿಭೂತಿ) ದಲ್ಲಿರುವ ಅಚೇತನ ವಸ್ತುಗಳು.

ಇವುಗಳಲ್ಲಿ ಈ ಲೀಲಾವಿಭೂತಿಯಲ್ಲಿರುವ ಅಚೇತನ ದ್ರವ್ಯವಾದ ಪ್ರಕೃತಿ ಎಂಬುದು ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳುಳ್ಳದಾದುದರಿಂದ ತ್ರಿಗುಣವೆನಿಸಿರುವುದು ಇಂಥ ತ್ರಿಗುಣವೆಂಬ ಪ್ರಕೃತಿಯ ಲಕ್ಷಣ, ಸ್ವರೂಪ, ಸ್ವಭಾವ, ಪರಿಣಾಮ ಮುಂತಾದುವುಗಳನ್ನು ಮೊದಲು ವಿಶದವಾಗಿ ನಿರೂಪಿಸಿ ತೋರಿಸುವೆವು.

೩೧. ಪ್ರಕೃತಿಯ ಲಕ್ಷಣ

ಈ ಪ್ರಕೃತಿಗೆ—ಕಾಲಭಿನ್ನವಾದ ಜಡದ್ರವ್ಯ ಎಂದೂ, ರಜೋಗುಣವುಳ್ಳ ದ್ರವ್ಯ ಎಂದೂ, ತಮೋಗುಣವುಳ್ಳ ದ್ರವ್ಯ ಎಂದೂ ಮೂರುವಿಧವಾದ ಲಕ್ಷಣ

ಗಳನ್ನು ಹೇಳಬಹುದು. ಸತ್ತ್ವಗುಣವುಳ್ಳ ದ್ರವ್ಯ ಎಂದು ಮಾತ್ರ ಹೇಳಬಾರದು. ಏತಕ್ಕೆಂದರೆ, ಸತ್ತ್ವಗುಣವು ನಿತ್ಯವಿಭೂತಿಯಲ್ಲಿಯೂ ಇದೆಯಾಗಿ ಅತಿವ್ಯಾಪ್ತಿ ದೋಷವುಂಟಾಗುವುದು. ಆದುದರಿಂದ ಅದು ಲಕ್ಷಣವಾಗಲಾರದು.

ಲೋಕದಲ್ಲಿ ಲಕ್ಷಣ ಪ್ರಮಾಣಗಳೆರಡರಿಂದಲೂ ಅಲ್ಲವೇ ವಸ್ತುಸಿದ್ಧಿಯಾಗುವುದು. ಈಗ ಪ್ರಕೃತಿಗೆ ಲಕ್ಷಣವನ್ನು ಹೇಳಿ ಆಯಿತು. ಪ್ರಮಾಣವೇನೆಂದರೆ, ಲೋಕದಲ್ಲಿ ಇಂದ್ರಿಯಗಳಿಗೆ ಗೋಚರವಾಗುವ ಭೂಮಿ, ಸಮುದ್ರ, ಬೆಟ್ಟ, ನದಿ ಮುಂತಾದ ತ್ರಿಗುಣದ್ರವ್ಯಗಳಲ್ಲಿ ಆ ಆ ಇಂದ್ರಿಯಾದಿಗಳೇ ಪ್ರಮಾಣಗಳಾಗಿರುವುವು. ಕಣ್ಣಿಗೆ ಕಾಣಿಸದ ಮಹತ್ತತ್ತ್ವ, ಅಹಂಕಾರ, ಪಂಚತನ್ಮಾತ್ರಗಳು ಮುಂತಾದ ತ್ರಿಗುಣದ್ರವ್ಯಗಳಲ್ಲಿ ವೇದಶಾಸ್ತ್ರಗಳೇ ಪ್ರಮಾಣಗಳಾಗಿರುವುವು.

ಈ ಪ್ರಕೃತಿ ಎಂಬ ಅಚಿತ್ತು ಸಕಲ ಬ್ರಹ್ಮಾಂಡಗಳಲ್ಲಿಯೂ ಇರುವ ನಾನಾ ವಿಧವಾದ ಸಕಲ ಪದಾರ್ಥಗಳಾಗಿ ಪರಿಣಮಿಸತಕ್ಕುದಾಗಿಯೂ, ದೇಹೇಂದ್ರಿಯಾದಿಗಳಾಗಿ ಪರಿಣಮಿಸಿದಾಗ ಸಕಲ ಬದ್ಧಚೇತನರ ಜ್ಞಾನಾನಂದಾದಿಗಳನ್ನು ಮರೆಯಿಸಿ ಅಜ್ಞಾನಾನ್ಯಥಾಜ್ಞಾನಗಳನ್ನೂ ದೇಹಾತ್ಮ ಭ್ರಮಾದಿಗಳನ್ನೂ ಉಂಟುಮಾಡತಕ್ಕುದಾಗಿಯೂ, ಹೆಚ್ಚುಕಡಮೆಯಿಲ್ಲದೆ ಸಮಾನವಾದ ಸತ್ತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳುಳ್ಳದಾಗಿಯೂ, ತನ್ನೊಳಗೆ ಅಂಶಭೇದದಿಂದಲೂ ಕಾಲಭೇದದಿಂದಲೂ ಅನೇಕ ವಿಕಾರಗಳನ್ನುಂಟುಮಾಡತಕ್ಕುದಾಗಿಯೂ ನಿತ್ಯವಾಗಿಯೂ ಭಗವಂತನಿಗೆ ಕ್ರೀಡಾಪರಿಕರವಾಗಿಯೂ ಇರುವುದು. ಇದಕ್ಕೆ ಪ್ರಕೃತಿ, ಅವಿದ್ಯೆ, ಮಾಯೆ, ತಮಸ್ಸು, ಅಸತ್ತು, ಮೂಲಪ್ರಕೃತಿ, ಅವ್ಯಾಕೃತ, ಮೃತ್ಯು ಎಂಬ ನಾನಾವಿಧವಾದ ಹೆಸರುಗಳು ಇರುವುವು.

ಪ್ರಕೃತಿಗೆ ಈ ಹೆಸರುಗಳು ಬರಲು ಕಾರಣವೇನೆಂದರೆ—

ಪ್ರಕೃತಿ ಅಥವಾ ಮೂಲಪ್ರಕೃತಿ—ಪ್ರಪಂಚದಲ್ಲಿರುವ ನಾನಾವಿಧವಾದ ಕಾರ್ಯವಸ್ತು (ಹುಟ್ಟುವ ವಸ್ತು) ಗಳನ್ನು ಉಂಟುಮಾಡುವುದರಿಂದ ಕಾರಣ ಎಂಬ ಅರ್ಥವುಳ್ಳ ಪ್ರಕೃತಿ ಎಂಬ ಹೆಸರು ಬಂದಿದೆ. ಈಶ್ವರನು ಸ್ವಸಂಕಲ್ಪದಿಂದ ಈ ಪ್ರಕೃತಿಯ ಮೂಲಕವಾಗಿ ಪ್ರಪಂಚವನ್ನು ಉಂಟುಮಾಡುವನೆಂಬ ಅರ್ಥವನ್ನು 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್' ಎಂದು ಶ್ರುತಿಯೇ ವಿಶದೀಕರಿಸಿರುವುದು.

ಅವಿದ್ಯೆ—(ವಿದ್ಯಾವಿರೋಧಿ) ಚೇತನರಿಗೆ ಸಹಜವಾದ ಜ್ಞಾನಾನಂದಾದಿಗಳನ್ನು ಮರೆಯಿಸಿ ಜ್ಞಾನಸಂಕೋಚವನ್ನೂ ಅಜ್ಞಾನ ವಿಪರೀತಜ್ಞಾನಾದಿಗಳನ್ನೂ ಉಂಟುಮಾಡುವುದರಿಂದ ಈ ಹೆಸರು ಬಂದಿದೆ. ಅಜ್ಞಾನವೆಂದರೆ ಜ್ಞಾನವೇ ಇಲ್ಲದಿರುವಿಕೆ; ವಿಪರೀತಜ್ಞಾನವೆಂದರೆ (ಅತಸ್ಮಿನ್ ತದ್ಬುದ್ಧಿಃ) ಆತ್ಮನಲ್ಲದ ಈ ದೇಹದಲ್ಲಿ 'ದೇಹವೇ ಆತ್ಮ' ಎಂಬ ಆತ್ಮಬುದ್ಧಿಯೂ, ಸ್ವತಂತ್ರವಲ್ಲದ ಆತ್ಮವಸ್ತುವಿ

ನಲ್ಲಿ ಸ್ವಾತಂತ್ರ್ಯ ಬುದ್ಧಿಯೂ, ಭಗವದೇಕಶೇಷನಾದ ದೇವತಾಂತರಶೇಷನಲ್ಲದ ಆತ್ಮನಲ್ಲಿ ದೇವತಾಂತರ ಶೇಷತ್ವಬುದ್ಧಿಯೂ, ಸರ್ವೇಶ್ವರರಲ್ಲದ ಬ್ರಹ್ಮ ಶಿವೇಂದ್ರಾದಿ ದೇವತಾಂತರಗಳಲ್ಲಿ ಸರ್ವೇಶ್ವರನೆಂಬ ಬುದ್ಧಿಯೂ, ಪರಮಪುರುಷಾರ್ಥವಲ್ಲದ ಐಶ್ವರ್ಯಾದಿಗಳಲ್ಲಿ ಪುರುಷಾರ್ಥಬುದ್ಧಿಯೂ, ಪುರುಷಾರ್ಥಸಿದ್ಧಿಗೆ ಉಪಾಯಗಳಲ್ಲದ ಪ್ರವರ್ತನೆಗಳಲ್ಲಿ ಉಪಾಯತ್ವಬುದ್ಧಿಯೂ – ಇವು ಮುಂತಾದುವುಗಳು. ಇಂಥ ಅಜ್ಞಾನ ವಿಪರೀತಜ್ಞಾನಾದಿಗಳನ್ನು ಉಂಟುಮಾಡಿ ಆತ್ಮಜ್ಞಾನವನ್ನು ಮರೆಸು ವುದರಿಂದ ಅವಿದ್ಯೆ ಎನಿಸಿಕೊಂಡಿರುವುದು.

ಮಾಯೆ—ಈ ತ್ರಿಗುಣವೆಂಬ ಪ್ರಕೃತಿಯೇ ಆಶ್ಚರ್ಯಕರವಾದ ನಾನಾವಿಧ ವಿಚಿತ್ರ ಸೃಷ್ಟಿಯನ್ನು ಮಾಡುವುದರಿಂದ ಮಾಯೆಯೆಂದೂ ಹೇಳಿಸಿಕೊಂಡಿದೆ.

ಆದುದರಿಂದ ಪ್ರಪಂಚವು ಅವಿದ್ಯಾಜನ್ಯ, ಮಾಯಾಜನ್ಯ ಎಂಬ ಮಾತು ಗಳಿಗೆಲ್ಲಾ 'ವಿದ್ಯಾವಿರೋಧಿಯಾದ ವಿಚಿತ್ರಕಾರ್ಯಕರವಾದ ಅಚೇತನವಾದ ಪ್ರಕೃತಿ ಯೆಂಬ ತ್ರಿಗುಣದ್ರವ್ಯದಿಂದ ಹುಟ್ಟಿದುದು'* ಎಂದೇ ಅರ್ಥ. ಈ ಅಭಿಪ್ರಾಯವೇ ಲೋಕ, ವೇದ, ಯುಕ್ತಿ, ನ್ಯಾಯ ಇವಕ್ಕೆ ಸಮ್ಮತವಾಗಿರುವುದು.

ಈ ಪ್ರಕೃತಿ ತನ್ನ ಸುತ್ತಲೂ ಎಂಟು ದಿಕ್ಕುಗಳಲ್ಲಿಯೂ ಕೆಳಗಡೆಯಲ್ಲಿಯೂ ಎಲ್ಲೆಯಿಲ್ಲದೆ ವ್ಯಾಪಿಸಿ ಅನಂತವಾಗಿರುವುದು; ತನ್ನ ಮೇಲುಭಾಗದಲ್ಲಿ ಮಾತ್ರ ನಿತ್ಯವಿಭೂತಿಯ ಶುದ್ಧಸತ್ತ್ವ ದ್ರವ್ಯದಿಂದ ಪರಿಚ್ಛೇದಿಸಲ್ಪಟ್ಟು ಎಲ್ಲೆಯುಳ್ಳು ದಾಗಿರುವುದು.

೩೨. ಈ ಪ್ರಕೃತಿಗೆ ಇಪ್ಪತ್ತುನಾಲ್ಕು ತತ್ತ್ವರೂಪವಾಗಿ ಪರಿಣಾಮ.

ಈ ರೀತಿಯಾದ ಪ್ರಕೃತಿ, ಕಾರ್ಯಕಾರಣರೂಪದಿಂದ ಉತ್ತರೋತ್ತರಾವಸ್ಥಾ ಭೇದಗಳಿಂದ ಇಪ್ಪತ್ತುನಾಲ್ಕು ತತ್ತ್ವಗಳಾಗಿ ಪರಿಣಮಿಸುವುದು. ಅವು ಯಾವು

* ಇಲ್ಲಿ ಸರ್ವೇಶ್ವರಾಧಿಷ್ಠಿತವಾದ ಪ್ರಕೃತಿಯಿಂದ ಈ ಪ್ರಪಂಚವೆಲ್ಲವೂ ಹುಟ್ಟಿದುದು, ಎಂಬ ಅರ್ಥವನ್ನು ಹೇಳತೊಡಗಿದ ಕೆಲವು ಉಪನಿಷದ್ವಾಕ್ಯಗಳಲ್ಲಿ ಪ್ರಕೃತಿಶಬ್ದಕ್ಕೆ ಪ್ರತಿಯಾಗಿ ಅದರ ಪರ್ಯಾಯಗಳಾದ ಅವಿದ್ಯಾ, ಮಾಯಾ, ತಮಸ್ಸು, ಅಸತ್ತು ಮುಂತಾದ ಶಬ್ದಗಳು ಇರುವು ವನ್ನು ನೋಡಿ ಕೆಲವರು ವಾದಿಗಳು ಅನೇಕವಿಧವಾದ ಅಪಾರ್ಥಗಳನ್ನು ಮಾಡಿಕೊಂಡು ಮೋಸ ಹೋಗಿರುವರು. ಎಂತೆಂದರೆ—

ಅವಿದ್ಯಾ ಎಂಬುದು ಸತ್ತೂ ಅಲ್ಲದ ಅಸತ್ತೂ ಅಲ್ಲದ ಅನಿರ್ವಚನೀಯವಾದ ಒಂದುವಿಧ ಅಜ್ಞಾನ ಎಂದೂ, ಅದರಿಂದ ಪರಬ್ರಹ್ಮನೇ ಭ್ರಮಿಸಿ ಸಂಸಾರವನ್ನು ಹೊಂದುವನು ಎಂದೂ, ಅದರಿಂದಲೇ ಪ್ರಪಂಚವು ಹುಟ್ಟಿತು ಎಂದೂ ಕೆಲವರು ಹೇಳುವರು.

ಮಾಯಾ ಎಂಬುದು ಮಿಥ್ಯಾವಸ್ತುವನ್ನು ಹೇಳುವುದೆಂದೂ ಇದರಿಂದ ಪ್ರಪಂಚವೆಲ್ಲವೂ ಸುಳ್ಳು ಎಂದೂ ಮತ್ತೆ ಕೆಲವರು ಹೇಳುವರು. ಇವೆಲ್ಲಾ ವೇದಶಾಸ್ತ್ರ ನ್ಯಾಯವಿರುದ್ಧ ಎಂಬುದನ್ನು ಸಮನ್ವಯಪ್ರಕರಣದಲ್ಲಿ ಹೇಳುವೆವು.

ವೆಂದರೆ— ಮೂಲಪ್ರಕೃತಿ, ಮಹಾನ್, ಅಹಂಕಾರ, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು, ಐದು ತನ್ಮಾತ್ರೆಗಳು, ಐದು ಭೂತಗಳು ಇವೆಲ್ಲವೂ ಪ್ರಕೃತಿಯಿಂದ ಹುಟ್ಟಿದುವಾದುದರಿಂದ ಪ್ರಾಕೃತಗಳು ಎನಿಸುವುವು.

೩೩. ಈ ಉದ್ದೇಶಕ್ರಮಾನುಸಾರವಾಗಿ ತತ್ತ್ವಗಳನ್ನು ವಿವರಿಸುತ್ತೇವೆ—

(೧) ಅವುಗಳಲ್ಲಿ ಮೊದಲನೆಯ ತತ್ತ್ವವೇ ಮೂಲಪ್ರಕೃತಿ. ಗುಣತ್ರಯ ಸಾಮ್ಯಾವಸ್ಥೆಯುಳ್ಳ ದ್ರವ್ಯ ಎಂದರೆ ಹೆಚ್ಚುಕಡಮೆಯಾಗದಂತೆ ಸಮಾನವಾದ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರುಗುಣಗಳುಳ್ಳ ದ್ರವ್ಯ ಎಂಬುದೇ ಅದರ ಲಕ್ಷಣ. ಈ ಮೂರು ಗುಣಗಳು ಮೂಲಪ್ರಕೃತಿಗೆ ಸ್ವರೂಪದೊಳಗಡಗಿದ ಸ್ವಭಾವವಾಗಿಯೂ, ಪ್ರಕೃತಿತ್ವಾವಸ್ಥೆಯಲ್ಲಿ ಅನುದ್ಭೂತ (ಅವ್ಯಕ್ತ) ವಾಗಿಯೂ, ವಿಕಾರದಶೆಯಲ್ಲಿ ಉದ್ಭೂತ (ವ್ಯಕ್ತ) ವಾಗಿಯೂ ಇರುವುವು. ಈ ಸ್ಥಿತಿಯಲ್ಲಿ ಈ ಪ್ರಕೃತಿಯನ್ನು ಅಲೆಯಿಲ್ಲದೆ ಸ್ತಬ್ಧವಾದ ಸಮುದ್ರದಂತೆಯೂ, ಸೃಷ್ಟ್ಯುನ್ಮುಖವಾದ ಭಗವತ್ಸಂಕಲ್ಪದಿಂದ ಪ್ರಕೃತಿಯಲ್ಲಿ ಗುಣವೈಷಮ್ಯ ಬಂದರೆ ಆ ಸ್ಥಿತಿಯನ್ನು ಗಾಳಿಯ ಹೊಡೆತದಿಂದ ಎಲ್ಲಿಯೋ ಮಧ್ಯದಲ್ಲಿ ಸ್ವಲ್ಪಮಾತ್ರವೇ ಚಲನೆಹೊಂದಿದ ಸಮುದ್ರದಂತೆಯೂ, ಆಗ ಪ್ರಕೃತಿಯಿಂದ ಹುಟ್ಟಿದ ಮಹತ್ತತ್ತ್ವವನ್ನು ಸಮುದ್ರ ಮಧ್ಯದಲ್ಲಿ ಹುಟ್ಟಿದ ದೊಡ್ಡ ಅಲೆಯಂತೆಯೂ, ಆ ಮಹತ್ತತ್ತ್ವದಿಂದ ಮುಂದೆ ಮುಂದೆ ಹುಟ್ಟಿದ ಅಹಂಕಾರಾದಿ ಪೃಥಿವ್ಯಂತ ತತ್ತ್ವಗಳನ್ನು ಆ ಅಲೆಯಿಂದ ಹುಟ್ಟಿದ ಮುಂದುಮುಂದಣ ದೊಡ್ಡ ಚಿಕ್ಕ ಅಲೆಗಳಂತೆಯೂ, ಈ ಅಲೆಗಳೆಲ್ಲಾ ಜಲಮಯ ವಾಗಿರುವಂತೆಯೇ ಮುಂದೆ ಮುಂದೆ ಹುಟ್ಟಿದ ಮಹದಾದಿ ಪೃಥಿವ್ಯಂತ ತತ್ತ್ವ ಗಳೆಲ್ಲವೂ ಪ್ರಕೃತಿವಿಕಾರವೇ ಎಂದೂ ಭಾವಿಸಬೇಕು.

(೨) ಗುಣಗಳು ಉದ್ರೇಕವನ್ನು ಹೊಂದಿ ಈ ಪ್ರಕೃತಿ ಗುಣ ವೈಷಮ್ಯವನ್ನು ಪಡೆದಾಗ ಹುಟ್ಟಿದ ಮೊದಲನೆಯ ವಿಕಾರವೇ ಮಹತ್ತತ್ತ್ವವು. ಇದು ಅವ್ಯಕ್ತದಲ್ಲಿ ವ್ಯಕ್ತಗುಣೋನ್ಮೇಷಕ್ಕೆ ಹೇತುವಾದುದರಿಂದ ಗುಣವ್ಯಂಜನ ಎಂಬ ಹೆಸರನ್ನೂ ಜೀವಾತ್ಮರುಗಳಿಗೆ ಮನಸ್ಸು ಅಧ್ಯವಸಾಯ (ನಿಶ್ಚಯ) ಹೇತುವಾಗುವಾಗ ಸಹಕಾರಿಯಾಗಿರುವುದರಿಂದ ಬುದ್ಧಿತತ್ತ್ವ ಎಂಬ ಹೆಸರನ್ನೂ ಪಡೆದಿರುತ್ತದೆ.

ಈ ಮಹತ್ತತ್ತ್ವವು ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರುವಿಧವಾಗಿ ರುವುದು. ಈ ಮಹತ್ತತ್ತ್ವದ ಯಾವಭಾಗದಲ್ಲಿ ಸತ್ತ್ವಗುಣೋದ್ರೇಕವಿರುವುದೋ ಆ ಭಾಗವು ಸಾತ್ತ್ವಿಕ ಎಂದೂ, ಯಾವಭಾಗದಲ್ಲಿ ರಜೋಗುಣೋದ್ರೇಕವಿರುವುದೋ ಆ ಭಾಗವು ರಾಜಸ ಎಂದೂ, ಯಾವಭಾಗದಲ್ಲಿ ತಮೋಗುಣೋದ್ರೇಕವಿರುವುದೋ ಆ ಭಾಗವು ತಾಮಸ ಎಂದೂ ಹೇಳಲ್ಪಡುವುದು.

(೩) ಈ ಮಹತ್ತತ್ತ್ವದಿಂದ ಅಹಂಕಾರತತ್ತ್ವವು* ಹುಟ್ಟುವುದು; ಇದು ಅಭಿಮಾನಹೇತುವಾಗಿರುವುದು. ಅಹಂಕಾರತತ್ತ್ವವೂ ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರುವಿಧವಾಗಿರುವುದು.

ಇದರಲ್ಲಿ ಸಾತ್ತ್ವಿಕಾಹಂಕಾರಕ್ಕೆ ವೈಕಾರಿಕ"ಎಂದೂ, ರಾಜಸಾಹಂಕಾರಕ್ಕೆ ತೈಜಸ ಎಂದೂ ತಾಮಸಾಹಂಕಾರಕ್ಕೆ ಭೂತಾದಿ ಎಂದೂ ಬೇರೆ ಹೆಸರೂ ಉಂಟು.

ಸಾತ್ತ್ವಿಕಾಹಂಕಾರದಿಂದ ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು, ಮನಸ್ಸು ಹೀಗೆ ಹನ್ನೊಂದು ಇಂದ್ರಿಯಗಳು ಹುಟ್ಟುವುವು. ಭೂತಾದಿ ಎಂಬ ತಾಮಸಾಹಂಕಾರದಿಂದ ಶಬ್ದಾದಿ ಪಂಚತನ್ಮಾತ್ರೆಗಳೂ ಆಕಾಶಾದಿ ಪಂಚಭೂತಗಳೂ ಹುಟ್ಟುವುವು. ಸಾತ್ತ್ವಿಕ ತಾಮಸಾಹಂಕಾರಗಳು ತಮ್ಮ ತಮ್ಮ ಕಾರ್ಯೋತ್ಪತ್ತಿ ಮಾಡುವಾಗ ರಾಜಸಾಹಂಕಾರವು ಇವೆರಡಕ್ಕೂ ಸಹಕಾರಿಯಾಗಿರುವುದು.

೩೪. ಇಂದ್ರಿಯ ಸಾಮಾನ್ಯಲಕ್ಷಣ †

ಶಬ್ದಾಶ್ರಯವಾದ ಶರೀರಪ್ರಾಣಗಳಿಗಿಂತ ಅನ್ಯವಾಗಿ, ಆತ್ಮಪ್ರಯತ್ನ ಜನ್ಯವಾದ ವ್ಯಾಪಾರವುಳ್ಳುದಾಗಿ, ಜೀವಾತ್ಮೋಪಕರಣವಾದ ದ್ರವ್ಯವು ಇಂದ್ರಿಯವೆನಿಸುವುದು. ಇದು ಕಣ್ಣು ಮುಂತಾದ ಜ್ಞಾನೇಂದ್ರಿಯಗಳಲ್ಲಿಯೂ ವಾಣಿ ಮುಂತಾದ ಕರ್ಮೇಂದ್ರಿಯಗಳಲ್ಲಿಯೂ ನಿತ್ಯಮುಕ್ತರ ಇಂದ್ರಿಯಗಳಲ್ಲಿಯೂ ಇರುವುದರಿಂದ ಲಕ್ಷಣಸಮನ್ವಯವಾಯಿತು. ಇಲ್ಲಿ ಶರೀರಪ್ರಾಣಗಳಲ್ಲಿ ಅತಿವ್ಯಾಪ್ತಿ ನಿವಾರಣೆಗಾಗಿ ಮೊದಲು ಪದವನ್ನೂ ಮಹದಹಂಕಾರಗಳಲ್ಲಿ ಅತಿವ್ಯಾಪ್ತಿ ನಿವಾರಣೆಗಾಗಿ ಎರಡನೆಯ ಪದವನ್ನೂ ಉಪಯೋಗಿಸಿದೆ

---

* ಅಹಂಕಾರಂ ಬಲಂ ದರ್ಪಂ ಕಾಮಂ ಕ್ರೋಧಂ ಪರಿಗ್ರಹಂ ।
ವಿಮುಚ್ಯ ನಿರ್ಮಮಶ್ಶಾಂತೋ ಬ್ರಹ್ಮಭೂಯಾಯ ಕಲ್ಪತೇ ॥

ಹೀಗೆ ಅಹಂಕಾರವು ತ್ಯಾಜ್ಯ ಎಂದು ಶಾಸ್ತ್ರಗಳಲ್ಲಿ ಹೇಳಿರುವ ವಚನಗಳಿಗೆ ಅಭಿಪ್ರಾಯವೇನೆಂದರೆ— ದೇಹಾತ್ಮಭ್ರಮಾದಿಗಳನ್ನೂ ಉತ್ಕೃಷ್ಟ ಜನಾವಮಾನಹೇತುವಾದ ಗರ್ವವನ್ನೂ ಬಿಡಬೇಕೆಂದು ಅರ್ಥವು. ಅಷ್ಟೇ ಹೊರತು ಕ್ಷೇತ್ರವೆಂಬ ಈ ಶರೀರಕ್ಕೆ ಕಾರಣವಾಗಿ ಕ್ಷೇತ್ರಾಂತರ್ಭೂತವಾದ ಅಹಂಕಾರವೆಂಬ ತತ್ತ್ವವನ್ನು ಬಿಡಬೇಕೆಂದು ಅರ್ಥವಲ್ಲ; ಕ್ಷೇತ್ರಾಂತರ್ಗತವಾದ ಅಹಂಕಾರತತ್ತ್ವವನ್ನು ಬಿಡುವುದು ಪುರುಷಪ್ರಯತ್ನದಿಂದ ಸಾಧ್ಯವೂ ಅಲ್ಲ. ಅಲ್ಲದೆ "ಅಹಂಶಬ್ದವಾಚ್ಯನಾದ ಆತ್ಮನಲ್ಲಿ ಅಹಂಬುದ್ಧಿ ಮಾಡುವಿಕೆಯನ್ನು ಬಿಡು" ಎಂದೂ ಅರ್ಥವಲ್ಲ. ಆತ್ಮನಲ್ಲಿ ಅಹಂಬುದ್ಧಿ ಮಾಡುವುದು ಯಥಾರ್ಥಜ್ಞಾನವಾದುದರಿಂದ ಅದು ಮುಮುಕ್ಷುಗಳಿಗೆ ಪರಿಗ್ರಾಹ್ಯವೇ ಆಗಿದೆ. ಅದನ್ನು ಬಿಡು ಎಂದು ಶಾಸ್ತ್ರವು ಎಂದಿಗೂ ಉಪದೇಶಿಸುವುದೂ ಇಲ್ಲ.

† ಇಂದ್ರಿಯಲಕ್ಷಣಂ—ಶಬ್ದಾಶ್ರಯಾನ್ಯತ್ವೇ ಸತಿ ಆತ್ಮಪ್ರಯತ್ನ ಜನ್ಯ ವ್ಯಾಪಾರವತ್ತ್ವರೂಪ ಜೀವಾತ್ಮೋಪಕರಣ ದ್ರವ್ಯತ್ವಂ ಇಂದ್ರಿಯ ಸಾಮಾನ್ಯಲಕ್ಷಣಂ. ಶರೀರ ಪ್ರಾಣಯೋರತಿವ್ಯಾಪ್ತಿವಾರಣಾಯ ಪೂರ್ವಪದಂ, ಮಹದಹಂಕಾರಯೋರತಿವ್ಯಾಪ್ತಿ ವಾರಣಾಯ ವಿಶೇಷ್ಯಂ. ತದೇತತ್ ಪ್ರಾಕೃತಾಪ್ರಾಕೃತೇಂದ್ರಿಯ ಸಾಧಾರಣಲಕ್ಷಣಂ.

ಇಂದ್ರಿಯವಿಭಾಗ

ಇಂದ್ರಿಯವು ಪ್ರಾಕೃತವೆಂದೂ ಅಪ್ರಾಕೃತವೆಂದೂ ಎರಡುವಿಧವಾಗಿರುವುದು. ನಿತ್ಯಮುಕ್ತರ ಇಂದ್ರಿಯವು ಅಪ್ರಾಕೃತೇಂದ್ರಿಯವು, ಕೇವಲ ಶುದ್ಧ ಸತ್ತ್ವಮಯ ವಾದುದು, ರಜಸ್ತಮಸ್ಸಂಬಂಧವಿಲ್ಲದುದು. ನಮ್ಮಗಳ ಇಂದ್ರಿಯವೆಲ್ಲಾ ಪ್ರಾಕೃತೇಂದ್ರಿಯಗಳು. ತ್ರಿಗುಣದ್ರವ್ಯ ಪರಿಣಾಮವಾದುದರಿಂದ ರಜಸ್ತಮಸ್ಸು ಗಳಿಂದಲೂ ಅಶುದ್ಧ ಸತ್ತ್ವದಿಂದಲೂ ಕೂಡಿರುವುವು. ಪ್ರಾಕೃತೇಂದ್ರಿಯಗಳ ಲಕ್ಷಣವು ಶರೀರವಲ್ಲದೆ ಪ್ರಾಣಧಾರ್ಯವಾಗಿಯೇ ಇರುವ ಆತ್ಮೋಪಕರಣದ್ರವ್ಯ* ಎಂದೂ ಸಾತ್ತ್ವಿಕಾಹಂಕಾರೋಪಾದಾನಕವಾಗಿರುವ ದ್ರವ್ಯ† ಎಂದೂ ಹೇಳಬಹುದು.

ಪುನಃ ಇಂದ್ರಿಯವು ಜ್ಞಾನೇಂದ್ರಿಯವೆಂದೂ ಕರ್ಮೇಂದ್ರಿಯವೆಂದೂ ಎರಡು ಬಗೆಯಾಗಿರುವುದು. ಜ್ಞಾನಪ್ರಸರಣಶಕ್ತವಾದ ಇಂದ್ರಿಯವು ಜ್ಞಾನೇಂದ್ರಿಯ ವೆನಿಸುವುದು. ಇದು ಮನಸ್ಸು, ಶ್ರೋತ್ರ, ತ್ವಕ್ಕು, ಚಕ್ಷುಸ್ಸು, ರಸನ, ಘ್ರಾಣ ಎಂದು ಆರುವಿಧವಾಗಿರುವುದು.

ಇನ್ನುಮುಂದೆಲ್ಲಾ ಪ್ರಾಕೃತೇಂದ್ರಿಯಗಳಿಗೇ ಲಕ್ಷಣಸ್ವರೂಪಾದಿಗಳು ವಿವರಿಸಲ್ಪಡುವುವು.

ಮನ ಇಂದ್ರಿಯಲಕ್ಷಣಂ :—ಸ್ಮೃತಿಕರಣವಾದ ಇಂದ್ರಿಯವು‡ ಎಂದೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ವಿಷಯಗಳನ್ನೂ ಸಾಕ್ಷಾತ್ಕರಿಸಲು ಸಾಧನವಾಗಿ ರಜಸ್ತಮೋಗುಣಗಳಲ್ಲೊಂದರ ಸಂಪರ್ಕವುಳ್ಳ ಇಂದ್ರಿಯವು ಎಂದೂ, ಸುಖಾದಿ ಸಾಕ್ಷಾತ್ಕಾರಸಾಧನೇಂದ್ರಿಯವೆಂದೂ ಮೂರು ತೆರನಾದ ಲಕ್ಷಣ ಗಳನ್ನು ಮನಸ್ಸಿಗೆ ಹೇಳಬಹುದು.

ಸ್ಮೃತಿಕರಣೇಂದ್ರಿಯವು ಎಂಬಲ್ಲಿ ಶ್ರೋತ್ರತ್ವಗಾದಿ ನಿರಾಸಕ್ಕಾಗಿ ಮೊದಲ ನೆಯಪದವನ್ನೂ ಜೀವಾತ್ಮವ್ಯಾವೃತ್ತಿಗಾಗಿ ಇಂದ್ರಿಯಪದವನ್ನೂ ಹೇಳಿದೆ. ಮನಸ್ಸು ಸಕಲ ಪ್ರಾಣಿಗಳ ಹೃದಯದಲ್ಲಿರುವುದು.

---

* ಪ್ರಾಕೃತೇಂದ್ರಿಯ ಲಕ್ಷಣಂ—ಅಶರೀರಂ ಪ್ರಾಣಧಾರ್ಯಮೇವ ಯದ್ದ್ರವ್ಯಂ ಪುರುಷೋಪ ಕಾರಕಂ ತತ್ ಇಂದ್ರಿಯಂ ಇತಿ ವರದವಿಷ್ಣುಮಿಶ್ರೈರುಕ್ತಂ.

† ಸಾತ್ತ್ವಿಕಾಹಂಕಾರೋಪಾದಾನಕತ್ವೇ ಸತಿ ದ್ರವ್ಯತ್ವಂ ವಾ ಪ್ರಾಕೃತೇಂದ್ರಿಯ ಲಕ್ಷಣಂ. ಘಟಾದಿವಾರಣಾಯ ಪೂರ್ವದಳಂ, ಸಾತ್ತ್ವಿಕಾಹಂಕಾರಗತಶಕ್ತ್ಯಾದ್ಯದ್ರವ್ಯವಾರಣಾಯ ವಿಶೇಷ್ಯಂ

‡ ಮನಸೋ ಲಕ್ಷಣಂ—ಸ್ಮೃತಿಕರಣೇಂದ್ರಿಯತ್ವಂ, ಅಶುದ್ಧಸತ್ತ್ವೇ ಸತಿ ಪಂಚವಿಷಯ ಸಾಧಾರಣೇಂದ್ರಿಯತ್ವಂ, ಸುಖಾದಿ ಸಾಕ್ಷಾತ್ಕಾರಸಾಧನಮಿಂದ್ರಿಯಮಿತಿ ವಾ.

‡ ಸ್ಮೃತಿಕರಣೇಂದ್ರಿಯ ಮಿತ್ಯತ್ರ ಶ್ರೋತ್ರತ್ವಗಾದಿ ನಿರಾಸಾಯ ಪ್ರಥಮದಳಂ, ಆತ್ಮನಿರಾ ಸಾಯ ಇಂದ್ರಿಯಮಿತಿ ಚ ನಿಹಿತಂ.

ಈ ಮನಸ್ಸು ಒಂದೇ—ಸಂಕಲ್ಪ, ಅಧ್ಯವಸಾಯ, ಚಿಂತೆ, ಅಭಿಮಾನ ಎಂಬ ವೃತ್ತಿಭೇದದಿಂದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಎಂಬ ಬೇರೆ ಬೇರೆ ಹೆಸರುಗಳನ್ನು ಪಡೆದಿರುವುದೇ ಹೊರತು ಪ್ರತಿಶರೀರದಲ್ಲಿಯೂ ಅನೇಕವಾದುದಲ್ಲ. ಅಧ್ಯವಸಾಯ, ಅಭಿಮಾನ ಮುಂತಾದುವು ಬೇರೆ ತತ್ತ್ವಗಳೂ ಅಲ್ಲ.

ಈ ಮನಸ್ಸೇ ದುರ್ವಿಷಯಗಳಲ್ಲಿ ಪ್ರವರ್ತನದಿಂದ ಬಂಧಹೇತುವಾಗಿಯೂ ಸದ್ವಿಷಯಗಳಲ್ಲಿ ಪ್ರವರ್ತನದಿಂದ ಮೋಕ್ಷಹೇತುವಾಗಿಯೂ ಆಗುವುದು

(೫) ಪ್ರಾಕೃತ ಶ್ರೋತ್ರೇಂದ್ರಿಯ ಲಕ್ಷಣ — ಶಬ್ದಸ್ಪರ್ಶಾದಿಗಳಾದ ಐದು ವಿಷಯಗಳೊಳಗೆ ಶಬ್ದಮಾತ್ರವನ್ನು ಗ್ರಹಿಸಲು ಶಕ್ತವಾದ ಇಂದ್ರಿಯವು ಶ್ರೋತ್ರೇಂದ್ರಿಯ ಎನಿಸುವುದು. ಸ್ಪರ್ಶವನ್ನು ಗ್ರಹಿಸದೆ ಶಬ್ದಮಾತ್ರವನ್ನು ಗ್ರಹಿಸುವ ಇಂದ್ರಿಯವು ಶ್ರೋತ್ರೇಂದ್ರಿಯ ಎಂದು ಫಲಿತವಾಗುವುದು. ಇಲ್ಲಿ ಮನೋನಿರಾಸಕ್ಕಾಗಿ ಮೊದಲನೆಯ ಪದವನ್ನೂ ಶ್ರೋತ್ರಸನ್ನಿಕರ್ಷ ನಿರಾಸಕ್ಕಾಗಿ ಇಂದ್ರಿಯ ಪದವನ್ನೂ ಹೇಳಿದೆ. ಹೀಗೆಯೇ ಮುಂದೆಯೂ ತಿಳಿಯಬೇಕು. ಈ ಶ್ರೋತ್ರೇಂದ್ರಿಯವು ಮನುಷ್ಯಾದಿ ಪ್ರಾಣಿಗಳ ಶ್ರವಣ ರಂಧ್ರದಲ್ಲಿ ಇರುವುದು.

(೬) ತ್ವಗಿಂದ್ರಿಯ ಲಕ್ಷಣ—ಶಬ್ದಾದಿ ವಿಷಯಗಳೈದರೊಳಗೆ ಸ್ಪರ್ಶ ಮಾತ್ರವನ್ನು ಗ್ರಹಿಸಲು ಶಕ್ತವಾದ ಇಂದ್ರಿಯವು ತ್ವಗಿಂದ್ರಿಯವು. ರಸಾಗ್ರಾಹಕ ವಾಗಿ ಸ್ಪರ್ಶಮಾತ್ರಗ್ರಾಹಕವಾದ ಇಂದ್ರಿಯವು ತ್ವಗಿಂದ್ರಿಯವೆಂದು ಫಲಿತ ವಾಯಿತು. (ಈ ಲಕ್ಷಣಗಳೊಳಗೆಲ್ಲಾ ಮನೋನಿರಾಸಕ್ಕಾಗಿ ಒಂದನೆಯಪದವೂ ಆ ಆ ಇಂದ್ರಿಯ ಸನ್ನಿಕರ್ಷನಿರಾಸಕ್ಕಾಗಿ ಇಂದ್ರಿಯಪದವೂ ಕರ್ಮೇಂದ್ರಿಯ ನಿರಾಸಕ್ಕಾಗಿ ಆ ಆ ವಿಷಯಗ್ರಾಹಕ ಎಂಬ ಪದವೂ ಹೇಳಿದೆ ಎಂದು ಭಾವಿಸ ಬೇಕು.) * ಈ ತ್ವಗಿಂದ್ರಿಯವು ಶರೀರದ ಎಲ್ಲಾ ಕಡೆಯೂ ವ್ಯಾಪಿಸಿರುವುದು. ಆದರೂ ಪ್ರಾಣವಾಯುವಿನ ವ್ಯಾಪ್ತಿ ತಾರತಮ್ಯದಿಂದ ಶರೀರದ ಆ ಆ ಭಾಗಗಳಲ್ಲಿ ಶೀತೋಷ್ಣಾದಿ ಸ್ಪರ್ಶಜ್ಞಾನವು ತೀವ್ರ, ಮಂದ, ಮಂದತರವಾಗಿ ತೋರುವುದು.

(೭) ಚಕ್ಷುರಿಂದ್ರಿಯ ಲಕ್ಷಣ—ಶಬ್ದಾದಿ ವಿಷಯಗಳೈದರೊಳಗೆ ರೂಪ ಮಾತ್ರವನ್ನು ಗ್ರಹಿಸಲು ಶಕ್ತವಾದ ಇಂದ್ರಿಯವು ಚಕ್ಷುರಿಂದ್ರಿಯವು. ರಸಾಗ್ರಾ

---

* ಜ್ಞಾನೇಂದ್ರಿಯ ಲಕ್ಷಣೇಷು—ಸರ್ವ ವಿಷಯಗ್ರಾಹಕಸ್ಯ ಮನಸೋ ನಿರಾಸಾಯ ತದ್ಭಿನ್ನಾಗ್ರಾಹಕತ್ವಂ, ತತ್ತದಿಂದ್ರಿಯ ಸನ್ನಿಕರ್ಷನಿರಾಸಾಯ ಇಂದ್ರಿಯತ್ವಂ, ಕರ್ಮೇಂದ್ರಿಯ ನಿರಾಸಾಯ ತತ್ತದ್ವಿಷಯಗ್ರಾಹಕತ್ವಂ ಇತಿ ದಳಾನಾಂ ನಿವೇಶಃ.

ಕಿಂಚ, ಸರ್ವತ್ರಲಕ್ಷಣೇ "ಶಬ್ದಾದಿವಿಷಯಪಂಚಕೇ" ಇತ್ಯೇತತ್–ತತ್ತದ್ವಿಷಯಗತ ಶಬ್ದತ್ವ ವರ್ಣತ್ವಾದಿ, ರೂಪತ್ವ ನೀಲತ್ವಾದಿ, ಸ್ಪರ್ಶತ್ವ ಶೀತತ್ವಾದ್ಯವಾಂತರ ಧರ್ಮಗ್ರಾಹಕೇಪಿ ಅತಿ ಪ್ರಸಂಗವಾರಣಾಯೇತಿ ಬೋಧ್ಯಂ.

ಹಕವಾಗಿ ರೂಪಮಾತ್ರಗ್ರಾಹಕೇಂದ್ರಿಯವು ಚಕ್ಷುರಿಂದ್ರಿಯವು ಎಂದು ಫಲಿತವಾಯಿತು. ಇದು ಸರ್ವಪ್ರಾಣಿಗಳ ನೇತ್ರಗೋಳದಲ್ಲಿರುವುದು.

(೮) ರಸನೇಂದ್ರಿಯ ಲಕ್ಷಣ—ಶಬ್ದಾದಿ ವಿಷಯಗಳೈದರೊಳಗೆ ರಸಮಾತ್ರಗ್ರಹಣ ಶಕ್ತವಾದ ಇಂದ್ರಿಯವು ರಸನೇಂದ್ರಿಯವು. ಶಬ್ದಾಗ್ರಾಹಕವಾಗಿ ರಸಮಾತ್ರಗ್ರಾಹಕವಾದ ಇಂದ್ರಿಯವು ರಸನೇಂದ್ರಿಯ ಎಂದು ಫಲಿತವಾಯಿತು. ಇದು ನಾಲಿಗೆಯ ಮೇಲುಭಾಗದಲ್ಲಿರುವುದು.

(೯) ಘ್ರಾಣೇಂದ್ರಿಯ ಲಕ್ಷಣ—ಶಬ್ದಾದಿಗಳೈದರಲ್ಲಿ ಗಂಧ ಮಾತ್ರ ಗ್ರಹಣಶಕ್ತವಾದ ಇಂದ್ರಿಯವು ಘ್ರಾಣೇಂದ್ರಿಯವು. ಇದು ಮೂಗಿನ ತುದಿಯಲ್ಲಿರುವುದು. ಆನೆಗೆ ಮಾತ್ರ ಘ್ರಾಣೇಂದ್ರಿಯವೂ ಪಾಣಿ ಎಂಬ ಕರ್ಮೇಂದ್ರಿಯವೂ ಅದರ ಸೊಂಡಲಿನ ತುದಿಯಲ್ಲಿರುವವು.

ಇವುಗಳಲ್ಲಿ ಮನಸ್ಸು, ಚಕ್ಷುಸ್ಸು, ತ್ವಗಿಂದ್ರಿಯಗಳು ಆ ಆ ಗುಣಗಳನ್ನೂ ಗುಣಾಶ್ರಯ ದ್ರವ್ಯಗಳನ್ನೂ ಗ್ರಹಿಸುವುವು. ಮಿಕ್ಕ ಶ್ರೋತ್ರ, ರಸನ, ಘ್ರಾಣೇಂದ್ರಿಯಗಳು ಶಬ್ದ, ರಸ, ಗಂಧ ಎಂಬ ಆ ಆ ಗುಣಗಳನ್ನು ಮಾತ್ರ ಗ್ರಹಿಸುವುವು. ಹೀಗೆ ಇಂದ್ರಿಯಗಳಲ್ಲಿ ದ್ರವ್ಯಗ್ರಾಹಕೇಂದ್ರಿಯ ಮೂರು, ದ್ರವ್ಯಾಶ್ರಿತಗ್ರಾಹಕ ಮೂರು ಎಂದು ಫಲಿತವಾಯಿತು

ಇಂದ್ರಿಯಗಳು ದ್ರವ್ಯಗಳನ್ನು ಗ್ರಹಿಸುವಾಗ ಸಂಯೋಗಸಂಬಂಧದಿಂದಲೂ, ದ್ರವ್ಯಾಶ್ರಿತಗಳಾದ ಗುಣಜಾತಿಗಳನ್ನು ಗ್ರಹಿಸುವಾಗ ಸಂಯುಕ್ತಾಪೃಥಕ್ಸಿದ್ಧಿ ಎಂಬ ಸನ್ನಿಕರ್ಷದಿಂದಲೂ ಗ್ರಹಿಸುವುವು ಎಂದು ತಿಳಿಯಬೇಕು. ಅಲ್ಲದೆ ಯಾವ ಇಂದ್ರಿಯದಿಂದ ಯಾವ ಯಾವ ವ್ಯಕ್ತಿಗಳು ಗ್ರಹಿಸಲ್ಪಡುವುವೋ ಆ ಆ ವ್ಯಕ್ತಿಗಳಲ್ಲಿರುವ ಜಾತಿಗಳೂ ಅವುಗಳ ಪ್ರಭೇದಗಳೂ ತದಭಾವವೂ ಆ ಆ ಇಂದ್ರಿಯದಿಂದಲೇ ಗ್ರಹಿಸಲ್ಪಡುವುವು: ಎಂದರೆ ಕಣ್ಣು ಘಟ ಮುಂತಾದ ದ್ರವ್ಯಗಳನ್ನು ಗ್ರಹಿಸುವಾಗ ಘಟ, ಅದರ ಜಾತಿಯಾದ ಘಟತ್ವ, * ಘಟರೂಪವಾದ ಬಿಳುಪು, ಕಪ್ಪು ಮುಂತಾದ ಬಣ್ಣ, ಬಣ್ಣದ ಪ್ರಭೇದಗಳು ಇವೆಲ್ಲವನ್ನೂ ಗ್ರಹಿಸುವುದು. ಇಲ್ಲಿ ಘಟವಿಲ್ಲ ಇದರಲ್ಲಿ ಬಣ್ಣವಿಲ್ಲ ಎಂಬುದನ್ನೂ ಗ್ರಹಿಸುವುದು.

೩೫. ಕರ್ಮೇಂದ್ರಿಯ ವಿಚಾರ

ಕರ್ಮೇಂದ್ರಿಯ ಲಕ್ಷಣ—ಉಚ್ಚಾರಣ, ಶಿಲ್ಪ, ಸಂಚಾರ, ಮಲತ್ಯಾಗ, ಆನಂದನ ಇವೈದರೊಳಗೆ ಯಾವುದಾದರೂ ಒಂದು ಕ್ರಿಯೆಗೆ ಸಾಧನವಾದ ಇಂದ್ರಿಯವು ಕರ್ಮೇಂದ್ರಿಯವು. ಜ್ಞಾನೇಂದ್ರಿಯ ವ್ಯಾವೃತ್ತಿಗಾಗಿ ವಿಶೇಷಣ

* ಯೇನೇಂದ್ರಿಯೇಣ ಯಾ ವ್ಯಕ್ತಿಃ ತನ್ನಿಷ್ಠಾ ಜಾತಿಃ ತದಭಾವೋಽಪಿ ತೇನೈವೇಂದ್ರಿಯೇಣ ಗೃಹ್ಯತೇ ।

ವನ್ನೂ ಶರೀರ ವ್ಯಾವೃತ್ತಿಗಾಗಿ ಇಂದ್ರಿಯವೆಂಬ ವಿಶೇಷ್ಯವನ್ನೂ ಲಕ್ಷಣದಲ್ಲಿ ಸೇರಿಸಿದೆ.

ಈ ಕರ್ಮೇಂದ್ರಿಯವು ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಎಂದು ಐದು ವಿಧವಾಗಿರುವುದು

(೧) ವಾಗಿಂದ್ರಿಯ—ವರ್ಣೋಚ್ಚಾರಣಕರಣವಾದ ಇಂದ್ರಿಯ ವಾಗಿಂದ್ರಿಯ. ಇದು ಹೃದಯ, ಕಂಠ, ನಾಲಗೆಯಬುಡ, ಅಂಗಳ, ದಂತ, ತುಟಿ, ಮೂಗು, ತಲೆ ಎಂಬ ಎಂಟು ಸ್ಥಾನಗಳಲ್ಲಿರುವುದು.

ಮೂಗರಿಗೆ ಈ ಅವಯವಗಳೆಲ್ಲವೂ ಇದ್ದರೂ ಅದೃಷ್ಟವಿಲ್ಲದುದರಿಂದಲೂ, ಮನುಷ್ಯಹೊರತು ಮಿಕ್ಕ ಪಶು, ಪಕ್ಷಿ, ಮೃಗ, ಜಲಚರ, ಕ್ರಿಮಿ, ಕೀಟ ಮುಂತಾದ ತಿರ್ಯಗ್ಜಾತಿಗಳಿಗೆ ಅದೃಷ್ಟಸಹಾಯವೂ ಉಚ್ಚಾರಣೆಗೆ ಅನುಕೂಲವಾಗಿರುವ ಅವಯವ ಸನ್ನಿವೇಶದ ಸಹಾಯವೂ ಇಲ್ಲದುದರಿಂದಲೂ ಉಚ್ಚಾರಣಶಕ್ತಿ ಇಲ್ಲ. ಗಿಳಿ ಮುಂತಾದ ಕೆಲವು ಪಕ್ಷಿಗಳಿಗೆ ಅದೃಷ್ಟವೈಷಮ್ಯದಿಂದ ಉಚ್ಚಾರಣ ವೈಷಮ್ಯವೂ ಆಗಿರುವುದು.

(೨) ಪಾಣೀಂದ್ರಿಯ—ಶಿಲ್ಪಕರಣವಾದ ಇಂದ್ರಿಯವು ಪಾಣೀಂದ್ರಿಯವು. ಮಿಕ್ಕ ಇಂದ್ರಿಯಗಳ ವ್ಯಾವೃತ್ತಿಗಾಗಿ ವಿಶೇಷಣಪದವೂ ಕೈ ಎಂಬ ಶರೀರಾವಯವ ವ್ಯಾವೃತ್ತಿಗಾಗಿ ಇಂದ್ರಿಯವೆಂಬ ವಿಶೇಷ್ಯವೂ ಹೇಳಲ್ಪಟ್ಟಿವೆ. ಶಿಲ್ಪವೆಂದರೆ ತೆಗೆವುದು, ಕೊಡುವುದು, ನೀಡುವುದು, ಮಡಿಸುವುದು ಮುಂತಾದ ಕ್ರಿಯೆಗಳಿಂದಾದ ವಿಚಿತ್ರಕಾರ್ಯಗಳು. ಈ ಪಾಣೀಂದ್ರಿಯವು ಮನುಷ್ಯಾದಿಗಳಿಗೆ ಬೆರಳಿನ ತುದಿಗಳಲ್ಲಿಯೂ ಆನೆ ಮುಂತಾದುವುಗಳಿಗೆ ಸೊಂಡಿಲ ತುದಿಯಲ್ಲಿಯೂ ಇರುವುದು.

(೩) ಪಾದೇಂದ್ರಿಯ—ಸಂಚರಣಕರಣವಾದ ಇಂದ್ರಿಯವು ಪಾದೇಂದ್ರಿಯವೆನಿಸುವುದು. ಇಲ್ಲಿಯೂ ಪೂರ್ವದಂತೆಯೇ ಮಿಕ್ಕ ಇಂದ್ರಿಯ ವ್ಯಾವೃತ್ತಿಗಾಗಿ ಮೊದಲು ಪದವನ್ನೂ ಕಾಲು ಎಂಬ ಶರೀರಾವಯವ ನಿರಾಸಕ್ಕಾಗಿ ಇಂದ್ರಿಯ ಪದವನ್ನೂ ಲಕ್ಷಣದಲ್ಲಿ ಸೇರಿಸಿದೆ. (ಹೀಗೆಯೇ ಮುಂದೆಯೂ ತಿಳಿಯಬೇಕು.) ಪಾದೇಂದ್ರಿಯವು ಮನುಷ್ಯಾದಿಗಳಿಗೆ ಕಾಲಿನಲ್ಲಿಯೂ ಪಕ್ಷಿಗಳಿಗೆ ಕಾಲು, ರೆಕ್ಕೆ ಇವೆರಡರಲ್ಲಿಯೂ ಹಾವು, ಹಲ್ಲಿ ಮುಂತಾದುವುಗಳಿಗೆ ಎದೆಯಲ್ಲಿಯೂ ನೆಲೆಸಿರುವುದು.

(೪) ಪಾಯ್ವಿಂದ್ರಿಯ—ಶಾರೀರ ಮಲವಿಸರ್ಜನಕ್ಕೆ ಸಾಧನವಾದ ಇಂದ್ರಿಯವು ಪಾಯ್ವಿಂದ್ರಿಯವೆನಿಸುವುದು. ಇದು ಎಲ್ಲಾ ಪ್ರಾಣಿಗಳಿಗೂ ಅಪಾನ ಸ್ಥಾನವೆಂಬ ಆ ಆ ಅವಯವಗಳಲ್ಲಿರುವುದು. ಮಾಂಧಾಳವೆಂಬ ಕಪಟಹಕ್ಕಿಗೆ ಮಾತ್ರ ಮುಖದ್ವಾರದ ಒಂದು ಭಾಗದಲ್ಲಿಯೇ ಈ ಪಾಯ್ವಿಂದ್ರಿಯವೂ ಇರುವುದು.

(೧೪) ಉಪಸ್ಥೇಂದ್ರಿಯ - ಆನಂದವಿಶೇಷಕ್ಕೆ ಕರಣವಾದ ಇಂದ್ರಿಯವು ಉಪಸ್ಥವೆನಿಸುವುದು. ಇದು ಎಲ್ಲಾ ಪ್ರಾಣಿಗಳಿಗೂ ಸ್ತ್ರೀಪುರುಷ ಚಿಹ್ನವಾದ ಗುಹ್ಯಸ್ಥಾನದಲ್ಲಿರುವುದು.

ಟಿ. ಶರೀರದಲ್ಲಿ ಕಣ್ಣು, ಕಿವಿ, ಮೂಗು ಮುಂತಾದ ಅವಯವಗಳು ಜ್ಞಾನೇಂದ್ರಿಯಗಳಿಗೂ, ಬಾಯಿ, ಕೈ, ಕಾಲು ಮುಂತಾದ ಅವಯವಗಳು ಕರ್ಮೇಂದ್ರಿಯಗಳಿಗೂ ಆಶ್ರಯಸ್ಥಲ (ಅಧಿಷ್ಠಾನ)ಗಳೇ ಹೊರತು ಇವುಗಳೇ ಆ ಆ ಇಂದ್ರಿಯಗಳಲ್ಲವೆಂದು ತಿಳಿದಿರಬೇಕು. ವಿಶಾಲವಾದ ಕಿವಿ, ಕಣ್ಣು ಮುಂತಾದುವು ಇದ್ದರೂ ಅನೇಕರು ಕಿವುಡರೂ ಕುರುಡರೂ ಆಗಿರುವರು. ಅಗಲವಾದ ಬಾಯಿದ್ದರೂ ಅನೇಕರು ಮೂಗರಾಗಿ ಉಚ್ಚಾರಣಶಕ್ತಿಯೇ ಇಲ್ಲದಿರುವರು. ಇವುಗಳನ್ನು ಅನೇಕರು ನೋಡಿರುವರು. ಆದರೆ ಕಣ್ಣು, ಕಿವಿ, ಮೂಗು, ಕೈ, ಕಾಲು ಮುಂತಾದ ಅವಯವಗಳಿಗೂ ಆ ಇಂದ್ರಿಯಗಳಿಗೂ ಒಂದೇವಿಧವಾದ ಹೆಸರು ಬಂದಿರುವುದೇತಕ್ಕೆಂದರೆ ಈ ಸ್ಥಲಗಳೇ ಇಂದ್ರಿಯಗಳಾದುದರಿಂದಲ್ಲ; ಆ ಆ ಇಂದ್ರಿಯಗಳು ಆ ಆ ಸ್ಥಾನಗಳಲ್ಲಿ ತಪ್ಪದೆ ನೆಲೆಸಿರುವುದರಿಂದ ಆ ಅಧಿಷ್ಠಾನ ಸ್ಥಲಪ್ರಸಿದ್ಧಿಯಿಂದ ರೂಢಿಯಾಗಿ ಹಾಗೆ ಹೆಸರುಬಂದಿದೆ.*

ಈ ಇಂದ್ರಿಯಗಳೆಲ್ಲವೂ ತಮ್ಮ ಅಧಿಷ್ಠಾನಗಳಲ್ಲಿ ದೋಷವಿದ್ದರೆ ಅವುಗಳಿಂದ ಕೆಟ್ಟು ದೋಷಯುಕ್ತವಾಗುವುವೇ ಹೊರತು ಸ್ವರೂಪದಿಂದ ದುಷ್ಟವಲ್ಲ.

ಗಾಢನಿದ್ರೆ, ಮೂರ್ಛೆ ಮುಂತಾದ ಅವಸ್ಥೆಗಳಲ್ಲಿ ಆ ಆ ಜೀವಾತ್ಮರುಗಳ ಅದೃಷ್ಟವಿಶೇಷದಿಂದ ಇಂದ್ರಿಯವ್ಯಾಪಾರಗಳಿಗೆ ನಿರೋಧ ತಾರತಮ್ಯವುಂಟಾಗಿರುವುದು. ಹೀಗೆಯೇ ಸ್ಥಾವರಜನ್ಮವನ್ನು ಪಡೆದಾಗಲೂ ಅದೃಷ್ಟವಿಶೇಷ ತಾರತಮ್ಯದಿಂದಲೇ ಆ ಆ ಇಂದ್ರಿಯವ್ಯಾಪಾರಗಳು ಅಡಗಿಹೋಗಿರುವುವು. ಆ ಆ ಶಿಕ್ಷಾರೂಪ ಜನ್ಮಗಳು ಕಳೆದು ತಿರುಗಿ ಮಾನುಷಾದಿ ಜನ್ಮವನ್ನು ಪಡೆದಾಗ ಯಥಾಪ್ರಕಾರ ಅದೃಷ್ಟಾನುಸಾರವಾಗಿ ಸರಿಯಾಗಿಯೇ ಆಗುವುವು.

ಶರೀರ ವಿನಾಶಕಾಲದಲ್ಲಿ ಇಂದ್ರಿಯಗಳಿಗೆ ಆಪ್ಯಾಯಕವಾದ† ಪಂಚಭೂತಭಾಗಗಳು ಆ ಆ ಶರೀರವನ್ನು ಬಿಟ್ಟು ಹೊರಟುಹೋಗಿರುವುದರಿಂದ ಇಂದ್ರಿಯಶಕ್ತಿಗಳು ತಗ್ಗಿರುವುವು. ಬೇರೆ ಶರೀರವನ್ನು ಜೀವಾತ್ಮನು ಪ್ರವೇಶಿಸಿದಾಗ ಆಪ್ಯಾಯಕಭೂತಶಕ್ತಿ ಸಹಾಯದಿಂದ ಇಂದ್ರಿಯಶಕ್ತಿಗಳು ಪೂರ್ಣವಾಗುವುವು. ಈ ಜೀವನು ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರಕ್ಕೆ ಹೋದಾಗ

---

* ಇಂದ್ರಿಯಾಣಾಂ ಸ್ಥಾನಭೂತಾ ಯೇಷು ಚಾವಯವೇಷ್ವಪಿ ।
ತದೇಕಸಂಜ್ಞಾ ಭವತಿ ಕೋಶಾದಿವಶತಃ ಪರಂ ॥

† ಆಪ್ಯಾಯಕ = ಬೆಳೆವಣಿಗೆಗೆ ಕಾರಣವಾದ ವಸ್ತು.

ಲೆಲ್ಲಾ ಆ ಜೀವನಿಗೆ ಉಪಕರಣವಾದ ಈ ಹನ್ನೊಂದು ಇಂದ್ರಿಯಗಳೂ ಅವನೊಂದಿಗೇ ಹೋಗಿ ಆ ಆ ಶರೀರಗಳಲ್ಲಿ ನೆಲೆಸಿ, ಅಲ್ಲಿ ಅವನ ಅದೃಷ್ಟಾನುಸಾರ ವಾಗಿ ಕಾರ್ಯಕಾರಿಗಳಾಗಿರುವುವು. ಹೀಗೆಯೇ ಪರಕಾಯಪ್ರವೇಶದಲ್ಲಿಯೂ ಲೋಕಾಂತರ ಗಮನದಲ್ಲಿಯೂ ಜೀವಾತ್ಮನ ಜತೆಯಲ್ಲಿಯೇ ಅಲ್ಲಲ್ಲಿಗೆ ಹೋಗುತ್ತ ಇರುವುವು. ಇಂದ್ರಿಯಗಳು ಅಣು (ಸ್ವಲ್ಪ) ಪರಿಮಾಣವಾಗಿ ವಿಚಿತ್ರ ಶಕ್ತಿಯುಕ್ತ ವಾಗಿರುವುವು.

೩೭. ಇಲ್ಲಿ ವೈಶೇಷಿಕರು–ಕರ್ಮೇಂದ್ರಿಯಗಳೆಂಬುವು ಇಲ್ಲವೇ ಇಲ್ಲ; ಕೈ ಕಾಲು ಮುಂತಾದ ಶರೀರಾವಯವಗಳಿಂದಲೇ ಆ ಆ ಕಾರ್ಯಗಳಾಗುವುವು ಎನ್ನು ವರು. ಯಾದವಪ್ರಕಾಶಾದಿಗಳು ಕರ್ಮೇಂದ್ರಿಯಗಳು ಶರೀರದೊಡನೆ ಹುಟ್ಟಿ ಅದು ನಾಶವಾದರೆ ನಾಶಹೊಂದುವುವು ಎನ್ನುವರು. ನೈಯಾಯಿಕರು ಈ ಜ್ಞಾನೇಂದ್ರಿಯ ಶರೀರಗಳು ಆಕಾಶಾದಿ ಪಂಚಭೂತಗಳಿಂದ ಹುಟ್ಟುವುವು, ಆದುದರಿಂದ ಭೌತಿ ಕಗಳು ಎಂದು ಅನುಮಾನಪ್ರಯೋಗಗಳನ್ನು ಮಾಡುವರು. ಇದಕ್ಕೆ ಅನುಕೂಲಿ ಸುವಂತೆ ಮಹಾಭಾರತ ಮೋಕ್ಷಧರ್ಮದಲ್ಲಿ 'ಇಂದ್ರಿಯಗಳು ಭೌತಿಕಗಳು' ಎಂಬ ವಚನವೂ ಇರುವುದು. ಇದನ್ನು ನೋಡಿ ಭ್ರಾಂತಿಗೊಳ್ಳಬಾರದು. "ಈ ಹನ್ನೊಂದು ಇಂದ್ರಿಯಗಳೂ ಸಾತ್ತ್ವಿಕಾಹಂಕಾರ ಜನ್ಯಗಳು" ಎಂದು ಶ್ರುತಿ ಯಿಂದಲೂ ವಿಷ್ಣುಪುರಾಣ ವಚನಗಳಿಂದಲೂ ಸಿದ್ಧಿಸುವುವೆಂದೂ ಆದರಿಂದ ಮಹಾಭಾರತವಚನವು "ಭೂತಗಳು ಇಂದ್ರಿಯಗಳಿಗೆ ಆಪ್ಯಾಯಕವಾಗಿರುವುವು ಎಂಬ ತಾತ್ಪರ್ಯದಿಂದ ಹೊರಟುದೇ ಹೊರತು ಕಾರಣತ್ವಬೋಧಕವಲ್ಲ" ಎಂದೂ ವೇದಾರ್ಥಸಂಗ್ರಹದಲ್ಲಿ ಶ್ರೀ ಭಾಷ್ಯಕಾರರೇ ಸುವಿಶದವಾಗಿ ನಿರೂಪಿಸಿರುವರು.* ಅಲ್ಲದೆ ನೈಯಾಯಿಕರು ಹೇಳದ ಭೌತಿಕತ್ವಾನುಮಾನಗಳನ್ನು **ವೇದಾಂತ ದೇಶಿಕರು** ನ್ಯಾಯಸಿದ್ಧಾಂಜನದಲ್ಲಿ ಖಂಡಿಸಿರುವರು, ಕರ್ಮೇಂದ್ರಿಯಗಳೂ ಸಾತ್ತ್ವಿಕಾಹಂಕಾರದಿಂದಲೇ ಹುಟ್ಟಿದುವು, ಶರೀರದೊಂದಿಗೆ ಹುಟ್ಟಿ ನಾಶ ಹೊಂದತಕ್ಕುವುಗಳಲ್ಲ ಎಂದು ಮುಂತಾಗಿ ಇಂದ್ರಿಯ ವಿಷಯವಿಚಾರಗಳನ್ನೆಲ್ಲಾ ನಿರೂಪಿಸಿರುವರು. ಈ ಅಭಿಪ್ರಾಯಗಳನ್ನೇ ಇಂದ್ರಿಯಗಳ ಲಕ್ಷಣ ನಿರೂಪಣ ವಾಕ್ಯಗಳಲ್ಲಿ ನಾವೂ ವಿಶದಪಡಿಸಿರುವೆವು.

೩೭. ತನ್ಮಾತ್ರಗಳು

(೧೫-೧೯) ತನ್ಮಾತ್ರ–ಎಂದರೆ ಭೂತಗಳ ಸೂಕ್ಷ್ಮಾವಸ್ಥೆಗಳು. ಇವಕ್ಕೆ ಭೂತ ಸೂಕ್ಷ್ಮಗಳೆಂದು ಹೆಸರುಂಟು. ಇವುಗಳೇ ಪಂಚಭೂತಗಳಿಗೆ ಕಾರಣಗಳಾಗುವುವು.

---

* ಭೌತಿಕತ್ವಂ ತ್ವಿಂದ್ರಿಯಾಣಾಂ ಭಾರತೋಕ್ತಂ ಶ್ರುತೇರ್ಬಲಾತ್
ಆಪ್ಯಾಯಕಾಂಶತಾತ್ಪರ್ಯಾನ್ನೀತಂ ವೇದಾರ್ಥಸಂಗ್ರಹೇ ।
ಅನುಮಾನಂ ತ್ವಾಗಮೇನ ಬಾಧ್ಯಮಿತ್ಯೇವ ಸಮ್ಮತಂ ॥

ಹಾಲಿಗೆ ಹೆಪ್ಪು ಹಾಕಿ ಇಟ್ಟರೆ ಕೊಂಚಹೊತ್ತು ಕಳೆದಮೇಲೆ ಆ ಹಾಲಿಗೆ, ಹಾಲಿನ ಅವಸ್ಥೆ ಕಳೆದು ಮೊಸರಿನ ಅವಸ್ಥೆ ಬಾರದ ಮಧ್ಯಮಸ್ಥಿತಿಯೊಂದಿರುವುದು; ಅದರಂತೆಯೇ ಇಲ್ಲಿ ಹಿಂದುಹಿಂದಣ ಭೂತತ್ವಸ್ಥಿತಿ ಕಳೆದು ಮುಂದುಮುಂದಣ ಭೂತತ್ವಸ್ಥಿತಿ ಬರುವುದಕ್ಕೆ ಮುಂಚೆ ಇರುವ ಆ ಮಧ್ಯಮಸ್ಥಿತಿಗೆ ಆ ಆ ತನ್ಮಾತ್ರವೆಂದು ಹೆಸರು. ತಾಮಸಾಹಂಕಾರದಿಂದ ಭೂತಗಳು ಹುಟ್ಟುವಾಗ ಅಹಂಕಾರತ್ವಾವಸ್ಥೆ ಕಳೆದು ಭೂತತ್ವಾವಸ್ಥೆ ಇನ್ನೂ ಬಾರದ ಮಧ್ಯಮಾವಸ್ಥೆ ತನ್ಮಾತ್ರವೆನಿಸುವುದು ಎಂದು ಫಲಿತವಾಯ್ತು.

ತನ್ಮಾತ್ರಗಳಿಗೂ ಭೂತಗಳಿಗೂ ಭೇದವೇನೆಂದರೆ–ಭೂತಗಳಲ್ಲಿ ಆ ಆ ಗುಣಗಳು ಉದ್ಭೂತಗಳಾಗಿರುವುವು.* ತನ್ಮಾತ್ರಗಳಲ್ಲಿ ಆ ಆ ಗುಣಗಳು ಉತ್ಕಟಾವಸ್ಥೆಯನ್ನು ಹೊಂದಿರುವುದಿಲ್ಲ.

ತನ್ಮಾತ್ರಗಳಿಗೂ ಭೂತಗಳಿಗೂ ಸಾಧಾರಣವಾದ ಲಕ್ಷಣವೇನೆಂದರೆ— ಶಬ್ದವತ್ತ್ವವು. ತನ್ಮಾತ್ರವು ಶಬ್ದತನ್ಮಾತ್ರೆ, ಸ್ಪರ್ಶತನ್ಮಾತ್ರೆ, ರೂಪತನ್ಮಾತ್ರೆ, ರಸತನ್ಮಾತ್ರೆ, ಗಂಧತನ್ಮಾತ್ರೆ ಎಂದು ಐದುವಿಧವಾಗಿರುವುದು. ಹೀಗೆಯೇ ಭೂತವು ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ ಎಂದು ಐದುವಿಧವಾಗಿರುವುದು.

ತಾಮಸಾಹಂಕಾರದಿಂದ ಪಂಚತನ್ಮಾತ್ರಗಳೂ ಅವುಗಳ ವಿಶೇಷಗಳಾದ ಭೂತಗಳೂ ಹುಟ್ಟುವಕ್ರಮ

ತಾಮಸಾಹಂಕಾರದಿಂದ ಅವ್ಯಕ್ತವಾದ ಶಬ್ದಗುಣವುಳ್ಳ ಶಬ್ದತನ್ಮಾತ್ರವು ಹುಟ್ಟುವುದು. ಈ ಶಬ್ದತನ್ಮಾತ್ರದಿಂದ ವ್ಯಕ್ತವಾದ ಶಬ್ದಗುಣವುಳ್ಳ ಆಕಾಶವೂ ಹುಟ್ಟುವುದು. ಈ ಆಕಾಶದೊಡಗೂಡಿದ ಶಬ್ದತನ್ಮಾತ್ರದಿಂದ ಅವ್ಯಕ್ತಸ್ಪರ್ಶಗುಣವುಳ್ಳ ಸ್ಪರ್ಶತನ್ಮಾತ್ರವೂ ಅದರಿಂದ ವ್ಯಕ್ತಸ್ಪರ್ಶಗುಣವುಳ್ಳ ವಾಯುವೂ ಹುಟ್ಟುವುವು. ಈ ವಾಯುವೊಡಗೂಡಿದ ಸ್ಪರ್ಶತನ್ಮಾತ್ರದಿಂದ ಅವ್ಯಕ್ತರೂಪಗುಣವುಳ್ಳ ರೂಪತನ್ಮಾತ್ರವೂ ಅದರಿಂದ ವ್ಯಕ್ತರೂಪಗುಣವುಳ್ಳ ತೇಜಸ್ಸೂ ಹುಟ್ಟುವುವು. ಈ ತೇಜಸ್ಸಿನೊಡಗೂಡಿದ ರೂಪತನ್ಮಾತ್ರದಿಂದ ಅವ್ಯಕ್ತರಸಗುಣವುಳ್ಳ ರಸತನ್ಮಾತ್ರವೂ ಅದರಿಂದ ವ್ಯಕ್ತರಸಗುಣವುಳ್ಳ ಜಲವೂ ಹುಟ್ಟುವುವು. ಈ ಜಲದೊಡಗೂಡಿದ ರಸತನ್ಮಾತ್ರದಿಂದ ಅವ್ಯಕ್ತಗಂಧಗುಣವುಳ್ಳ ಗಂಧತನ್ಮಾತ್ರವೂ ಅದರಿಂದ ವ್ಯಕ್ತಗಂಧಗುಣವುಳ್ಳ ಪೃಥಿವಿಯೂ ಹುಟ್ಟುವುವು.†

---

* ಉದ್ಭೂತ=ಉತ್ಕಟ=ಇಂದ್ರಿಯಗಳಿಗೆ ಗೋಚರವಾಗಬಲ್ಲುದು. ಅನುದ್ಭೂತ=ಅನುತ್ಕಟ=ಅತಿಸೂಕ್ಷ್ಮವಾಗಿ ಯಾವ ಇಂದ್ರಿಯಕ್ಕೂ ಗೋಚರವಾಗಲಾರದು.

† ಈಶ್ವರಾತ್ ಪ್ರಕೃತಿಪುರುಷೌ, ಪ್ರಕೃತೇರ್ಮಹಾನ್, ಮಹತೋಽಹಂಕಾರಃ, ಅಹಂಕಾರಾಚ್ಛಬ್ದತನ್ಮಾತ್ರಂ, ಶಬ್ದತನ್ಮಾತ್ರಾದಾಕಾಶಂ ಸ್ಪರ್ಶತನ್ಮಾತ್ರಂ ಚ, ಸ್ಪರ್ಶತನ್ಮಾತ್ರಾದ್ವಾಯುಃ ರೂಪತನ್ಮಾತ್ರಂ ಚ, ರೂಪತನ್ಮಾತ್ರಾತ್ತೇಜೋ ರಸತನ್ಮಾತ್ರಂ ಚ, ರಸತನ್ಮಾತ್ರಾದಾಪೋ ಗಂಧತನ್ಮಾತ್ರಂ ಚ, ಗಂಧತನ್ಮಾತ್ರಾತ್ ಪೃಥಿವೀ॥ ಇತಿ ಯಾದವಪ್ರಕಾಶವಿರಚಿತ ತತ್ತ್ವವಿಚಾರಣಾಯಾಂ.

ಕೆಲವು ಪುರಾಣಗಳಲ್ಲಿ ಭೂತಗಳಿಂದ ತನ್ಮಾತ್ರೋತ್ಪತ್ತಿಯಾದಂತೆ ವಚನಗಳು ಇರುವುವು. ಆದರೂ ತನ್ಮಾತ್ರೆಯಿಂದ ತನ್ಮಾತ್ರೋತ್ಪತ್ತಿಯೇ ಬಹು ಶಾಸ್ತ್ರಸಮ್ಮತವಾಗಿಯೂ ನಮ್ಮ ಆಚಾರ್ಯರುಗಳೆಲ್ಲರಿಗೂ ವಿಶೇಷಾದರಣೀಯವಾಗಿಯೂ ಇರುವುದು.

ಈ ತನ್ಮಾತ್ರಗಳ ಲಕ್ಷಣಗಳು ಇವುಗಳ ಸ್ವರೂಪನಿರೂಪಣವಾಕ್ಯಗಳಲ್ಲಿಯೇ ಇರುವುವು. ಆದರೂ ಈ ಲಘುಲಕ್ಷಣಗಳನ್ನು ತಿಳಿಸಬಹುದು—

ಆಕಾಶೋಪಾದಾನತ್ವವು ಶಬ್ದತನ್ಮಾತ್ರಕ್ಕೂ, ವಾಯೂಪಾದಾನತ್ವವು ಸ್ಪರ್ಶತನ್ಮಾತ್ರಕ್ಕೂ, ತೇಜ ಉಪಾದಾನತ್ವವು ರೂಪತನ್ಮಾತ್ರಕ್ಕೂ, ಜಲೋಪಾದಾನತ್ವವು ರಸತನ್ಮಾತ್ರಕ್ಕೂ, ಪೃಥಿವ್ಯುಪಾದಾನತ್ವವು ಗಂಧತನ್ಮಾತ್ರಕ್ಕೂ ಲಕ್ಷಣಗಳು.

೩೮. ಭೂತಗಳು

(೨೦) ಆಕಾಶಲಕ್ಷಣ— ಸ್ಪರ್ಶರಹಿತವಾಗಿ ಉದ್ಭೂತಶಬ್ದಗುಣವುಳ್ಳ ದ್ರವ್ಯವು* ಆಕಾಶವೆನಿಸುವುದು

ಶ್ರೋತ್ರೇಂದ್ರಿಯಕ್ಕೆ ಆಪ್ಯಾಯಕವಾದ ಭೂತ ಎಂದು ಎರಡನೆಯ ಲಕ್ಷಣವನ್ನೂ ಹೇಳಬಹುದು. ಆಕಾಶದಲ್ಲಿ ಶಬ್ದವೊಂದೇ ಗುಣವಿರುವುದು. ಅವಕಾಶಹೇತುವಾಗಿದೆ—ಎಂದರೆ ಸ್ಪರ್ಶವುಳ್ಳ ಪದಾರ್ಥಗಳ ಸಂಚಾರಕ್ಕೆ ಅಡ್ಡಿಮಾಡದೆ ಇದೆ. ಕಣ್ಣು ತೆರೆದ ಒಡನೆಯೇ ಇದು ಆಕಾಶವೆಂದು ತೋರುವುದರಿಂದಲೂ ಇಲ್ಲಿ ಪಕ್ಷಿ ಹಾರುತ್ತದೆ ಎಂದು ಅನುಭವಸಿದ್ಧವಾಗಿರುವುದರಿಂದಲೂ ಆಕಾಶವು ಪ್ರತ್ಯಕ್ಷವಿಷಯವಾಗಿದೆ.

ಈ ಆಕಾಶವು ನಿತ್ಯದ್ರವ್ಯ, ಅಪ್ರತ್ಯಕ್ಷ ಎಂದು ಹೇಳುವ ತಾರ್ಕಿಕಪಕ್ಷವು ಶ್ರುತಿವಿರುದ್ಧವು.

(೨೧) ವಾಯುಲಕ್ಷಣ—ರೂಪರಹಿತವಾಗಿ ಉದ್ಭೂತಸ್ಪರ್ಶವುಳ್ಳದ್ದು ಎಂದೂ, ನಮ್ಮ ಸ್ಪರ್ಶನೇಂದ್ರಿಯವೊಂದರಿಂದಲೇ ಗ್ರಾಹ್ಯವಾದ ದ್ರವ್ಯ ಎಂದೂ ಲಕ್ಷಣಗಳು.† ವಾಯುವಿನಲ್ಲಿ ಬಣ್ಣವಿಲ್ಲ, ಸ್ಪರ್ಶವಿದೆ ಎಂದು ಲಕ್ಷಣಸಮನ್ವಯ. ವಾಯುವಿನಲ್ಲಿ ಬಣ್ಣ, ರುಚಿ, ಆಕಾರ, ವಾಸನೆ ಇವು ಯಾವುವೂ ಇರುವುದಿಲ್ಲ. ಕೆರೆ, ನದಿ, ಸಮುದ್ರ ಮುಂತಾದುವುಗಳ ಮೇಲೆ ಬೀಸಿಬರುವ ಗಾಳಿಯಲ್ಲಿ ಶೀತ

---

* ಸ್ಪರ್ಶರಹಿತತ್ವೇ ಸತಿ ಉದ್ಭೂತಶಬ್ದವತ್ತ್ವಂ ಆಕಾಶಲಕ್ಷಣಂ; ವಾಯ್ವಾದಿ ವಾರಣಾಯ ವಿಶೇಷಣಂ, ಪ್ರಕೃತಿಮಹದಾದಿ ವಾರಣಾಯ ವಿಶೇಷ್ಯಂ, ಶಬ್ದತನ್ಮಾತ್ರವಾರಣಾಯ ಉದ್ಭೂತೇತಿ.

† ರೂಪರಹಿತತ್ವೇ ಸತಿ ವಿಶಿಷ್ಟಸ್ಪರ್ಶವತ್ತ್ವಂ, ಅಸ್ಮದಾದಿಸ್ಪರ್ಶನೈಕೇಂದ್ರಿಯಗ್ರಾಹ್ಯದ್ರವ್ಯತ್ವಂ. ಪೃಥಿವ್ಯಾದಿ ವಾರಣಾಯ ಸತ್ಯಂತಂ, ಆಕಾಶವಾರಣಾಯ ವಿಶೇಷ್ಯಂ, ಸ್ಪರ್ಶತನ್ಮಾತ್ರವಾರಣಾಯ ವಿಶಿಷ್ಟೇತಿ.

ಸ್ಪರ್ಶವೂ, ಕಾಡುಗಿಚ್ಚು, ಬಿರುಬಿಸಿಲು ಇವುಗಳಲ್ಲಿ ನುಗ್ಗಿ ಬರುವ ಗಾಳಿಯಲ್ಲಿ ಉಷ್ಣ ಸ್ಪರ್ಶವೂ, ತೋಟತೋಟ, ತಿಪ್ಪೆಗುಂಡಿ ಇವುಗಳಲ್ಲಿ ಬಿದ್ದು ಬರುವ ಗಾಳಿಯಲ್ಲಿ ಸುಗಂಧ ದುರ್ಗಂಧಗಳೂ ತೋರಿಬಂದರೂ, ಅವುಗಳೆಲ್ಲಾ ಗಾಳಿಯಿಂದ ಒಯ್ಯಲ್ಪಡುವ ಆ ಆ ಪದಾರ್ಥಗಳ ಸೂಕ್ಷ್ಮಕಣಗಳಿಗೆ ಸೇರಿದ ಗುಣಗಳೇ; ಹೊರತು ಗಾಳಿಗೆ ಇವು ಯಾವುವೂ ಇಲ್ಲ. ಹಾಗಾದರೆ ಉಷ್ಣವೂ ಶೀತವೂ ಅಲ್ಲದ ಮತ್ತೆ ಯಾವ ಸ್ಪರ್ಶ ಎಂದರೆ ಅನುಷ್ಣಾಶೀತಸ್ಪರ್ಶ ವಾಯುವಿನಲ್ಲಿದೆ.

ವಾಯುವಿನ ವಿಭಾಗ—ಈ ವಾಯು ಇಂದ್ರಿಯಾಪ್ಯಾಯಕ*, ಪ್ರಾಣ, ಶರೀರ, ವಿಷಯ ಎಂದು ನಾಲ್ಕು ವಿಧವಾಗಿರುವುದು. ಆಪ್ಯಾಯಕವಾಯು ಪ್ರಾಣಿಗಳ ತ್ವಗಿಂದ್ರಿಯವನ್ನು ಆಪ್ಯಾಯನಮಾಡುವುದು.

ಪ್ರಾಣಿಗಳ ಶರೀರಧಾರಣ ಜೀವಿತಾದಿ ಕಾರ್ಯಗಳನ್ನುಂಟುಮಾಡುವ ವಾಯುವೇ ಪ್ರಾಣವು. ಈ ಪ್ರಾಣವು ಒಂದೇ ಆಗಿದ್ದರೂ ವಿಚಿತ್ರವಾದ ಬೇರೆ ಬೇರೆ ಕಾರ್ಯಗಳನ್ನು ಮಾಡುವುದರಿಂದ ಅಲ್ಲಲ್ಲಿ ಬೇರೆಬೇರೆ ಹೆಸರನ್ನು ಹೊಂದಿದೆ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂದು ಐದು ಹೆಸರುಳ್ಳುದಾಗಿದೆ. ಅವುಗಳಲ್ಲಿ ಪ್ರಾಣವಾಯು ತಲೆಯಲ್ಲಿ ನೆಲೆನಿಂತು ಎದೆ ಕಂಠಗಳಲ್ಲಿ ಸಂಚರಿಸುತ್ತ ಮನುಷ್ಯರ ಬುದ್ಧಿ, ಇಂದ್ರಿಯ, ಹೃದಯ, ಚಿತ್ತ ಇವುಗಳ ಸ್ವರೂಪಸ್ಥಿತಿಗಳನ್ನು ಕಾಪಾಡುತ್ತಿರುವುದು. ಅಪಾನವಾಯು ಪ್ರಾಣಿಗಳ ಅಪಾನಸ್ಥಾನದಲ್ಲಿ ನೆಲೆನಿಂತು ಸಿತಂಬ, ಕಿರುಹೊಟ್ಟೆ, ಲಿಂಗ, ತೊಡೆ ಇವುಗಳಲ್ಲಿ ಸಂಚರಿಸುತ್ತ ಶುಕ್ರಶೋಣಿತಗಳು, ಮಲಮೂತ್ರಗಳು, ಗರ್ಭ ಇವುಗಳನ್ನು ಹೊರಗೆ ಹೊರಡಿಸುವ ಕಾರ್ಯವನ್ನು ಮಾಡುವುದು. ಉದಾನವಾಯು ಎದೆಯಲ್ಲಿ ನೆಲೆನಿಂತು, ಮೂಗು, ನಾಭಿ, ಕತ್ತು ಇವುಗಳಲ್ಲಿ ಸಂಚರಿಸುತ್ತ ಕೇಕರಿಸುವುದು, ಕೆಮ್ಮುವುದು, ಕಕ್ಕುವುದು, ಆಹಾರವನ್ನು ನುಂಗುವುದು ಈ ಕೆಲಸಗಳನ್ನು ನಡೆಸುತ್ತ, ಬಲ, ವರ್ಣ, ಶಕ್ತಿ, ಪ್ರಯತ್ನ, ಸ್ಮರಣ ಇವುಗಳಿಗೆ ಕಾರಣವಾಗಿರುವುದು. ವ್ಯಾನವಾಯು ಹೃದಯದಲ್ಲಿದ್ದುಕೊಂಡು, ಶರೀರದ ಅಂಗಪ್ರತ್ಯಂಗಗಳೊಳಗೆಲ್ಲಾ ಬಹುವೇಗದಿಂದ ನಡೆಮಾಡುತ್ತ ಕೈಕಾಲು ಮುಂತಾದ ಅಂಗಗಳನ್ನು ನೀಡುವುದು, ಮಡಿಸುವುದು, ಎತ್ತುವುದು, ಇಳುಹುವುದು, ನಡೆವುದು ಮುಂತಾದ ಕಾರ್ಯಗಳಿಗೆ ನಿಯಾಮಕವಾಗಿ ಶರೀರದ ಎಲ್ಲಾ ಕಾರ್ಯಗಳನ್ನೂ ಪ್ರಾಯೇಣ ಮಾಡಿಸುತ್ತಿರುವುದು. ಸಮಾನವಾಯು ಜಾಠರಾಗ್ನಿಯ ಹತ್ತಿರದಲ್ಲಿದ್ದುಕೊಂಡು, ಕೋಷ್ಠಗಳೊಳಗೆಲ್ಲಾ ಸಂಚರಿಸುತ್ತ ಆಹಾರವನ್ನು ತೆಗೆದುಕೊಳ್ಳುವುದು, ಪಚನಮಾಡುವುದು, ವಿಂಗಡಿ

* ಆಪ್ಯಾಯನಂ=ಏಕಸಂಘಾತತಾಪನ್ನತ್ವಂ, ಒಂದು ಗುಂಪಿನಲ್ಲಿ ಸೇರಿ ಶಕ್ತಿಯನ್ನುಂಟುಮಾಡುವಿಕೆ.

ಸುವುದು, ಅಲ್ಲಲ್ಲಿಗೆ ಕಳುಹಿಸುವುದು ಮುಂತಾದ ಕಾರ್ಯಗಳಿಗೆ ನಿಯಾಮಕವಾಗಿ ಇರುವುದು.

ಇವುಗಳಲ್ಲದೆ ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ ಎಂಬ ಐದು ವಾಯುಗಳು ಇವಕ್ಕೆ ಸಹಾಯಕಗಳಾಗಿ ಆ ಆ ಕೆಲಸಗಳನ್ನು ನಡೆಸುವುವು. ನಾಗವಾಯು ವಾಗಿಂದ್ರಿಯದ್ವಾರದಲ್ಲಿಯೂ, ಕೂರ್ಮವಾಯು ಕಣ್ಣುರೆಪ್ಪೆ ಮುಚ್ಚಿ ತೆಗೆವುದರಲ್ಲಿಯೂ, ಕೃಕರವಾಯು ಸೀನುವುದರಲ್ಲಿಯೂ, ದೇವದತ್ತವಾಯು ಆಕಳಿಕೆಯಲ್ಲಿಯೂ ಧನಂಜಯವಾಯು ಅವಕಾಶಪೂರಣದಲ್ಲಿಯೂ ಅಧಿಕಾರವನ್ನು ಪಡೆದು ನಡೆಸುತ್ತಿರುವುವು.

ಉಗುರು, ಹಲ್ಲು ಮುಂತಾದುವುಗಳಲ್ಲಿ ಈ ಪ್ರಾಣಶಕ್ತಿ ಅತ್ಯಲ್ಪವಾಗಿ ವ್ಯಾಪಿಸಿರುವುದರಿಂದಲೇ ಅಲ್ಲಿ ಸ್ಪರ್ಶವು ಚೆನ್ನಾಗಿ ತಿಳಿವುದಿಲ್ಲ. ಮರ ಗಿಡ, ಬಳ್ಳಿ ಮುಂತಾದ ಸ್ಥಾವರಶರೀರಗಳಲ್ಲಿಯೂ ಈ ಪ್ರಾಣವಾಯು ಇಷ್ಟೇ ಇರುವುದು.

ಪ್ರಾಣಾಯಾಮಗಳಲ್ಲಿ ರೇಚಕ, ಪೂರಕ, ಕುಂಭಕ ಮುಂತಾದ ಕ್ರಮಗಳಿಂದ ಈ ಪ್ರಾಣವಾಯುವನ್ನು ನಿಯಮಿಸಿ ವಶಪಡಿಸಿದರೆ 'ನಾಡೀಶುದ್ಧಿಯೂ ಜ್ಞಾನೋದಯವೂ ಆಗುವುದು' ಎಂದು ಯೋಗಶಾಸ್ತ್ರದಲ್ಲಿಯೂ, ಅನೇಕ ವ್ಯಾಧಿಗಳು ಹೋಗುವುವೆಂದು ವೈದ್ಯಶಾಸ್ತ್ರದಲ್ಲಿಯೂ ವಿಶೇಷವಾಗಿ ವಿವರಿಸಿರುವುವನ್ನು ಅವುಗಳಲ್ಲಿ ತಿಳಿಯಬಹುದು.

ಈ ಪ್ರಾಣವಾಯುವಿಗಿಂತ ಬೇರೆಯಾದ ಮತ್ತೊಂದು ವಾಯುವೇ ಶರೀರಕ್ಕೆ ಉಪಾದಾನಕಾರಣವಾದ ಪಂಚಭೂತಗಳಲ್ಲಿ ಒಂದಾಗಿ ಶರೀರವಾಗಿ ಪರಿಣಮಿಸಿರುವುದು.

ಹೊರಗೆ ಬೀಸುವ, ಮರಗಳನ್ನು ಅಲ್ಲಾಡಿಸುವ, ಬೀಸಣಿಗೆ ಮುಂತಾದುವುಗಳ ಚಲನದಿಂದ ಬರುವ ಗಾಳಿಯೇ ವಿಷಯವಾಯು ಎನಿಸುವುದು. ಇದು ಬೆಂಕಿ ಉರಿವುದಕ್ಕೂ ಮತ್ತು ಪದಾರ್ಥಗಳ ಚಲನಾದಿಗಳಿಗೂ ಸಹಾಯಕವಾಗಿ ಅನೇಕ ವಿಧವಾಗಿ ಉಪಕಾರಮಾಡುವುದು.

೩೯. ತೇಜಸ್ಸು

(೨೨) ತೇಜೋಲಕ್ಷಣ—ಉದ್ಭೂತವಾದ ಉಷ್ಣಸ್ಪರ್ಶವುಳ್ಳ ದ್ರವ್ಯ ಎಂದೂ, ಭಾಸ್ವರರೂಪ (ರವಳಿಬಣ್ಣ)ವುಳ್ಳ ದ್ರವ್ಯ ಎಂದೂ ಲಕ್ಷಣಗಳು. ಇವು ಎಲ್ಲಾ ತೇಜಸ್ಸುಗಳಲ್ಲಿಯೂ ಇವೆಯಾಗಿ ಲಕ್ಷಣಸಮನ್ವಯವಾಯಿತು.

ತೇಜಸ್ಸು ಪಚನಾದಿ ಹೇತುವಾಗಿರುವುದು. ಇದು ಅಗ್ನಿ, ಸೂರ್ಯ ಮುಂತಾದ ರೂಪದಿಂದ ಹೊರಗೆ ಪಚನಾದಿ ಹೇತುವಾಗಿಯೂ ಪ್ರಾಣಿಗಳ ಶರೀರದಲ್ಲಿ

ವೈಶ್ವಾನರ ಎಂಬ ಜಾಠರಾಗ್ನಿರೂಪದಿಂದ ಒಳಗೆ ಪಚನಾದಿ ಹೇತುವಾಗಿಯೂ ಇರುವುದು.

ಪಚನವೆಂದರೆ—ಪದಾರ್ಥಗಳಲ್ಲಿ ಮೊದಲು ಇದ್ದ ಬಣ್ಣ, ರುಚಿ, ಗಂಧ, ಸ್ಪರ್ಶಗಳು ಮಾರ್ಪಟ್ಟು, ಹೊಸದಾದ ರೂಪ, ರಸ, ಗಂಧ, ಸ್ಪರ್ಶಗಳು ಉಂಟಾಗುವ ತೇಜಸ್ಸಂಯೋಗವು. ಗಿಡಗಳ ಹೂ ಹೀಚಾಗುವುದೂ, ಹೀಚು ಕಾಯಾಗುವುದೂ, ಕಾಯಿ ಹಣ್ಣಾಗುವುದೂ, ಹಣ್ಣು ಕಳಿವುದೂ ಇವೆಲ್ಲವೂ ಸೂರ್ಯ ತೇಜಸ್ಸಂಬಂಧದಿಂದಲೇ ಆಗಿದೆ. ಅಕ್ಕಿಯನ್ನು ಬೇಯಿಸಿ ಅನ್ನಮಾಡಿದಮೇಲೆ ಅಕ್ಕಿಯಲ್ಲಿ ಮೊದಲು ಇದ್ದ ಬಣ್ಣ, ರುಚಿ, ಗಂಧ, ಸ್ಪರ್ಶಗಳು ಹೋಗಿ ಅನ್ನದಲ್ಲಿ ಬೇರೆ ಬೇರೆ ಬಣ್ಣ ಮುಂತಾದುದು ಬಂದಿರುವುದನ್ನು ಎಲ್ಲರೂ ನೋಡಿರುವರು. ಇವೆಲ್ಲವೂ ಅಗ್ನಿಸಂಬಂಧದಿಂದಲೇ ಆಗಿದೆ.

ನೆಲ್ಲುಹುಲ್ಲಿನಲ್ಲಿ ಅಡೆಯಿಟ್ಟ ಮಾವಿನಕಾಯಿ ತನ್ನಲ್ಲಿದ್ದ ಹಸುರುಬಣ್ಣಕ್ಕೆ ಪ್ರತಿಯಾಗಿ ಹಳದಿಬಣ್ಣವನ್ನೂ, ಹುಳಿಗೆ ಬದಲು ಸಿಹಿಯನ್ನೂ, ಕನರುವಾಸನೆಗೆ ಬದಲು ಇಂಪಾದ ವಾಸನೆಯನ್ನೂ, ಕಠಿನಸ್ಪರ್ಶಕ್ಕೆ ಬದಲು ಮೃದುಸ್ಪರ್ಶವನ್ನೂ ಪಡೆವುದೂ ಆ ನೆಲ್ಲುಹುಲ್ಲಿನಿಂದ ಬಂದ ಶಾಕದಿಂದಲೇ ಆಗಿರುವುದು. ಪ್ರಾಣಿಗಳು ತಿಂದ ಆಹಾರಗಳು ವೈಶ್ವಾನರವೆಂಬ ಅವುಗಳ ಜಾಠರಾಗ್ನಿಯ ಮೂಲಕವಾಗಿ ಪಚನಹೊಂದಿ ವಿಂಗಡಿಸಲ್ಪಟ್ಟು ಆ ಆಹಾರಗಳ ನಿಸ್ಸಾರಭಾಗಗಳು ಮಲರೂಪವಾಗಿಯೂ, ಸಾರಸಾರತರವಾದ ಭಾಗಗಳು ಆ ಆ ಶರೀರೋಪಯೋಗಿಯಾದ ರಕ್ತರಸಮಾಂಸಾದಿರೂಪವಾಗಿಯೂ, ಪರಿಣಾಮವನ್ನು ಹೊಂದುವುವು. ಆ ಆಹಾರಪದಾರ್ಥಗಳಲ್ಲಿದ್ದ ರೂಪ ರಸ ಗಂಧ ಸ್ಪರ್ಶಾದಿಗಳು ಮಾರ್ಪಟ್ಟು ಅವುಗಳ ಪರಿಣಾಮವಾದ ರಕ್ತರಸಮಾಂಸಾದಿಗಳಲ್ಲಿಯೂ ಮಲಗಳಲ್ಲಿಯೂ ಬೇರೆಯಾಗಿರುವುದು ಎಲ್ಲರಿಗೂ ತಿಳಿದೇ ಇದೆ.

ಅಲ್ಲದೆ ಕಣ್ಣಿಂದ ಪದಾರ್ಥಗಳನ್ನು ಗ್ರಹಿಸುವಾಗ ತೇಜಸ್ಸು ಬೆಳಕಿನ ಮೂಲಕವಾಗಿ ಸಹಕಾರಿಯಾಗಿರುವುದು. ಚಾಕ್ಷುಷ ಪ್ರತ್ಯಕ್ಷವಾಗಬೇಕಾದರೆ ಗ್ರಹಿಸಲ್ಪಡಬೇಕಾದ ಪದಾರ್ಥಗಳಿಗೆ ಬಣ್ಣವೂ ಬೆಳಕಿನ ಸಂಯೋಗವೂ ಇರಲೇಬೇಕು. ಬಣ್ಣವಿಲ್ಲದೆ ಇರುವುದರಿಂದ ಗಾಳಿ ಕಣ್ಣಿಗೆ ಕಾಣಿಸುವುದಿಲ್ಲ. ಬಣ್ಣವುಳ್ಳ ವಸ್ತುವು ಬೆಳಕಿನ ಸಂಯೋಗವಿಲ್ಲದುದರಿಂದ ಕತ್ತಲಲ್ಲಿ ಕಾಣಿಸುವುದಿಲ್ಲ. ಅತಿಸೂಕ್ಷ್ಮವಾದ ಪದಾರ್ಥಗಳನ್ನು ಗ್ರಹಿಸಬೇಕಾದರೆ ಅದಕ್ಕೆ ತಕ್ಕಷ್ಟು ಬೆಳಕಿನ ಸಹಾಯ ಬೇಕಾಗಿರುವುದು

ತೇಜೋವಿಭಾಗ

ತೇಜಸ್ಸು ಇಂದ್ರಿಯಾಪ್ಯಾಯಕ, ವೈಶ್ವಾನರ, ಶರೀರ, ವಿಷಯ ಎಂದು ನಾಲ್ಕುವಿಧವಾಗಿದ್ದು ಸಕಲ ಪ್ರಾಣಿಗಳಿಗೂ ಉಪಕಾರವನ್ನು ಮಾಡುವುದು.

ಇಂದ್ರಿಯಾಪ್ಯಾಯಕ—ಇದು ಚಕ್ಷುರಿಂದ್ರಿಯಕ್ಕೂ ವಾಗಿಂದ್ರಿಯಕ್ಕೂ* ಆಪ್ಯಾಯಕವಾಗಿರುವುದು.

ವೈಶ್ವಾನರ ತೇಜಸ್ಸು—ಪ್ರಾಣಿಗಳ ಶರೀರದೊಳಗಿದ್ದು, ಆಹಾರ ಪಾನೀಯಾದಿಗಳನ್ನು ಪ್ರಾಣಾದಿ ವಾಯುಸಹಾಯದಿಂದ ಪಚನಮಾಡುವುದು.

ಶರೀರ ತೇಜಸ್ಸು—ತೇಜಃ ಪ್ರಚುರವಾದ ಅಗ್ನಿ ಸೂರ್ಯಲೋಕದ ಶರೀರವಾಗಿಯೂ ಸಕಲ ಪ್ರಾಣಿಗಳ ಶರೀರೋಪಾದಾನವಾದ ಪಂಚಭೂತಗಳಲ್ಲಿ ಒಂದಾಗಿಯೂ ಇರುವುದು.

ವಿಷಯ ತೇಜಸ್ಸು—ಬಿಸಿಲು, ಬೆಳದಿಂಗಳು, ಬೆಂಕಿ, ಮಿಂಚು ಮುಂತಾದುವು.

ತೇಜಸ್ಸನ್ನು ಕೆಲವರು ಶಾಸ್ತ್ರಕಾರರು ಭೌಮ, ದಿವ್ಯ, ಔದರ್ಯ, ಆಕರಜ ಎಂದು ಬೇರೆ ನಾಲ್ಕುತೆರನಾಗಿಯೂ ವಿಂಗಡಿಸುವರು

ಭೌಮತೇಜಸ್ಸು—ಪೃಥಿವೀ ಸಂಬಂಧವಾದ ಸೌದೆ, ಇದ್ದಿಲು, ಎಣ್ಣೆ, ತುಪ್ಪ, ಅರಗು, ಮೇಣ ಮುಂತಾದ ಇಂಧನಗಳಿಂದ ಬದುಕಿ ಬೆಳಗುವ ತೇಜಸ್ಸು ಭೌಮವೆನಿಸುವುದು. ದಿವ್ಯತೇಜಸ್ಸು—ಸೂರ್ಯ, ಚಂದ್ರ, ನಕ್ಷತ್ರ, ಮಿಂಚು, ಬಡಬಾಗ್ನಿ ಮುಂತಾದುವು. ಔದರ್ಯ ತೇಜಸ್ಸು—ಮೊದಲು ಹೇಳಿದ ಜಾಠರಾಗ್ನಿ. ಆಕರಜ (ಗಣಿಯಲ್ಲಿ ಹುಟ್ಟಿದ) ತೇಜಸ್ಸು—ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಇಂಧನವಿಲ್ಲದೆ ಇರುವ ತೇಜಸ್ಸು.

ತೇಜಸ್ಸು ಪ್ರಭೆ† ಎಂದೂ, ಪ್ರಭಾಶ್ರಯ‡ ಎಂದೂ ಪುನಃ ಎರಡು ವಿಧವಾಗಿರುವುದು.

ಪ್ರಭಾ—ತನ್ನ ಸುತ್ತಲೂ ಆವರಣವಿದ್ದರೆ ಅದರೊಳಗೆ ಅಡಗಿಯೂ ಆವರಣವಿಲ್ಲದಿದ್ದರೆ ತನ್ನ ವೇಗಶಕ್ತಿಗೆ ಅನುಸಾರವಾಗಿ ಹೆಚ್ಚು ಹೆಚ್ಚಾಗಿ ಪ್ರಸರಿಸಿಯೂ ವರ್ತಿಸುವ ತೇಜಸ್ಸು. ಈ ಪ್ರಭೆ ತನ್ನ ಆಶ್ರಯವು ಹುಟ್ಟುವಾಗ ಹುಟ್ಟುತ್ತಲೂ ಲಯಿಸುವಾಗ ಲಯಿಸುತ್ತಲೂ ಇರುವುದು. ಅಲ್ಲದೆ ತನ್ನ ಆಶ್ರಯವಾದ ಪ್ರಭಾ ವಿಶಿಷ್ಟಪದಾರ್ಥದ ಹತ್ತಿರದಲ್ಲಿ ಚಿಕ್ಕದಾಗಿದ್ದು ದೂರಕ್ಕೆ ಹೋದ ಹಾಗೆಲ್ಲಾ ವಿಶಾಲವಾಗುವುದು. ಇದು ಬಿಸಿಲು, ಬೆಳದಿಂಗಳು ಮುಂತಾದ ಬೆಳಕು.

* ತೇಜೋಮಯೀ ವಾಕ್, ಆದಿತ್ಯಶ್ಚಕ್ಷುರ್ಭೂತ್ವಾಽಕ್ಷಿಣೀ ಪ್ರಾವಿಶತ್. ರಶ್ಮಿಭಿರೇಷೋಽಸ್ಮಿನ್ ಪ್ರತಿಷ್ಠಿತಃ.

† ಪ್ರಭಾ—ಆವರಣ ಸದಸದ್ಭಾವಾಧೀನ ಸಂಕೋಚವಿಕಾಸಃ ಪ್ರಸಾರೀ ತೇಜೋವಿಶೇಷಃ. ಸಾ ಚ ಪ್ರಭಾವದ್ಭಿಸ್ಸಹೋತ್ಪದ್ಯತೇ ಸಹೈವ ವಿನಶ್ಯತಿ

‡ ಪ್ರಭಾವಿಶಿಷ್ಟಂ ತೇಜಃ ಪ್ರಭಾವತ್.

ಇಂಥ ಪ್ರಭೆಯುಳ್ಳ ತೇಜಸ್ಸೇ ಪ್ರಭಾಶ್ರಯವು. ಸೂರ್ಯ, ಚಂದ್ರ, ನಕ್ಷತ್ರ, ದೀಪ ಮುಂತಾದುವು.

(೨೩) ೪೦. ಜಲ

ಜಲಲಕ್ಷಣಂ—ಶೀತಸ್ಪರ್ಶವುಳ್ಳ ದ್ರವ್ಯ ಎಂದೂ, ಗಂಧಶೂನ್ಯವಾಗಿ ಉದ್ಭೂತರಸವುಳ್ಳ ದ್ರವ್ಯ ಎಂದೂ ಲಕ್ಷಣಗಳು.

ಜಲದಲ್ಲಿ ಬಿಳುಪು, ತಣ್ಪು, ಸಿಹಿ ಇವು ಇರುವುವು; ಆದರೂ ನೀರು ತಂಗಿ ನಿಂತ ಆಶ್ರಯವಸ್ತುವಿನ ಗುಣಭೇದದಿಂದ ಆ ಆ ಭೇದವನ್ನು ಪಡೆವುದು. ಇದು ಸಮುದ್ರ, ಹೊಳೆ, ಮಳೆ, ಮಂಜು, ಮಂಜುಗಡ್ಡೆ, ಆಲಿಕಲ್ಲು ಮುಂತಾದ ಬೇರೆ ಬೇರೆ ಹೆಸರುಗಳನ್ನೂ, ಉಪ್ಪು, ಕ್ಷಾರ, ಒಗರು ಮುಂತಾದ ರಸ ಭೇದ ಗಳನ್ನೂ, ಹೆಪ್ಪುಕಟ್ಟಿಕೊಂಡು ಮಂಜುಗಡ್ಡೆಯಾಗಿದ್ದರೆ ಚೌಕ, ದುಂಡು, ಡೊಂಕು ಮುಂತಾದ ಆಕಾರಭೇದಗಳನ್ನೂ ಪಡೆವುದು. ನೀರು ವಸ್ತುಗಳನ್ನು ನನೆಸುವು ದಕ್ಕೂ ಹುಡಿಯಾದುದನ್ನು ಉಂಡೆ ಮಾಡುವುದಕ್ಕೂ ಉಪಯೋಗಿಯಾಗಿರುವುದು. ಇದು ರಸನೇಂದ್ರಿಯಾಪ್ಯಾಯಕ, ಪ್ರಾಣಾಪ್ಯಾಯಕ,* ಶರೀರ, ವಿಷಯ ಎಂದು ನಾಲ್ಕು ತೆರನಾಗಿರುವುದು.

ಜಲವು ರಸನೇಂದ್ರಿಯಾಪ್ಯಾಯಕವಾಗಿಯೂ ಪ್ರಾಣಾಪ್ಯಾಯಕವಾಗಿಯೂ ಇದೆ ಎಂದು ಶ್ರುತಿ ಹೇಳುವುದು. ವರುಣಲೋಕದಲ್ಲಿರುವವರ ಜಲರೂಪ ಶರೀರಾ ರಂಭಕವಾಗಿದೆ. ವಿಷಯಜಲವು—ಕೊಳ, ಕೆರೆ, ಕಾಲುವೆ ಮುಂತಾದುವುಗಳ ಜಲ.

(೨೪) ೪೧. ಪೃಥಿವಿ

ಪೃಥಿವೀಲಕ್ಷಣ—ವಿಶಿಷ್ಟಗಂಧ† ವುಳ್ಳ ದ್ರವ್ಯ ಎಂದೂ, ರಸವುಳ್ಳುದಾಗಿ ಅನುಷ್ಣಾಶೀತಸ್ಪರ್ಶವುಳ್ಳ ದ್ರವ್ಯ‡ ಎಂದೂ ಲಕ್ಷಣಗಳು. ಪೃಥಿವಿ ಸ್ವಭಾವ ದಿಂದ ಸುರಭಿಗಂಧ, ಮಧುರರಸ, ಕರಿಯಬಣ್ಣ, ಅನುಷ್ಣಾಶೀತಸ್ಪರ್ಶ ಇವುಗಳು ಳ್ಳುದು; ಆದರೂ ಪಾಕಭೇದದಿಂದ ವಿಚಿತ್ರವಾದ ವಿವಿಧವರ್ಣ ರಸಗಂಧವುಳ್ಳು ದಾಗುವುದು.

ಪೃಥಿವಿ—ಮನ ಆಪ್ಯಾಯಕ, ಇಂದ್ರಿಯಾಪ್ಯಾಯಕ, ಶರೀರ, ವಿಷಯ ಎಂದು ನಾಲ್ಕು ವಿಧವಾಗಿರುವುದು.

ಪೃಥಿವಿಗೆ— ಮನ ಆಪ್ಯಾಯಕತ್ವವೂ ಘ್ರಾಣೇಂದ್ರಿಯಾಪ್ಯಾಯಕತ್ವವೂ ಶ್ರುತಿ ಸಿದ್ಧವಾಗಿಯೇ ಇವೆ.

* ಆಪೋಮಯಃ ಪ್ರಾಣಃ.

† ವಿಶಿಷ್ಟ ಗಂಧವತ್ತ್ವಂ. ಗಂಧತನ್ಮಾತ್ರಸಿರಾಸಾಯ ವಿಶಿಷ್ಟೇತಿ.

‡ ವಾಯುಸಿರಾಸಾಯ ರಸವತ್ತ್ವೇ ಸತೀತಿ, ಜಲಸಿರಾಸಾಯ ವಿಶೇಷ್ಯಂ.

ಮನುಷ್ಯ, ತಿರ್ಯಕ್, ಸ್ಥಾವರ ಶರೀರಗಳಲ್ಲಿ ಶರೀರೋಪಾದಾನತ್ವವನ್ನು ತಿಳಿಯಬಹುದು.

ಮಣ್ಣು, ಕಲ್ಲು, ಮುಂತಾದುವುಗಳೆಲ್ಲವೂ ವಿಷಯ ಪೃಥಿವಿ ಎಂದು ತಿಳಿಯಬೇಕು.

ಈ ಭೂತಗಳೊಳಗೆ ಮೊದಲನೆಯದಾದ ಆಕಾಶಕ್ಕೆ ಶಬ್ದವೆಂಬ ಒಂದೇ ಗುಣವೂ, ಅದರಿಂದ ಹುಟ್ಟಿದ ವಾಯುವಿಗೆ ಶಬ್ದಸ್ಪರ್ಶಗಳೂ, ಅದರಿಂದ ಹುಟ್ಟಿದ ತೇಜಸ್ಸಿಗೆ ಶಬ್ದಸ್ಪರ್ಶರೂಪಗಳೂ ಅದರಿಂದ ಹುಟ್ಟಿದ ಜಲಕ್ಕೆ ಶಬ್ದಸ್ಪರ್ಶರೂಪ ರಸಗಳೂ ಅದರಿಂದ ಹುಟ್ಟಿದ ಪೃಥಿವಿಗೆ ಶಬ್ದಸ್ಪರ್ಶರೂಪರಸಗಂಧಗಳೂ ಉಂಟಾಗಿ ಈ ರೀತಿಯಲ್ಲಿ ಹಿಂದುಹಿಂದಣ ಭೂತದ ಗುಣಗಳು ಮುಂದು ಮುಂದಣ ಭೂತದಲ್ಲಿ ಅನುಸರಿಸಿ ಉಂಟಾಗಿರುವುವು.

೪೨. ಪಂಚೀಕರಣಪ್ರಕಾರ (ಅಂಡಸೃಷ್ಟಿಕ್ರಮ)

ಪರಮಕಾರುಣಿಕನಾದ ಶ್ರೀಮನ್ನಾರಾಯಣನು ಪ್ರಳಯಕಾಲದಲ್ಲಿ ಪ್ರಕೃತಿಯಲ್ಲಿ ಹುದುಗಿಹೋಗಿದ್ದ ಜೀವಾತ್ಮರುಗಳಲ್ಲಿ ದಯೆಗೂಡಿದವನಾಗಿ ಅವರು ಬಾಳುವುದಕ್ಕೋಸ್ಕರ ಅವರಿಗೆ ದೇಹೇಂದ್ರಿಯಾದಿಗಳನ್ನು ಕೊಡಬೇಕೆಂದು ಎಣಿಸಿ, ಅವುಗಳಿಂದ ಅವರು ಕರ್ಮಗಳನ್ನು ಮಾಡುವುದಕ್ಕೂ ಕರ್ಮಫಲಗಳನ್ನು ಅನುಭವಿಸುವುದಕ್ಕೂ ಸ್ಥಾನವಾದ ಬ್ರಹ್ಮಾಂಡವನ್ನು ಸೃಷ್ಟಿಸಿದನು. ಅದು ಹೇಗೆಂದರೆ— ಪೂರ್ವದಲ್ಲಿ ತಾನು ಸೃಷ್ಟಿಸಿದ ಪಂಚಮಹಾಭೂತಗಳು ಒಂದರೊಳಗೆ ಮತ್ತೊಂದು ಬೆರೆಸದೆ ಬೇರೆ ಬೇರೆಯಾಗಿರುವುದರಿಂದ ಯಾವ ಕೆಲಸಕ್ಕೂ ಒದಗದೆ ಇರುವುದನ್ನು ಕಂಡು ಅವೆಲ್ಲವನ್ನೂ ಪಂಚೀಕರಣಪ್ರಕಾರದಿಂದ ಒಂದುಗೂಡಿಸಿದನು. **ಪಂಚೀಕರಣವೆಂದರೆ**—ಮಹಾಭೂತಗಳೈದನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಎರಡು ಭಾಗಮಾಡಿ, ಅವುಗಳಲ್ಲಿ ಒಂದೊಂದರ ಅರ್ಧಭಾಗಗಳನ್ನೂ ಪುನಃ ನಾಲ್ಕು ಭಾಗಮಾಡಿ, ಪ್ರತಿಯೊಂದು ಭೂತದ ಅಷ್ಟಮಾಂಶಗಳು ನಾಲ್ಕುಸೇರಿದ ಅರ್ಧಾಂಶವನ್ನು ಆ ಆ ಭೂತದ ಅರ್ಧಾಂಶದೊಡನೆ ಸೇರಿಸಲು ಒಂದು ವಸ್ತುವೆನಿಸುವುದು. ಅದರಲ್ಲಿ ಆಕಾಶದ ಅರ್ಧಾಂಶವೂ ವಾಯು ತೇಜೋ ಜಲ ಪೃಥಿವಿಗಳ ಅಷ್ಟಮಾಂಶಗಳು ನಾಲ್ಕು ಸೇರಿದ ಅರ್ಧಾಂಶವೂ ಒಂದಾಗಿ ಕೂಡಿಸಲ್ಪಟ್ಟು ಪಂಚೀಕೃತಾಕಾಶವೆನಿಸಿತು. ಹಾಗೆಯೇ ವಾಯ್ವಂಶದ ಅರ್ಧವೂ ಮಿಕ್ಕ ನಾಲ್ಕು ಭೂತಗಳ ಅಷ್ಟಮಾಂಶ ನಾಲ್ಕೂ ಕೂಡಿ ಪಂಚೀಕೃತವಾಯುವೆನಿಸಿತು. ಹಾಗೆಯೇ ತೇಜೋಂಶದರ್ಧವೂ ಮಿಕ್ಕ ನಾಲ್ಕು ಭೂತಗಳ ಅಷ್ಟಮಾಂಶಗಳು ನಾಲ್ಕೂ ಕೂಡಿ ಪಂಚೀಕೃತ ತೇಜಸ್ಸು ಎನಿಸಿತು. ಜಲಾಂಶವರ್ಧವೂ ಮಿಕ್ಕ ನಾಲ್ಕು ಭೂತಗಳ ಅಷ್ಟಮಾಂಶಗಳು ನಾಲ್ಕೂ ಕೂಡಿ ಪಂಚೀಕೃತ ಜಲವೆನಿಸಿತು. ಪೃಥಿವ್ಯಂಶವರ್ಧವೂ

ಮಿಕ್ಕ ಭೂತಗಳ ಅಷ್ಟಮಾಂಶಗಳು ನಾಲ್ಕೂ ಕೂಡಿ ಪಂಚೀಕೃತ ಪೃಥಿವಿಯೆನಿಸಿತು. ಈ ರೀತಿಯಾಗಿ ಪಂಚೀಕೃತ ಭೂತಗಳಲ್ಲಿ ಒಂದೊಂದರಲ್ಲಿಯೂ ಎಲ್ಲಾ ಭೂತಾಂಶಗಳು ಸೇರಿದ್ದರೂ ಹೆಚ್ಚುಕಡಮೆಯಾಗಿ ಸೇರಿರುವುದರಿಂದ ಯಾವ ರಾಶಿಯಲ್ಲಿ ಯಾವ ಭೂತಾಂಶವು ಅಧಿಕವಾಗಿದೆಯೋ ಆ ರಾಶಿಗೆ ಆ ಭೂತದ ಹೆಸರು ಬಂದಿರುವುದು.

ಹೀಗೆ ಪಂಚಮಹಾಭೂತಗಳು, ಮಹದಹಂಕಾರ ತತ್ತ್ವಗಳು ಈ ವಸ್ತುಗಳಿಂದ ಭಗವಂತನು ಬ್ರಹ್ಮಾಂಡವನ್ನುಂಟುಮಾಡುವಲ್ಲಿ ಕುಂಭಕಾರಾದಿಗಳಂತೆ ಶರೀರಾಯಾಸವೊಂದೂ ಇಲ್ಲದೆ ನೀರಿನಲ್ಲಿ ಗುಳ್ಳೆಗಳನ್ನುಂಟುಮಾಡುವಂತೆ ತನ್ನ ಇಚ್ಛಾಮಾತ್ರದಿಂದ ಬ್ರಹ್ಮಾಂಡವನ್ನು ಸೃಷ್ಟಿಸಿದನು. ಬಳಿಕ ಆ ಬ್ರಹ್ಮಾಂಡದಲ್ಲಿ ಹುಟ್ಟುವ ದೇವತಿರ್ಯಙ್ಮನುಷ್ಯಸ್ಥಾವರಗಳ ಸೃಷ್ಟಿಯನ್ನು ತನ್ನ ಆಜ್ಞಾನುಸಾರ ಮತ್ತೊಬ್ಬನಿಂದ ಮಾಡಿಸುವೆನೆಂದು ಚತುರ್ಮುಖಬ್ರಹ್ಮನನ್ನು ಸೃಷ್ಟಿಸಿದನು. ತಾನಾಗಿಯೇ ಮಾಡಿದ ತತ್ತ್ವಸೃಷ್ಟಿಯೂ ಅಂಡಸೃಷ್ಟಿಯೂ ಬ್ರಹ್ಮಸೃಷ್ಟಿಯೂ ಸಮಷ್ಟಿಸೃಷ್ಟಿಯೆನಿಸುವುದು. ಚತುರ್ಮುಖನಿಂದ ಮಾಡಿಸಿದ ದೇವಾದಿಸೃಷ್ಟಿ ವ್ಯಷ್ಟಿಸೃಷ್ಟಿಯೆನಿಸುವುದು. ಹೀಗೆ ಅನೇಕ ಬ್ರಹ್ಮಾಂಡಗಳನ್ನು ಏಕಕಾಲದಲ್ಲಿ ಅನಾಯಾಸವಾಗಿಯೇ ಸೃಷ್ಟಿಸಿರುವನು. ಬಳಿಕ ಚತುರ್ಮುಖನು ಭಗವದಾಜ್ಞೆಯಂತೆ ಸೃಷ್ಟಿಯನ್ನು ವೇದದಲ್ಲಿ ಹೇಳಿರುವಹಾಗೆ ಪೂರ್ವಕಲ್ಪಕ್ರಮಾನುಸಾರವಾಗಿ ಸೃಷ್ಟಿಸುತ್ತಿರುವನು.

ಶ್ರೀಮನ್ನಾರಾಯಣನು ತಾನು ಸೃಷ್ಟಿಸಿದ ಚತುರ್ಮುಖಬ್ರಹ್ಮನಿಗೆ ಸಕಲ ವೇದಗಳನ್ನೂ ಉಪದೇಶಿಸಿ, ಪ್ರಪಂಚದ ವಿಚಿತ್ರಸೃಷ್ಟಿಗೆ ಬೇಕಾದಷ್ಟು ಜ್ಞಾನಶಕ್ತ್ಯಾದಿಗಳನ್ನೂ ಕೊಟ್ಟು, ತಾನೇ ಅವನೊಳಗೆ ಅಂತರ್ಯಾಮಿಯಾಗಿ ನಿಂತು ನೋಡಿಕೊಳ್ಳುತ್ತ, ಅವನಮೂಲಕ ಪ್ರಪಂಚಸೃಷ್ಟಿಯನ್ನು ಮಾಡಿಸುತ್ತಿರುವನು. ಇದೇ ಸದ್ವಾರಕಸೃಷ್ಟಿ, ವ್ಯಷ್ಟಿಸೃಷ್ಟಿ ಎಂದು ಹೇಳಲ್ಪಡುವುದು. ಇಂಥ ಬ್ರಹ್ಮಾಂಡಗಳು ಅಸಂಖ್ಯಾತವಾಗಿ ಏಕದಾ ಹುಟ್ಟಿ ಆಡುವ ಚೆಂಡಿನಂತೆ ಭಗವಂತನಿಗೆ ಲೀಲೋಪಕರಣವಾಗಿ ಇರುವುವು. ಇವುಗಳ ಆಕಾರ, ವಿಸ್ತಾರ ಮುಂತಾದ ವಿಶೇಷ ವಿವರಣವನ್ನು ವಿಷ್ಣುಪುರಾಣದ ಭುವನಕೋಶ ವಿಸ್ತಾರಘಟ್ಟದಲ್ಲಿ ವಿಶದವಾಗಿ ತಿಳಿಯಬಹುದು.

ಈ ಇಪ್ಪತ್ತುನಾಲ್ಕು ತತ್ತ್ವಗಳಲ್ಲಿ ಪಂಚಮಹಾಭೂತಗಳೂ ಪ್ರಕೃತಿ ಮಹದಹಂಕಾರಗಳೂ ಸಹ ಸಕಲ ಪ್ರಾಣಿಗಳ ಶರೀರಾರಂಭಕಗಳಾಗಿಯೂ ಮಿಕ್ಕುವು ಆಭರಣದಲ್ಲಿ ಕೆತ್ತಿದ ರತ್ನಗಳಂತೆ ಶರೀರಾಶ್ರಿತಗಳಾಗಿಯೂ ಪ್ರತಿಯೊಬ್ಬ ಜೀವನಿಗೂ ಬೇರೆ ಬೇರೆಯಾಗಿದ್ದು ಅಸಂಖ್ಯಾತವಾಗಿ ಇರುವುವು.

೪೩. ಶರೀರಲಕ್ಷಣ ಸ್ವರೂಪ ವಿಭಾಗಾದಿ ವಿಚಾರ

ಶರೀರಲಕ್ಷಣ—ಅಂತ್ಯಾವಯವಿಯಾಗಿ ಚೇಷ್ಟಾಶ್ರಯವಾದುದು ಶರೀರ; ಇಂದ್ರಿಯಾಶ್ರಯವಾದುದು ಶರೀರ; ಭೋಗಾಯತನವಾದುದು ಶರೀರ; ಕರ ಪಾದಾದಿಗಳುಳ್ಳುದು ಶರೀರ ಎಂದು ಲಕ್ಷಣಗಳನ್ನು ನೈಯಾಯಿಕಾದಿಗಳು ಬಹುವಿಧ ವಾಗಿ ಹೇಳಿರುವರು. ಅವುಗಳೆಲ್ಲಾ ಅವ್ಯಾಪ್ತ್ಯಾದಿ ದೋಷದುಷ್ಟವಾಗಿರುವುದ ರಿಂದ ಅವನ್ನು ಪರಿತ್ಯಜಿಸಿ, ವಿಶಿಷ್ಟಾದ್ವೈತಸಿದ್ಧಾಂತಿಗಳು ಒಪ್ಪಿ ಹೇಳಿರುವ ಲಕ್ಷಣವನ್ನು ಇಲ್ಲಿ ವಿವರಿಸುತ್ತೇವೆ. ಯಾವ ದ್ರವ್ಯವು ಯಾವ ಚೇತನನಿಗೆ ನಿಯಮದಿಂದ ಆಧೇಯವಾಗಿಯೂ ವಿಧೇಯವಾಗಿಯೂ ಶೇಷವಾಗಿಯೂ ಅಪೃಥಕ್ಸಿದ್ಧ*ವಾಗಿಯೂ ಇದೆಯೋ ಆ ದ್ರವ್ಯವು ಆ ಚೇತನನಿಗೆ ಶರೀರವು ಎಂದೂ, ಒಳಗೆ ಪ್ರವೇಶಿಸಿರುವ ಚೇತನನಿಂದ ಆಳಲ್ಪಡುವ ಅಪೃಥಕ್ಸಿದ್ಧ ದ್ರವ್ಯ (ಅಂತಃಪ್ರವಿಷ್ಟಪುರುಷನಿಯಾಮ್ಯತ್ವ) ಎಂದೂ ಫಲಿತವಾಯಿತು. ಈ ಲಕ್ಷಣ ಗಳು ಸಕಲ ಪ್ರಾಣಿಗಳ ಶರೀರಗಳಲ್ಲಿಯೂ ಸಮನ್ವಯವಾಗುವುವು. ಅಲ್ಲದೆ ಈ ಸಕಲ ಪ್ರಪಂಚವೂ ಸರ್ವೇಶ್ವರನಾದ ನಾರಾಯಣನಿಗೆ ಶರೀರವಾಗಿದೆ ಎಂಬ ಕಡೆಯಲ್ಲಿಯೂ ಸುಸಂಗತವಾಗಿವೆ. ಹೇಗೆಂದರೆ, ಒಂದು ದ್ರವ್ಯಕ್ಕೆ ಒಬ್ಬ ಚೇತನ ನೊಂದಿಗೆ ಉಂಟಾದ ಪೃಥಕ್ಸಿದ್ಧಿಗೆ ಯೋಗ್ಯವಲ್ಲದ ಆಧಾರಾಧೇಯಭಾವವೂ, ನಿಯಂತೃನಿಯಮ್ಯಭಾವವೂ, ಶೇಷಶೇಷಿಭಾವವೂ ಒಂದೊಂದೇ ಅಲ್ಲವೇ ಶರೀರ ಲಕ್ಷಣವಾಗಿರುವುದು? ಹೀಗೆ ಇಲ್ಲಿ ಪ್ರಕೃತಿ ಪ್ರಾಕೃತ ಪದಾರ್ಥಗಳೂ ಕಾಲವೂ ನಿತ್ಯವಿಭೂತಿಯೂ ಜೀವರಾಶಿಗಳೂ ಇವೆಲ್ಲವೂ ಸರ್ವೇಶ್ವರನೊಂದಿಗೆ ಈ ಎಲ್ಲಾ ಸಂಬಂಧವನ್ನೂ ಪಡೆದು ಆಧೀನವಾಗಿರುವುದರಿಂದ ಅವೆಲ್ಲವೂ ಸರ್ವೇಶ್ವರನ ಶರೀರವಾಗಿವೆ ಎಂದು ಅವುಗಳಲ್ಲಿ ಈ ಮೇಲಣ ಲಕ್ಷಣವು ಸಮನ್ವಯಿಸಿ ಸುಸಂಗತ ವಾಗಿರುವುದು.

---

* ಅಪೃಥಕ್ಸಿದ್ಧಿ—ನ ಪೃಥಕ್ ಸಿದ್ಧಿಃ ಸ್ಥಿತಿ=ಆಶ್ರಯವನ್ನು ಬಿಟ್ಟು ಸತ್ತೆಯನ್ನು ಪಡೆಯದೆ ಇರುವಿಕೆ=ಆಶ್ರಯಕ್ಕೆ ಹೊರಗಾಗಿ ಇಲ್ಲದಿರುವಿಕೆ ಎಂಬ ಸಂಬಂಧವು.

ಅಪೃಥಕ್ಸಿದ್ಧ—ತಾನು ಇರುವವರೆಗೂ ಆಶ್ರಯದೊಂದಿಗೇ ಕೂಡಿರುವ ವಿಶೇಷಣಾದಿಗಳು. ಘಟಾದಿ ಪದಾರ್ಥಗಳಿಗೆ ಬಣ್ಣ ಮುಂತಾದುವೂ, ಜೀವಾತ್ಮನಿಗೆ ಶರೀರವೂ, ಸರ್ವೇಶ್ವರನಿಗೆ ಜಗತ್ತೂ ಅಪೃಥಕ್ಸಿದ್ಧ ವಿಶೇಷಣಗಳಾಗಿರುವುವು. ಇವು ವಿಶೇಷ್ಯಕ್ಕಿಂತ ಬಹಿರ್ಭಾವವನ್ನು ಪಡೆಯದೆ (ಹೊರಗಾಗಿಲ್ಲದೆ) ವಿಶೇಷ್ಯದೊಳಗೇ ಇರುವಂತೆ ಎಣಿಸಲ್ಪಡುವುವು.

ಯಸ್ಯ ಚೇತನಸ್ಯ ಯತ್ ದ್ರವ್ಯಂ ಸರ್ವಾತ್ಮನಾ ಸ್ವಾರ್ಥೇ ನಿಯಂತುಂ ಧಾರಯಿತುಂ ಚ ಶಕ್ಯಂ, ತಚ್ಛೇಷೈಕಸ್ವರೂಪಂ ಚ, ತತ್ ತಸ್ಯ ಶರೀರಂ—ಎಂದೂ, ಯಸ್ಯ ಚೇತನಸ್ಯ ಯದವಸ್ಥಂ ಅಪೃಥಕ್ಸಿದ್ಧ ವಿಶೇಷಣಂ ದ್ರವ್ಯಂ ತತ್ ತಸ್ಯ ಶರೀರಂ—ಎಂದೂ ಶ್ರೀಭಾಷ್ಯದಲ್ಲಿ ಶಂಕಾ ಸಮಾ ಧಾನಗಳೊಡನೆ ವಿಶದವಾಗಿ ನಿರ್ಣೀತವಾಗಿವೆ.

(ಇದರ ವಿಷಯವಿಶೇಷಗಳನ್ನು ಸಮನ್ವಯಪ್ರಕಾಶದ ವಿಶಿಷ್ಟಾದ್ವೈತ ಸಿದ್ಧಾಂತ ಪ್ರಮೇಯವಿವರಣದ ಘಟ್ಟದಲ್ಲಿ ನೋಡಿರಿ.)

ಭಗವಂತನ ಶರೀರವೂ ನಿತ್ಯಮುಕ್ತರ ಶರೀರಗಳೂ ಭಗವಂತನ ನಿತ್ಯವಾದ ಇಚ್ಛೆಯಿಂದ ಸಿದ್ಧವಾದುವುಗಳು. ಮುಕ್ತರ ಶರೀರಗಳೂ ಅವರು ಕೈಂಕರ್ಯಾಶೆಯಿಂದ ಏಕಕಾಲದಲ್ಲಿ ಪರಿಗ್ರಹಿಸುವ ಅನೇಕ ಶರೀರಗಳೂ ಆ ಆ ಕಾಲದಲ್ಲಿ ಭಗವತ್ಸಂಕಲ್ಪದಿಂದ ಆಗುವುವು. ಮುಕ್ತರ ಅನೇಕ ಶರೀರ ಪರಿಗ್ರಹವು ವಸಂತೋತ್ಸವದಲ್ಲಿ ಭೃತ್ಯರು ವೇಷಪರಿಗ್ರಹ ಮಾಡುವಂತೆ ಸ್ವಾಮಿಗೆ ಮುಖೋಲ್ಲಾಸ ಹೇತುವಾಗುವುದರಿಂದ ಕೈಂಕರ್ಯದಲ್ಲಿಯೇ ಸೇರುವುವು,

ಭಗವಂತನ ಅಪ್ರಾಕೃತ ದಿವ್ಯಮಂಗಳವಿಗ್ರಹವು ವಿಷ್ಣುಪುರಾಣದ ಅಸ್ತ್ರಭೂಷಣಾಧ್ಯಾಯದಲ್ಲಿ ಹೇಳಿದಂತೆ ಸಕಲ ತತ್ತ್ವಗಳಿಗೂ ಆಧಾರವಾಗಿಯೂ ಆಶ್ರಯವಾಗಿಯೂ ಇರುವುದೆಂದು ಭಾವಿಸಬೇಕು. ಸಕಲ ಜೀವವರ್ಗವೂ ಭಗವಂತನ ವಕ್ಷಃಸ್ಥಳದಲ್ಲಿರುವ ಕೌಸ್ತುಭರತ್ನದ ರೂಪದಿಂದಲೂ, ಪ್ರಕೃತಿ ಶ್ರೀವತ್ಸವೆಂಬ ಎದೆಯ ಮಚ್ಚೆಯ ರೂಪದಿಂದಲೂ, ಮಹತ್ತತ್ತ್ವವು ಗದಾರೂಪದಿಂದಲೂ, ಸಾತ್ತ್ವಿಕಾಹಂಕಾರವು ಶಂಖವಾಗಿಯೂ, ತಾಮಸಾಹಂಕಾರವು ಶಾರ್ಙ್ಗವೆಂಬ ಬಿಲ್ಲಿನ ಆಕಾರವಾಗಿಯೂ, ಜ್ಞಾನವು ಖಡ್ಗವಾಗಿಯೂ, ಅಜ್ಞಾನವು ಆ ಕತ್ತಿಯ ಒರೆಯೆಂಬ ಚೀಲವಾಗಿಯೂ, ಮನಸ್ಸು ಚಕ್ರರೂಪವಾಗಿಯೂ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಬಾಣಗಳಾಗಿಯೂ, ಸೂಕ್ಷ್ಮಸ್ಥೂಲಭೂತಗಳು ನಾನಾಬಣ್ಣದ ವನಮಾಲಾರೂಪವಾಗಿಯೂ, ಭಗವಂತನ ಅಪ್ರಾಕೃತ ದಿವ್ಯಮಂಗಳ ವಿಗ್ರಹದಲ್ಲಿ ನೆಲೆಸಿರುತ್ತವೆ ಎಂದು ಧ್ಯಾನಕಾಲದಲ್ಲಿ ಭಾವಿಸುತ್ತಿರಬೇಕು. ಈಶ್ವರ ಶರೀರವು ಜ್ಞಾನ ಶಕ್ತಿ ಬಲೈಶ್ವರ್ಯ ವೀರ್ಯ ತೇಜಸ್ಸುಗಳೆಂಬ ಷಡ್ಗುಣಗಳಿಗೆ ಪ್ರಕಾಶಕವಾಗಿರುವುದರಿಂದ ಷಾಡ್ಗುಣ್ಯರೂಪವೆಂದೂ ಹೇಳುವುದುಂಟು. ಇದು ಪರಮಪದದಲ್ಲಿರುವ ಪರವಾಸುದೇವನ ಅಸಾಧಾರಣವಾದ ದಿವ್ಯಮಂಗಳವಿಗ್ರಹವು.

ಶರೀರವಿಭಾಗ—ಶರೀರವು ನಿತ್ಯಶರೀರವೆಂದೂ ಅನಿತ್ಯಶರೀರವೆಂದೂ ಎರಡುವಿಧವಾಗಿರುವುದು,

ನಿತ್ಯಶರೀರ—ಭಗವಂತನ ದಿವ್ಯಮಂಗಳ ವಿಗ್ರಹವೂ, ತ್ರಿಗುಣದ್ರವ್ಯ, ಕಾಲ, ಜೀವರೂಪವಾದ ಸರ್ವೇಶ್ವರ ಶರೀರಗಳೂ, ನಿತ್ಯಸೂರಿಗಳ ಶರೀರಗಳೂ ನಿತ್ಯಶರೀರವೆನಿಸುವುವು. ಅನಿತ್ಯಶರೀರವು ಅಕರ್ಮಕೃತವೆಂದೂ ಕರ್ಮಕೃತವೆಂದೂ ಎರಡು ವಿಧವಾಗಿರುವುದು.

ಅಕರ್ಮಕೃತಶರೀರ—ಸರ್ವೇಶ್ವರನು ಮತ್ಸ್ಯ ಕೂರ್ಮ ವರಾಹಾದ್ಯವತಾರಗಳಲ್ಲಿ ಸ್ವಸಂಕಲ್ಪದಿಂದ ಪರಿಗ್ರಹಿಸಿದ ಶರೀರಗಳೂ, ಮಹದಹಂಕಾರಾದಿ ತತ್ತ್ವರೂಪವಾದ ಶರೀರಗಳೂ, ಅನಂತ ಗರುಡಾದಿ ನಿತ್ಯಸೂರಿಗಳೂ ಮುಕ್ತರೂ ಸಹ ಭಗವದಿಚ್ಛೆಯಿಂದಲಾಗಲಿ, ಸ್ವೇಚ್ಛೆಯಿಂದಲಾಗಲಿ ಆಗಾಗ ಪರಿಗ್ರಹಿಸಿದ ಶರೀರಗಳೂ ಕರ್ಮಕೃತವಲ್ಲದ ಅನಿತ್ಯಶರೀರಗಳೆನಿಸುವುವು.

ಕರ್ಮಕೃತಶರೀರವು ಸ್ವಸಂಕಲ್ಪದೊಡಗೂಡಿದ ಕರ್ಮಕೃತವೆಂದೂ ಕೇವಲ ಕರ್ಮಕೃತವೆಂದೂ ಎರಡು ವಿಧವಾಗಿರುವುದು. ಅವುಗಳಲ್ಲಿ ಮೊದಲನೆಯದು ಸೌಭರಿ ಮುಂತಾದ ಮಹನೀಯರ ನಾನಾ ಶರೀರಗಳು. ಕೇವಲ ಕರ್ಮಕೃತ ಶರೀರವು ಇತರ ಪ್ರಾಣಿಗಳ ಶರೀರಗಳು.

ಸಾಮಾನ್ಯವಾಗಿ ಶರೀರವು ಸ್ಥಾವರ, ಜಂಗಮ ಎಂದು ಇನ್ನೂ ಎರಡು ವಿಧವಾಗಿರುವುದು.

ಸ್ಥಾವರ ಎಂದರೆ ಮರ, ಗಿಡ, ಬಳ್ಳಿ, ಪೊದೆ, ತೃಣ ಮುಂತಾದ ನಡೆಯಾಡದೆ ಇರುವ ಶರೀರಗಳು. ಈ ಮರ, ಗಿಡ, ಬಳ್ಳಿ ಮುಂತಾದುವುಗಳಲ್ಲಿಯೂ ಜೀವಾತ್ಮನು ನೆಲೆಸಿಯೇ ಇರುವನು. ಪ್ರಾಣವಾಯುವೂ ಇರುವುದು—ತನಗೆ ಎರೆದ ನೀರನ್ನು ಕುಡಿದು ಬೆಳೆವುದರಿಂದಲೂ, ಕೊಂಬೆಯನ್ನು ಕಡಿದರೆ ತಿರುಗಿ ಮಗ್ಗುಲಲ್ಲಿಯೇ ಚಿಗುರುವುದರಿಂದಲೂ, ಅವುಗಳಲ್ಲಿ ಪ್ರಾಣವಾಯು ನೆಲೆಸಿರುವುದೆಂದೂ, ಆ ಪ್ರಾಣವಾಯು ಅವುಗಳಲ್ಲಿ ಸ್ವಲ್ಪ ಪರಿಮಾಣವುಳ್ಳುದಾಗಿದೆ ಎಂದೂ ಅವುಗಳಿಗೂ ರೋಗ, ರುಜೆ, ಸುಖದುಃಖಾದಿಗಳು ಉಂಟು ಎಂದೂ ಶಾಸ್ತ್ರಕಾರರು ನಿರ್ಣಯಿಸಿರುವರು.

ಜಂಗಮಶರೀರವು ದೇವ, ಮನುಷ್ಯ, ತಿರ್ಯಕ್, ನಾರಕಿ ಎಂದು ನಾಲ್ಕು ತೆರನಾಗಿರುವುದು. ಇವುಗಳಲ್ಲಿ ದೇವಶರೀರವು ದೇವಲೋಕದ ಇಂದ್ರಾದಿಗಳ ಶರೀರ, ಮನುಷ್ಯ ಶರೀರವು ನಮ್ಮೊಂದಿಗರ ಶರೀರ, ತಿರ್ಯಕ್ಛರೀರವು ಪಶು ಪಕ್ಷಿ ಮೃಗಾದಿಗಳ ಶರೀರ, ನಾರಕಿ ಶರೀರವು ನರಕಲೋಕದಲ್ಲಿರುವ ಪ್ರಾಣಿಗಳ ಯಾತನಾಶರೀರ, ಶರೀರವು ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜ ಎಂದು ಪುನಃ ನಾಲ್ಕು ತೆರನಾಗಿರುವುದು.

ಜರಾಯುಜ—ಜರಾಯು ಎಂದರೆ ಗರ್ಭಕೋಶದ ಚೀಲ, ಜ–ಆದರಲ್ಲಿ ಹುಟ್ಟಿದುವು ಎಂದರ್ಥ. ನಾಲ್ಕು ಕಾಲುಗಳುಳ್ಳ ಜಂತುಗಳು, ಮನುಷ್ಯ ಇವುಗಳ ಶರೀರಗಳು ಜರಾಯುಜಗಳು.

ಅಂಡಜ—ತಾಯಿಯ ಹೊಟ್ಟೆಯಿಂದ ಹುಟ್ಟುವಾಗ ಮೊಟ್ಟೆಯ ಆಕಾರದಿಂದ ಜನಿಸಿ, ಆಮೇಲೆ ಕೈಕಾಲು, ಕಣ್ಣು, ಮೂಗು ಮುಂತಾದುವು ತಿದ್ದಿ ಆಗುವ ಶರೀರಗಳು. ಪಕ್ಷಿಗಳು, ಹಾವು ಹಲ್ಲಿ ಮುಂತಾದ ಸರೀಸೃಪಗಳು, ಮೀನು ಕಪ್ಪೆ ಮುಂತಾದ ಜಲಚರಗಳು ಇವುಗಳ ಶರೀರಗಳು ಅಂಡಜಗಳು.

ಸ್ವೇದಜ—ಬೆವರು, ಶಾಖ, ಹಬೆಗಳ ಸಹಾಯದಿಂದ ಹುಟ್ಟುವ ತಿಗಣೆ, ಸೊಳ್ಳೆ ಮುಂತಾದುವುಗಳ ಶರೀರಗಳು.

ಉದ್ಭಿಜ್ಜ—(ಉತ್, ಭಿತ್, ಜ) ನೆಲವನ್ನು ಒಡೆದುಕೊಂಡು ಮೇಲಕ್ಕೆ ಏಳುವ ಮರ, ಗಿಡ, ಬಳ್ಳಿ ಮುಂತಾದ ಹಿಂದೆ ಹೇಳಿದ ಸ್ಥಾವರಜಾತಿಯ ಶರೀರಗಳು.

ಇದೂ ಅಲ್ಲದೆ ಬ್ರಹ್ಮ ರುದ್ರರು, ಸನಕಾದಿ ಮುನಿಗಳು, ಸೀತೆ, ದ್ರೌಪದಿ, ಧೃಷ್ಟದ್ಯುಮ್ನ ಮುಂತಾದವರು ಇವರುಗಳ ಶರೀರಗಳು ಅಯೋನಿಜಗಳಾಗಿ ಇರುವುವು.

ಹೀಗೆ ಪ್ರಕೃತಿ, ಮಹತ್, ಅಹಂಕಾರ, ಹನ್ನೊಂದು ಇಂದ್ರಿಯಗಳು, ಐದು ತನ್ಮಾತ್ರಗಳು, ಐದು ಭೂತಗಳು ಸಹ ಸೇರಿ ಆದ ಇಪ್ಪತ್ತುನಾಲ್ಕು ತತ್ತ್ವಗಳ ಲಕ್ಷಣಸ್ವರೂಪಗಳನ್ನು ಸಾಂಗವಾಗಿ ವಿವರಿಸಿಯಾಯಿತು. ಅಚಿತ್ತತ್ತ್ವದ ಮೊದಲನೆಯ ಪ್ರಭೇದವಾದ ಮಿಶ್ರಸತ್ತ್ವವೆಂಬುದನ್ನು ಇಲ್ಲಿಗೆ ವಿವರಿಸಿಯಾಯಿತು.

ಇನ್ನು ಎರಡನೆಯ ವಿಭಾಗವಾದ ಕಾಲತತ್ತ್ವವನ್ನು ವಿವರಿಸುವೆವು.

೪೪. ಸತ್ತ್ವಶೂನ್ಯವೆಂಬ ಅಚಿತ್ತೇ ಕಾಲವು.

ಕಾಲ ಎಂಬುದು ಗುಣತ್ರಯವಿಲ್ಲದ ಜಡದ್ರವ್ಯವು. ಅದು ನಿತ್ಯವಾಗಿಯೂ ವಿಭುವಾಗಿಯೂ ಇರುವುದು. ಈ ಕಾಲವು ಪ್ರಕೃತಿ ಪ್ರಾಕೃತಗಳ ನಾನಾವಿಧ ಪರಿಣಾಮಕ್ಕೆ ನಿಮಿತ್ತಕಾರಣವಾಗಿಯೂ, ಕಲಾ, ಕಾಷ್ಠಾ, ಮುಹೂರ್ತ, ದಿನ, ಪಕ್ಷ, ಮಾಸ, ಅಯನ, ವರ್ಷ ಮುಂತಾದ ತನ್ನ ಪರಿಣಾಮಗಳಿಗೆ ಉಪಾದಾನ ಕಾರಣವಾಗಿಯೂ, ಸರ್ವೇಶ್ವರನಿಗೆ ಕ್ರೀಡಾಪರಿಕರವಾಗಿಯೂ ಶರೀರವಾಗಿಯೂ ಇರುವುದು. ಕಾಲವು ಇಂದ್ರಿಯವೇದ್ಯವಾದುದರಿಂದ ಪ್ರತ್ಯಕ್ಷವಾಗಿದೆ.

ಈ ಕಾಲವೆಂಬುದು ಯಾವಾಗಲೂ ಸಕಲ ವಸ್ತುಗಳಿಗೂ ವಿಶೇಷಣವಾಗಿಯೇ ತೋರುತ್ತ ಸ್ವತಂತ್ರವಾಗಿ ತೋರುವುದಿಲ್ಲವಾದುದರಿಂದ ತತ್ತ್ವಗಳಲ್ಲಿ ಗಣಿಸಲ್ಪಡಲಿಲ್ಲ. ನಿತ್ಯ, ನೈಮಿತ್ತಿಕ, ಪ್ರಾಕೃತ ಮುಂತಾದ ಪ್ರಳಯಗಳೆಲ್ಲವೂ ಕಾಲಾಧೀನವಾಗಿಯೇ ಇರುವುವು. ಈಶ್ವರನೂ ಕೂಡ ಈ ಲೀಲಾವಿಭೂತಿಯಲ್ಲಿ ಕಾಲಾಧೀನ

ನಾಗಿಯೇ ಕಾರ್ಯವನ್ನು ನಡೆಸುವನು ನಿತ್ಯವಿಭೂತಿಯಲ್ಲಿಯೂ ಕಾಲವಿದ್ದರೂ ಅಲ್ಲಿ ಕಾಲಾಧೀನವಾಗಿ ಯಾವ ಪರಿಣಾಮಗಳೂ ನಡೆಯುವಿಲ್ಲವಾಗಿ ಅದಕ್ಕೆ ಸ್ವಾತಂತ್ರ್ಯವಿಲ್ಲ. ಅಖಂಡಕಾಲವು ನಿತ್ಯವು, ಖಂಡಕಾಲವು ಅನಿತ್ಯವು. ವಿಶೇಷ ವಿವರಣವನ್ನು ಜ್ಯೋತಿಷಶಾಸ್ತ್ರದಲ್ಲಿ ತಿಳಿಯಬಹುದು.

೪೫. ಅಚಿತ್ತತ್ತ್ವದ ಮೂರನೆಯ ಪ್ರಭೇದವಾದ ಶುದ್ಧಸತ್ತ್ವ (ನಿತ್ಯವಿಭೂತಿ)

ನಿತ್ಯವಿಭೂತಿ ಲಕ್ಷಣ—ತ್ರಿಗುಣದ್ರವ್ಯ ವ್ಯತಿರಿಕ್ತವಾದ ಸತ್ತ್ವವುಳ್ಳ ಅಚಿತ್ತು ಎಂದೂ, ರಜಸ್ತಮಸ್ಸುಗಳು ಸೇರದೆ ಶುದ್ಧ ಸತ್ತ್ವಮಯವಾದ ಅಚಿತ್ತು ಎಂದೂ ಇದರ ಲಕ್ಷಣಗಳು. ಇದು ಜೀವರಾಶಿಗಿಂತಲೂ ಸರ್ವೇಶ್ವರನಿಗಿಂತಲೂ ಬೇರೆಯಾಗಿರುವುದರಿಂದ ಅಚೇತನವಾಗಿರುವುದು. ಅಗ್ನಿ, ಸೂರ್ಯ ಮುಂತಾದ ತೇಜಸ್ಸುಗಳಿಗಿಂತಲೂ ಅತಿಶಯ ತೇಜಸ್ಸುಳ್ಳುದಾಗಿ ಸ್ವಯಂಪ್ರಕಾಶವಾಗಿಯೂ, ಪ್ರಕೃತಿಯಂತೆ ಜ್ಞಾನಾನಂದಗಳನ್ನು ಮುಚ್ಚದೆ ಶುದ್ಧಸತ್ತ್ವಮಯವಾಗಿರುವುದ ರಿಂದ ಜ್ಞಾನಾನಂದ ಜನಕವಾಗಿಯೂ, ಅತ್ಯಂತಾನುಕೂಲವಾದ ರೂಪ ರಸ ಗಂಧಾದಿ ಗಳುಳ್ಳುದಾದುದರಿಂದ ಆನಂದಮಯ, ಸುಖಮಯ ಎಂಬ ಹೆಸರುಗಳುಳ್ಳು ದಾಗಿಯೂ ಇರುವುದು. ಅಲ್ಲದೆ ಪಂಚೋಪನಿಷತ್ತುಗಳೆಂಬ ಅಪ್ರಾಕೃತ ಪಂಚಭೂತಗಳೊಡನೆ ಕೂಡಿರುವುದರಿಂದ ಪಂಚೋಪನಿಷನ್ಮಯ, ಪಂಚಶಕ್ತಿಮಯ ಎಂದೂ ಹೇಳಲ್ಪಟ್ಟಿರುವುದು. ಮತ್ತು ನಿತ್ಯರಿಗೂ ಮುಕ್ತರಿಗೂ ಈಶ್ವರನಿಗೂ ಸಹ ಇಚ್ಛಾನುಸಾರವಾಗಿ ಶರೀರೇಂದ್ರಿಯ ವಿಷಯವಾಗಿ ಪರಿಣಮಿಸಿಯೂ, ಕೇವಲ ಭಗವದಿಚ್ಛೆಯಿಂದ ವೈಕುಂಠಲೋಕದಲ್ಲಿ ವಿಮಾನ ಗೋಪುರ ಮಂಟಪ ಪ್ರಾಸಾದಾದಿರೂಪವಾಗಿ ಪರಿಣಮಿಸಿಯೂ, ನಿತ್ಯವಾಗಿಯೂ ಇರುವುದು. ಅಲ್ಲದೆ ಕೆಳಗಡೆ ಬಹುದೂರದಲ್ಲಿ ಪ್ರಕೃತಿಯಿಂದ ಪರಿಚ್ಛಿನ್ನವಾಗಿಯೂ ಮೇಲ್ಗಡೆಯೂ ಸುತ್ತಮುತ್ತಲೂ ಅನಂತವಾಗಿ ಅಪರಿಚ್ಛಿನ್ನವಾಗಿಯೂ, ನಿತ್ಯಮುಕ್ತರಿಂದಲೂ ಕೊನೆಗೆ ಈಶ್ವರನಿಂದಲೂ ಇಷ್ಟೇ ಎಂದು ಗೊತ್ತುಮಾಡಲು ಅಸಾಧ್ಯವಾಗಿಯೂ, ಅತ್ಯಾಶ್ಚರ್ಯಕರವಾಗಿಯೂ ಇರುವುದು. ಇದೇ ಪರಮಪದವೆಂಬ ವೈಕುಂಠ ಲೋಕದಲ್ಲಿರುವ ಅಚಿದ್ವಸ್ತು.

ಪ್ರಶ್ನೆ—ಹಾಗಾದರೆ ನಿತ್ಯವಿಭೂತಿಯಲ್ಲಿಯೂ ಪರಿಣಾಮವುಂಟೆಂದು ಒಪ್ಪಿ ಕೊಂಡರೆ ಪ್ರಕೃತಿಗೂ ನಿತ್ಯವಿಭೂತಿಗೂ ತಾರತಮ್ಯವಿಲ್ಲದೆಯೇ ಹೋಗುವುದಿಲ್ಲವೇ?

ಉತ್ತರ—ಕರ್ಮಾಧೀನವಾಗಿ ಕಾಲವಶದಿಂದುಂಟಾಗುವ ಹೇಯವಾದ ಪರಿಣಾಮವು ನಿತ್ಯವಿಭೂತಿಯಲ್ಲಿ ಇಲ್ಲ ಎಂದು ತಾತ್ಪರ್ಯವೇ ಹೊರತು 'ಅಲ್ಲಿ

ಪರಿಣಾಮವೇ ಇಲ್ಲ' ಎಂದು ಹೇಳಲಾಗುವುದಿಲ್ಲ. ಏತಕ್ಕೆಂದರೆ, ಮುಕ್ತರಿಗೆ ದಿವ್ಯ ಶರೀರಗಳೂ ಪಾಣಿ ಮೊದಲಾದ ಇಂದ್ರಿಯಗಳೂ ಇರುವುವು ಎಂದು ಶ್ರುತಿ ಸಿದ್ಧವಾಗಿರುವುದರಿಂದ ಮುಕ್ತರಿಗೂ ನಿತ್ಯರಿಗೂ ಭಗವದನುಭವ ಕೈಂಕರ್ಯೋಪ ಯೋಗಿಯಾದ ದೇಹೇಂದ್ರಿಯಾದಿಗಳುಂಟು ಎಂದು ಒಪ್ಪಲೇಬೇಕಾಗಿದೆ. ಅಲ್ಲದೆ ನಿತ್ಯರಾದ ಅನಂತ ಗರುಡಾದಿಗಳಿಗೆ ಸರ್ವೇಶ್ವರನ ಕೈಂಕರ್ಯಕ್ಕಾಗಿ ಅನೇಕ ಶರೀರಪರಿಗ್ರಹವುಂಟೆಂದು ಶ್ರುತಿಸ್ಮೃತ್ಯಾದಿ ಸಿದ್ಧವಾಗಿದೆ. ಒಬ್ಬ ಜೀವಾತ್ಮನು ಮುಕ್ತನಾದರೆ ಅವನಿಗೆ ಭಗವದನುಭವ ಕೈಂಕರ್ಯಾದಿಗಳಿಗಾಗಿ ದೇಹೇಂದ್ರಿಯಾದಿ ಗಳು ಎಲ್ಲಿಂದ ಬರಬೇಕು? ಅವು ಎಂಥವು? ಹೇಯವಲ್ಲ, ಪ್ರಾಕೃತವಲ್ಲ, ನಶ್ವರ ವಲ್ಲ ಎಂದು ಶ್ರುತಿಯೇ ಹೇಳಿದೆ. ಆದುದರಿಂದ ಆ ದಿವ್ಯಶರೀರೇಂದ್ರಿಯಗಳು ಈ ಪಂಚೋಪನಿಷನ್ಮಯ ಶುದ್ಧಸತ್ತ್ವದಿಂದಲೇ ಆಗಿರುವುದರಿಂದ ಅಲ್ಲಿಯೂ ಪರಿಣಾಮಗಳುಂಟು; ಆದರೆ ಅವು ಭಗವತ್ಸಂಕಲ್ಪಕೃತ; ಕಾಲಕೃತವೂ ಅಲ್ಲ, ಕರ್ಮಕೃತವೂ ಅಲ್ಲ.

ಪ್ರಶ್ನೆ—ಮುಕ್ತರಿಗೆ ಶರೀರವೇ ಇಲ್ಲವೆಂಬ 'ಅಶರೀರಂ ವಾ ವ ಸಂತಂ' ಇತ್ಯಾದಿ ಶ್ರುತಿಗಳಿಗೆ ತಾತ್ಪರ್ಯವೇನು?

ಉತ್ತರ—ಆ ಶ್ರುತಿಗಳಿಗೆ ಕರ್ಮಕೃತವಾದ, ನಶ್ವರವಾದ, ಹೇಯವಾದ, ಪ್ರಾಕೃತವಾದ ಶರೀರಗಳು ಮುಕ್ತರಿಗೆ ಇಲ್ಲ ಎಂದು ತಾತ್ಪರ್ಯವೇ ಹೊರತು ಶರೀರೇಂದ್ರಿಯಾದಿಗಳೇ ಇಲ್ಲವೆಂದು ಅಲ್ಲ. ದೇಹೇಂದ್ರಿಯಾದಿಗಳುಂಟೆಂದು ಶ್ರುತಿಯೇ ಹೇಳಿದೆ.

ಪ್ರಶ್ನೆ—ಹಾಗಾದರೆ ಅಲ್ಲಿಯೂ ಪರಿಣಾಮವುಂಟಾಗುವ ಪಕ್ಷಕ್ಕೆ ನಿತ್ಯ ವಿಭೂತಿ ಎಂದು ಹೆಸರು ಸಂಗತವೇ?

ಉತ್ತರ—ಅಲ್ಲಿ ನಿತ್ಯವಸ್ತು ಪ್ರಾಚುರ್ಯದಿಂದ ನಿತ್ಯವಿಭೂತಿ ಎಂದು ಹೆಸರು ಬಂದಿದೆ. ಇದು ಸಂಗತವಾಗಿಯೇ ಇದೆ.

ಪ್ರಶ್ನೆ—ನಿತ್ಯವಿಭೂತಿಯನ್ನು ನಿತ್ಯರೂ ಮುಕ್ತರೂ ಸರ್ವೇಶ್ವರನೂ ಇಷ್ಟೆಂದು ಅರಿಯಲಾರರು; ಅಷ್ಟು ಅಪರಿಚ್ಛಿನ್ನ ಎಂದರೆ—ಅವರ ಸರ್ವಜ್ಞತೆಗೆ ಕುಂದಕ ಬರಲಿಲ್ಲವೋ?

ಉತ್ತರ—ಸರ್ವಜ್ಞತೆ ಎಂದರೆ ಎಲ್ಲವನ್ನೂ ಇದ್ದುದನ್ನು ಇದ್ದಂತೆಯೇ ತಿಳಿವುದಷ್ಟೆ? ಇಷ್ಟು ಎಂದು ನಿರ್ಣಯಾರ್ಹವಾಗಿದ್ದರೆ ಪರಿಚ್ಛೇದಿಸಿ ತಿಳಿವುದೂ, ಪರಿಚ್ಛೇದ್ಯವಲ್ಲದಿದ್ದರೆ ಅಪರಿಚ್ಛೇದ್ಯವೆಂದು ತಿಳಿವುದೂ ಕೂಡ ಸರ್ವಜ್ಞತೆಗೆ

ಅನುಗುಣವೇ ಆಯಿತು; ಪರಿಚ್ಛೇದಾರ್ಹವಲ್ಲದ ವಸ್ತುವನ್ನು ಪರಿಚ್ಛೇದ್ಯ ಎಂದು ತಿಳಿವುದೇ ಸರ್ವಜ್ಞತೆಗೆ ಕುಂದಕವಾಗುವುದು. ಆದುದರಿಂದ ಪರಿಚ್ಛೇದಾರ್ಹವಲ್ಲದ ಈ ನಿತ್ಯವಿಭೂತಿಯನ್ನು ಅಪರಿಚ್ಛೇದ್ಯವೆಂದು ತಿಳಿದ ದರಿಂದ ನಿತ್ಯಮುಕ್ತರ ಸರ್ವಜ್ಞತೆಗೆ ಯಾವ ಕುಂದಕವೂ ಇಲ್ಲ.

ಈ ಶುದ್ಧಸತ್ತ್ವ, ಮಿಶ್ರಸತ್ತ್ವಗಳೆಂಬ ಎರಡು ಅಚಿತ್ತತ್ತ್ವಗಳೂ ಸರ್ವೇಶ್ವರನಿಗೂ ಜೀವಾತ್ಮರಿಗೂ ಭೋಗ್ಯ, ಭೋಗೋಪಕರಣ, ಭೋಗಸ್ಥಾನಗಳಾಗಿರುವುವು. ಈ ಲೀಲಾವಿಭೂತಿಯಲ್ಲಿ—ಭೋಗ ಎಂದರೆ ಸುಖದುಃಖಾನುಭವವು; ಭೋಗ್ಯಗಳು ಎಂದರೆ ವಿಷಯಗಳು (ಆ ಭೋಗಕ್ಕೆ ವಿಷಯವಾಗುವಂಥ ಶಬ್ದಾದಿವಿಷಯಗಳು ಭೋಗ್ಯಗಳು); ಭೋಗೋಪಕರಣಗಳು ಎಂದರೆ ಕಣ್ಣು, ಮೂಗು ಮುಂತಾದ ಇಂದ್ರಿಯಗಳು; ಭೋಗಸ್ಥಾನ ಎಂದರೆ ಯಾವ ಸ್ಥಾನದಲ್ಲಿ ಆ ಭೋಕ್ತನಿಗೆ ಸುಖಾದ್ಯನುಭವವೆಂಬ ಭೋಗವುಂಟಾಗುವುದೋ ಅದು ಎಂದರೆ ದೇವ ತಿರ್ಯಙ್ಮನುಷ್ಯ ಸ್ಥಾವರರೂಪವಾದ ಪ್ರಾಣಿಗಳ ಸಕಲ ಶರೀರಗಳೂ ಈ ಹದಿನಾಲ್ಕು ಲೋಕಗಳೂ ಭೋಗಸ್ಥಾನಗಳು ಎನಿಸುವುವು.

ಈ ನಿತ್ಯವಿಭೂತಿ ಈಶ್ವರನಿಗೂ ನಿತ್ಯರಿಗೂ ಮುಕ್ತರಿಗೂ ಭೋಗ್ಯ ಭೋಗೋಪಕರಣ ಭೋಗಸ್ಥಾನವಾಗಿ ಈಶ್ವರ ಸಂಕಲ್ಪದಿಂದ ಆಗಿರುವುದು. ಇಲ್ಲಿ ಭೋಗ್ಯಗಳು ಎಂದರೆ ಶ್ರೀಮನ್ನಾರಾಯಣನ ದಿವ್ಯಮಂಗಳವಿಗ್ರಹ, ದಿವ್ಯಾಸ್ಥಾನ ಮಂಟಪ ಮುಂತಾದುವು. ಭೋಗೋಪಕರಣಗಳು—ಭಗವಂತನ ಕೈಂಕರ್ಯಗಳಿಗೆ ಉಪಯುಕ್ತವಾದ ಸಾಮಗ್ರಿಗಳು. ಭೋಗಸ್ಥಾನಗಳು—ದಿವ್ಯೋದ್ಯಾನ ಕ್ರೀಡಾಪರ್ವತಾದಿಗಳು ಇವುಗಳೆಲ್ಲವೂ ನಿತ್ಯವಿಭೂತಿಯಲ್ಲಿ ವಿಷಯಗಳು.

೪೬. ತತ್ತ್ವಸಂಖ್ಯೆಯ ವಿವೇಚನೆ

ಹಿಂದೆ ಹೇಳಿ ವಿವರಿಸಿದಂತೆ ಪ್ರಕೃತಿ, ಮಹತ್, ಅಹಂಕಾರ, ಮನಸ್ಸು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ತನ್ಮಾತ್ರೆಗಳು, ಐದು ಭೂತಗಳು ಹೀಗೆ ಇಪ್ಪತ್ತನಾಲ್ಕು ತತ್ತ್ವಗಳೂ ಪ್ರಕೃತಿಯಿಂದ ಹುಟ್ಟಿದ ಪ್ರಾಕೃತ ತತ್ತ್ವಗಳು ನಿತ್ಯವಿಭೂತಿಯಲ್ಲಿರುವುವು ಅಪ್ರಾಕೃತ ತತ್ತ್ವಗಳು. ಇವೆಲ್ಲವೂ ಸಿದ್ಧಾಂತದಲ್ಲಿ ನಿಶ್ಚಯಿಸಲ್ಪಟ್ಟ ಚಿದಚಿದೀಶ್ವರರೆಂಬ ಮೂರು ತತ್ತ್ವಗಳೊಳಗೆ ಅಚಿತ್ತತ್ತ್ವದ ಪರಿಣಾಮಗಳು. ಇವುಗಳಿಗಿಂತ ವಿಲಕ್ಷಣನಾಗಿ ಬೇರೆಯಾಗಿರುವ ಜೀವಾತ್ಮನೇ ಇಪ್ಪತ್ತೈದನೆಯ ತತ್ತ್ವವು. ಸರ್ವೇಶ್ವರನೇ ಇಪ್ಪತ್ತಾರನೆಯ ತತ್ತ್ವವು. ಈ ಪಕ್ಷದಲ್ಲಿ ಕಾಲವು ಪ್ರಕೃತಿ ತತ್ತ್ವದಲ್ಲಿ ಅಂತರ್ಭೂತವೆಂದು ಆಶಯವು.

ಕಾಲವು ಪ್ರಕೃತಿಗಿಂತಲೂ ಬೇರೆ ಎಂದುಭಾವಿಸುವ ಪಕ್ಷದಲ್ಲಿ ಪ್ರಕೃತಿ ಇಪ್ಪತ್ತನಾಲ್ಕುವಿಧ. ಇಪ್ಪತ್ತೈದನೆಯ ತತ್ತ್ವವೇ ಕಾಲ, ಇಪ್ಪತ್ತಾರನೆಯದು ಜೀವಾತ್ಮವರ್ಗ, ಇಪ್ಪತ್ತೇಳನೆಯ ತತ್ತ್ವವು ಸರ್ವೇಶ್ವರನು ಎಂದೂ ಹೇಳುವರು: "ತಂ ಷಡ್ವಿಂಶಕಮಿತ್ಯಾಹುಃ ಸಪ್ತವಿಂಶಮಥಾಪರೇ" ಎಂಬುದು ಇದಕ್ಕೆ ಪ್ರಮಾಣ. ಇವೆರಡು ಪಕ್ಷವಲ್ಲಿಯೂ ಕಾಲವು ಅಚಿತ್ತತ್ತ್ವದಲ್ಲಿ ಸೇರಿರುವುದರಿಂದ ಚಿದಚಿದೀಶ್ವರರೆಂಬ ತತ್ತ್ವತ್ರಯ ವಿಭಾಗವು ಸಂಗತವಾಯಿತು.

ಇಂತು ಉದ್ದೇಶಕ್ರಮಾನುಸಾರವಾಗಿ ಪ್ರಕೃತಿ, ಕಾಲ, ಧರ್ಮಭೂತಜ್ಞಾನ, ಶುದ್ಧಸತ್ತ್ವ ಎಂಬ ಇವುಗಳ ಸ್ವರೂಪಸ್ವಭಾವಗಳನ್ನು ವಿವರಿಸಿದುದರಿಂದ ಅಚಿತ್ತತ್ತ್ವವನ್ನು ಸಾಂಗೋಪಾಂಗವಾಗಿ ನಿರೂಪಿಸಿಯಾಯಿತು.

ಇಂತು ವಿಶಿಷ್ಟಾದ್ವೈತದೀಪಿಕೆಯ ಪ್ರಮೇಯಪ್ರಕಾಶದಲ್ಲಿ ಅಚಿತ್ಪರಿಚ್ಛೇದ ಸಂಪೂರ್ಣವಾಯಿತು.

iii ಈಶ್ವರ ಪರಿಚ್ಛೇದ

೪೭. ಸರ್ವೇಶ್ವರನು—ಸರ್ವವ್ಯಾಪಕನು (ವಿಭು)*, ಸಕಲ ಜಗಜ್ಜನ್ಮ ಸ್ಥಿತಿ ಲಯಕಾರಣನು, ಅಖಿಲಹೇಯ ಪ್ರತ್ಯನೀಕನು, ಸರ್ವಕಲ್ಯಾಣ ಗುಣಾಕರನು, ಸರ್ವರಕ್ಷಕನು, ಸರ್ವಕರ್ಮಫಲಪ್ರದನು, ಸರ್ವಜ್ಞನು, ಸರ್ವಶಕ್ತನು. ಇವುಗಳೆಲ್ಲಾ ಭಗವಂತನ ಲಕ್ಷಣಗಳು. ಈ ಲಕ್ಷಣಗಳ ಅರ್ಥವನ್ನು ಮುಂದೆ ಕ್ರಮವಾಗಿ ವಿವರಿಸುತ್ತೇವೆ.

ಸರ್ವೇಶ್ವರನು ವಿಭು (ಸರ್ವವ್ಯಾಪಕ). ಆ ವಿಭುತ್ವವು ಸ್ವರೂಪದಿಂದಲೂ ಧರ್ಮಭೂತಜ್ಞಾನದಿಂದಲೂ ಎರಡುವಿಧವಾಗಿರುವುದು. ಆದುದರಿಂದಲೇ "ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ" ಎಂದು ತ್ರಿವಿಧಪರಿಚ್ಛೇದ ರಹಿತನಾಗಿ ಅನಂತ ಎನಿಸಿಕೊಂಡಿರುವನು. ತ್ರಿವಿಧಪರಿಚ್ಛೇದವೆಂದರೆ—ದೇಶಪರಿಚ್ಛೇದ, ಕಾಲಪರಿಚ್ಛೇದ, ವಸ್ತುಪರಿಚ್ಛೇದ ಎಂಬ ಮೂರುವಿಧವಾದ ಅಳತೆಗಳಿಂದ ನಿರ್ಣಯಪಡಿಸುವುದು. ಎಲ್ಲಾ ವಸ್ತುವೂ ದೇಶ, ಕಾಲ, ವಸ್ತುಸ್ವರೂಪ ಎಂಬ ಈ ಮೂರುತೆರನಾದ ಅಳತೆಗೆ ಸಿಕ್ಕಿ ನಿರ್ಣೀತವಾಗುವುದು.

(೧) ದೇಶಪರಿಚ್ಛೇದ—'ಈ ವಸ್ತು ಈ ಸ್ಥಲದಲ್ಲಿದೆ, ಆ ಸ್ಥಲದಲ್ಲಿಲ್ಲ' ಎಂಬ ಸ್ಥಲದ ಅಳತೆಯಿಂದ ನಿರ್ಣಯ: ವಿಂಧ್ಯಪರ್ವತವು—ಹಿಮಾಲಯ,

* ಚೇತನತ್ವೇ ಸತಿ ವಿಭುತ್ವಂ.

ಕನ್ಯಾಕುಮಾರಿ, ಪೂರ್ವಸಮುದ್ರ, ಪಶ್ಚಿಮಸಮುದ್ರ ಇವುಗಳಿಂದ ಈಕಡೆಗೆ ಇಷ್ಟು ದೊಡದರಲ್ಲಿದೆ ಎಂಬುದು.

(೨) ಕಾಲಪರಿಚ್ಛೇದ—'ಈ ವಸ್ತು ಈ ಕಾಲದಲ್ಲಿದ್ದಿತು, ಆ ಕಾಲದಲ್ಲಿರ ಲಿಲ್ಲ' ಎಂಬ ಅಳತೆಯಿಂದ ನಿರ್ಣಯ: ನಳರಾಜನು ತ್ರೇತಾಯುಗದಲ್ಲಿ ಇಲ್ಲಿಂದ ಇಲ್ಲಿಯವರೆಗೆ ಆಳಿದನು ಎಂಬುದು.

(೩) ವಸ್ತುಪರಿಚ್ಛೇದ—ವಸ್ತುಗಳ ಸ್ವರೂಪದಿಂದ ನಿರ್ಣಯ: ಮನುಷ್ಯ, ಪಶು, ಎಮ್ಮೆ, ಆಡು, ಸರ್ಪ, ಹುಳು, ದಪ್ಪ, ಸಣ್ಣ, ಬಿಳಿದು, ಕರಿದು, ಗಂಡಸು, ಹೆಂಗಸು ಇತ್ಯಾದಿಗಳು 'ಒಂದು ಮತ್ತೊಂದಲ್ಲ, ಒಂದರಂತೆ ಮತ್ತೊಂದಿಲ್ಲ' ಎಂಬುದು. ಈ ಮೂರು ಅಳತೆಗಳಿಗೆ ಎಲ್ಲಾ ವಸ್ತುವೂ ಸಿಕ್ಕುವುದು. ಆದರೆ—(೧) ಈಶ್ವರನು—ಎಲ್ಲಾ ಜಾಗದಲ್ಲಿಯೂ ಇದ್ದುಕೊಂಡು, ಅವನು ಇಲ್ಲದೆ ಇರುವ ಜಾಗವೇ ಇಲ್ಲ, ಎಂಬಂತೆ ವ್ಯಾಪಕನಾಗಿರುವುದರಿಂದ ದೇಶಪರಿಚ್ಛೇದಕ್ಕೆ ಒಳಗಾಗು ವುದಿಲ್ಲ. (೨) ನಿತ್ಯನಾಗಿ ಯಾವಾಗಲೂ ಇರುವುದರಿಂದ 'ಇಂಥ ಕಾಲದಲ್ಲಿದ್ದನು, ಇಂಥ ಕಾಲದಲ್ಲಿಲ್ಲ' ಎಂಬ ಕಾಲಪರಿಚ್ಛೇದಕ್ಕೆ ಒಳಗಾಗುವುದಿಲ್ಲ. (೩) ಎಲ್ಲಾ ಪದಾರ್ಥಗಳಿಗೂ ಅಂತರ್ಯಾಮಿಯಾಗಿದ್ದುಕೊಂಡು ಸರ್ವಕ್ಕೂ ತಾನು ಶರೀರಿ ಯಾಗಿಯೂ ಪ್ರಕಾರಿಯಾಗಿಯೂ ಇರುವುದರಿಂದ 'ಇವನು ಅವನಲ್ಲ, ಇದು ಅದಲ್ಲ' ಎಂಬ ವಸ್ತುಪರಿಚ್ಛೇದಕ್ಕೂ ಗುರಿಯಾಗುವುದಿಲ್ಲ.

ಅವನಿಲ್ಲದ ಜಾಗವೂ ಇಲ್ಲ, ಅವನಿಲ್ಲದ ಕಾಲವೂ ಇಲ್ಲ, ಅವನಿಲ್ಲದ, ಅವನಲ್ಲದ ವಸ್ತುವೂ ಇಲ್ಲ. ಎಲ್ಲಾ ವಸ್ತುವೂ ಅವನ ಶರೀರವೇ, ಅವನ ರೂಪವೇ ಎಂದು ಫಲಿತವಾಗುವುದು. ಇದೇ ಸರ್ವೇಶ್ವರನ ಸ್ವರೂಪದಿಂದ ವ್ಯಾಪ್ತಿ.

ಸರ್ವೇಶ್ವರನು ಸರ್ವಜ್ಞನಾಗಿರುವುದರಿಂದ ಹಿಂದೆ ಕಳೆದ, ಮುಂದೆ ಆಗುವ, ಈಗಿರುವ ಸಮಸ್ತ ವಸ್ತುಗಳನ್ನೂ ಸಾಕ್ಷಾತ್ಕಾರಮಾಡಬಲ್ಲ, ಸರ್ವತೋಮುಖ ವಾದ ಅವನ ಜ್ಞಾನಕ್ಕೆ ಎಲ್ಲವೂ ಗೋಚರವಾಗಿಯೇ ಇರುವುದು. ಅವನ ಜ್ಞಾನಕ್ಕೆ ಗೋಚರವಾಗದ ವಸ್ತುವೂ ಇಲ್ಲ, ರೀತಿಯೂ ಇಲ್ಲ. ಇದೇ ಸರ್ವೇಶ್ವರನ ಧರ್ಮಭೂತಜ್ಞಾನದಿಂದ ವ್ಯಾಪ್ತಿ.

೪೮. ಸರ್ವೇಶ್ವರನು ಸಕಲ ಜಗದೇಕ ಕಾರಣನಾಗಿರುವನು; ಪ್ರಪಂಚಕ್ಕೆ ತ್ರಿವಿಧಕಾರಣನಾಗಿಯೂ ಇರುವನು.

ಕಾರ್ಯವನ್ನು ಉಂಟುಮಾಡುವ ವಸ್ತುಕಾರಣವೆನಿಸುವುದು. ಅದು ಉಪಾ ದಾನಕಾರಣವೆಂದೂ, ನಿಮಿತ್ತಕಾರಣವೆಂದೂ, ಸಹಕಾರಿಕಾರಣವೆಂದೂ ಮೂರು ತೆರನಾಗಿರುವುದು. ಹೊಸದಾದ ಒಂದು ಅವಸ್ಥೆಯನ್ನು ಪಡೆದು ತಾನೇ ಕಾರ್ಯವು ಎನಿಸುವ ವಸ್ತು ಉಪಾದಾನಕಾರಣವು (Material cause). ಈ ಉಪಾದಾನ

ಕಾರಣದಿಂದ ಕಾರ್ಯವನ್ನು ಉಂಟುಮಾಡುವ ತೆರನನ್ನು ಅರಿತು ಉಂಟುಮಾಡುವ ಕರ್ತೃವಸ್ತು ನಿಮಿತ್ತ ಕಾರಣವು (Instrumental cause). ಈ ಕರ್ತೃವು ಕಾರ್ಯವನ್ನು ಉಂಟುಮಾಡುವುದಕ್ಕೆ ಬೇಕಾದ ಉಪಕರಣಗಳು ಸಹಕಾರಿಕಾರಣವು (Auxiliary cause).

ಇದು ಹೇಗೆಂದರೆ—ಸುವರ್ಣನಿರ್ಮಿತವಾದ ಕಡಗ, ಬಳೆ ಮುಂತಾದ ಕಾರ್ಯಕ್ಕೆ (ಆಭರಣಕ್ಕೆ) ಸುವರ್ಣವೇ ಉಪಾದಾನಕಾರಣವು (ಈ ಚಿನ್ನದಗಟ್ಟಿಯೇ ಆ ಆಭರಣವಾಗಿ ಪರಿಣಮಿಸುತ್ತದೆ). ಸುವರ್ಣಕಾರನಾದ ಅಕ್ಕಸಾಲಿಯೇ ನಿಮಿತ್ತ ಕಾರಣ; ಸುತ್ತಿಗೆ, ಚಿಮುಟಿಗೆ, ಇಕ್ಕುಳ, ಕಂಬಚ್ಚು, ಬೆಂಕಿ ಮುಂತಾದುವು ಸಹಕಾರಿಕಾರಣವು. ಹೀಗೆಯೇ ಮಣ್ಣಿನಿಂದ ಮಾಡಿದ ಮಡಕೆ, ಕುಡಿಕೆ, ಹೆಂಚು ಮುಂತಾದುವು. ಇಂತಹ ಕಾರ್ಯಗಳಿಗೆ ಜೇಡಿಮಣ್ಣಿನ ಮುದ್ದೆ (ಮೃತ್ಪಿಂಡವೇ) ಉಪಾದಾನಕಾರಣವು. ಮಣ್ಣಿನಿಂದ ಆ ವಸ್ತುಗಳನ್ನು ಮಾಡಿದ ಕುಂಬಾರನೇ ನಿಮಿತ್ತಕಾರಣವು; ಚಕ್ರ ಮುಂತಾದುವು ಸಹಕಾರಿಕಾರಣವು. ಹೀಗೆ ಲೋಕದಲ್ಲಿ ಹುಟ್ಟುವ ಕಾರ್ಯವಸ್ತುಗಳೆಲ್ಲಕ್ಕೂ ಮೂರುವಿಧವಾದಕಾರಣಗಳು ಬೇರೆ ಬೇರೆ ಯಾಗಿರುವುವು.

ಈ ಲೋಕರೀತಿಯನ್ನು ಮೀರಿ ಈ ಪ್ರಪಂಚವೆಂಬ ಕಾರ್ಯಕ್ಕೆ ಭಗವಂತನೊಬ್ಬನೇ ಮೂರುವಿಧವಾದ ಕಾರಣನಾಗಿಯೂ ಇರುವನು. ಅದು ಹೇಗೆಂದರೆ—

ಮಹಾಪ್ರಳಯದಲ್ಲಿ ಈ ಪಂಚಮಹಾಭೂತಗಳೂ, ಪಂಚತನ್ಮಾತ್ರೆಗಳೂ, ಏಕಾದಶೇಂದ್ರಿಯಗಳೂ, ಅಹಂಕಾರತತ್ತ್ವವೂ, ಮಹತ್ತತ್ತ್ವವೂ ಕೂಡಿ ಇಪ್ಪತ್ತಮೂರು ತತ್ತ್ವಗಳೂ ಪ್ರಕೃತಿಯಲ್ಲಿ ಅಡಗಿ, ಆ ಉಳಿದ ಪ್ರಕೃತಿ, ಜೀವ ಎಂಬ ಎರಡು ತತ್ತ್ವಗಳೂ ಅವುಗಳ ಹೆಸರೂ ಆಕಾರವೂ ಬೇರೆ ಬೇರೆ ಎನ್ನಿಸಿ ತೋರಿ ಕೊಳ್ಳದಂತೆ, ಪರಮಾತ್ಮನಾದ ನಾರಾಯಣನಲ್ಲಿ ಹುದುಗಿ ಅವನ ಶರೀರ ವಾಗಿದ್ದಿರುವ ಆ ವೇಳೆಯಲ್ಲಿ ಆ ಪರಮಾತ್ಮನೊಬ್ಬನೇ ಉಳಿದಿದ್ದು ಮೂರು ವಿಧವಾದ ಕಾರಣವೂ ಆಗಿ ಈ ಪ್ರಪಂಚವನ್ನು ಉಂಟುಮಾಡಿದುದರಿಂದ ಆ ನಾರಾಯಣನೇ* ಜಗದೇಕಕಾರಣ ಎಂಬುದು ಸಿದ್ಧವಾಯಿತು. ನಾರಾಯಣನು ಸೂಕ್ಷ್ಮ ಚಿದಚಿದ್ವಿಶಿಷ್ಟನಾಗಿ ಈ ಜಗತ್ತಿಗೆ ಉಪಾದಾನಕಾರಣನಾಗಿರುವನು. 'ಬಹು ಸ್ಯಾಮ್' ಎಂಬ ಸಂಕಲ್ಪವಿಶಿಷ್ಟನಾಗಿ ಈ ಪ್ರಪಂಚಕ್ಕೆ ನಿಮಿತ್ತಕಾರಣ ನಾಗಿಯೂ ಇರುವನು. ಕಾಲಾದಿಗಳಿಗೆ ಅಂತರ್ಯಾಮಿಯಾಗಿ ಪ್ರಪಂಚಕ್ಕೆ ಸಹಕಾರಿ

---

* ಬ್ರಹ್ಮಾದಿಷು ಪ್ರಲೀನೇಷು ನಷ್ಟೇ ಲೋಕೇ ಚರಾಚರೇ ।
ಆಭೂತಸಂಪ್ಲವೇ ಪ್ರಾಪ್ತೇ ಪ್ರಲೀನೇ ಪ್ರಕೃತೌ ಮಹತಿ ।
ಏಕಸ್ತಿಷ್ಠತಿ ವಿಶ್ವಾತ್ಮಾ ಸ ತು ನಾರಾಯಣಃ ಪ್ರಭುಃ ॥

ಕಾರಣನಾಗಿಯೂ ಇರುವನು. ಈ ರೀತಿಯಾಗಿ ಸೂಕ್ಷ್ಮಪ್ರಕೃತಿಜೀವಶರೀರಕನಾದ ಪರಮಾತ್ಮನು ಉಪಾದಾನಕಾರಣನಾದರೂ ಆ ಹೊಸದಾದ ಒಂದು ಆಕಾರವನ್ನು ಪಡೆವುದೆಂಬ ಪರಿಣಾಮದೋಷವು ಪ್ರಕೃತಿಮಾತ್ರಕ್ಕೇ ಹೊರತು ಶ್ರೀಮನ್ನಾರಾಯಣನ ದಿವ್ಯಾತ್ಮಸ್ವರೂಪಕ್ಕೆ ಇಲ್ಲ ಎಂದು ಸಕಲವೇದಾಂತಗಳೂ ಉದ್ಘೋಷಿಸುವುವು. (ಮುಂದಣ ಸಮನ್ವಯಪ್ರಕಾಶದ ಶೋಧಕಶ್ರುತಿಯೊಡನೆ ಹೋಲಿಸಿ ನೋಡಿರಿ). ಹೀಗೆ ಸರ್ವೇಶ್ವರನಿಗೆ ಉಪಾದಾನತ್ವ ನಿಮಿತ್ತತ್ವಗಳಿರುವಂತೆಯೇ ಕಾರ್ಯವರ್ಗಗಳಲ್ಲಿ ಕರ್ತೃತ್ವ, ಪ್ರೇರಕತ್ವ, ನಿಯಂತೃತ್ವ, ಅನುಮಂತೃತ್ವ, ಸಹಕಾರಿತ್ವ, ಉದಾಸೀನತ್ವ ಮುಂತಾದುವೂ ಅಲ್ಲಲ್ಲಿಗೆ ತಕ್ಕಂತೆ ಉಪಪನ್ನವಾಗುವುವು. ಆದುದರಿಂದ ಸಮಷ್ಟಿವ್ಯಷ್ಟಿರೂಪವಾದ ಸಕಲ ಕಾರ್ಯಗಳಿಗೂ ಸಕಲ ಪ್ರಪಂಚಗಳಿಗೂ ಶ್ರೀಮನ್ನಾರಾಯಣನೇ ಕಾರಣಭೂತನಾಗಿರುವನು.

ಬೌದ್ಧರೂ ಜೈನರೂ ನೈಯಾಯಿಕರೂ ಪರಮಾಣುಗಳೇ ಜಗತ್ಕಾರಣ ಎಂದು ಹೇಳುವರು. ಪರಮಾಣು ಜಗತ್ಕಾರಣವೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲವಾದುದರಿಂದಲೂ ಶ್ರುತಿವಿರೋಧವಾಗುವುದರಿಂದಲೂ ಆ ಪಕ್ಷಗಳು ಸಂಗತವಲ್ಲ.

ಸಾಂಖ್ಯರು ಪ್ರಧಾನವೇ ಸ್ವತಂತ್ರವಾಗಿ ಜಗತ್ಕಾರಣ ಎಂದು ಹೇಳುವರು. ಪ್ರಕೃತಿ ಅಚೇತನವಾದುದರಿಂದಲೂ ಸರ್ವೇಶ್ವರಾಧಿಷ್ಠಾನವಾದ ಹೊರತು ಪರಿಣಮಿಸಲಾರದಾದುದರಿಂದಲೂ ಪ್ರಕೃತಿಗೇ ಸ್ವತಂತ್ರಕಾರಣತ್ವ ಹೇಳಿದರೆ ಸೃಷ್ಟಿಸಂಹಾರವ್ಯವಸ್ಥೆ ಕೂಡುವುದಿಲ್ಲವಾದುದರಿಂದಲೂ ಆ ಪಕ್ಷವೂ ಸಂಗತವಲ್ಲ.

ಪಾಶುಪತಾದಿಗಳು ಹೇಳುವಂತೆ ಚೇತನಾಂತರ್ಗತರಾದ ಬ್ರಹ್ಮರುದ್ರಾದಿಗಳೂ ಜಗತ್ಕಾರಣರಲ್ಲ. ಈ ಚೇತನರು ಕರ್ಮಪರತಂತ್ರರಾಗಿಯೂ ದುಃಖಿಗಳಾಗಿಯೂ ಇರುವುದರಿಂದ ಇವರಿಗೆ ಜಗತ್ಕಾರಣತ್ವವು ಸಂಗತವಾಗಲಾರದು. ಆದುದರಿಂದ ಸರ್ವಜ್ಞನೂ ಸರ್ವಶಕ್ತನೂ ಆದ ಶ್ರೀಮನ್ನಾರಾಯಣನೇ ಜಗತ್ಕಾರಣವೆಂದು ಸ್ಥಿರವಾಯಿತು.

೪೯. ಸರ್ವೇಶ್ವರನಾದ ನಾರಾಯಣನು ಹೀಗೆ ಸಕಲ ಜಗತ್ಸೃಷ್ಟಿಸ್ಥಿತಿಲಯ ಕಾರಣನಾಗಿರುವುದು, ಅವಿದ್ಯೆ, ಕರ್ಮವಶ್ಯತೆ, ಇತರರ ಆಜ್ಞೆ ಮುಂತಾದುವುಗಳೊಂದರಿಂದಲೂ ಅಲ್ಲ; ಕೇವಲ ಸ್ವೇಚ್ಛೆಯಿಂದಲೇ. ಅದರಲ್ಲಿಯೂ ಸ್ವಸಂಕಲ್ಪದಿಂದಲೇ ಇವೆಲ್ಲವನ್ನೂ ಮಾಡುವುದರಿಂದ ಕಾರ್ಯಗಳು ಆಯಾಸರಹಿತವಾಗಿಯೇ ಇರುವುವು. ಇವುಗಳಿಗೆ ಪ್ರಯೋಜನವು ಕೇವಲ ಲೀಲೆಯೇ.

ಪ್ರಶ್ನೆ—ಆದರೆ ಜಗತ್ತನ್ನು ಸಂಹರಿಸಿದರೆ ಆಗ ಲೀಲಾರಸವು ತಪ್ಪಲಿಲ್ಲವೋ?

ಉತ್ತರ—ಆ ಸಂಹಾರವೂ (ಆಟಗಳಲ್ಲಿ ಪಗಡೆಕಾಯನ್ನು ಕೊಲ್ಲುವಂತೆ) ಲೀಲೆಯಾದುದರಿಂದ ಆಗಲೂ ಆ ಲೀಲಾರಸವು ತಪ್ಪುವುದಿಲ್ಲ.

ಪ್ರಶ್ನೆ—ಆದರೆ 'ಅಜಾಮೇಕಾಂ', 'ಅಜೋ ನಿತ್ಯಶ್ಶಾಶ್ವತೋಽಯಂ ಪುರಾಣಃ' ಎಂಬಂತೆ ನಿತ್ಯವಾಗಿಯೇ ಇರುವ ಅಚಿತ್ತನ್ನೂ ನಿತ್ಯವಾಗಿಯೇ ಇರುವ ಚಿತ್ತುಗಳನ್ನೂ ಸರ್ವೇಶ್ವರನು ಸೃಷ್ಟಿಸಿದನು ಎಂಬುದು ಹೇಗೆ ? ಇವುಗಳ ಸೃಷ್ಟಿ ಸ್ಥಿತಿ ಸಂಹಾರಗಳೆಂದರೇನು ?

ಉತ್ತರ—ಈಶ್ವರನು ಸೃಷ್ಟಿಸುವುದು ಎಂದರೆ ಪ್ರಳಯದಲ್ಲಿ ತನ್ನಲ್ಲಿ ಅಡಗಿ ಅವಿಭಕ್ತವಾಗಿಹೋಗಿದ್ದ ತಮಶ್ಶಬ್ದವಾಚ್ಯವಾದ ಅಚಿತ್ತನ್ನು ಸ್ವಪ್ರೇರಣದಿಂದ ವಿಭಾಗಪಡಿಸಿ ಅದನ್ನು ಪರಿಣಾಮಗೊಳಿಸುವುದೂ, ಪ್ರಳಯಕಾಲದಲ್ಲಿ ಅಚಿತ್ತಿನೊಂದಿಗೆ ತನ್ನಲ್ಲಿ ಅಡಗಿ ಶರೀರೇಂದ್ರಿಯರಹಿತರಾಗಿ ಭೋಗಮೋಕ್ಷ ಶೂನ್ಯರಾಗಿ ಬಿದ್ದಿದ್ದ ಚೇತನರುಗಳಿಗೆ ಭೋಗಸ್ಥಾನವಾದ ಶರೀರವನ್ನೂ ಭೋಗೋಪಕರಣವಾದ ಇಂದ್ರಿಯಗಳನ್ನೂ ಕೊಟ್ಟು ಜ್ಞಾನವಿಕಾಸವನ್ನು ಉಂಟುಮಾಡುವುದೂ ಎಂದೇ ಅರ್ಥ. ಅಚಿತ್ತನ್ನೂ ಜೀವಾತ್ಮರನ್ನೂ ಹೊಸದಾಗಿ ಸೃಷ್ಟಿಸಿದನೆಂದು ಅರ್ಥವಲ್ಲ. ರಕ್ಷಿಸುವಿಕೆ ಎಂದರೆ—ಪೈರಿಗೆ ನೀರುಹಾಯಿಸುವಂತೆ ತಾನೇ ಅವುಗಳೊಳಗೆ ಅನುಕೂಲನಾಗಿ ಪ್ರವೇಶಿಸಿ ನಿಂತು ಸರ್ವರಕ್ಷೆಗಳನ್ನೂ ಮಾಡುವುದು. ಸಂಹರಿಸುವುದು ಎಂದರೆ—ಅವಿನೀತರಾದ ಮಕ್ಕಳನ್ನು ತಂದೆ ಸಂಕೋಲೆಯಿಟ್ಟು ನಿಶ್ಚೇಷ್ಟರನ್ನಾಗಿ ಮಾಡಿ ಇಡುವಂತೆ ಚೇತನರಿಗೆ ಪ್ರಾಕೃತವಿಷಯಗಳಲ್ಲಿ ಓಡಿಹೋಗುವ ಶರೀರೇಂದ್ರಿಯಗಳನ್ನು ತೊಲಗಿಸಿ ಅಡಗಿಸಿಟ್ಟಿರುವಿಕೆ.

ಈ ಸೃಷ್ಟಿ ಸ್ಥಿತಿ ಸಂಹಾರಗಳು ಮೂರೂ ಪ್ರತ್ಯೇಕವಾಗಿ ನಾಲ್ಕು ತೆರನಾಗಿರುವುವು. ಈಶ್ವರನು ಸೃಷ್ಟಿಯಲ್ಲಿ—ಚತುರ್ಮುಖಬ್ರಹ್ಮನಿಗೂ, ದಕ್ಷಾದಿ ಪ್ರಜಾಪತಿಗಳಿಗೂ, ಕಾಲಕ್ಕೂ, ಆ ಆ ಜಂತುಗಳಿಗೂ ಅಂತರ್ಯಾಮಿಯಾಗಿ ನಿಂತು ರಜೋಗುಣದೊಡಗೂಡಿ ಸೃಷ್ಟಿಸುವನು. ಸ್ಥಿತಿಯಲ್ಲಿ—ವಿಷ್ಣು ಮುಂತಾದ ರೂಪದಿಂದ ಅವತಾರ ಮಾಡಿ ಮನ್ವಾದಿ ಮೂಲಕವಾಗಿ ಶಾಸ್ತ್ರಗಳನ್ನು ಪ್ರಚಾರಗೊಳಿಸಿ ಸನ್ಮಾರ್ಗವನ್ನು ತೋರಿಸಿ ಕಾಲಕ್ಕೂ ಸಕಲ ಭೂತಗಳಿಗೂ ಅಂತರ್ಯಾಮಿಯಾಗಿ ಸತ್ತ್ವಗುಣದೊಡಗೂಡಿ ರಕ್ಷಿಸುವನು. ಸಂಹಾರದಲ್ಲಿ—ರುದ್ರನಿಗೂ ಅಗ್ನಿಯಮಾದಿಗಳಿಗೂ ಕಾಲಕ್ಕೂ ಸಕಲ ಪ್ರಾಣಿಗಳಿಗೂ ಅಂತರ್ಯಾಮಿಯಾಗಿ ತಮೋಗುಣದೊಡನೆ ಕೂಡಿ ಸಂಹರಿಸುವನು.

೩೦. ಪರಮಾತ್ಮನು ಅಖಿಲಹೇಯ ಪ್ರತ್ಯನೀಕನಾಗಿರುವನು

ಹೇಯ ಎಂದರೆ ದೋಷ, ಪ್ರತ್ಯನೀಕ ಎಂದರೆ ವಿರೋಧಿ; ತಾನೂ ಹೇಯವಿಲ್ಲದವನಾಗಿ ತನ್ನ ಆಶ್ರಿತರ ಹೇಯಗಳನ್ನೂ ನೀಗಿಸುವವನು, ಸಮಸ್ತ ವಸ್ತುಗಳ ಯಾವ ದೋಷವೂ ತನ್ನ ಹತ್ತಿರಕ್ಕೆ ಸುಳಿಯದಂತೆ ಸಮಸ್ತ ದೋಷರಹಿತನಾಗಿರುವನು—ಎಂದರ್ಥ.

ಇಲ್ಲಿ ಸಮಸ್ತವಸ್ತುಗಳು ಎಂಬುವು ಮೂರುವಿಧವಾದ ಅಚಿತ್ತುಗಳು

ಮೂರುವಿಧವಾದ ಚಿತ್ತುಗಳು. ಅಚಿತ್ತುಗಳಲ್ಲಿ ಮಿಶ್ರಸತ್ತ್ವಕ್ಕೆ ಪರಿಣಾಮವೆಂಬ ದೋಷವು ಯಾವಾಗಲೂ ಉಂಟು. ಕಾಲಕ್ಕೂ ಅಹೋರಾತ್ರಾದಿ ಪರಿಣಾಮವೆಂಬ ದೋಷವುಂಟು. ನಿತ್ಯವಿಭೂತಿಗೂ ವಿಮಾನ ಗೋಪುರ ಪ್ರಾಸಾದೋದ್ಯಾನಾದಿ ರೂಪಪರಿಣಾಮವು ತಪ್ಪದು. ತ್ರಿವಿಧಚೇತನರಲ್ಲಿ ಬದ್ಧರಿಗೆ ಅವಿದ್ಯಾಸ್ಮಿತಾ ರಾಗ ದ್ವೇಷಾಭಿನಿವೇಶರೂಪವಾದ ಪಂಚಕ್ಲೇಶಗಳೆಂಬ ಹೇಯವಿಕಾರಗಳು ಸಂಪೂರ್ಣ ವಾಗಿಯೇ ಇರುವುವು. ಮುಕ್ತರಿಗೆ ಹೇಯವೆಂಬುದು ಮುಕ್ತಿದಶೆಯಲ್ಲಿ ಇಲ್ಲವಾದರೂ, ಸಂಸಾರಿದಶೆಯಲ್ಲಿ ಅವಿದ್ಯಾದಿ ಕ್ಲೇಶಗಳನ್ನು ಅನುಭವಿಸಿಯೇ ಆಮೇಲೆ ಬಿಡುಗಡೆಯನ್ನು ಹೊಂದಿದ ದೋಷಸಂಬಂಧವಿದ್ದಿತು. ನಿತ್ಯರಿಗೆ ಅಣುತ್ವ ಪಾರತಂತ್ರ್ಯಾದಿಗಳು ಇರುವುವು. ಈರೀತಿ ಇರುವ ಹೇಯ ಗಳಿಗೆ ಈಶ್ವರನು ಪ್ರತಿಭಟನಾಗಿರುವನು: ಎಂದರೆ ಹೇಯಗಳು ಪರಮಾತ್ಮನನ್ನು ಯಾವರೀತಿಯಲ್ಲಿಯೂ ಸಂಬಂಧಿಸಲಾರವು. ಸರ್ವವ್ಯಾಪಿಯಾದ ಪರಮಾತ್ಮನ ಸಕಲ ವಸ್ತುಗಳಲ್ಲಿಯೂ ಅಂತರಾತ್ಮನಾಗಿ ವ್ಯಾಪಿಸಿದ್ದರೂ, ತಾವರೆಯೆಲೆಯ ಮೇಲಣ ನೀರಿನಂತೆ ಆ ವಸ್ತುಗಳ ದೋಷಗಳಿಂದ ನಿರ್ಲಿಪ್ತನಾಗಿ ಶುದ್ಧ ನಾಗಿಯೇ ಇರುವನು. ನಮ್ಮ ಶರೀರಕ್ಕೆ ಉಂಟಾದ ಬಾಲ್ಯ, ಯೌವನ, ಮುಪ್ಪು ಮುಂತಾದ ದೋಷಗಳು ಶರೀರದೊಳಗಿರುವ ಜೀವಾತ್ಮನಿಗೆ ಹೇಗೆ ಅಂಟುವು ದಿಲ್ಲವೋ ಹಾಗೆಯೇ ಅಶುಚಿ ಪದಾರ್ಥಗಳಲ್ಲಿರುವ ದೋಷಗಳು ಅವುಗಳೊಳಗೆ ಇರುವ ಪರಮಾತ್ಮನಿಗೆ ಅಂಟುವುದಿಲ್ಲ. ಅಖಿಲದ ಹೇಯಗಳಿಗೂ ಪ್ರತ್ಯನೀಕನು, ಎಂದು ಷಷ್ಠೀಸಮಾಸಮಾಡಿ, ತನ್ನನ್ನು ಆಶ್ರಯಿಸಿದವರಲ್ಲಿ ಯಾವ ಯಾವ ವಿಧವಾದ ದೋಷಗಳಿದ್ದರೂ ಅವುಗಳೆಲ್ಲಾ ತನ್ನನ್ನು ಆಶ್ರಯಿಸಿದ ಕ್ಷಣದಲ್ಲಿಯೇ ನಾಶಹೊಂದುವಂತೆ ಮಾಡಬಲ್ಲವನು ಎಂದು ಮತ್ತೊಂದರ್ಥವೂ ಉಂಟು.

ಈ ಅಖಿಲಹೇಯ ಪ್ರತ್ಯನೀಕತ್ವದ ಮಹತ್ತ್ವದಿಂದಲೇ ಚೇತನರು ಜನ್ಮ, ಕುಲ, ಆಚಾರ ಮುಂತಾದುವುಗಳಲ್ಲಿ ಎಷ್ಟು ನಿಹೀನರಾಗಿದ್ದರೂ ನಿಶ್ಶಂಕವಾಗಿ ಧಾರಾಳವಾಗಿ ಭಗವಂತನನ್ನು ಆಶ್ರಯಿಸಬಹುದು. ಅವರು ಅವಿಚಲಿತವಾದ ಭಕ್ತಿಯೊಡನೆ ಭಗವಂತನನ್ನು ಆಶ್ರಯಿಸಿದರೆ ಅವನ ಅನುಗ್ರಹದಿಂದ ಪಾಪರಹಿತ ರಾಗಿ* ಕ್ರಮ ಕ್ರಮದಿಂದ ಭಾಗವತರಾಗಿ ಪೂಜ್ಯರಾಗುವರು; ಹುಟ್ಟುವ ಕಾಲದಲ್ಲಿ

* ಅಪಿಚೇತ್ ಸ ದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮನ್ತವ್ಯಃ ಸಮ್ಯಕ್ ವ್ಯವಸಿತೋ ಹಿ ಸಃ ॥
ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವತ್ ಶಾನ್ತಿಂ ಸ ಗಚ್ಛತಿ ।
ದುರಾಚಾರೋಽಪಿ ಸರ್ವಾಶೀ ಕೃತಘ್ನೋ ನಾಸ್ತಿಕಃ ಪುರಾ ॥
ಸಮಾಶ್ರಯೇದಾದಿದೇವಂ ಶ್ರದ್ಧಯಾ ಶರಣಂ ಯದಿ ।
ನಿರ್ದೋಷಂ ವಿದ್ಧಿ ತಂ ಜನ್ತುಂ ಪ್ರಭಾವಾತ್ಪರಮಾತ್ಮನಃ ॥
ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಃ ತೇಽಪಿ ಯಾನ್ತಿ ಪರಾಂ ಗತಿಂ ॥ (ಭಗವದ್ಗೀತಾ)

ಶ್ರೀಮನ್ನಾರಾಯಣನ ಕಟಾಕ್ಷಕ್ಕೆ ಪಾತ್ರರಾಗಿ ಹುಟ್ಟಿದವರು ಸಾತ್ತ್ವಿಕರಾಗಿ*ಪ್ರಾಕೃತ ಭೋಗಗಳಲ್ಲಿ ವೈರಾಗ್ಯವನ್ನು ಹೊಂದಿ ಸದಾಚಾರಶೀಲರಾಗಿ ಕ್ರಮದಿಂದ ಮೋಕ್ಷವನ್ನು ಪಡೆಯುತ್ತಾರೆ ಎಂದು ಶಾಸ್ತ್ರಗಳಲ್ಲಿ ಪ್ರತಿಪಾದಿತವಾಗಿದೆ

ಈ ಅಖಿಲಹೇಯ ಪ್ರತ್ಯನೀಕತ್ವವೂ ಮುಂದೆ ಹೇಳುವ ಕಲ್ಯಾಣೈಕತಾನತ್ವವೂ ಸಹ ಸರ್ವೇಶ್ವರನಿಗೆ ಉಭಯಲಿಂಗಗಳೆಂದು ಪ್ರಸಿದ್ಧವಾಗಿ, ಚಕ್ರವರ್ತಿಗೆ ಛತ್ರ ಚಾಮರಗಳಂತೆ ಸರ್ವೇಶ್ವರತ್ವಕ್ಕೆ ಅಸಾಧಾರಣ ಚಿಹ್ನೆಗಳಾಗಿರುವುವು. ಆದುದರಿಂದಲೇ ಸರ್ವೇಶ್ವರನು ಸ್ವೇತರ ಸಮಸ್ತ ವಸ್ತುವಿಲಕ್ಷಣನೆನಿಸುವನು

೫೧. ಸರ್ವೇಶ್ವರನು ಸಕಲಕಲ್ಯಾಣಗುಣಾಕರನು

ಇವನ ಕಲ್ಯಾಣಗುಣಗಳು ನಿತ್ಯವಾಗಿಯೂ, ಇಷ್ಟೆಂದು ತಿಳಿಯಲು ಎಣಿಸಲು ಅಶಕ್ಯವಾಗಿಯೂ, ನಿರ್ದೋಷವಾಗಿಯೂ ಇರುವುವು. ಇವುಗಳಲ್ಲಿ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬಂತೆ ಸತ್ಯತ್ವ ಜ್ಞಾನತ್ವ ಆನಂದತ್ವ ಮುಂತಾದ ಗುಣಗಳು ಸರ್ವೇಶ್ವರನ ಸ್ವರೂಪವನ್ನು ನಿರೂಪಿಸುವುವು. ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು ಎಂಬ ಈ ಷಡ್ಗುಣಗಳು ಅವನ ಸ್ವರೂಪಕ್ಕೆ ವಿಶೇಷಾತಿಶಯವನ್ನು ಕೊಡುವುವು. ಈ ಜ್ಞಾನ ಶಕ್ತ್ಯಾದಿ ಷಡ್ಗುಣಗಳ ವಿಸ್ತಾರರೂಪವಾಗಿಯೇ ಸ್ಥೈರ್ಯ, ಧೈರ್ಯ, ಪರಾಕ್ರಮ, ವಾತ್ಸಲ್ಯ, ಸೌಶೀಲ್ಯ, ಮಾರ್ದವ, ಸೌಹಾರ್ದ, ಕಾರುಣ್ಯ, ಮಾಧುರ್ಯ, ಗಾಂಭೀರ್ಯ ಮುಂತಾದ ಅನಂತಗುಣಗಳು ಸರ್ವೇಶ್ವರನಲ್ಲಿ ನೆಲೆಗೊಂಡಿರುವುವು.

ಅವುಗಳಲ್ಲಿ ಜ್ಞಾನವು ಯಾವಾಗಲೂ ಸಕಲವಸ್ತುಗಳನ್ನೂ ಸಾಕ್ಷಾತ್ಕಾರ ಮಾಡುವ ಗುಣ; ಶಕ್ತಿ ಸಕಲ ಜಗದೇಕಕಾರಣನಾಗಿರುವಿಕೆ; ಬಲವು ಸಕಲ ವಸ್ತುಗಳನ್ನೂ ನೆಲೆಯಾಗಿ ನಿಲ್ಲಿಸುವಿಕೆ; ಐಶ್ವರ್ಯವು ಸಕಲವಸ್ತು ನಿಯಮನ ಸಾಮರ್ಥ್ಯ; ವೀರ್ಯಗುಣವು (ಅವಿಕಾರಿತ್ವ) ಜಗದುಪಾದಾನಕಾರಣನಾದರೂ ಸ್ವರೂಪ ವಿಕಾರವಿಲ್ಲದಿರುವಿಕೆ; ತೇಜಸ್ಸು ಅನ್ಯರನ್ನು ಅಡಗಿಸುವ ಸಾಮರ್ಥ್ಯ ಅಥವಾ ಯಾವುದರಲ್ಲಿಯೂ ಸಹಕಾರಿಗಳನ್ನು ಅಪೇಕ್ಷಿಸದೆಯೇ ಸಕಲ ಕಾರ್ಯವನ್ನೂ ನಡೆಸುವಿಕೆ.

ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯ ಎಂಬ ಗುಣಗಳು ಚೇತನರು ಬಂದು ತನ್ನನ್ನು ಆಶ್ರಯಿಸುವುದಕ್ಕೆ ಉಪಯುಕ್ತವಾದುವು. ಇವು ಲಕ್ಷ್ಮಿಯ ಪುರುಷಕಾರಬಲದಿಂದ ತಲೆದೋರಿ ಅವರ ಅಪರಾಧಗಳನ್ನು ಮನ್ನಿಸುವಂತೆ ಮಾಡಿ ಸಕಲ ಚೇತನರಿಗೂ ಆಶ್ರಯಣ ಸೌಕರ್ಯವನ್ನುಂಟುಮಾಡುವುವು. ಜ್ಞಾನ,

---

* ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ ।
ಸಾತ್ತ್ವಿಕಸ್ಸ ತು ವಿಜ್ಞೇಯಸ್ಸ ವೈ ಮೋಕ್ಷಾರ್ಥಚಿಂತಕಃ ॥

ಶಕ್ತಿ ಎಂಬ ಗುಣಗಳು ಆಶ್ರಿತರ ಕಾರ್ಯಗಳನ್ನು ನೆರವೇರಿಸುವುವು. ವಾತ್ಸಲ್ಯಾದಿ ಗುಣಗಳಿಗೆ ವಿಷಯರು ಅನುಕೂಲರಾದ ಆಶ್ರಿತಚೇತನರು; ಶೌರ್ಯಾದಿಗಳಿಗೆ ವಿಷಯರು ಆಶ್ರಿತವಿರೋಧಿಗಳಾದ ಪ್ರತಿಕೂಲ ಚೇತನರು; ಜ್ಞಾನ ಶಕ್ತ್ಯಾದಿಗಳಿಗೆ ಎಲ್ಲರೂ ವಿಷಯರಾಗಿರುವರು.

ಅದರಲ್ಲಿಯೂ ಕಾರ್ಯಕರತ್ವದಮೇಲೆ ಲಕ್ಷ್ಯವಿಟ್ಟು ನೋಡಿದರೆ—ಸರ್ವೇಶ್ವರನ ಜ್ಞಾನವು ಅಜ್ಞಚೇತನರಿಗೆ, ಶಕ್ತಿ ಅಶಕ್ತರಿಗೆ, ಕ್ಷಮೆ ಅಪರಾಧಿಚೇತನರಿಗೆ, ಕೃಪೆ ದುಃಖಿಗಳಿಗೆ, ವಾತ್ಸಲ್ಯವು ದೋಷಿಗಳಿಗೆ, ಸೌಶೀಲ್ಯವು ಮಂದರಿಗೆ, ಆರ್ಜವವು ಕುಟಿಲರಿಗೆ, ಸೌಹಾರ್ದವು ದುಷ್ಟಹೃದಯರಿಗೆ, ಮಾರ್ದವವು ಇವನನ್ನು ಅಗಲಿದರೆ ಜೀವಿಸಲಾರದವರಿಗೆ, ಸೌಲಭ್ಯವು ಕಣ್ಣಾರೆ ನೋಡಬೇಕೆಂದು ಆಶೆಪಟ್ಟವರಿಗೆ, ವಿಶೇಷತಃ ಕಾರ್ಯಕರವಾಗಿರುವುವು. ಹೀಗೆಯೇ ಎಲ್ಲಾ ಗುಣಗಳ ವಿಷಯದಲ್ಲಿಯೂ ಅರಿಯಬೇಕು.

ವಾತ್ಸಲ್ಯವೆಂದರೆ—ಆಗತಾನೆ ಹುಟ್ಟಿದ ಎಳೆಗರುವಿನಲ್ಲಿ ತಾಯಿಯಾದ ಹಸುವಿಗೆ ಉಂಟಾಗಿರುವ ಸ್ನೇಹದಂತೆ, ಆಶ್ರಿತರ ವಿಷಯದಲ್ಲಿ ಸರ್ವೇಶ್ವರನಿಗೆ ಇರುವ ಸ್ನೇಹವು (ಮರುಕ) ಈ ವಾತ್ಸಲ್ಯಾನುಸಂಧಾನದಿಂದ ಚೇತನನು ಆಶ್ರಯಿಸಲು ಹೊರಟಾಗ ಅವನಿಗೆ ಪೂರ್ವದ ಸ್ವಾಪರಾಧದಿಂದುಂಟಾದ ಭಯವು ನಿವೃತ್ತವಾಗುವುದು.

ಸ್ವಾಮಿತ್ವವೆಂದರೆ —ಸ್ವವ್ಯತಿರಿಕ್ತವಾದ ಸಮಸ್ತ ವಸ್ತುಗಳನ್ನೂ ತನ್ನವೆಂದು ಅಭಿಮಾನವಿಟ್ಟಿರುವಿಕೆ; ಇದು ಸರ್ವೇಶ್ವರನಿಗೆ ನಿರುಪಾಧಿಕವಾಗಿ ಸ್ವತಸ್ಸಿದ್ಧವಾಗಿರುವುದು. ಇದರಿಂದ ಸ್ವತ್ತಿನ ಲಾಭವು ಸ್ವಾಮಿಗೇ ಹೊರತು ಮತ್ತೆ ಬೇರೆ ಅಲ್ಲವಾದುದರಿಂದ ಶೇಷನಾದ ಚೇತನನನ್ನು ಪಡೆವುದಕ್ಕಾಗಿ ಈಶ್ವರನು ತಾನೇ ಯತ್ನ ಮಾಡುತ್ತಿರುವನು. ಸ್ವತ್ತು ತಾನಾಗಿ ಪ್ರಾರ್ಥಿಸಿ ನಿರೀಕ್ಷಿಸಬೇಕಾದುದಿಲ್ಲ ಎಂದು ಫಲಿತವಾಯಿತು. ಈ ಸ್ವಾಮಿತ್ವಾನುಸಂಧಾನದಿಂದ ಸರ್ವೇಶ್ವರನು ನಮ್ಮಲ್ಲಿ ವಾತ್ಸಲ್ಯವಿಟ್ಟು ಕಾಪಾಡುವನೋ ಇಲ್ಲವೋ ಎಂಬ ಭಯವು ನಿವರ್ತಿಸಲ್ಪಡುವುದು.

ಶೀಲವೆಂದರೆ—ದೊಡ್ಡವನು ಚಿಕ್ಕವರೊಡನೆಗೆ ಕೂಡಿ ಕಲೆತುಬೆರೆಯುವ ಸ್ವಭಾವ; ಸೌಶೀಲ್ಯವೆಂದರೆ ಅದರಲ್ಲಿಯೂ ಉತ್ಕರ್ಷ —ಹೇಗೆಂದರೆ, ತಾನು ಎಷ್ಟೇ ಮಹತ್ತ್ವವುಳ್ಳವನಾದರೂ ಚಿಕ್ಕವರೊಂದಿಗೆ ತಾನೂ ಚಿಕ್ಕವನೆನಿಸಿ ಕೂಡಿ ಕಲೆತಾಗ ತನ್ನ ಮಹತ್ತ್ವವನ್ನು ಮನಸ್ಸಿನೊಳಗೆ ಕೊಂಚವಾದರೂ ತಂದುಕೊಳ್ಳದಿರುವಿಕೆ. ಈ ಸೌಶೀಲ್ಯಾನುಸಂಧಾನಮಾಡಿದರೆ ಮಹೋನ್ನತನಾದ ಈಶ್ವರನು ನಮ್ಮನ್ನು ಹತ್ತಿರಕ್ಕೆ ಕೂಡುವನೋ ಇಲ್ಲವೋ ಎಂಬ ಚೇತನನ ಭಯವು ನಿವೃತ್ತವಾಗುವುದು.

ಸೌಲಭ್ಯವೆಂದರೆ—ಪಡೆವುದಕ್ಕೆ ಸುಲಭವಾಗಿ ಸಿಕ್ಕುವಿಕೆ; ಅರ್ಚಾರೂಪಿಯಾಗಿ ದಿವ್ಯದೇಶಗಳಲ್ಲಿ ನೆಲೆಸಿ ಎಲ್ಲರ ಕಣ್ಣಿಗೂ ಗೋಚರನಾಗಿರುವಿಕೆ. ಈ ಸೌಲಭ್ಯಾನುಸಂಧಾನವನ್ನು ಮಾಡಿದರೆ, ಬ್ರಹ್ಮಾದಿಗಳಿಗೂ ವಾಙ್ಮನಸ್ಸುಗಳಿಗೂ ಅಗೋಚರನಾಗಿರುವ ಪರಾತ್ಪರ ವಸ್ತುವನ್ನು ನಾನು ಹೇಗೆ ಕಾಣುವುದು ಎಂಬ ಚೇತನನ ಭಯವು ನಿವೃತ್ತವಾಗುವುದು.

ಇದರ ಭಾವವೇನೆಂದರೆ--ಭಗವಂತನನ್ನು ಆಶ್ರಯಿಸಲೇಬೇಕು; ಆದರೆ ಪರವ್ಯೂಹಗಳನ್ನು ಆಶ್ರಯಿಸೋಣವೆಂದರೆ ಅವು ದೂರದೇಶಸ್ಥವಾದುದರಿಂದ ಸಾಗಲಾರದು; ರಾಮಕೃಷ್ಣಾದಿ ವಿಭವಗಳನ್ನು ಆಶ್ರಯಿಸೋಣವೆಂದರೆ ಅವು ಅತೀತಕಾಲವರ್ತಿಯಾದುದರಿಂದ ಅಸಾಧ್ಯ; ಅಂತರ್ಯಾಮಿಯನ್ನು ಆಶ್ರಯಿಸೋಣವೆಂದರೆ ಅದು ಸಿದ್ಧಯೋಗಿಗಳ ಇಂದ್ರಿಯಕ್ಕೆಮಾತ್ರ ಗೋಚರಿಸುವುದೇ ಹೊರತು ನಮ್ಮೊಂದಿಗರ ಇಂದ್ರಿಯಗಳಿಗೆ ಅಗೋಚರವಾದುದರಿಂದ ಸಾಗಲಾರದು. ಆದುದರಿಂದ ಆಶ್ರಯಿಸಲು ದಾರಿಯನ್ನೇ ಕಾಣೆವಲ್ಲಾ ಎಂದು ಚೇತನರಿಗೆ ಭಯವುಂಟಾಗದಂತೆ ಶ್ರೀರಂಗ, ವೆಂಕಟಾಚಲ, ಹಸ್ತಿಶೈಲ, ಯದುಶೈಲ ಮುಂತಾದ ಸ್ವಯಂವ್ಯಕ್ತಾದಿದಿವ್ಯದೇಶಗಳಲ್ಲಿ ನೆಲೆನಿಂತು ಸಕಲಜನರಿಗೂ ಸುಲಭವಾಗಿ ಸಮಾಶ್ರಯಣೀಯನಾಗಿರುವನು.

ವಾತ್ಸಲ್ಯಾದಿ ಗುಣಗಳು ಮಹಾಲಕ್ಷ್ಮಿಯ ಪುರುಷಕಾರಬಲದಿಂದ ಉದ್ದೀಪಿತವಾಗಿ ತಲೆಯೆತ್ತುವ ಕ್ರಮ, ಆಶ್ರಯಣ ಸೌಕರ್ಯವನ್ನುಂಟುಮಾಡುವ ಕ್ರಮ ಇವುಗಳನ್ನು ಮಹಾಲಕ್ಷ್ಮೀನಾರಾಯಣ ಸಂವಾದದಿಂದ ಇಲ್ಲಿ ವಿಶದಪಡಿಸುತ್ತೇವೆ. ಸರ್ವೇಶ್ವರನು ಶರಣಾಗತರಿಗೆ ಸಕಲವಿಧವಾದ ಅನಿಷ್ಟನಿವೃತ್ತಿಯನ್ನೂ ಇಷ್ಟಪ್ರಾಪ್ತಿಯನ್ನೂ ಮಾಡತಕ್ಕವನು ಎಂದೂ, ಸರ್ವಜ್ಞನು, ಸರ್ವಶಕ್ತನು ಎಂದೂ ಸದಾಚಾರ್ಯನ ಮೂಲಕವಾಗಿ ಚೇತನನು ಕೇಳಿ, ತಾನು ಈ ಸಂಸಾರದ ಕೋಟಲೆಗಳನ್ನು ತಪ್ಪಿಸಿಕೊಂಡು ನಿತ್ಯಸುಖವನ್ನು ಪಡೆಯಬೇಕೆಂದು ಆಶೆಪಟ್ಟು, ಸರ್ವೇಶ್ವರನಲ್ಲಿ ಶರಣಾಗತನಾಗಬೇಕೆಂದು ನಿಶ್ಚಯಮಾಡಿಕೊಳ್ಳುವನು. ಆದರೆ ತಾನು ಇಷ್ಟುಕಾಲ ಪರ್ಯಂತವೂ ಮಾಡಿದ ಅನಂತಾನಂತ ಪಾಪರಾಶಿಗಳನ್ನು ನೆನೆದು ಭಯಪಟ್ಟು, 'ನೇರವಾಗಿ ತಾನು ಭಗವಂತನ ಇದಿರಲ್ಲಿ ನಿಂತು, ನನ್ನನ್ನು ರಕ್ಷಿಸಬೇಕು' ಎಂದು ಕೇಳಿದರೆ, ಸರ್ವಜ್ಞನಾದುದರಿಂದ ನನ್ನ ತಪ್ಪುಗಳೆಲ್ಲವನ್ನೂ ಅರಿತು ಗುಣಿಸುತ್ತ, ಶಾಸ್ತ್ರಪದ್ಧತಿಯಂತೆ ನನ್ನನ್ನು ಶಿಕ್ಷಿಸಹೊರಟರೆ ನನ್ನಗತಿ ಏನಾಗುವುದೋ ಎಂಬ ಭಯದಿಂದ ಹಿಂಜರಿದು ತಪಿಸುತ್ತ ಇದ್ದು, ಸದಾಚಾರ್ಯೋಪದೇಶದಿಂದ, ಚೇತನೇಶ್ವರರಿಬ್ಬರೊಡನೆಯೂ ನಿತ್ಯಸಂಬಂಧವುಳ್ಳ ಸರ್ವಲೋಕಮಾತೆಯಾದ ಮಹಾಲಕ್ಷ್ಮಿಯಲ್ಲಿ ಶರಣಾಗತನಾಗಿ ಹೀಗೆ ಪ್ರಾರ್ಥಿಸುವನು— "ಓ ತಾಯೇ! ಅನಂತಾನಂತಾಪರಾಧಗಳನ್ನು ಮಾಡಿ ಭಯಪಟ್ಟಿರುವ ನನಗೆ

ನಿರುಪಾಧಿಕವಾತ್ಸಲ್ಯದ ನಿನ್ನ ಪಾದಾರವಿಂದವನ್ನು ಹೊಂದುವುದು ಹೊರತು ಬೇರೆ ಗತಿಯಿಲ್ಲ; ನನಗೆ ಸರ್ವೇಶ್ವರನ ಕರುಣೆಗೆ ಪಾತ್ರನಾಗಿ ರಕ್ಷಿಸಲ್ಪಡುವುದಾಗಲಿ, ಅವನ ಸ್ವಾತಂತ್ರ್ಯಮೂಲಕವಾದ ನಿಗ್ರಹಕ್ಕೆ ಪಾತ್ರನಾಗಿ ನಾಶಹೊಂದುವುದಾಗಲಿ ಇವೆರಡೇ ಹೊರತು ಬೇರೆ ಮಾರ್ಗವಿಲ್ಲ. 'ನನಗೆ ಇದು ಹಿತ' ಎಂಬುದನ್ನು ಅರಿತು ರಕ್ಷಿಸುವ ಭಾರವು ನಿನ್ನನ್ನೇ ಸೇರಿದೆ'' ಎಂದು ಶರಣಾಗತನಾಗಿ ಪ್ರಾರ್ಥಿಸುವನು. ಈ ಪ್ರಾರ್ಥನೆಯನ್ನು ಕೇಳಿ ಮನಮರುಗಿ* ಮಹಾಲಕ್ಷ್ಮಿ— ಸ್ವತಂತ್ರನಾದ ಸರ್ವೇಶ್ವರನನ್ನು ತನ್ನ ಸೌಂದರ್ಯಸೌಕುಮಾರ್ಯಾದಿ ಭೋಗ್ಯತಾತಿಶಯಗಳಿಂದ ವಶಗೊಳಿಸಿ, ಸುಪ್ರಸನ್ನನಾಗಿರುವಾಗ ಹೀಗೆ ಹೇಳುವಳು: ಸ್ವಾಮಿ! ತಾವು ದಯವಿಟ್ಟು ಮನ್ನಿಸಿ ಈ ಚೇತನನನ್ನು ಅಂಗೀಕರಿಸಬೇಕು. ನಾರಾಯಣ— ಇವನನ್ನೇ ಮನ್ನಿಸುವುದು! ಇವನನ್ನೇ ಅಂಗೀಕರಿಸುವುದು! ಆಗದಾಗದು. ಇವನು ಎಷ್ಟೋ ಕೋಟಿ ಮಹಾಪರಾಧಗಳನ್ನು ಮಾಡಿ, ನಮ್ಮ ಮನಸ್ಸಿನಲ್ಲಿ ಹುಟ್ಟಿದ ಹುಣ್ಣಿನಂತೆ ನೋವು ಮಾಡಿದ್ದಾನೆ; ಇವನನ್ನು ಮನ್ನಿಸಲಾಗುವುದಿಲ್ಲ, ಸುತರಾಂ ಅಂಗೀಕರಿಸಲಾಗುವುದಿಲ್ಲ. ಮಹಾಲಕ್ಷ್ಮಿ—ಹಾಗಾದರೆ ಇವನ ಗತಿಯೇನು? ನಾರಾಯಣ—ಇಂಥಿಂಥ ಅಪರಾಧ ಮಾಡಿದವರಿಗೆ ಇಂಥಿಂಥ ದುಃಖಪರಂಪರೆ, ಇಂಥಿಂಥ ನರಕಯಾತನೆ ಎಂದು ಮೊದಲೇ ನಾನು ಶಾಸ್ತ್ರಗಳಲ್ಲಿ ಗೊತ್ತುಮಾಡಿಯೇ ಇದ್ದೇನೆ, ಅದೇಗತಿ. ಮಹಾಲಕ್ಷ್ಮಿ—ಮಕ್ಕಳು ತಪ್ಪು ಮಾಡಿದರೆ ಅದನ್ನು ಮನ್ನಿಸದೆ ಸರ್ವದಾ ಶಿಕ್ಷಿಸುತ್ತಲೇ ಇದ್ದರೆ ಆ ಮಕ್ಕಳು ಬದುಕುವ ಬಗೆ ಹೇಗೆ? ಮಕ್ಕಳನ್ನು ರಕ್ಷಿಸುವ ಭಾರವನ್ನು ಹೊತ್ತುಕೊಂಡ ತಂದೆಗೆ ಅವರನ್ನು ರಕ್ಷಿಸುವುದೇ ಕರ್ತವ್ಯವಲ್ಲವೇ? ನಾರಾಯಣ—ಹೌದು, ವಿಧೇಯರಾದ ಮಕ್ಕಳನ್ನು ರಕ್ಷಿಸುವುದೂ ದುರುಳರನ್ನು ದಂಡಿಸಿ ಬುದ್ಧಿಗಲಿಸುವುದೂ ತಂದೆಗೆ ಕರ್ತವ್ಯವು; ದುರುಳರನ್ನೂ ರಕ್ಷಿಸಿದರೆ ಅವರು ಒಳ್ಳೆಯವರಾಗುವ ಬಗೆ ಹೇಗೆ? ಮಹಾಲಕ್ಷ್ಮಿ—ತಪ್ಪುಮಾಡದೆಯೇ ಇರುವವರು ಈ ಪ್ರಕೃತಿಮಂಡಲದೊಳಗಾಗಿ ಇಲ್ಲವೇ ಇಲ್ಲ; ಹಾಗಿರುವಾಗ ನೀವು ರಕ್ಷಿಸುವುದು ಯಾರನ್ನು? ನಾರಾಯಣ— ಇದನ್ನು ವೇದಾಂತರಹಸ್ಯ ಶಾಸ್ತ್ರದಲ್ಲಿ ನಿನಗೇ ಮೊದಲು ಉಪದೇಶಿಸಿ ಲೋಕದಲ್ಲಿ ಪ್ರಚಾರಪಡಿಸಿಲ್ಲವೇ? ಮೂಲಮಂತ್ರದ ಪದತ್ರಯದಲ್ಲಿಯೂ ಹೇಳಿದಂತೆ

* ಅನುಗ್ರಹಮಯೀಂ ವಂದೇ ನಿತ್ಯಮಜ್ಞಾತ ನಿಗ್ರಹಾಂ ॥
ಪಿತೇವ ತ್ವತ್ಪ್ರೇಯಾನ್ ಜನನಿ ಪರಿಪೂರ್ಣಾಗಸಿ ಜನೇ
ಹಿತಸ್ರೋತೋವೃತ್ತ್ಯಾ ಭವತಿ ಚ ಕದಾಚಿತ್ ಕಲುಷಧೀಃ।
ಕಿಮೇತನ್ನಿರ್ದೋಷಃ ಕ ಇಹ ಜಗತೀತಿ ತ್ವಮುಚಿತೈ
ರುಪಾಯೈರ್ವಿಸ್ಮಾರ್ಯ ಸ್ವಜನಯಸಿ ಮಾತಾ ತದಸಿನಃ ॥

ಅನನ್ಯಾರ್ಹಶೇಷನೂ* ಅನನ್ಯಶರಣನೂ† ಅನನ್ಯಭೋಗ್ಯನೂ‡ ಆಗಿ ಬಂದು ಶರಣಾಗತನಾದವನನ್ನು ಅವಶ್ಯವಾಗಿ ರಕ್ಷಿಸುವೆನು, ಕೈಬಿಡುವುದೇ ಇಲ್ಲ. ಮಹಾಲಕ್ಷ್ಮಿ 'ಸಮಹಾತ್ಮಾ ಸುದುರ್ಲಭಃ' ಅಂಥ ಮಹಾತ್ಮನು ನನಗೆ ಸಿಕ್ಕುವುದೇ ಅಪೂರ್ವ ಎಂದು ನೀವೇ ಕೊರಗುತ್ತಿರುವುದಿಲ್ಲವೇ ? ಹೀಗೆ ಬಂದವರನ್ನೆಲ್ಲಾ 'ಕ್ಷಿಪಾಮಿ', 'ನಕ್ಷಮಾಮಿ' ತಳ್ಳಿಬಿಡುತ್ತೇನೆ, ಮನ್ನಿಸುವುದಿಲ್ಲ ಎಂದರೆ ಮಹಾತ್ಮನೇ ಸಿಕ್ಕುವಾರು? ಆದುದರಿಂದ ಈ ಚೇತನನನ್ನು ಮನ್ನಿಸಿ ಅಂಗೀಕರಿಸಬೇಕು. ನಾರಾಯಣ—ಇಂಥ ಅಪರಾಧಿಗಳನ್ನು ಮನ್ನಿಸಿ ರಕ್ಷಿಸಿದರೆ, ಸರ್ವಲೋಕ ಹಿತಕ್ಕಾಗಿ ನಾನು ಮಾಡಿದ ಶಾಸ್ತ್ರಗಳ ಕಟ್ಟಳೆಯನ್ನು ನಾನಾಗಿ ಮೀರಿ ಕಿತ್ತುಹಾಕಿ ಹಾಳುಮಾಡಿದಂತಾಗುವುದಿಲ್ಲವೇ? ಆದುದರಿಂದ ನಾನು ಅಂಗೀಕರಿಸಲಾರೆನು. ಮಹಾಲಕ್ಷ್ಮಿ—ಹಾಗಾದರೆ ಶಾಸ್ತ್ರಪದ್ಧತಿಯನ್ನು ಕಾಪಾಡುವುದಕ್ಕಾಗಿ, ಬಂದವರನ್ನೆಲ್ಲಾ ತಳ್ಳಿ, ನಿಮಗೆ ಸ್ವಭಾವಸಿದ್ಧವಾದ ಕ್ಷಮಾಗುಣವನ್ನೂ ಸರ್ವರಕ್ಷಕ ಎಂಬ ಬಿರುದನ್ನೂ ಹಾಳುಮಾಡಿಕೊಳ್ಳುವಿರೋ ? ಮಕ್ಕಳು ಕೋಟಲೆಗಳನ್ನು ಅನುಭವಿಸುತ್ತ ಇದ್ದರೆ ನೋಡುತ್ತ ಸುಮ್ಮನೆಯೇ ಇರುವುದು ನ್ಯಾಯವೋ ? ನಿಮ್ಮ ಕರುಣೆ ಎಂಬುದು ಏನಾಯಿತು ? ನಾರಾಯಣ—ಕ್ಷಮಾಗುಣವನ್ನೂ ಸರ್ವರಕ್ಷಕತ್ವವನ್ನು ಉಳಿಸಿಕೊಳ್ಳಬೇಕಾದರೆ ಶಾಸ್ತ್ರಪದ್ಧತಿ ಕೈತಪ್ಪಿಹೋಗುವುದು; ಶಾಸ್ತ್ರಮರ್ಯಾದೆಯನ್ನು ಉಳಿಸಿಕೊಳ್ಳಬೇಕಾದರೆ ಕ್ಷಮಾ ಕಾರುಣ್ಯಾದಿ ಗುಣಗಳು ಕೈತಪ್ಪಿಹೋಗುವುವು; ಇವೆರಡೂ ಕೆಟ್ಟುಹೋಗಕೂಡದು ; ನಾವು ಈಗ ಏನನ್ನು ಮಾಡಬಹುದು? ಮಹಾಲಕ್ಷ್ಮಿ—ಹಾಗೋ ? ಇವೆರಡೂ ಕೆಟ್ಟುಹೋಗದಂತೆ ನಾನು ದಾರಿಯನ್ನು ತೋರುವೆನು, ಹಾಗೆ ಮಾಡಬಹುದಲ್ಲಾ ? ನಾರಾಯಣ—ಇವೆರಡೂ ಕೆಡದಂತೆ ಈ ಚೇತನನನ್ನು ಅಂಗೀಕರಿಸುವುದಕ್ಕೆ ತಕ್ಕ ದಾರಿಯಿದ್ದರೆ ನನಗೆ ಒಪ್ಪಿತವಲ್ಲವೇ? ಹೇಳು. ಮಹಾಲಕ್ಷ್ಮಿ—ಶಾಸ್ತ್ರಪದ್ಧತಿಯನ್ನು ಅನೇಕಾಪರಾಧಮಾಡಿ ನಿಮ್ಮಲ್ಲಿ ವಿಮುಖರಾಗಿಯೇ ಇರುವವರ ವಿಷಯದಲ್ಲಿ ಸಲ್ಲಿಸಿ ನಡೆಸಿರಿ. ನಿಮ್ಮ ಕ್ಷಮಾಗುಣವನ್ನು ಅಪರಾಧಿಗಳಾಗಿದ್ದರೂ

* ಅನನ್ಯಾರ್ಹಶೇಷತ್ವ—ಭಗವಂತನನ್ನು ಹೊರತು ಮಿಕ್ಕ ಯಾರಿಗೂ ಅಡಿಯಾಳಾಗುವ ಯೋಗ್ಯತೆಯಿಲ್ಲದಿರುವಿಕೆ (ಭಗವಂತನಿಗೊಬ್ಬನಿಗೇ ಅಡಿಯಾಳಾಗಿರುವಿಕೆ).

† ಅನನ್ಯಶರಣತ್ವ—ಕರ್ಮ ಜ್ಞಾನಾದಿಗಳಾದ ಉಪಾಯಾಂತರಗಳಿಲ್ಲದೆ ಇರುವಿಕೆ (ಸಿದ್ಧೋಪಾಯನನ್ನೇ ಆಶ್ರಯಿಸಿರುವಿಕೆ).

‡ ಅನನ್ಯಭೋಗ್ಯತ್ವ—ಭಗವದ್ವ್ಯತಿರಿಕ್ತವಾದ ಚಂದನಾದಿ ಸಾಂಸಾರಿಕ ವಸ್ತುಗಳನ್ನು ತನಗೆ ಭೋಗ್ಯವಾಗಿ ಅಂಗೀಕರಿಸದಿರುವಿಕೆ. (ಭಗವಂತನೊಬ್ಬನನ್ನೇ ತನಗೆ ಸರ್ವವಿಧ ಭೋಗ್ಯವಾಗಿ ಅಂಗೀಕರಿಸಿರುವಿಕೆ).

ನಿಮ್ಮಲ್ಲಿ ಅಭಿಮುಖರಾಗಿ ಬಂದವರ ವಿಷಯದಲ್ಲಿ ತೋರಿಸಿ ಕರುಣಿಸಿರಿ. ಹೀಗಾದರೆ ಶಾಸ್ತ್ರಸಪ್ರವೃತ್ತಿಯೂ ಕ್ಷಮಾಕಾರುಣ್ಯಾದಿಗುಣಗಳೂ ಎರಡೂ ಬೆಳಗುವುವು. ನಾರಾಯಣ—ಇದನ್ನು ಕೇಳಿ "ಒಳ್ಳೆಯದಾಯಿ, ಚೆನ್ನಾಗಿದೆ" ಎಂದು ಒಪ್ಪಿ ಆ ಚೇತನನನ್ನು ಅಂಗೀಕರಿಸಲು ಸಮ್ಮತಿಸುವನು.

ಈ ರೀತಿಯಾಗಿ ಸರ್ವಲೋಕಮಾತೆಯಾದ ಮಹಾಲಕ್ಷ್ಮಿ ತನ್ನಲ್ಲಿ ಬಂದು ಶರಣಾಗತರಾಗಿ ಮೊರೆಯಿಟ್ಟ ಚೇತನರ ಮಾತನ್ನು ಕಿವಿಗೊಟ್ಟು ಕೇಳಿಯೂ ಸರ್ವೇಶ್ವರನು ಹೀಗೆ ಸಾಪರಾಧಚೇತನರನ್ನು ಮನ್ನಿಸಿ ಅಂಗೀಕರಿಸಿ ರಕ್ಷಿಸುವಂತೆ ತಕ್ಕ ಉಪಾಯಗಳಿಂದ ಮಧುರವಾಕ್ಯಗಳನ್ನು ಕೇಳಿಯೂ ಸರ್ವೇಶ್ವರನಿಗೂ ಚೇತನನಿಗೂ ಘಟನಮಾಡಿ ಪುರುಷಕಾರಕೃತ್ಯವನ್ನು ವಹಿಸಿ ಸರ್ವಚೇತನರನ್ನೂ ಸಂರಕ್ಷಣಮಾಡುವಳು. ತಾನು ಅವನ ಹತ್ತಿರ ಇಲ್ಲದವೇಳೆಯಲ್ಲಿ ಚೇತನರು ಬಂದು ಸರ್ವೇಶ್ವರನ ನಿಗ್ರಹಕ್ಕೆ ಪಾತ್ರರಾಗುವರೋ ಎಂದು ಶಂಕಿಸಿಯೂ, ಸರ್ವೇಶ್ವರನ ಭೋಗ್ಯತೆಯನ್ನು ಬಿಟ್ಟು ಅಗಲಲಾರದೆಯೂ ಸರ್ವದಾ ಅವನ ವಕ್ಷಃಸ್ಥಲದಲ್ಲಿಯೇ ನಿತ್ಯನಿವಾಸವನ್ನು ಮಾಡುತ್ತಿರುವಳು. ಹೀಗೆ ಮಹಾಲಕ್ಷ್ಮಿಯು ನಿತ್ಯಸಾನ್ನಿಧ್ಯದಿಂದ ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯಾದಿಗುಣಗಳು ಸರ್ವದಾ ಉದ್ದೀಪಿತವಾಗಿ ತಲೆಯೆತ್ತಿ ಚೇತನರು ಬಂದು ಆಶ್ರಯಿಸಲು ತಕ್ಕ ಸೌಕರ್ಯವನ್ನುಂಟುಮಾಡಿ ಕೊಡುವುವು

೩೨. ಸರ್ವೇಶ್ವರನು ಸರ್ವರಕ್ಷಕನು

ಸರ್ವೇಶ್ವರನಾದ ಶ್ರೀಮನ್ನಾರಾಯಣನೇ ಸರ್ವರಕ್ಷಕನು, ಮತ್ತೆ ಯಾರೂ ಅಲ್ಲ. ಅದೇನು? ಅಣ್ಣ ತಮ್ಮಂದಿರು, ಮಕ್ಕಳು, ತಾಯಿತಂದೆ ಗಳೂ, ಪ್ರಸಿದ್ಧರಾಗಿ ಶ್ರೀಮನ್ನಾರಾಯಣನಿಗೆ [illegible] ನ್ನು ಕೊಟ್ಟು ಕಾಪಾಡಬಲ್ಲ ಬ್ರಹ್ಮರುದ್ರಾದಿಗಳೂ ರಕ್ಷಕರಾಗಿ ಇರುವುದಿಲ್ಲವೇ? ಅವರೂ ರಕ್ಷಕರು ಎನ್ನಲು ಏನಡ್ಡಿ? ಎಂದು ಕೇಳಬಹುದು. ಅವರ್ಯಾರೂ ರಕ್ಷಕರಲ್ಲ; ಹೇಗೆಂದರೆ—

ಅಣ್ಣ ತಮ್ಮಂದಿರು ರಕ್ಷಕರಲ್ಲ—ಎಂಬುದನ್ನು, ತನ್ನ ಸ್ವಂತತಮ್ಮನಾದ ಸುಗ್ರೀವನನ್ನು ಅಟ್ಟಿ ಓಡಿಸಿದ, ಕೊಲ್ಲಲು ಪ್ರಯತ್ನಿಸಿದ ವಾಲಿಯ ವೃತ್ತಾಂತ ದಿಂದಲೂ, ತನಗೆ ಹಿತೋಪದೇಶಮಾಡಿದ ವಿಭೀಷಣನನ್ನು ಹೊರಗೆ ಅಟ್ಟಿದ ರಾವಣನ ವೃತ್ತಾಂತದಿಂದಲೂ ತಿಳಿದು ಕೊಳ್ಳಬಹುದು.

ಮಕ್ಕಳು ರಕ್ಷಕರಲ್ಲ—ಎಂಬುದನ್ನು, ತನ್ನ ತಂದೆಯಾದ ಬ್ರಹ್ಮನ ತಲೆ ಯನ್ನು ಕಡಿದ ರುದ್ರನ ವೃತ್ತಾಂತದಿಂದಲೂ, ತಂದೆಯಾದ ಉಗ್ರಸೇನನನ್ನು ಸೆರೆ ಯಲ್ಲಿಟ್ಟು ರಾಜ್ಯಾಪಹಾರಮಾಡಿದ ಕಂಸನ ವೃತ್ತಾಂತದಿಂದಲೂ ಅರಿಯಬಹುದು.

ತಾಯಿತಂದೆಗಳೂ ರಕ್ಷಕರಲ್ಲ—ಎಂಬುದನ್ನು, ಕೈಕೇಯಿ, ಹಿರಣ್ಯಕಶಿಪು ಇವರ ಕಥೆಯಿಂದ ತಿಳಿಯಬಹುದು. ಅಲ್ಲದೆ ಅನೇಕ ಸಂದರ್ಭಗಳಲ್ಲಿ ತಾಯಿತಂದೆಗಳು—ಮಕ್ಕಳನ್ನು ಕ್ಷಾಮಕಾಲದಲ್ಲಿ ಸಾಕಲಾರದೆ ಬೆಟ್ಟದ ಕಮರಿಗಳಲ್ಲಿ ಬಿಸಾಡುವುದೂ, ಶುನಶ್ಶೇಫಾದಿಗಳನ್ನು ಮಾರಿಬಿಟ್ಟಂತೆ ಕೆಲವುವೇಳೆ ಕ್ರಯಕ್ಕೆ ಮಾರಿ ತಮ್ಮ ಹೊಟ್ಟೆ ಹೊರೆದುಕೊಳ್ಳುವುದೂ, ಆಪತ್ತು ಬಂದಕಾಲದಲ್ಲಿ ತ್ಯಜಿಸಲೂ ಯೋಚಿಸುವುದೂ, ಇವೇ ಮುಂತಾದ ರೀತಿಗಳಲ್ಲಿ ವರ್ತಿಸುವುದೂ ಉಂಟು.

ಸ್ತ್ರೀಯರುಗಳಿಗೆ ಗಂಡಂದಿರು ನಿಯತವಾಗಿ ರಕ್ಷಕರಲ್ಲ— ಎಂಬುದು, ಧರ್ಮರಾಜಾದಿಗಳ ವೃತ್ತಾಂತದಿಂದಲೂ ನಳಮಹಾರಾಜನ ಕಥೆಯಿಂದಲೂ ತಿಳಿಯಬರುವುದು.

ಇವರು ಯಾರೂ ರಕ್ಷಕರಲ್ಲದಿದ್ದರೂ ಸೂರ್ಯ ಚಂದ್ರಾದಿಗಳು ಲೋಕದವರಿಗೆಲ್ಲಾ ಪ್ರತ್ಯಕ್ಷವಾಗಿಯೇ ಕಾಣುತ್ತ, ಎಲ್ಲರ ಕಣ್ಣಿಗೂ ವಸ್ತುಗಳನ್ನು ತೋರ್ಪಡಿಸುತ್ತ ಉಪಕಾರಕರಾಗಿರುವುದರಿಂದ ರಕ್ಷಕರೆಂದು ಹೇಳಬಹುದಲ್ಲಾ ಎಂದರೆ—ಅವರೂ ಸರ್ವೇಶ್ವರನ ಆಜ್ಞೆಗೆ ಅಂಜಿ, ತಮಗೆ ಬೇಕಾದಹಾಗೆ ಸ್ವೇಚ್ಛೆಯಿಂದ ಸಂಚಾರ ಮಾಡಲೂ ಯೋಗ್ಯತೆಯಿಲ್ಲದೆಯೂ, ಘಳಿಗೆಗಳನ್ನು ಎಣಿಸಿಕೊಂಡು ತಪ್ಪದೆ ಉದಯಿಸುವ ಅಸ್ತಮಿಸುವ ನಿರ್ಬಂಧಕ್ಕೆ ಒಳಗಾಗಿಯೂ ಹಿರಣ್ಯಕಶಿಪು, ರಾವಣ ಮುಂತಾದವರ ಕೈಯಲ್ಲಿ ಸಿಕ್ಕಿಕೊಂಡು ಅವರಿಗಾಗಿ ನೀಚವಾದ ದಾಸ್ಯವೃತ್ತಿಯನ್ನು ಮಾಡಿಕೊಂಡು ಅಲೆದಾಡುವುದರಿಂದ ಅವರೂ ರಕ್ಷಕರಲ್ಲ.

ತ್ರಿಲೋಕಕ್ಕೂ ಪಾಲಕನಾದ ಇಂದ್ರನು ರಕ್ಷಕನೋ ಎಂದರೆ—ಆ ಇಂದ್ರನೂ ತನ್ನ ಪದವಿ ಯಾವಾಗ ಕೈತಪ್ಪಿ ಹೋಗುವುದೋ ಎಂದು ಸರ್ವದಾ ಭಯವುಳ್ಳವನಾಗಿಯೂ, ದೂರ್ವಾಸ, ಗೌತಮ ಮುಂತಾದ ಮಹರ್ಷಿಗಳ ಶಾಪದಿಂದ ಪೆಟ್ಟುತಿಂದು ಅವಾಚ್ಯಾವಸ್ಥೆಗೆ ಗುರಿಯಾಗಿಯೂ ವೃತ್ರಾಸುರ ಸಂಹಾರದಿಂದ ಬ್ರಹ್ಮಹತ್ಯಾ ಪಾತಕಕ್ಕೆ ಗುರಿಯಾಗಿ ಅಲೆದಾಡಿಯೂ, ಇಂದ್ರಜಿತ್ತಿನ ಕೈಗೆ ಸಿಕ್ಕಿ ಸಾವಿರಾರುವರ್ಷ ಸೆರೆಮನೆಯಲ್ಲಿ ನರಳಿಯೂ, ಮಹಾ ಬಲಿಚಕ್ರವರ್ತಿ ಮುಂತಾದವರಿಗೆ ತನ್ನ ಐಶ್ವರ್ಯವನ್ನೆಲ್ಲಾ ಸೂರೆಗೊಟ್ಟು, ಕಣ್ಣೀರು ಬಿಡುತ್ತ, ತಿರುಕರಂತೆ ತಿರಿದಾಡಿಯೂ ಅಲೆದುದರಿಂದ ಅವನೂ ರಕ್ಷಕನಲ್ಲ.

ಸೃಷ್ಟಿಕರ್ತನಾದ ಬ್ರಹ್ಮನು ರಕ್ಷಕನೋ ಎಂದರೆ, ಅವನೂ ಮಧುಕೈಟಭಾದಿಗಳ ಕೈಯಲ್ಲಿ ಸಿಕ್ಕಿಕೊಂಡು, ವೇದಗಳನ್ನೆಲ್ಲಾ ಸೂರೆಗೊಟ್ಟು, ತಾನು ಮಾಡುವ ಸೃಷ್ಟಿಗೆ ವಿಧಾಯಕ ಸೂತ್ರವಾದ ಆ ವೇದಗಳು ಇಲ್ಲದುದರಿಂದ,

“ಅಯ್ಯೋ! ಕಣ್ಣಿಲ್ಲದ ಕುರುಡನಾದೆನಲ್ಲಾ! ಸರ್ವಸ್ವವನ್ನೂ ಸೂರೆಗೊಟ್ಟೆನಲ್ಲಾ!” ಎಂದು ಗೋಳಾಡಿಯೂ ರುದ್ರನ ಕೈಗೆ ಸಿಕ್ಕಿ ಶಿರಚ್ಛೇದನವನ್ನು ಮಾಡಿಸಿಕೊಂಡೂ ಬಳಲಿದುದರಿಂದ ರಕ್ಷಕನಲ್ಲ.

ರುದ್ರನೂ ರಕ್ಷಕನಲ್ಲ—ಅವನೂ, ಸಕಲ ಪ್ರಾಣಿಗಳನ್ನೂ ಸಂಹರಿಸುವವನಾಗಿಯೂ, ಕಿಡಿಗಣ್ಣನಾಗಿ ಯಾರೂ ಹತ್ತಿರಕ್ಕೆ ಹೊದ್ದಲಾಗದಂತೆ ಇರುವವನಾಗಿಯೂ, ಕ್ರೂರಕೃತ್ಯಮಾಡುವ ಅಸುರ ರಾಕ್ಷಸಾದಿಗಳಿಂದ ಸೇವ್ಯನಾಗಿಯೂ ಇರುವನು. ಅಲ್ಲದೆ ತನ್ನ ಪರಮಭಕ್ತನಾದ ಬಾಣಾಸುರನನ್ನು ಕಾಪಾಡುವೆನು ಎಂದು ಪ್ರತಿಜ್ಞೆಮಾಡಿ, ಶ್ರೀಕೃಷ್ಣನು ಯುದ್ಧದಲ್ಲಿ ಬಾಣಾಸುರನ ಕೈಗಳನ್ನು ಕಡಿದು ಉರುಳಿಸುತ್ತಿರುವಾಗ ಕಣ್ಣಾರೆ ಕಂಡು ಕಂಡೂ ರಕ್ಷಿಸಲಾರದೆ ಓಡಿ ಹೋದನು. ಮತ್ತು ಲೋಕಗುರುವಾಗಿ ತನಗೆ ಪಿತೃವಾದ ಬ್ರಹ್ಮನ ತಲೆಯನ್ನು ಕತ್ತರಿಸಿ, ಆ ಬ್ರಹ್ಮಕಪಾಲವು ಕೈಗೆ ಅಂಟಿಕೊಂಡು ಬಿಡದಿರಲು, ಆ ಪಾಪಪರಿಹಾರಕ್ಕಾಗಿ ಕೈಯಲ್ಲಿ ಕಪಾಲವನ್ನು ಧರಿಸಿ ಭಿಕ್ಷುಕನಾಗಿ ತಿರಿದು ತನ್ನ ಸ್ಥಿತಿಯನ್ನು ತೋರುತ್ತ ಇರುವನು. ಆದುದರಿಂದ ಆ ರುದ್ರನೂ ರಕ್ಷಕನಲ್ಲ.

ನಮ್ಮ ದೇಹವನ್ನೂ ಪ್ರಾಣವನ್ನೂ ಒತ್ತೆಯಿಟ್ಟು ಸಂಪಾದಿಸಿಟ್ಟ ಹಣವು ರಕ್ಷಕವಾಗುವುದೋ ಎಂದು ವಿಚಾರಿಸಿ ನೋಡಿದರೆ—ಕಳ್ಳರು ಕಳುವುದು, ರಾಜರು ಮುಟ್ಟುಗೋಲಿನಿಂದ ಕಿತ್ತುಕೊಳ್ಳುವುದು, ದಾಯಾದಿಗಳು ಕಸಿದುಕೊಳ್ಳುವುದು, ವ್ಯಾಧಿಗಳಿಂದಲೂ ದುರ್ವ್ಯಾಪಾರಗಳಿಂದಲೂ ದುರ್ವ್ಯಯವಾಗುವುದು ಇವೇ ಮೊದಲಾದ ಕೋಟಲೆಗಳನ್ನು ತಂದಿಕ್ಕುವುದರಿಂದ ಹಣವೂ ರಕ್ಷಕವಲ್ಲ.

ಆದುದರಿಂದ ಇವರು ಯಾರೂ ರಕ್ಷಕರಲ್ಲ, ಸರ್ವೇಶ್ವರನಾದ ಶ್ರೀಮನ್ನಾರಾಯಣನೊಬ್ಬನೇ ರಕ್ಷಕನು ಎಂಬುದು ಅನೇಕ ಕಾರಣಗಳಿಂದ ಸಿದ್ಧವಾಗಿ ದೃಢಪಡುವುದು. ಇದನ್ನು ಪ್ರಹ್ಲಾದ, ವಿಭೀಷಣ, ಗಜೇಂದ್ರ, ದ್ರೌಪದಿ, ಅಹಲ್ಯೆ, ಧ್ರುವ * ಇವರು ಸಾಕ್ಷಿಗಳಾಗಿ ಸ್ಥಾಪಿಸಿಕೊಡುವರು.

ತನ್ನ ಮಾತಾಪಿತೃಗಳಿಂದ ಕೈಬಿಡಲ್ಪಟ್ಟ ಧ್ರುವನು ಕಾಡಿಗೆ ಹೋಗುವಾಗ ಶ್ರೀಮನ್ನಾರಾಯಣನು ಅಪ್ರಾರ್ಥಿತನಾದರೂ ತಾನಾಗಿಯೇ ಬೇರೆ ರೂಪದಿಂದ ಬಂದು ಹಿತೋಪದೇಶವನ್ನು ಮಾಡಿ ಕೊನೆಗೆ ಸರ್ವೋತ್ಕೃಷ್ಟವಾದ ಶಾಶ್ವತ ಪದವಿಯನ್ನು ಅನುಗ್ರಹಿಸಿದನು. ಆಪತ್ಕಾಲದಲ್ಲಿ ಗಂಡಂದಿರು ಮುಂತಾದ ಎಲ್ಲಾ

* ವಾತ್ಸಲ್ಯಾದಭಯಪ್ರದಾನಸಮಯಾದಾರ್ತಾರ್ತಿ ನಿರ್ವಾಪಣಾ
ದೌದಾರ್ಯಾದಘಶೋಷಣಾದಗಣಿತ ಶ್ರೇಯಃಪದ ಪ್ರಾಪಣಾತ್ ।
ಸೇವ್ಯಃ ಶ್ರೀಪತಿರೇಕ ಏವ ಜಗತಾಮೇತೇಽಭವನ್ ಸಾಕ್ಷಿಣಃ
ಪ್ರಹ್ಲಾದಶ್ಚ ವಿಭೀಷಣಶ್ಚ ಕರಿರಾಟ್ ಪಾಂಚಾಲ್ಯಹಲ್ಯಾ ಧ್ರುವಃ ॥

ಬಂಧುಗಳೂ ಕೈಬಿಟ್ಟಿರಲು, ಶರಣಾಗತಳಾದ ದ್ರೌಪದಿಯ ಆಪತ್ತನ್ನು ನೀಗಿಸಿದುದು ಮಾತ್ರವೇ ಅಲ್ಲವೆ, ಮುಂದೆಲ್ಲಾ ಸಕಲ ಬಂಧು ಕೃತ್ಯವನ್ನೂ ತಾನೇ ವಹಿಸಿಕೊಂಡು ಅವಳಿಗಾಗಿ ಅವಳ ಗಂಡಂದಿರು ಹೇಳಿದ ಕಡೆಗೆಲ್ಲಾ (ಸಂಧಿವೇಳೆ) ದೂತನಾಗಿ ಹೋಗಿಯೂ, ಸಾರಥ್ಯವನ್ನು ನಡೆಸಿಯೂ, ಗಂಡಂದಿರನ್ನು ಯುದ್ಧದಲ್ಲಿ ಸಾಯದಂತೆ ಕಾಪಾಡಿಯೂ, ಕೊನೆಗೆ ಸತ್ತವರನ್ನು (ಪರೀಕ್ಷಿತ್) ಬದುಕಿಸಿಯೂ ಆ ಕುಲವನ್ನೇ ಸರ್ವವಿಧದಲ್ಲಿಯೂ ರಕ್ಷಿಸಿದನು. ಹೀಗೆಯೇ ಅವಿಚಲಿತವಾದ ಶುದ್ಧ ಭಕ್ತಿಯಿಂದ ಭಜಿಸಿ ಶರಣಾಗತರಾದ ಪ್ರಹ್ಲಾದ ವಿಭೀಷಣಾದಿಗಳಿಗೆ ಸಕಲ ವಿಧವಾದ ಶ್ರೇಯಸ್ಸನ್ನೂ ಅನುಗ್ರಹಿಸಿರುವನು.

ವಿಶಿಷ್ಟಾದ್ವೈತದೀಪಿಕೆಯ ಪ್ರಮೇಯಪ್ರಕಾಶದಲ್ಲಿ
ಈಶ್ವರಪರಿಚ್ಛೇದಂ ಸಂಪೂರ್ಣಂ.

೫೩. ದ್ರವ್ಯವಿಭಾಗ ಸಾಮಂಜಸ್ಯವು

ಪ್ರಮೇಯಪ್ರಕಾಶದ ಆರಂಭದಲ್ಲಿ ಪ್ರಮೇಯವನ್ನು ವಿಂಗಡಿಸುವಾಗ ಪ್ರಮೇಯವು ದ್ರವ್ಯ, ಅದ್ರವ್ಯ ಎಂದು ಎರಡುವಿಧವೆಂದೂ ಅದರಲ್ಲಿ ದ್ರವ್ಯವು ಆರುವಿಧವೆಂದೂ ವಿಭಾಗಿಸಿದ್ದೆವು. ಅವುಗಳ ಉದ್ದೇಶಕ್ರಮದಿಂದಲೇ ಚಿತ್ಪರಿಚ್ಛೇದದಲ್ಲಿ ಜೀವಾತ್ಮಸ್ವರೂಪವನ್ನೂ ಅಚಿತ್ಪರಿಚ್ಛೇದದಲ್ಲಿ ಪ್ರಕೃತಿ, ಕಾಲ, ಶುದ್ಧ ಸತ್ತ್ವಗಳನ್ನೂ ಈಶ್ವರಪರಿಚ್ಛೇದದಲ್ಲಿ ಸರ್ವೇಶ್ವರ ಸ್ವರೂಪವನ್ನೂ ವಿಶದವಾಗಿಯೇ ವಿವರಿಸಿಯಾಯಿತು. ಉಳಿದ ಧರ್ಮಭೂತಜ್ಞಾನದ ಸ್ವರೂಪವನ್ನು ಜೀವೇಶ್ವರರ ಜ್ಞಾನನಿರೂಪಣ ಸಂದರ್ಭದಲ್ಲಿ ವಿಶದವಾಗಿಯೇ ವಿವರಿಸಿಯಾಗಿದೆ. ಆದುದರಿಂದ ಆರುವಿಧವಾದ ದ್ರವ್ಯಗಳನ್ನೂ ನಿರೂಪಿಸಿಯಾಯಿತು

ಈ ದ್ರವ್ಯಗಳನ್ನೇ ಬೇರೆವಿಧವಾಗಿ ವಿಂಗಡಿಸಿಯೂ ಕೆಲವರು ಆಚಾರ್ಯರು ನಿರೂಪಿಸಿದ್ದಾರೆ ವಿಭಾಗಕ್ರಮದಲ್ಲಿ ಸ್ವಲ್ಪ ವ್ಯತ್ಯಾಸವೇಹೊರತು ವಸ್ತುಗಳೇನೋ ಇವುಗಳೇ ಆಗಿವೆ ಅದರ ಸಾಮರಸ್ಯವನ್ನು ಇಲ್ಲಿ ಹೇಳುವೆವು:

ಅವರು ಹೇಳಿರುವ ವಿಭಾಗಕ್ರಮವೆಂತೆಂದರೆ—ಪ್ರಮೇಯವು ದ್ರವ್ಯ, ಅದ್ರವ್ಯ ಎಂದು ಎರಡುವಿಧ; ದ್ರವ್ಯವು ಜಡ, ಅಜಡ ಎಂದು ಎರಡುವಿಧ; ಅದರಲ್ಲಿ ಜಡದ್ರವ್ಯವೆಂಬುದು ಪ್ರಕೃತಿಯೂ ಕಾಲವೂ; ಅಜಡದ್ರವ್ಯವು ಪ್ರತ್ಯಕ್ ಎಂದೂ, ಪರಾಕ್ ಎಂದೂ ಎರಡು ವಿಧ; ಜೀವನೂ ಈಶ್ವರನೂ ಪ್ರತ್ಯಕ್ ದ್ರವ್ಯಗಳು; ನಿತ್ಯವಿಭೂತಿಯೂ ಧರ್ಮಭೂತಜ್ಞಾನವೂ ಪರಾಕ್ ದ್ರವ್ಯಗಳು; ಅಂತೂ ಒಟ್ಟು

ಅದು ದ್ರವ್ಯಗಳು ಎಂದು ಎರಡು ವಿಭಾಗಗಳಲ್ಲಿಯೂ ಸಿದ್ಧವಾಯಿತು. ಈ ಪ್ರತ್ಯಕ್ ಪರಾಕ್ ಎಂಬುವುಗಳನ್ನು ಸ್ವಲ್ಪ ವಿವರಿಸುತ್ತೇವೆ:—

ಜಡದ್ರವ್ಯವೆಂದರೆ—ಯಾವುದರ ಪ್ರಕಾಶವು ಅನ್ಯಾಧೀನವಾಗಿಯೇ ಇರುವುದೋ ಅದು; ಪ್ರಕೃತಿ, ಕಾಲ ಇವೆರಡರ ಪ್ರಕಾಶವೂ ಜ್ಞಾನಾಧೀನವಾಗಿಯೇ ಇರುವುದು. ಇವು ಸ್ವಯಂಪ್ರಕಾಶ ವಸ್ತುವಲ್ಲ. ಅಜಡದ್ರವ್ಯವೆಂದರೆ—ಯಾವ ದ್ರವ್ಯವು ತಾನಾಗಿಯೇ ತೋರಬಲ್ಲುದೋ, ಯಾವ ದ್ರವ್ಯದ ಪ್ರಕಾಶವು ಅನ್ಯಾಧೀನವಾಗಿರುವುದಿಲ್ಲವೋ ಅದು; ಜೀವ, ಈಶ್ವರ, ನಿತ್ಯವಿಭೂತಿ, ಧರ್ಮಭೂತಜ್ಞಾನ ಈ ನಾಲ್ಕು ದ್ರವ್ಯಗಳೂ ಸ್ವಯಂಪ್ರಕಾಶವೆನಿಸಿ ತಾವಾಗಿಯೇ ತೋರಬಲ್ಲುವು. ಪ್ರತ್ಯಕ್‌ದ್ರವ್ಯವೆಂದರೆ—ಯಾವುದು ತನಗೋಸ್ಕರ ಪ್ರಕಾಶಿಸುವುದೋ, ಯಾವ ದ್ರವ್ಯವು ನಾನು ಎಂದು ತನ್ನನ್ನು ತಾನು ಗ್ರಹಿಸುವುದೋ ಅದು; ಜೀವ, ಈಶ್ವರ ಇವೆರಡೂ ಪ್ರತ್ಯಕ್ ದ್ರವ್ಯಗಳು. ಪರಾಕ್‌ದ್ರವ್ಯವೆಂದರೆ—ಯಾವ ದ್ರವ್ಯವು ತನಗೆ ಅಲ್ಲದೆ ಇತರರಿಗೋಸ್ಕರವೇ ಗೋಚರವಾಗಬಲ್ಲುದೋ, ನಾನು ಎಂದು ತನ್ನನ್ನು ತಾನು ಗ್ರಹಿಸದೆ ಇದು ಎಂದು ಮತ್ತೊಬ್ಬನಿಗೆ ಗೋಚರಿಸುವುದೋ ಅದು; ಪ್ರಕೃತಿ, ಕಾಲ, ನಿತ್ಯವಿಭೂತಿ, ಧರ್ಮಭೂತಜ್ಞಾನ ಈ ನಾಲ್ಕು ದ್ರವ್ಯಗಳೂ ತನಗಲ್ಲದೆ ಜೀವನಿಗೋ ಈಶ್ವರನಿಗೋ ತೋರಿಬರುವುವು.

ಹೀಗೆ ಈ ವಿಭಾಗವೂ ಸಮಂಜಸವಾಯಿತು.

ಆರುವಿಧವಾದ ದ್ರವ್ಯಗಳನ್ನು ಮೂರುವಿಧವೆಂದು ವಿಭಾಗಿಸಿ ಹೇಳುವುದರ ತಾತ್ಪರ್ಯವೇನೆಂದರೆ—ಆತ್ಮನಲ್ಲದ ದೇಹದಲ್ಲಿ ಆತ್ಮಭ್ರಾಂತಿಯನ್ನೂ ಸ್ವತಂತ್ರನಲ್ಲದ ಆತ್ಮನಲ್ಲಿ ಸ್ವಾತಂತ್ರ್ಯಭ್ರಾಂತಿಯನ್ನೂ ಹೋಗಲಾಡಿಸಿಕೊಳ್ಳಬೇಕಾದರೆ ದೇಹಕ್ಕೂ ಆತ್ಮನಿಗೂ ಇರುವ ವ್ಯತ್ಯಾಸವನ್ನೂ ಆತ್ಮನಿಗೂ ಪರಮಾತ್ಮನಿಗೂ ಇರುವ ವ್ಯತ್ಯಾಸವನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕು. ಈ ತಿಳುವಳಿಕೆಗೆ ಚಿದಚಿದೀಶ್ವರ ಎಂಬ ತತ್ತ್ವತ್ರಯದ ನಿರೂಪಣವು ಉಪಯೋಗವಾಗುವಷ್ಟು ಕಾಲ, ಧರ್ಮಭೂತಜ್ಞಾನ, ನಿತ್ಯವಿಭೂತಿ ಇವುಗಳ ನಿರೂಪಣವು ಉಪಯೋಗಕರವಲ್ಲ ಎಂಬ ತಾತ್ಪರ್ಯವೇ ಹೊರತು ಅವುಗಳನ್ನು ನಿರಾಸಮಾಡುವುದಕ್ಕಾಗಿ ಅಲ್ಲ; ಅವೂ

¹ ದ್ರವ್ಯಾದ್ರವ್ಯಪ್ರಭೇದಾನ್ಮಿತಮುಭಯವಿಧಂ ತದ್ವಿದಸ್ತತ್ತ್ವಮಾಹುಃ
ದ್ರವ್ಯಂ ದ್ವೇಧಾ ವಿಭಕ್ತಂ ಜಡಮಜಡಮಿತಿ ಪ್ರಾಚ್ಯಮವ್ಯಕ್ತಕಾಲೌ।
ಅಂತ್ಯಂ ಪ್ರತ್ಯಕ್ ಪರಾಕ್ಚ, ಪ್ರಥಮಮುಭಯಧಾ ತತ್ರ ಜೀವೇಶಭೇದಾತ್।
ನಿತ್ಯಾ ಭೂತಿರ್ಮತಿಶ್ಚೇತ್ಯಪರಮಿಹ ಜಡಾ ಮಾದಿಮಾಂ ಕೇಚಿದಾಹುಃ ।

(ತತ್ತ್ವಮುಕ್ತಾಕಲಾಪ)

ಅವುಗಳನ್ನು ಮುಂದೆ ನಿರೂಪಿಸುವೆವು. ಆದುದರಿಂದ ಈ ವಿಭಾಗವು ಸಮಂಜಸವಾಗಿದೆ.

ಹಿಂದೆ ಆತ್ಮಸ್ವರೂಪವನ್ನು ನಿರೂಪಿಸುವಾಗ ಹೇಳಿದ— ಅಚಿದ್ವಿಲಕ್ಷಣ, ಅಜಡ, ಆನಂದರೂಪ, ಅವ್ಯಕ್ತ, ಅಚಿಂತ್ಯ, ನಿರವಯವ, ನಿರ್ವಿಕಾರ, ಜ್ಞಾನಾಶ್ರಯ ಎಂಬ ಇವುಗಳೆಲ್ಲವೂ ಜೀವಾತ್ಮನಿಗೂ ಈಶ್ವರನಿಗೂ ಸಾಧಾರಣವಾಗಿರುವ ಲಕ್ಷಣಗಳು. ಈಶ್ವರನಿಗೆ ನಿಯಾಮ್ಯ, ಧಾರ್ಯ, ಶೇಷ ಎಂಬ ಇವು ಮೂರೂ ಚಿತ್, ಅಚಿತ್ ಇವೆರಡಕ್ಕೂ ಸಾಧಾರಣ ಲಕ್ಷಣವು. ನಿತ್ಯತ್ವ ಎಂಬುದು ಮೂರು ತತ್ತ್ವಗಳಿಗೂ ಸಾಧಾರಣ ಲಕ್ಷಣವಾಗಿರುವುದು.

ಇಂತು ವಿಶಿಷ್ಟಾದ್ವೈತದೀಪಿಕೆಯ ಪ್ರಮೇಯಪ್ರಕಾಶದಲ್ಲಿ
ಈಶ್ವರ ಪರಿಚ್ಛೇದಂ ಸಂಪೂರ್ಣಂ

ಅರ್ಥಪಂಚಕ ಪರಿಚ್ಛೇದ

ಮುಮುಕ್ಷುವಾದ ಜೀವನಿಗೆ ತತ್ತ್ವಜ್ಞಾನದ ಜೊತೆಗೆ ಉಜ್ಜೀವನವಾಗಬೇಕೆಂದರೆ **ಅರ್ಥಪಂಚಕಜ್ಞಾನವು** ಅವಶ್ಯಕವಾಗಿ ಬೇಕು. **ಅರ್ಥಪಂಚಕವೆಂದರೆ—** ಸ್ವಸ್ವರೂಪ, ಪರಸ್ವರೂಪ, ಪುರುಷಾರ್ಥಸ್ವರೂಪ, ಉಪಾಯಸ್ವರೂಪ, ವಿರೋಧಿಸ್ವರೂಪ ಎಂಬಿವು. ಈ ಐದನ್ನೂ ಯಥಾರ್ಥವಾಗಿ ತಿಳಿವುದೇ ಅರ್ಥಪಂಚಕಜ್ಞಾನವೆಂಬುದು. ಈ ಐದರಲ್ಲಿ ಒಂದೊಂದು ವಿಷಯವೂ ಐದು ಪ್ರಕಾರವಾಗಿ ಇರುವುದು.

೧. **ಸ್ವಸ್ವರೂಪವೆಂಬುದು ಆತ್ಮಸ್ವರೂಪವು.** ಆತ್ಮರು ಬದ್ಧರು, ಕೇವಲರು, ಮುಮುಕ್ಷುಗಳು, ಮುಕ್ತರು, ನಿತ್ಯರು ಎಂದು ಐದುವಿಧವಾಗಿರುವರು.

ಬದ್ಧರು— ಈ ಸಂಸಾರಬಂಧಕ್ಕೆ ಒಳಗಾಗಿರುವವರು. ಇವರು ಪಾಂಚಭೌತಿಕವಾಗಿಯೂ ಅನಿತ್ಯವಾಗಿಯೂ ಸುಖದುಃಖಾದ್ಯನುಭವಗಳಿಗೆ ನೆಲೆಯಾಗಿಯೂ ಆತ್ಮನು ಅಗಲಿದರೆ ದರ್ಶನಸ್ಪರ್ಶನಾದಿಗಳಿಗೆ ಅಯೋಗ್ಯವಾಗಿಯೂ ಅಜ್ಞಾನಾನ್ಯಥಾಜ್ಞಾನವಿಪರೀತಜ್ಞಾನಗಳನ್ನು ಹುಟ್ಟಿಸುವುದಾಗಿಯೂ ಇರುವ ಈ ದೇಹವನ್ನೇ ಆತ್ಮನನ್ನಾಗಿ ಭಾವಿಸಿ, ದೇಹಕ್ಕೆ ಸಂಬಂಧಿಸಿದ ವಸ್ತುಗಳಲ್ಲಿ ನನ್ನದು ಎಂಬ ಅಭಿಮಾನವನ್ನಿಟ್ಟು, ಶಬ್ದಾದಿವಿಷಯಗಳಲ್ಲಿ ಭೋಗ್ಯತಾಬುದ್ಧಿಯನ್ನು ಮಾಡಿ, ಆ ವಿಷಯಾನುಭವದಿಂದ ಸ್ವದೇಹಪೋಷಣವನ್ನೇ ಪುರುಷಾರ್ಥವನ್ನಾಗಿ ಭಾವಿಸಿ, ಆ ದೇಹಪೋಷಣಕ್ಕಾಗಿ ವರ್ಣಾಶ್ರಮಧರ್ಮಗಳನ್ನು ಮೀರಿ, ದೇವತಾಂತರಭಜನದಲ್ಲಿ ಅನ್ವಯಿಸಿ, ಪರಸ್ತ್ರೀ ಪರಪ್ರಾಣಿಹಿಂಸೆಗಳನ್ನೂ ಅಸೇವ್ಯಸೇವೆಯನ್ನೂ

ಮಾಡಿ, ಶಾಸ್ತ್ರವಿರುದ್ಧ ಕಾರ್ಯಗಳನ್ನು ಬಿಟ್ಟು, ಸರಿಯಾದ ಸತ್ಕರ್ಮಗಳನ್ನು ನಿಶ್ಶಂಕನಾಗಿ ಆಚರಿಸಿ, ಆ ಕರ್ಮಗಳಿಂದ ಬಂದ ಫಲವನ್ನೇ ಸ್ವೀಕರಿಸಿಕೊಂಡು ಭಗವದ್ವಿಮುಖರಾಗಿರುವವರು.

ಕೇವಲಿಗಳು—ಆತ್ಮಾನುಭವಮಾತ್ರವನ್ನೇ ಪುರುಷಾರ್ಥವಾಗಿ ಭಾವಿಸಿ ಅದನ್ನು ಪಡೆದವರು. ಇವರು ಈ ಸಂಸಾರದಲ್ಲಿ ಕಾಣಬರುತ್ತಿರುವ ಸಿತ್ತ, ಆಧ್ಯಾತ್ಮಿಕಾದಿ ತಾಪತ್ರಯಗಳನ್ನು ನಿರಂತರವಾಗಿ ಅನುಭವಿಸಿ, ಸಂಸಾರದೊಳಗೆ ದೃಷ್ಟಸುಖವನ್ನು ಕಾಣದೆ ನೊಂದು "ನಮಗೆ ಸುಖವೆಲ್ಲಿಯೂ ಇಲ್ಲ, ಸಹಜ ಜಗದ ಈ ಮಹಾದುಃಖವನ್ನು ಕಳೆದುಕೊಂಡರೆ ಸಾಕು" ಎಂದು ಸ್ವರ್ಗಸುಖಕ್ಕೆ ತೊಲಗಿ ಬಳಿಕ "ಆತ್ಮಸ್ವರೂಪ ಜ್ಞಾನಾನಂದಮಯ, ಪ್ರಕೃತಿ ಸಂಬಂಧರಹಿತ. ಆತ್ಮನು ಪ್ರಕೃತಿಗಿಂತ ವಿಲಕ್ಷಣನಾಗಿಯೂ ಸ್ವಯಂಪ್ರಕಾಶನಾಗಿಯೂ ಸ್ವತಸ್ಸುಖರೂಪನಾಗಿಯೂ ಸತ್ಯನಾಗಿಯೂ ಇರುವನು" ಎಂಬುದನ್ನು ಶಾಸ್ತ್ರಗಳಿಂದ ಕೇಳಿ ಅದನ್ನು ಪ್ರತ್ಯಕ್ಷವಾಗಿ ನೋಡಬೇಕೆಂದು [illegible] ಜ್ಞಾನಸಾಧನದಿಂದ [illegible] ಅದನ್ನು ಪಡೆಯಲು [illegible] ಯೋಗಾಭ್ಯಾಸದಿಂದ [illegible] ಸಾಕ್ಷಾತ್ಕರಿಸಿ, [illegible] ಆತ್ಮನನ್ನು ಪ್ರಧಾನ (ಪ್ರಕೃತಿ) [illegible] ಅನುಗ್ರಹದಿಂದ ಪ್ರಕೃತಿಸಂಬಂಧ [illegible] ತನ್ನ [illegible] ಅನುಭವಿಸುತ್ತ [illegible] ಮತ್ತೆ [illegible] ಮಾನವಾತ್ಮರಾಗಿ [illegible].

ಈ ಕೈವಲ್ಯವೆಂಬ ಆತ್ಮಾನುಭವಸ್ಥಾನವು ಪ್ರಕೃತಿಮಂಡಲದ ಎಲ್ಲೆಯನ್ನು ದಾಟಿ ವಿರಜಾನದಿಯ ಆಚೆಗೂ ವೈಕುಂಠಕ್ಕೂ ನಡುವೆ ಪರಮಾಕಾಶದ ಒಂದು ಭಾಗವಾಗಿರುತ್ತದೆ. ಈ ಸ್ಥಾನವನ್ನು ದಾಟಿ ಆ ಕೈವಲ್ಯಸ್ಥಾನಕ್ಕೆ ಹೋದವರಿಗೆ ಪುನರಾವೃತ್ತಿಯಿಲ್ಲ. ಈ ಕೈವಲ್ಯಸ್ಥಾನದಲ್ಲಿ ಕೆಲವರು ಆಚಾರ್ಯರು "ಇದು ಬ್ರಹ್ಮಾಂಡದ ಒಳಗಿರುವ ಒಂದು ಸ್ಥಾನವೆನ್ನುವರು, ಮೋಕ್ಷಕ್ಕೆ ಸೇರಿದುದಲ್ಲ. ಇದನ್ನು ಹೊಂದಿದವರು ಈ ಸ್ಥಾನದಲ್ಲಿಯೇ ಕೆಲವು ಕಾಲದವರೆಗೆ ಆತ್ಮಾನುಭವಮಾಡಿಕೊಂಡಿದ್ದು ಅನಂತರದಲ್ಲಿ ಅಲ್ಲಿಂದ ಅರ್ಚಿರಾದಿಮಾರ್ಗದಿಂದ ಹೋಗಿ ಪರಮಪದವನ್ನು ಹೊಂದಿ ನಿತ್ಯಸುಖವನ್ನು ಅನುಭವಿಸುವರು" ಎಂದು ಅಭಿಪ್ರಾಯಪಡುವರು.

ಮುಮುಕ್ಷುಗಳು—ಮೋಕ್ಷದಲ್ಲಿ ಇಚ್ಛೆಯುಳ್ಳವರು. ಇವರು ಉಪಾಸಕರು ಎಂದೂ ಪ್ರಪನ್ನರು ಎಂದೂ ಎರಡುವಿಧವಾಗಿರುವರು. ಇವರೊಳಗೆ ಉಪಾಸಕರು ಎಂಬವರು ಇತರಾಪೇಕ್ಷೆಯಿಲ್ಲದೆ ಬ್ರಹ್ಮವಿದ್ಯೋಪಾಸನಾದಿರೂಪವಾದ ಸ್ವಪ್ರಯತ್ನ ದಿಂದಲೇ ಮೋಕ್ಷವನ್ನು ಬಯಸುವರು. ಪ್ರಪನ್ನರು ಸ್ವಪ್ರಯತ್ನವಿಲ್ಲದೆ ತಮ್ಮ ಆಚಾರ್ಯರನ್ನು ಪುರುಷಕಾರವಾಗಿ ಭಜಿಸಿ, ಶ್ರಿಯಃಪತಿಯಾದ ಶ್ರೀಮನ್ನಾರಾಯಣನ ನಿರ್ಹೇತುಕ ಕೃಪೆಯನ್ನೇ ತಮಗೆ ಉಪಾಯವಾಗಿಯೂ ಅವನ ದಿವ್ಯಚರಣಾರ ವಿಂದ ಸೇವೆಯನ್ನೇ ಪರಮಪುರುಷಾರ್ಥವಾಗಿಯೂ ನಂಬಿ ಇತರೋಪಾಯರಹಿತ ರಾಗಿ ನಿರ್ಭರರಾಗಿರುವರು.

ಮುಕ್ತರು—ಮೋಕ್ಷವನ್ನು ಹೊಂದಿದವರು. ಇವರು ಈ ಪ್ರಕೃತಿ ಸಂಬಂಧ ದಿಂದ ಹಿಂದೆ ಬಂದಿದ್ದ ಕ್ಲೇಶಾದಿಗಳನ್ನೆಲ್ಲಾ ಭಗವದನುಗ್ರಹದಿಂದಲೇ ತೊಲಗಿಸಿ ಕೊಂಡು, ವೈಕುಂಠಕ್ಕೆ ಹೋಗಿ ಅಲ್ಲಿ ಶ್ರಿಯಃಪತಿಯಾದ ನಾರಾಯಣನ ಸ್ವರೂಪ ವನ್ನೂ ದಿವ್ಯಮಂಗಳವಿಗ್ರಹವನ್ನೂ ಕಲ್ಯಾಣಗುಣಗಳನ್ನೂ ವಿಭೂತಿಗಳನ್ನೂ ಅನುಭವಿಸುತ್ತ ಸ್ತೋತ್ರಮಾಡುತ್ತ ಪರಮಾನಂದದಿಂದ ಇರುವ ಯೋಗಿಗಳು.

ನಿತ್ಯರು—ಒಂದು ಕ್ಷಣವಾದರೂ ಈ ಸಂಸಾರಸಂಬಂಧವೆಂಬ ದೋಷಕ್ಕೊಳ ಗಾಗದೆ ನಿರವದ್ಯರಾಗಿಯೂ ಸದಾ ಭಗವದನುಭವವನ್ನು ಮಾಡುತ್ತ ಪರವ್ಯೂಹಾದಿ ಸರ್ವಾವಸ್ಥೆಗಳಲ್ಲಿಯೂ ಭಗವಂತನ ಮನಸ್ಸೊಪ್ಪುವಂತೆ ಸೇವೆಮಾಡುವವರಾಗಿಯೂ ಇರುವ ಅನಂತ ಗರುಡ ವಿಷ್ವಕ್ಸೇನಾದಿಗಳು.

೫. ಪರಸ್ವರೂಪವೆಂದರೆ ಸರ್ವೇಶ್ವರ ಸ್ವರೂಪವು. ಅದು ಪರತ್ವ, ವ್ಯೂಹ, ವಿಭವ, ಅಂತರ್ಯಾಮಿತ್ವ, ಅರ್ಚಾವತಾರ ಎಂದು ಐದುವಿಧವಾಗಿರುವುದು.

ಪರತ್ವವೆಂದರೆ—ಅನಾದಿಯಾಗಿ ನಿರವಧಿಕ ತೇಜೋಮಯವಾದ ಪರಮ ಪದದಲ್ಲಿ ನೆಲೆಸಿರುವ ಪರಂಜ್ಯೋತಿಸ್ಸ್ವರೂಪನಾದ ಪರವಾಸುದೇವನು. ಇವನೇ ಮುಕ್ತಪ್ರಾಪ್ಯನು.

ವ್ಯೂಹವೆಂದರೆ—ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕರ್ತರಾದ ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ ಇವರು.

ವಿಭವವೆಂದರೆ—ರಾಮಕೃಷ್ಣಾದ್ಯವತಾರಗಳು.

ಅಂತರ್ಯಾಮಿತ್ವವೆಂಬುದು ಎರಡು ವಿಧವಾಗಿರುವುದು — ಜ್ಞಾನಿಗಳ ಹೃದಯಕಮಲದಲ್ಲಿ ಲಕ್ಷ್ಮೀಸಮೇತನಾಗಿಯೂ ವಿಲಕ್ಷಣವಿಗ್ರಹವುಳ್ಳವನಾಗಿಯೂ ಸಕಲ ಕರ್ಮಸಾಕ್ಷಿಯಾಗಿಯೂ ನೆಲೆಸಿರುವುದು ಒಂದು ಬಗೆ. ಜ್ಞಾನಿಗಳಿಂದ ಭಿನ್ನರಾದ ಸಾಮಾನ್ಯರ ಆತ್ಮಗಳಲ್ಲಿ ಸ್ವರೂಪಮಾತ್ರದಿಂದ ನೆಲೆಸಿರುವುದು ಮತ್ತೊಂದು ಬಗೆ.

ಅರ್ಚಾವತಾರ—ಎಂದರೆ ಚೇತನಾನುಗ್ರಹಾರ್ಥವಾಗಿ ವಿಗ್ರಹಗಳಲ್ಲಿ ನೆಲೆಸಿರುವ ಸ್ಥಿತಿ. ಇದೂ ಸರ್ವಸುಲಭವಾದ [illegible] ವಾದ ಒಂದು ಅವತಾರವು: ಎಂದರೆ [illegible] ಶ್ರೀಮನ್ನಾರಾಯಣನ ರಾಮಕೃಷ್ಣಾದಿ ವಿಭವಾವತಾರಗಳಂತೆ, [illegible] ಕಾಲದಲ್ಲಿ ಅವತಾರಮಾಡಿ [illegible] ಆ ಅವತಾರಕೃತ್ಯಗಳು ನೆರವೇರಿದಮೇಲೆ ಅಪ್ರಾಕೃತ ದಿವ್ಯಲೋಕಕ್ಕೆ [illegible] ಹೋಗುವಂತೆ, [illegible] ದಕ್ಕಾಗಿ ನೆಲೆಸಿಂತ ಒಂದುವಿಗ್ರಹದ [illegible] ತಾವು ಒಪ್ಪಿದ [illegible] ಗಳಿಂದಲೂ ಚತುರ್ಮುಖಬ್ರಹ್ಮ [illegible] ಶಾಸ್ತ್ರೋಕ್ತವಾಗಿ [illegible] ಅರ್ಚಾವತಾರವೆನ್ನಿಸುವುದು.

ಇದು ಸ್ವಯಂವ್ಯಕ್ತ, ದೈವ, ಸೈದ್ಧ, [illegible] ವಾಗಿದೆ. ಇವುಗಳಲ್ಲಿ ಸ್ವಯಂವ್ಯಕ್ತ—ಎಂದರೆ [illegible] ತಾನೇ ಆವಿರ್ಭವಿಸಿ [illegible] ಕ್ಷೇತ್ರಗಳ ಮೂರ್ತಿಗಳು. ದೈವ—ಎಂದರೆ [illegible] ಕಾಂಚಿ ಮುಂತಾದ ದಿವ್ಯಕ್ಷೇತ್ರಗಳ ಬಿಂಬಗಳು. ಸೈದ್ಧ—ಎಂದರೆ [illegible] ಯೋಗಿಗಳಿಂದ ಪ್ರತಿಷ್ಠಿತವಾದ ದಿವ್ಯಕ್ಷೇತ್ರಗಳ ಮೂರ್ತಿಗಳು. ಆರ್ಷ—ಎಂದರೆ ಮಹರ್ಷಿಗಳಿಂದ ಪ್ರತಿಷ್ಠಿತವಾದ ದಿವ್ಯಕ್ಷೇತ್ರದ ಬಿಂಬಗಳು. ಮಾನುಷ ಎಂದರೆ

[illegible] ಪ್ರತಿಷ್ಠಿತವಾಗಿ ಗ್ರಾಮ ಗ್ರಾಮಗಳ ದೇವಾಲಯ [illegible] ಪೂಜಿಸಲ್ಪಡುತ್ತಿರುವ ಮೂರ್ತಿಗಳು.

[illegible] ಪುರುಷಾರ್ಥಸ್ವರೂಪ

[illegible] ಅರ್ಥನಿಲ್ಪಡತಕ್ಕವು (ಅಪೇಕ್ಷಿಸಲ್ಪಡ [illegible]) [illegible] ಪುರುಷಾರ್ಥಗಳಾಗುವುವು ಎಂದು ಅರ್ಥ. [illegible] ಸುಖವು, ಭಗವದನುಭವ [illegible]

[illegible] ಹೊಂದುವ ಶಾಸ್ತ್ರೀಯವಾದ [illegible]

[illegible] ಧರ್ಮಕ್ಕೆ ಕುಂದಕ ಬಾರದಂತೆ [illegible]

[illegible] ಪಾರಲೌಕಿಕವೆಂದೂ ಎರಡು. ವಿಧವಾಗಿರು [illegible] ವಸ್ತ್ರಭೂಷಣ, ಪುತ್ರ ಮಿತ್ರ [illegible] ಪದಾರ್ಥಗಳಲ್ಲಿ [illegible]. ಪಾರಲೌಕಿಕ ಕಾಮವೆಂಬುದು [illegible] ಸ್ವರ್ಗಾದಿಲೋಕಗಳಲ್ಲಿ [illegible] ಶಬ್ದಾದಿ ವಿಷಯಗಳನ್ನು [illegible]

[illegible] ಪ್ರಕೃತಿ [illegible] ಕೇವಲಾ [illegible] ಜ್ಞಾನಯೋಗನಿಷ್ಠೆಯಿಂದ ಪ್ರಕೃತಿ [illegible] ಹೋಗಿ, ಪುನರಾವೃತ್ತಿಯಿಲ್ಲದಂತೆ [illegible] ಭಗವತ್ [illegible] ಕರವಾದ ಸ್ವಾತ್ಮಾನಂದವನ್ನು [illegible] ಎಂದು [illegible] ಹೇಳುವರು. ಹಿಂದೆ ಸ್ವಸ್ವರೂಪ [illegible] ಮೋಕ್ಷವೇ ಇದು.

[illegible] ಮೋಕ್ಷವು ಯಾವುದೆಂದರೆ—ಭಗವದಾಶ್ರಯಣ [illegible] ಈ ಸ್ಥೂಲಶರೀರವನ್ನು [illegible] ಸೂಕ್ಷ್ಮಶರೀರದಿಂದ ಸೂರ್ಯಮಂಡಲವನ್ನು

[illegible] ಪರಂ ಜ್ಯೋತಿರುಪಸಂಪದ್ಯ ಸ್ವೇನ [illegible] ಪ್ರಮಾಣಾರ್ಥ.

ಹೃದಯಕಮಲ [illegible]

ಸಾಸನಾಚೀತವನ್ನು [illegible]

ಪಡೆದು, ಶುದ್ಧಸತ್ತ್ವ [illegible]

ಯೋಗ್ಯವಾದ ಅಪ್ರಾಕೃತ ದಿವ್ಯ [illegible]

ಮಯವಾದ ದಿವ್ಯ [illegible]

ಸಮೇತನಾಗಿ ದಿವ್ಯಸಿಂಹಾಸನ [illegible]

ಶ್ರೀಮನ್ನಾರಾಯಣನನ್ನು [illegible]

ಪಡೆವುದು.

(ಇದು ವಿಶೇಷ [illegible]

[illegible])

[illegible]

ಉಪಾಯವೆಂದರೆ [illegible]

ಪ್ರಾಪ್ತಿಗೆ ಎಂದರ್ಥ. [illegible]

ಪ್ರಪತ್ತಿ, [illegible]

ಶಬ್ದವನ್ನು ಇಲ್ಲಿಗೆ [illegible]

ಶಬ್ದಕ್ಕೆ ಉಪಾಯ ಎಂದರ್ಥ.

[illegible]

ಸ್ತೋತ್ರ [illegible]

ಸಾಧ್ಯವಾಗಿ ಯೋಗ [illegible]

ಯೋಗವು ಜ್ಞಾನಯೋಗಕ್ಕೆ [illegible]

ನಾಗಿರುವುದು. ಜ್ಞಾನಯೋಗ [illegible]

[illegible]

ಜ್ಞಾನಯೋಗವೆಂದರೆ—[illegible]

ವನು ತನ್ನ ಆತ್ಮನ ಪ್ರಕೃತಿ [illegible]

ದಲ್ಲಿ ಚಿಂತಿಸುವುದು, ಹೃದಯಕಮಲ [illegible]

[illegible] ಪ್ರಕಾಶಿಸುವ ಶ್ರೀಮನ್ನಾರಾಯಣನನ್ನು ಯೋಗಾಭ್ಯಾಸ ಕ್ರಮದಿಂದ ಪ್ರತ್ಯಕ್ಷ [illegible] ಧ್ಯಾನಮಾಡುವುದೇ ಜ್ಞಾನಯೋಗವು. ಇದು ಭಕ್ತಿ ಯೋಗಕ್ಕೆ [illegible] ಕೈವಲ್ಯಮೋಕ್ಷಕ್ಕೆ (ಕೇವಲನು ಹೊಂದುವ ಮೋಕ್ಷ) [illegible]

ಭಕ್ತಿಯೋಗವೆಂದರೆ—ಈ ರೀತಿ ನಿರಂತರವಾದ ಯೋಗಜನ್ಯವಾದ ಅನುಭವವನ್ನು ಪ್ರೀತಿರೂಪವಾಗುವಂತೆ ಮಾಡಿ, ನಿರಂತರವಾಗಿ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತ [illegible] (ದರ್ಶನ ಸಮಾನಾಕಾರವಾಗಿ) ಮಾಡಿಕೊಳ್ಳುವುದು.

ಈ ಭಕ್ತಿಯೋಗವು ವಿವೇಕ, ವಿಮೋಕ, ಅಭ್ಯಾಸ, ಕ್ರಿಯಾ, ಕಲ್ಯಾಣ, ಅನವಸಾದ, [illegible] ಎಂಬ [illegible] ಸಾಧನಗಳಿಂದ † ಹುಟ್ಟಿ, [illegible] ಸ್ಮೃತಿಧಾರಾರೂಪ (ಎಡೆ [illegible] ಸಾಕ್ಷಾತ್ಕಾರವಾಗುತ್ತದೆ. ಈ ಭಕ್ತಿ ಸಾಧನಗಳ [illegible] ವಿವೇಕವೆಂದರೆ—ಜಾತಿದುಷ್ಟ, ಆಶ್ರಯದುಷ್ಟ, ನಿಮಿತ್ತದುಷ್ಟ [illegible] ಆಹಾರಸೇವನೆಯಿಂದ ಉಂಟಾದ [illegible] ವಿಮೋಕವೆಂದರೆ—ಕಾಮಗಳನ್ನು ಮನಸ್ಸಿಟ್ಟು ಭಾವಿಸದೆ ದೂರವಾಗಿ [illegible] ಅಭ್ಯಾಸವೆಂದರೆ—ಶ್ರೀಮನ್ನಾರಾಯಣನ ದಿವ್ಯಮಂಗಳ ವಿಗ್ರಹವನ್ನು ಧ್ಯಾನಿಸುತ್ತ ದಿನದಿನಕ್ಕೆ ಕ್ರಮಕ್ರಮವಾಗಿ ಆ ಧ್ಯಾನಕಾಲವನ್ನು ಹೆಚ್ಚಿಸುವಿಕೆ. ಕ್ರಿಯೆಯೆಂದರೆ—ಪಂಚಮಹಾಯಜ್ಞಗಳನ್ನು ತಪ್ಪದೆ ಯಥಾಶಕ್ತಿ ಮಾಡುವಿಕೆ. ಕಲ್ಯಾಣವೆಂದರೆ—ಸತ್ಯ, ಋಜುಬುದ್ಧಿ, ದಯೆ, ದಾನ, ಅಹಿಂಸೆ ಮುಂತಾದುವು. ಅನವಸಾದವೆಂದರೆ—ದೈನ್ಯವಿಲ್ಲದಿರುವಿಕೆ, ಮನಸ್ಸನ್ನು [illegible] ಅನುದ್ಧರ್ಷವೆಂದರೆ—ಅತಿಯಾಗಿ ಸಂತೋಷದಿಂದ ಹಿಗ್ಗದಿರುವಿಕೆ.

ಕರ್ಮಯೋಗಸ್ತಪಸ್ತೀರ್ಥದಾನಯಜ್ಞಾದಿ ಸೇವನಂ ।
ಜ್ಞಾನಯೋಗೋ ಜಿತಸ್ವಾಂತೈಃ ಪರಿಶುದ್ಧಾತ್ಮನಿ ಸ್ಥಿತಿಃ ॥
ಭಕ್ತಿಯೋಗಃ ಪರೈಕಾಂತ್ಯ ಪ್ರೀತ್ಯಾ ಧ್ಯಾನಾದಿಷು ಸ್ಥಿತಿಃ ।
ತ್ರಯಾಣಾಮಪಿ ಯೋಗಾನಾಂ ತ್ರಿಭಿರನ್ಯೋನ್ಯಸಂಗಮಃ ॥ (ಗೀತಾರ್ಥಸಂಗ್ರಹ)

† [illegible] “ವಿವೇಕವಿಮೋಕಾಭ್ಯಾಸಕ್ರಿಯಾಕಲ್ಯಾಣಾನವಸಾದಾನುದ್ಧರ್ಷೇಭ್ಯಃ” ಎಂದು [illegible] ಹೇಳಿರುವುದನ್ನು ಶ್ರೀರಾಮಾನುಜಾಚಾರ್ಯರು [illegible] ವ್ಯಾಖ್ಯಾನಮಾಡಿ ನಿರೂಪಿಸಿರುವರು.

‡ [illegible] ವಿಷಯಗಳು ಈ ಗ್ರಂಥಕರ್ತರಿಂದಲೇ ರಚಿತವಾದ [illegible] ಎಂಬ ಪ್ರಥಮೋಪನ್ಯಾಸದಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ.

ಈ ಸಾಧನಗಳಿಂದ ಭಕ್ತಿಹುಟ್ಟಿ ಸ್ಮೃತಿಧಾರಾರೂಪವಾಗಿ ನೆಲೆನಿಂತು, ಶರೀರಾವಸಾನಕಾಲದಲ್ಲಿ ಅಂತಿಮಸ್ಮೃತಿಯನ್ನು ಉಂಟುಮಾಡಬಲ್ಲುದಾಗುವುದು. ಈಅಂತಿಮ ಸ್ಮೃತಿ, ಪ್ರಾರಬ್ಧಕರ್ಮವು ಮುಗಿವಹಾಗೆಲ್ಲಾ ಈ ಜನ್ಮದಲ್ಲಿಯೋ ಮುಂದಣ ಜನ್ಮದಲ್ಲಿಯೋ ಉಂಟಾಗುವುದು. ಈ ಭಕ್ತಿಯೋಗಕ್ಕೆ ವೇದನ, ಧ್ಯಾನ, ಉಪಾಸನೆ ಎಂಬ ಹೆಸರುಗಳಿರುವುವು. ಈ ಭಕ್ತಿಯೋಗವು ನಿರಂತರಧ್ಯಾನಬಲದಿಂದ ದರ್ಶನಸಮಾನಾಕಾರವಾಗಿ ಪರಭಕ್ತಿ, ಪರಜ್ಞಾನ, ಪರಮಭಕ್ತಿ ಎಂಬ ಅವಸ್ಥೆಗಳನ್ನು ಕ್ರಮವಾಗಿ ಪಡೆವುದು. ಈ ಭಕ್ತಿ ಸಾಧನಭಕ್ತಿ ಎಂದೂ ಫಲಭಕ್ತಿಎಂದೂ ಎರಡು ವಿಧವಾಗಿರುವುದು. ಮೇಲೆ ಹೇಳಿದ ವಿವೇಕ ವಿಮೋಕಾದಿ ಸಾಧನಗಳಿಂದ ಹುಟ್ಟಿ ಬಲಿತ ಭಕ್ತಿಯೋಗವೇ ಸಾಧನಭಕ್ತಿಯೆನಿಸುವುದು. ಇದು ವ್ಯಾಸಾದಿ ಮಹರ್ಷಿಗಳಿಗೆ ಇರುವುದು. ಸರ್ವೇಶ್ವರನು ಈ ಚೇತನನನ್ನು ಉದ್ಧರಿಸಬೇಕೆಂದು ಸಂಕಲ್ಪಿಸಿದರೆ ಅವನ ಅನುಗ್ರಹದಿಂದಲೇ ಹುಟ್ಟಿ ಬಲಿತ ಭಕ್ತಿ ಫಲಭಕ್ತಿ ಎನಿಸುವುದು. ಇದು ಪರಾಂಕುಶ, ವಿಷ್ಣುಚಿತ್ತ ಮುಂತಾದ ಆಳ್ವಾರುಗಳಲ್ಲಿಯೂ ನಾಥಮುನಿ ಮುಂತಾದ ಆಚಾರ್ಯರುಗಳಲ್ಲಿಯೂ ನೆಲೆಸಿ ಆಶ್ಚರ್ಯಕರವಾಗಿರುವುದು (ಲೋಕದಲ್ಲಿ ಸಾಧಾರಣವಾಗಿ ಭಗವಂತನ ನಾಮಸಂಕೀರ್ತನ, ನಮಸ್ಕಾರ, ಅರ್ಚನ ಮುಂತಾದ ಕಾರ್ಯಗಳಲ್ಲಿ ಭಕ್ತಿ ಶಬ್ದವನ್ನು ಉಪಯೋಗಿಸುವರು, ಆ ಪ್ರಯೋಗವು ಔಪಚಾರಿಕ—ಎಂದರೆ ಭಕ್ತಿಜನ್ಯವಾದ, ಭಕ್ತಿತೋರಿಸುವ, ಭಕ್ತಿಕಲಿಸುವ ಕಾರ್ಯಗಳಲ್ಲಿ ಉಪಚಾರದಿಂದ ಹೇಳಿದುದೇ ಹೊರತು ಆ ಕೆಲಸಗಳೇ ಭಕ್ತಿಯಲ್ಲ. ಹೀಗೆ ಧ್ಯಾನ, ಉಪಾಸನ ಈ ಶಬ್ದಗಳಿಂದ ಹೇಳಿಸಿಕೊಳ್ಳುವ ಸಾಧನಭಕ್ತಿ ಆ ಉಪಾಸನ ಕ್ರಮವನ್ನು ಹೇಳುವ ಬ್ರಹ್ಮವಿದ್ಯೆಗಳ ಭೇದದಿಂದ ಬಹುವಿಧವಾಗಿರುವುದು. ಆ ಬ್ರಹ್ಮವಿದ್ಯೆಗಳು ಐಹಿಕ ಫಲಗಳೆಂದೂ ಮುಕ್ತಿಫಲಗಳೆಂದೂ ಎರಡುವಿಧವಾಗಿರುವುವು. ಅವುಗಳಲ್ಲಿ ಉದ್ಗೀಥವಿದ್ಯೆ ಮುಂತಾದುವು ಐಹಿಕಫಲಗಳು. ಸದ್ವಿದ್ಯೆ, ದಹರವಿದ್ಯೆ, ಉಪಕೋಸಲವಿದ್ಯೆ, ನ್ಯಾಸವಿದ್ಯೆ ಮುಂತಾದುವು ಮುಕ್ತಿಫಲವನ್ನು ಕೊಡುವುವು. ಫಲಭಕ್ತಿ ಮೋಕ್ಷವನ್ನೇ ಕೊಡುವುದು.

ಪ್ರಪತ್ತಿಯೋಗ—ಮೇಲೆ ಹೇಳಿದ ಬ್ರಹ್ಮವಿದ್ಯೆಗಳೊಳಗೆ ನ್ಯಾಸವಿದ್ಯೆ (ಶರಣಾಗತಿ ವಿದ್ಯೆ) ಎಂಬುದೇ ಪ್ರಪತ್ತಿಯೋಗವು. ಪರಮಕಾರುಣಿಕನಾದ ಶ್ರೀಮನ್ನಾರಾಯಣನಲ್ಲಿ "ಈ ಜೀವಾತ್ಮನು ನಿನ್ನದು" ಎಂದು ಮಹಾವಿಶ್ವಾಸದಿಂದ ಆತ್ಮಸಮರ್ಪಣೆ ಮಾಡುವುದೇ ಪ್ರಪತ್ತಿಯೋಗವು. ಈ ಆತ್ಮಸಮರ್ಪಣರೂಪವಾದ ಪ್ರಪತ್ತಿ ಸಕಲ ಫಲಗಳನ್ನೂ ಕೊಡುವುದು. "ತನಗೆ ಇಷ್ಟವಾದ ಪುರುಷಾರ್ಥವು ಬೇರೆ ಯಾವ ಉಪಾಯಗಳಿಂದಲೂ ಸಾಧ್ಯವಾಗದೆಹೋದರೆ ಆಗ 'ಇವನೇ ಸರ್ವರಕ್ಷಕನು, ಇವನಿಂದಲೇ ನನ್ನ ಮನೋರಥವೆಲ್ಲವೂ ಕೈಗೂಡುವುದು'

ಎಂಬ ಮಹಾವಿಶ್ವಾಸದಿಂದ ಶ್ರೀಮನ್ನಾರಾಯಣನೊಬ್ಬನನ್ನೇ ಉಪಾಯವೆಂದು ಪ್ರಾರ್ಥಿಸುವ ಜ್ಞಾನವು ಶರಣಾಗತಿ * ಎನ್ನಿಸಿಕೊಳ್ಳುವುದು'' ಇತ್ಯಾದಿಯಾಗಿ ಪಾಂಚರಾತ್ರಾದಿ ಶಾಸ್ತ್ರಗಳಲ್ಲಿ ಬಹುವಾಗಿ ಇದರ ವೈಭವವು ವಿವರಿಸಿದೆ.

ಪ್ರಪತ್ತಿಗೆ ಆನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನ, ರಕ್ಷಿಸುವನು ಎಂಬ ವಿಶ್ವಾಸ, ನೀನೇ ರಕ್ಷಿಸಬೇಕೆಂದು ವರಿಸುವುದು, ಗರ್ವತ್ಯಾಗರೂಪವಾದ ಕಾರ್ಪಣ್ಯ ಎಂಬ ಐದು ಅಂಗಗಳು † ಇರುವುವು. ಅವುಗಳ ವಿವರವೆಂತೆಂದರೆ—

ಆನುಕೂಲ್ಯಸಂಕಲ್ಪ ಎಂದರೆ—ಚರಾಚರವಾದ ಸಕಲ ವಸ್ತುಗಳೂ ಶ್ರೀಮನ್ನಾರಾಯಣನಿಗೆ ಶರೀರವಾಗಿರುವುದರಿಂದ ನಾವು ಯಾವ ಪ್ರಾಣಿಗಳಿಗೂ ಯಾವ ವಿಧದಲ್ಲಿಯೂ ಹಿಂಸೆಯನ್ನು ಕೊಡಕೂಡದು; ಹಾಗೆ ಕೊಟ್ಟರೆ ತದಂತರ್ಯಾಮಿಯಾದ ಭಗವಂತನಿಗೆ ತೊಂದರೆ ಕೊಟ್ಟಂತಾಗುವುದು ಎಂಬ ಜ್ಞಾನದಿಂದ ಸರ್ವಪ್ರಾಣಿಗಳಿಗೂ ಅನುಕೂಲನಾಗಿರುವಿಕೆ. **ಪ್ರಾತಿಕೂಲ್ಯನಿವೃತ್ತಿ**ಯೆಂದರೆ—ಭಗವದ್ಭಾಗವತರ ವಿಷಯದಲ್ಲಿ ಅಶಾಸ್ತ್ರೀಯವಾಗಿಯೂ ಅವರಿಗೆ ಅನಭಿಮತವಾಗಿಯೂ ಇರುವ ಕೆಲಸಗಳನ್ನು ಬಿಟ್ಟು ಶೇಷತ್ವಕ್ಕೆ ತಕ್ಕಂತೆ ವಿಧೇಯನಾಗಿರುವಿಕೆ. ಇದರಿಂದ ಅಕೃತ್ಯಕರಣ, ಕೃತ್ಯಾಕರಣ, ಭಗವದಪಚಾರ, ಭಾಗವತಾಪಚಾರ, ಅಸಹ್ಯಾಪಚಾರ ಈ ರೂಪವಾದ ನಾನಾವಿಧಾಪಚಾರಗಳ ನಿವೃತ್ತಿ ಇರಬೇಕು ಎಂದು ಸಿದ್ಧವಾಯಿತು. ರಕ್ಷಿಷ್ಯತೀತಿವಿಶ್ವಾಸ ಎಂದರೆ—ಇವನು ನಮ್ಮನ್ನು ರಕ್ಷಿಸುವುದಕ್ಕೆ ತಕ್ಕ ಗುಣಗಳೂ ಶಕ್ತಿಯೂ ಸಂಬಂಧ (ಹಕ್ಕು)ವೂ ಉಳ್ಳವನೆಂಬ ಪೂರ್ಣವಾದ ನಂಬುಗೆಯಿಡುವುದು. **ಗೋಪ್ತೃತ್ವವರಣ** ಎಂದರೆ—ನೀನೇ ನನ್ನನ್ನು ರಕ್ಷಿಸಬೇಕು ಎಂದು ರಕ್ಷಣವನ್ನು ಪ್ರಾರ್ಥಿಸುವ ಬುದ್ಧಿವಿಶೇಷವು. ಕಾರ್ಪಣ್ಯ ಎಂದರೆ—ತಾನು ಸತ್ಕುಲಪ್ರಸೂತನೆಂದೂ, ಕರ್ಮ

---

* ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಂ ।
ತದೇಕೋಪಾಯತಾಯಾಚ್ಞಾ ಪ್ರಪತ್ತಿಶ್ಶರಣಾಗತಿಃ ॥
(ಪಾಂಚರಾತ್ರ-ವಿಷ್ವಕ್ಸೇನ ಸಂಹಿತಾ)
ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ ।
ಶರಣಾಗತಿರಿತ್ಯುಕ್ತಾ ಸಾ ದೇವೇಽಸ್ಮಿನ್ ಪ್ರಯುಜ್ಯತಾಂ ॥
(ಪಾಂಚರಾತ್ರ-ಅಹಿರ್ಬುಧ್ನ್ಯಸಂಹಿತಾ, ೩೭-೩೫)

† ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಂ ।
ರಕ್ಷಿಷ್ಯತೀತಿ ವಿಶ್ವಾಸೋ ಗೋಪ್ತೃತ್ವವರಣಂ ತಥಾ ॥
ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ ।
ಇತಿ ಅಂಗಪಂಚಕ ವಿಶಿಷ್ಟಾ, ಏತದ್ದೇಹಾವಸಾನೇ ಮೋಕ್ಷಪ್ರದಾ, ಅಂತಿಮಸ್ಮೃತಿ ನಿರಪೇಕ್ಷಾ, ಸಕೃತ್ ಕರ್ತವ್ಯಾ ಚ ಪ್ರಪತ್ತಿಃ ಸರ್ವೋಪಾಯೇಷೂತ್ತಮಾ ॥

ಯೋಗ ಜ್ಞಾನಯೋಗಾದಿಗಳಿಂದ ಉಪಾಯಗಳನ್ನು ಆಚರಿಸಬಲ್ಲವನೆಂದೂ ತನ್ನನ್ನು ಭಾವಿಸಿಕೊಳ್ಳುವ ಗರ್ವವನ್ನು ಸಂಪೂರ್ಣವಾಗಿ ತ್ಯಜಿಸುವುದು. ಹೀಗೆ ಐದು ಅಂಗಗಳೊಡನೆ ಕೂಡಿದ ಉಪಾಯತ್ವವರಣರೂಪವಾಗಿಯೂ ಆತ್ಮಸಮರ್ಪಣರೂಪವಾಗಿಯೂ ಇರುವ ಪ್ರಪತ್ತಿ ಸರ್ವಫಲಪ್ರದವಾಗಿರುವುದು. ಇದು ಒಂದೇ ಆವರ್ತಿ ಆಚರಿಸಲ್ಪಡಬೇಕಾಗಿಯೂ ಅಂತಿಮಸ್ಮೃತಿಯನ್ನು ಅಪೇಕ್ಷಿಸದೆ ಈ ದೇಹಾವಸಾನದಲ್ಲಿಯೇ ಮೋಕ್ಷವನ್ನು ಕೊಡುವುದಾಗಿಯೂ ಸುಕರವಾಗಿಯೂ ಶೀಘ್ರಫಲಪ್ರದವಾಗಿಯೂ ಇರುವುದು.

ಈ ಪ್ರಪತ್ತಿಯೋಗವು—ಈ ರೀತಿ ಕರ್ಮಯೋಗ ಜ್ಞಾನಯೋಗ ಸಪೇಕ್ಷಿತವಾದ ಭಕ್ತಿಯೋಗವನ್ನು ಆಚರಿಸಲು ಅಶಕ್ತನಾಗಿರುವವನಿಗೂ, ''ಸ್ವಪ್ರವೃತ್ತಿರೂಪವಾದ ಭಕ್ತಿ ಸ್ವರೂಪವಿರುದ್ಧವು'' ಎಂಬ ಪರಿಪಕ್ವಜ್ಞಾನವುಳ್ಳ ಅತ್ಯಂತ ಪರತಂತ್ರನಾದ ಚೇತನನಿಗೂ ಸುಕರವಾಗಿಯೂ, ಶೀಘ್ರಫಲಪ್ರದವಾಗಿಯೂ, ಸಕೃತ್ ಕರ್ತವ್ಯವಾದುದರಿಂದ ಉಪಾಯಾನುಷ್ಠಾನಾನಂತರದಲ್ಲಿ ಉಂಟಾಗುವ ಭಗವದ್ವಿಷಯಾನುಭವಗಳೆಲ್ಲಾ ಇವನಿಗೆ ಪ್ರಾಪ್ಯಕೋಟಿಯಲ್ಲಿಯೇ ಸೇರಿರುವುದರಿಂದ ಸ್ವರೂಪಾನುರೂಪವಾಗಿಯೂ ಇರುವುದು.

ಇದು ಆರ್ತಪ್ರಪತ್ತಿ ಎಂದೂ ದೃಪ್ತಪ್ರಪತ್ತಿ ಎಂದೂ ಎರಡು ವಿಧವಾಗಿರುವುದು. ಆರ್ತಪ್ರಪತ್ತಿಯೆಂದರೆ—ನಿರ್ಹೇತುಕ ಭಗವತ್ಕಟಾಕ್ಷ ಮೂಲಕವಾಗಿ ಶಾಸ್ತ್ರಾಭ್ಯಾಸದಿಂದಲೂ ಸದಾಚಾರ್ಯೋಪದೇಶದಿಂದಲೂ ತತ್ತ್ವಜ್ಞಾನವು ಹುಟ್ಟಿದಾಗಲೇ, ಅಗ್ನಿಮಧ್ಯಗತ ಕ್ರಿಮಿಗೆ ಆ ಅಗ್ನಿಜ್ವಾಲೆ ಹೇಗೋ ಹಾಗೆ ಭಗವದನುಭವಕ್ಕೆ ವಿರೋಧಿಯಾದ ದೇಹಸಂಬಂಧವೂ ದೇಶಸಂಬಂಧವೂ ಸಂಸಾರ ಸಂಬಂಧವೂ ದುಸ್ಸಹವಾಗಿ ತೋರಿ, ಭಗವದನುಭವಕ್ಕೆ ಅನುಕೂಲವಾಗುವಂತ ಅಪ್ರಾಕೃತದೇಹವನ್ನೂ ನಿತ್ಯಾನಂದವಾದ ಪರಮಪದವನ್ನೂ ಅಲ್ಲಿರುವ ನಿತ್ಯಸೂರಿಗಳನ್ನೂ ಈಗಲೇ ಹೊಂದಬೇಕೆಂದು ತವಕಿಸಿ, ಜನ್ಮಜರಾಮರಣಾದಿಗಳನ್ನು ಹೋಗಲಾಡಿಸುವುದಕ್ಕೆ ಉಪಾಯಭೂತನು ಭಗವಂತನೇ ಆಗಿರುವುದರಿಂದ ಉಪಾಯಾಂತರರಹಿತನಾಗಿ ಭಗವಂತನ ಚರಣಾರವಿಂದವನ್ನೇ ಸಾಧನವಾಗಿ ನಂಬಿ, "ನಿನ್ನ ಪಾದಾರವಿಂದವೇಗತಿ" ಎಂದು ಶರಣಹೊಗುವುದು. ದೃಪ್ತಪ್ರಪತ್ತಿಯೆಂದರೆ—ಮತ್ತೊಂದು ಶರೀರದ ಪ್ರಾಪ್ತಿಯಲ್ಲಿಯೂ ಸ್ವರ್ಗನರಕಾದ್ಯನುಭವಗಳಲ್ಲಿಯೂ ವಿರಕ್ತಿಯೂ ಭೀತಿಯೂ ಹುಟ್ಟಿ ಅವುಗಳ ನಿವೃತ್ತಿಗೂ ಭಗವತ್ಪ್ರಾಪ್ತಿಗೂ ಕಾರಣವಾಗಿ, ಸದಾಚಾರ್ಯೋಪದೇಶ ಕ್ರಮದಿಂದ ಶ್ರೀಮನ್ನಾರಾಯಣ ಪಾದಾರವಿಂದದಲ್ಲಿ ಉಪಾಯಸ್ವೀಕಾರವನ್ನು ಮಾಡಿ, ಈ ಶರೀರವಿರುವಪರ್ಯಂತವೂ ವಿರುದ್ಧಕಾರ್ಯಗಳನ್ನು ಮಾಡದೆ, ವೇದವಿಹಿತವಾದ ವರ್ಣಾಶ್ರಮಾಚಾರಗಳನ್ನೂ ಭಗವದ್ಭಾಗವತ ಕೈಂಕರ್ಯಗಳನ್ನೂ ಮನೋವಾಕ್ಕಾಯಗಳಿಂದಲೂ ಯಥಾಶಕ್ತಿ ನಡೆ

ಸುತ್ತ, ಪರಮಾತ್ಮಸ್ವರೂಪವನ್ನೂ ಸ್ವಸ್ವರೂಪವನ್ನೂ ಅಡಿಗಡಿಗೆ ಅನುಸಂಧಿಸುತ್ತ, "ನೀನೇ ಗತಿ, ನನಗೆ ಮತ್ತೊಂದು ಗತಿಯಿಲ್ಲ" ಎಂದು ಸಿದ್ಧೋಪಾಯನಾದ ಭಗವಂತನಲ್ಲಿ ಸಕಲ ಭಾರವನ್ನೂ ಇರಿಸಿ ಹೊರೆಯಿಳುಹಿದವನಂತೆ ನಿರ್ಭರನಾಗಿರುವುದು.

ಆಚಾರ್ಯಾಭಿಮಾನವೆಂದರೆ—ಕರ್ಮ ಯೋಗಾದಿಗಳಲ್ಲಿ ಅಶಕ್ತನಾಗಿರುವ ಚೇತನನೂ ಸದಾಚಾರ್ಯನ ಅಭಿಮಾನಕ್ಕೆ ಪಾತ್ರನಾಗಿ ಮೋಕ್ಷವನ್ನು ಹೊಂದುವ ವಿಧಾನವೆಂದು ಅರ್ಥ. ಹಿಂದೆ ಹೇಳಿದ ಕರ್ಮಯೋಗಾದಿಗಳಾದ ನಾಲ್ಕು ಉಪಾಯಗಳಲ್ಲಿಯೂ ಅಶಕ್ತನಾಗಿರುವ ಒಬ್ಬ ಚೇತನನ ವಿಷಯದಲ್ಲಿ ಸದಾಚಾರ್ಯನು ಕೃಪೆಗೂಡಿ ತಾನಾಗಿಯೇ "ಇವನನ್ನು ಭಗವತ್ಕೈಂಕರ್ಯಕ್ಕೆ ಅಧಿಕಾರಿಯನ್ನಾಗಿ ಮಾಡಿದರೆ ಭಗವನ್ಮುಖೋಲ್ಲಾಸವುಂಟಾಗುವುದು" ಎಂದು ಭಾವಿಸಿಯೂ, ಸ್ತನ್ಯಪಾನಮಾಡುವ ಎಳೆಯಮಕ್ಕಳಿಗೆ ರೋಗಬಂದರೆ ಅದು ತನ್ನ ಕೊರತೆಯೆಂದು ನೆನೆಸಿ ತಾನು ಔಷಧಗಳನ್ನು ಸೇವಿಸಿ ಆ ಶಿಶುವಿನ ವ್ಯಾಧಿಯನ್ನು ಹೋಗಲಾಡಿಸುವ ತಾಯಿಯಂತೆ ಈ ಚೇತನನಿಗಾಗಿ ತಾನು ಉಪಾಯಾನುಷ್ಠಾನವನ್ನು ಮಾಡಿಯೂ ರಕ್ಷಿಸಬಲ್ಲ ಪರಮದಯಾಳುವಾದ ಆಚಾರ್ಯನ ಅಭಿಮಾನಕ್ಕೆ ಪಾತ್ರನಾಗಿದ್ದುಕೊಂಡು* ತನ್ನ ಸ್ವಾತಂತ್ರ್ಯವನ್ನು ಬಿಟ್ಟು, ತನ್ನ ಸಕಲ ಪ್ರವೃತ್ತಿ ನಿವೃತ್ತಿಗಳನ್ನೂ ಆ ಆಚಾರ್ಯನ ಅಧೀನವಾಗಿಮಾಡಿ, "ಇವನ ಒಲವೇ ಸರ್ವೇಶ್ವರನೊಲವು" ಎಂದು ಭಾವಿಸಿ ಇರುವಿಕೆಯೇ ಆಚಾರ್ಯಾಭಿಮಾನವೆನಿಸುವುದು. ಸರ್ವೇಶ್ವರನು ನಿತ್ಯಸಿದ್ಧನಾಗಿ ತಾನು ಪ್ರತ್ಯೇಕವಾಗಿ ಪ್ರಾಪ್ಯನಾಗಿದ್ದರೂ ಸಕಲ ದೇವತಾಂತರ್ಯಾಮಿಯಾಗಿದ್ದುಕೊಂಡು ಪ್ರಾಪ್ಯನಾಗುವ ಹಾಗೆಯೇ, ಈ ಆಚಾರ್ಯಾಭಿಮಾನವೂ ಪ್ರತ್ಯೇಕವಾಗಿ ಉಪಾಯವಾಗಿದ್ದರೂ ಮಿಕ್ಕ ಎಲ್ಲಾ ಉಪಾಯಗಳಿಗೂ ಸಹಕಾರಿಯಾಗಿಯೂ ಇರುವುದು.

ತನ್ನ ಅಭಿಮಾನದಿಂದಲೇ ಚೇತನನಿಗೆ ಮೋಕ್ಷವನ್ನು ದೊರಕಿಸಬಲ್ಲ ಇಂಥ ಆಚಾರ್ಯತ್ವಪೂರ್ತಿ ಶ್ರೀ ರಾಮಾನುಜಾಚಾರ್ಯರಲ್ಲಿಯೇ ಇರುವುದು ಎಂದೂ ಅವರ ಅಭಿಮಾನಕ್ಕೆ ಪಾತ್ರರಾದವರೇ ಮುಕ್ತಿಪಾತ್ರರಾಗುವರು ಎಂದೂ ಅಂಥ ಕೃಪಾಮಾತ್ರ ಪ್ರಸನ್ನಾಚಾರ್ಯರ ಸಂಬಂಧವೇ ಉತ್ತಾರಕ ಎಂದೂ ಸಂಪ್ರದಾಯಾಗತವಾದ ಚರಮೋಪಾಯನಿರ್ಣಯ ಮುಂತಾದ ಪೂರ್ವಾಚಾರ್ಯಗ್ರಂಥಗಳಲ್ಲಿ ವಿಶದವಾಗಿರುವುದು.

---

* ಪಾಪಿಷ್ಠಃ ಕ್ಷತ್ರಬಂಧುಶ್ಚ ಪುಂಡರೀಕಶ್ಚ ಪುಣ್ಯಕೃತ್ ।
ಆಚಾರ್ಯವತ್ತಯಾ ಮುಕ್ತಾ ತಸ್ಮಾದಾಚಾರ್ಯವಾನ್ ಭವೇತ್ ॥
ಯಂ ಯಂ ಸ್ಪೃಶತಿ ಪಾಣಿಭ್ಯಾಂ ಯಂ ಯಂ ಪಶ್ಯತಿ ಚಕ್ಷುಷಾ ।
ಸ್ಥಾವರಾಣ್ಯಪಿ ಮುಚ್ಯಂತೇ ಕಿಂ ಪುನರ್ಬಾಂಧವಾ ಜನಾಃ ॥

ರಾಮಾನುಜಾಚಾರ್ಯರು ಆದಿಶೇಷಾವತಾರವಾಗಿ ನಿತ್ಯಸೂರಿಗಳಲ್ಲೊಬ್ಬರಾಗಿದ್ದು ಭಗವಂತನನ್ನು ವಶೀಕರಿಸಿಯೂ ಆ ಭಗವಂತನ ನಿಯಮನದಿಂದಲೇ ಚೇತನೋಜ್ಜೀವನಾರ್ಥವಾಗಿ ಈ ಲೋಕದಲ್ಲಿ ಅವತರಿಸಿಯೂ ಇರುವುದರಿಂದ ತಮ್ಮ ಅಭಿಮಾನಕ್ಕೆ ಪಾತ್ರರಾದವರಿಗೆ ಮೋಕ್ಷವನ್ನು ಕೊಡಿಸಲು ಅವರಿಗೆ ಪೂರ್ಣವಾದ ಅಧಿಕಾರವುಂಟು. ಮಿಕ್ಕ ಅರ್ವಾಚೀನರಾದ ಆಚಾರ್ಯರುಗಳಿಗೆ ಆ ಅಧಿಕಾರವು ಇರುವುದಿಲ್ಲ. ಇವರು "ಶಿಷ್ಯಂ ಶ್ರೀಮದ್ಯತೀನಾಂ ಕುಲಮಿದಮಖಿಲಂ ತಸ್ಯ ನಾಥಸ್ಯ ಶೇಷಃ" ಎಂಬಂತೆ ರಾಮಾನುಜಾಚಾರ್ಯರ ಶ್ರೀಪಾದಾಶ್ರಯಣ ಪರಂಪರೆಗೆ ಶೇಷರಾಗಿರುವರು. ಆದರೂ ಇವರೆಲ್ಲರಲ್ಲಿಯೂ ಆಚಾರ್ಯತ್ವ ಪ್ರತಿಪತ್ತಿ ಭಕ್ತಿಭಾವಗಳು ಪೂರ್ತಿಯಾಗಿರಬೇಕೇನು.

೫೮. ವಿರೋಧಿಸ್ವರೂಪ

ವಿರೋಧಿಸ್ವರೂಪವೆಂದರೆ—ನಾವು ಹೊಂದಬೇಕಾದ ಪುರುಷಾರ್ಥಗಳನ್ನು ಪಡೆಯಗೊಡಿಸದೆ ಅವುಗಳಿಗೆ ಪ್ರತಿಬಂಧಕವಾಗಿರುವುವುಗಳ ಸ್ವರೂಪವು. ಈ ವಿರೋಧಿ ಎಂಬುದು ಸ್ವರೂಪವಿರೋಧಿ, ಪರತ್ವವಿರೋಧಿ, ಪುರುಷಾರ್ಥವಿರೋಧಿ, ಉಪಾಯವಿರೋಧಿ, ಪ್ರಾಪ್ಯವಿರೋಧಿ ಎಂದು ಐದುವಿಧವಾಗಿರುವುದು.

ಸ್ವರೂಪವಿರೋಧಿಯೆಂದರೆ—ದೇಹದಲ್ಲಿ ಆತ್ಮಬುದ್ಧಿ, ಆತ್ಮನಲ್ಲಿ ಸ್ವಾತಂತ್ರ್ಯ [illegible], ಅನ್ಯಶೇಷತ್ವಜ್ಞಾನ ಇವು. ಪರತ್ವವಿರೋಧಿಯೆಂದರೆ—ಬ್ರಹ್ಮರುದ್ರೇಂದ್ರಾದಿ ದೇವತಾಂತರಗಳಲ್ಲಿ ಪರತತ್ತ್ವ [illegible], ಶ್ರೀಮನ್ನಾರಾಯಣನೊಡನೆ [illegible] ಸಮಾನವೆಂಬ ಬುದ್ಧಿ, [illegible] ಅವತಾರಗಳಲ್ಲಿ ಮನುಷ್ಯತ್ವ [illegible] [illegible] ಇವುಗಳು. ಪುರುಷಾರ್ಥವಿರೋಧಿಯೆಂದರೆ [illegible] ಪುರುಷಾರ್ಥಗಳಲ್ಲಿ [illegible] ಶ್ರೌತಕರ್ಮಗಳಲ್ಲಿ [illegible] ಉಪಾಯವಿರೋಧಿಯೆಂದರೆ [illegible] ಮಂತ್ರವಾದ [illegible] ಪಾಪವು [illegible] ವಿರೋಧಿಗಳು [illegible] ಈ [illegible] ಎಂಬ [illegible] ಇವು. ಪ್ರಾಪ್ಯವಿರೋಧಿಯೆಂದರೆ—ಪ್ರಾರಬ್ಧ ಶರೀರ [illegible] ವಾಗಿಯೂ [illegible] ಭಗವದಪಚಾರ, ಭಾಗವತಾಪಚಾರ, ಅಸಹ್ಯಾಪಚಾರ ಇವುಗಳು.

ಅಹಂಕಾರದೋಷವು ಜ್ಞಾನವಿರೋಧಿಯಾಗುವುದು. ಮಮಕಾರದೋಷವು ಭೋಗವಿರೋಧಿಯಾಗುವುದು. ಅಹಂಕಾರಾಭಿಮಾನಗಳು ಸ್ವರೂಪವಿರೋಧಿಯಾಗುವುವು.

ಹೀಗೆ ಅರ್ಥಪಂಚಕಜ್ಞಾನವುಹುಟ್ಟಿ ಮುಮುಕ್ಷುವಾಗಿ ಸಂಸಾರದಲ್ಲಿ ವರ್ತಿಸುವ ಪುರುಷನು ಮೋಕ್ಷಸಿದ್ಧಿಯಾಗುವವರೆಗೂ ಸಂಸಾರದಲ್ಲಿ ಲಿಪ್ತನಾಗದಂತೆ ಸಾವಧಾನದಿಂದ ಕಾಲಕ್ಷೇಪಮಾಡುವಕ್ರಮವೆಂತೆಂದರೆ—ವರ್ಣಾಶ್ರಮಗಳಿಗೆ ವಿರೋಧವಿಲ್ಲದಂತೆ ವೈಷ್ಣವಧರ್ಮಕ್ಕೆ ಅನುಸಾರವಾಗಿಯೇ ಅನ್ನವಸ್ತ್ರಾದಿಗಳನ್ನು ಸಂಪಾದಿಸಿಕೊಂಡು, ಸಕಲಪದಾರ್ಥಗಳನ್ನೂ ಶ್ರೀಮನ್ನಾರಾಯಣನಿಗೆ ಅರ್ಪಿಸಿ ಯಥಾಶಕ್ತಿಯಾಗಿ ಭಾಗವತರಿಗೆ ಸಹಾಯಮಾಡಿ, ಆಹಾರಾದಿಗಳನ್ನು ಶರೀರ ಧಾರಣಕ್ಕೆ ಸಾಕಾಗುವಷ್ಟುಮಾತ್ರವೇ ಭಗವತ್ಪ್ರಸಾದಬುದ್ಧಿಯಿಂದಲೇ ಸ್ವೀಕರಿಸಿ ದೇಹಯಾತ್ರೆ ನಡೆಸುತ್ತ, ತನಗೆ ತತ್ತ್ವಜ್ಞಾನವನ್ನುಂಟುಮಾಡಿದ ಆಚಾರ್ಯನ ಸನ್ನಿಧಿಯಲ್ಲಿ ಅವನಿಗೆ ಅಭಿಮತವಾಗುವಂತೆ ವರ್ತಿಸುತ್ತ, ಭಗವಂತನ ಸನ್ನಿಧಿಯಲ್ಲಿ ತನ್ನ ನೈಚ್ಯವನ್ನೂ ಆಚಾರ್ಯನ ಸನ್ನಿಧಿಯಲ್ಲಿ ತನ್ನ ಅಜ್ಞತೆಯನ್ನೂ ಶ್ರೀವೈಷ್ಣವರ ಸನ್ನಿಧಿಯಲ್ಲಿ ತನ್ನ ಪಾರತಂತ್ರ್ಯವನ್ನೂ ಅನುಸಂಧಿಸುತ್ತ, ಪ್ರಾಪ್ಯದಲ್ಲಿ ತವಕವೂ, ಉಪಾಯ (ಪ್ರಾಪಕ) ದಲ್ಲಿ ನಿಶ್ಚಯಬುದ್ಧಿಯೂ, ಇತರವಿಷಯಗಳಲ್ಲಿ ಅರುಚಿಯೂ, ವಿರೋಧಿಗಳಲ್ಲಿ ಭಯವೂ, ಸ್ವಸ್ವರೂಪದಲ್ಲಿ ಅರಿವೂ, ಸ್ವರಕ್ಷಣದಲ್ಲಿ ಅಶಕ್ತಿಯೂ, ಉದ್ದೇಶ್ಯವಿಷಯದಲ್ಲಿ ಗೌರವವೂ, ಉಪಕಾರಕರಲ್ಲಿ ಕೃತಜ್ಞತೆಯೂ, ಉತ್ತಾರಕರಲ್ಲಿ ಅನುವರ್ತನವೂ ಉಳ್ಳವನಾಗಿ ಇರಬೇಕು. ಈ ಪ್ರಕಾರದಲ್ಲಿ ಜ್ಞಾನಾನುಷ್ಠಾನಗಳೊಡನೆ ಕೂಡಿರುವ ಪುರುಷನು ಶ್ರೀಮನ್ನಾರಾಯಣನಿಗೆ ನಿತ್ಯಮುಕ್ತರಿಗಿಂತಲೂ ಅತ್ಯಂತ ಪ್ರೀತಿಪಾತ್ರನಾಗಿರುವನು.

ಇಂತು ಅರ್ಥಪಂಚಕ ಪರಿಚ್ಛೇದವು ಮುಗಿಯಿತು.

ಇಂತು ವಿಶಿಷ್ಟಾದ್ವೈತದೀಪಿಕೆಯ ಪ್ರಮೇಯಪ್ರಕಾಶದಲ್ಲಿ ದ್ರವ್ಯನಿರೂಪಣವು ಸಂಪೂರ್ಣವಾಯಿತು.

೫೯. ಅದ್ರವ್ಯ ಪರಿಚ್ಛೇದ

ಅದ್ರವ್ಯಗಳಿಗೆ ಸಾಮಾನ್ಯ ಲಕ್ಷಣ—ಸಂಯೋಗ ರಹಿತವಾದುದು ಅದ್ರವ್ಯ ಎಂದೂ, ಅವಸ್ಥೆಗಳಿಂದ ರಹಿತವಾದುದು ಅದ್ರವ್ಯ ಎಂದೂ ಲಕ್ಷಣ. ದ್ರವ್ಯಗಳಿಗೇ ಸಂಯೋಗವಿರುವುದರಿಂದ ಅದ್ರವ್ಯಗಳಿಗೆ ಸಂಯೋಗವಿಲ್ಲವಾಗಿ ಮೊದಲನೆಯ ಲಕ್ಷಣಕ್ಕೆ ಸಮನ್ವಯವೂ, ಹಿಂದೆ ದ್ರವ್ಯನಿರೂಪಣಘಟ್ಟದಲ್ಲಿ "ಅವಸ್ಥಾಶ್ರಯವಾದುದು ದ್ರವ್ಯ" (ಪುಟ ೨೨) ಎಂದು ಲಕ್ಷಣ ಹೇಳಿರುವುದರಿಂದ ಅವಸ್ಥೆಯಿಲ್ಲದುದು ಅದ್ರವ್ಯವು ಎಂದು ಎರಡನೆಯ ಲಕ್ಷಣಕ್ಕೆ ಸಮನ್ವಯವೂ ಆಯಿತು. ಅದ್ರವ್ಯವು ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಸಂಯೋಗ, ಶಕ್ತಿ, ಸತ್ತ್ವ, ರಜಸ್ಸು, ತಮಸ್ಸು ಎಂದು ಹತ್ತು ತೆರನಾಗಿರುವುದು.

ಶಬ್ದಲಕ್ಷಣ—ಶ್ರೋತ್ರೇಂದ್ರಿಯದಿಂದ ಗ್ರಾಹ್ಯವಾದ ಅದ್ರವ್ಯವು ಶಬ್ದವೆನಿಸುವುದು. ಇದು ಪಂಚಭೂತಗಳಲ್ಲಿಯೂ ಇರುವುದು. ಇದರಲ್ಲಿ ಧ್ವನಿ, ವರ್ಣ ಎಂದು ಎರಡುವಿಧ. ಧ್ವನಿಎಂಬುದು ಭೇರಿ, ನಗಾರಿ ಮುಂತಾದ ವಾದ್ಯಗಳಿಂದಲೂ ಮೇಘ, ಮರ, ಗಾಳಿ ಮುಂತಾದುವುಗಳಿಂದಲೂ ಹುಟ್ಟಿದ ಶಬ್ದವು. ವರ್ಣಸ್ವರೂಪವಾದ ಶಬ್ದವು ದೇವತೆಗಳ, ಮನುಷ್ಯರ ಬಾಯಿ, ಕಂಠ ಮುಂತಾದ ಸ್ಥಲಗಳಲ್ಲಿ ಅಭಿವ್ಯಕ್ತವಾಗಿ ತೋರಿಬರುವುದು. ಇದು ಅಕಾರಾದಿ ವರ್ಣರೂಪವಾಗಿರುವುದು. ಇದರಿಂದಲೇ ಸಕಲ ವಾಙ್ಮಯವು ಉಂಟಾಗಿರುವುದು.

ಶಬ್ದವು ದ್ರವ್ಯವೆಂದು ಭಾಟ್ಟರೂ, ವರ್ಣಾತ್ಮಕ ಶಬ್ದವು ನಿತ್ಯವೆಂದು ಪ್ರಾಭಾಕರರೂ, ಶಬ್ದವೆಲ್ಲವೂ ಗುಣ, ಅನಿತ್ಯ ಎಂದು ನೈಯಾಯಿಕರೂ ಹೇಳುವರು.

ಸ್ಪರ್ಶಲಕ್ಷಣ—ತ್ವಗಿಂದ್ರಿಯದಿಂದ ಗ್ರಾಹ್ಯವಾದ ಅದ್ರವ್ಯವು ಸ್ಪರ್ಶವು. ಅದು, ಶೀತ, ಉಷ್ಣ, ಅನುಷ್ಣಾಶೀತ ಎಂದು ಮೂರು ತೆರನಾಗಿರುವುದು. ತೇಜಸ್ಸಿನಲ್ಲಿ ಉಷ್ಣಸ್ಪರ್ಶವೂ, ಜಲದಲ್ಲಿ ಶೀತಸ್ಪರ್ಶವೂ, ವಾಯು ಪೃಥಿವಿಗಳಲ್ಲಿ ಅನುಷ್ಣಾಶೀತಸ್ಪರ್ಶವೂ ಇರುವುವು. ಸ್ಪರ್ಶವು ಪಾಕಜ, ಅಪಾಕಜ ಎಂದು ಎರಡು ವಿಧವಾಗಿರುವುದು. ಪಾಕಜಸ್ಪರ್ಶವು ಪೃಥಿವಿಯಲ್ಲಿಯೂ, ಅಪಾಕಜಸ್ಪರ್ಶವು ವಾಯು ತೇಜೋ ಜಲಗಳಲ್ಲಿಯೂ ಇರುವುವು. ಕಲ್ಲಿನಲ್ಲಿ ತೋರುವ ಕಠಿನಸ್ಪರ್ಶ, ಹತ್ತಿಯಲ್ಲಿ ತೋರುವ ಮೃದುಸ್ಪರ್ಶ ಇವೆಲ್ಲವೂ ಪಾಕಜಸ್ಪರ್ಶ ಭೇದಗಳೇ. ಹೀಗೆಯೇ ಅಮೃತಸ್ಪರ್ಶವು ಜೀವನಾರೋಗ್ಯಾದಿಗಳಿಗೂ, ವಿಷಸ್ಪರ್ಶವು ರೋಗಮರಣಾದಿಗಳಿಗೂ, ಗೋಬ್ರಾಹ್ಮಣ ಸ್ಪರ್ಶವು ಶುದ್ಧಿಗೂ, ಚಂಡಾಲಾದಿ ಸ್ಪರ್ಶವು ಅಶುದ್ಧಿಗೂ ಕಾರಣಗಳಾಗಿರುವುವು. ಇವೆಲ್ಲವೂ ಅವುಗಳ ಆರಂಭಕಾವಯವಗಳಲ್ಲಿರುವ ಸಂಯೋಗಭೇದ, ಶಕ್ತಿತಾರತಮ್ಯ, ಧರ್ಮಾಧರ್ಮ ತಾರತಮ್ಯಕ್ಕೆ ಅಧೀನವಾದ ಸತ್ತ್ವರಜಸ್ತಮೋಗುಣತಾರತಮ್ಯ ಇವುಗಳಿಂದ ಬಂದಿರುವುವು.

ರೂಪಲಕ್ಷಣ—ಚಕ್ಷುರಿಂದ್ರಿಯಮಾತ್ರಗ್ರಾಹ್ಯವಾದ ಅದ್ರವ್ಯವು ರೂಪವೆನಿಸುವುದು. ಇದು ಬಿಳುಪು, ಕಪ್ಪು, ಕೆಂಪು, ಹಳದಿ ಎಂದು ನಾಲ್ಕು ತೆರನಾಗಿರುವುದು. ಈ ಬಣ್ಣಗಳ ಸೇರುವೆಯಿಂದ ಉಂಟಾಗುವ ಅನೇಕವಿಧವಾದ ಬಣ್ಣಗಳೂ ಚಿತ್ರವರ್ಣವೂ ಸಂಕರಜನ್ಯವಾದುವುಗಳೇ ಹೊರತು ಸ್ವತಂತ್ರವಾದುವುಗಳಲ್ಲ. ಬಣ್ಣವು ಭಾಸ್ವರ, ಅಭಾಸ್ವರ ಎಂದು ಇನ್ನೂ ಎರಡು ವಿಧವಾಗಿರುವುದು. ತೇಜಸ್ಸಿನಲ್ಲಿ ಭಾಸ್ವರರೂಪವೂ (ರವಳಿಬಣ್ಣ) ಜಲಪೃಥಿವಿಗಳಲ್ಲಿ ಅಭಾಸ್ವರರೂಪವೂ ಇರುವುವು. ಜಲದಲ್ಲಿ ಅಭಾಸ್ವರ ಶುಕ್ಲರೂಪವೂ, ಪೃಥಿವಿಯಲ್ಲಿ ನಾನಾವಿಧವಾದ ಅಭಾಸ್ವರವರ್ಣವೂ ಇರುವುವು.

ರಸಲಕ್ಷಣ—ರಸನೇಂದ್ರಿಯಗ್ರಾಹ್ಯವಾದ ಅದ್ರವ್ಯವು ರಸವೆನಿಸುವುದು. ಇದು ಸಿಹಿ, ಹುಳಿ, ಕಹಿ, ಉಪ್ಪು, ಕಾರ, ಒಗರು ಎಂದು ಆರುವಿಧವಾಗಿರುವುದು. ರಸಗಳ ಉತ್ಪತ್ತಿಕ್ರಮ, ಗುಣಭೇದ, ಕಾರ್ಯೋಪಯೋಗ ವೈಚಿತ್ರ್ಯಗಳನ್ನು ಆಯುರ್ವೇದ ಶಾಸ್ತ್ರಗಳಲ್ಲಿ ತಿಳಿಯಬಹುದು.

ಗಂಧಲಕ್ಷಣ—ಘ್ರಾಣೇಂದ್ರಿಯ ಗ್ರಾಹ್ಯವಾದ ಅದ್ರವ್ಯವು ಗಂಧವೆನಿಸುವುದು. ಇದು ಸುಗಂಧ, ದುರ್ಗಂಧ ಎಂದು ಎರಡುವಿಧ. ಗಂಧವು ಪೃಥಿವೀಮಾತ್ರದಲ್ಲಿರುವುದು. ಪಾಕಭೇದದಿಂದ ನಾನಾವಿಧವಾಗುವುದು.

ಸಂಯೋಗಲಕ್ಷಣ—ಎರಡು ವಸ್ತುಗಳು ಕೂಡಿರುವುವು ಎಂಬ ಜ್ಞಾನಕ್ಕೂ ವ್ಯವಹಾರಕ್ಕೂ ಕಾರಣವಾದ ಅದ್ರವ್ಯವು ಸಂಯೋಗವೆನಿಸುವುದು. ಇದು ಎಲ್ಲಾ ದ್ರವ್ಯಗಳಿಗೂ ಸಾಮಾನ್ಯಗುಣವು. ಇದು ಸ್ಪರ್ಶನ, ಚಾಕ್ಷುಷ ಎಂಬ ಎರಡು ಪ್ರತ್ಯಕ್ಷಗಳಿಗೂ ಗೋಚರವಾಗುವುದು. (ಎಂದರೆ ಮುಟ್ಟಿಯೂ ನೋಡಿಯೂ ತಿಳಿಯಬಹುದು). ಈ ಸಂಯೋಗವೂ ಸಂಯೋಗಾಭಾವವೂ ಒಂದೇ ವಸ್ತುವಿನಲ್ಲಿ ಪ್ರದೇಶಭೇದದಿಂದ ಇರಬಹುದು. ಮರದಲ್ಲಿ ಕೊಂಬೆಯಮೇಲೆ ಕಪಿಸಂಯೋಗವೂ ಬುಡದಲ್ಲಿ ಕಪಿಸಂಯೋಗಾಭಾವವೂ ಇವೆ. ಇದು ಪ್ರದೇಶ ಭೇದದಿಂದ ಸಂಗತವಾಗುವುದು. ಈ ಸಂಯೋಗವು ಜನ್ಯವೆಂದೂ ನಿತ್ಯವೆಂದೂ ಎರಡುವಿಧವಾಗಿರುವುದು. ಎರಡು ಪದಾರ್ಥಗಳಿಗೆ ಕ್ರಿಯೆಯಿಂದುಂಟಾದ ಸಂಯೋಗವು ಜನ್ಯ ಸಂಯೋಗವು. ಇದೂ ಸಹ ಮರದಮೇಲೆ ಪಕ್ಷಿ ಬಂದು ಕುಳಿತಂತೆ ಏಕಕ್ರಿಯಾಜನ್ಯವೆಂದೂ, ಎರಡು ಟಗರುಗಳು ಒಂದಕ್ಕೊಂದು ಮುಟ್ಟಿಯಾಡುವಂತೆ ಉಭಯ ಕ್ರಿಯಾಜನ್ಯವೆಂದೂ ಎರಡು ವಿಧವಾಗಿರುವುದು.

ವಿಭುದ್ರವ್ಯಗಳಿಗೂ ಸಂಯೋಗವುಂಟೆಂದೂ ಅದು ನಿತ್ಯವೆಂದೂ ಕಾಲ ಪರಮಾತ್ಮರುಗಳಿಗಿರುವ ಸಂಯೋಗವು ವಿಭುದ್ವಯಸಂಯೋಗವೆಂದೂ ಶಾಸ್ತ್ರಕಾರರು ನಿರ್ಣಯಿಸಿರುವರು.

ಶಕ್ತಿಲಕ್ಷಣ—ಆ ಆ ಕಾರ್ಯಗಳಿಗೆ ಕಾರಣಗಳೆನಿಸಿಕೊಂಡ ಎಲ್ಲಾ ವಸ್ತುಗಳಲ್ಲಿಯೂ ಆ ಆ ಕಾರ್ಯೋತ್ಪಾದನಕ್ಕೆ ನಿರ್ವಾಹಕವಾದ ಅದ್ರವ್ಯವು ಶಕ್ತಿ ಎನಿಸಿಕೊಳ್ಳುವುದು. ಇದು ಸಕಲದ್ರವ್ಯಗಳಲ್ಲಿಯೂ ವಿಚಿತ್ರವಾಗಿರುವುದು. ಮೊದಲು ಸೂಕ್ಷ್ಮವಾಗಿ ಹೇಗೆ ಅವ್ಯಕ್ತವಾಗಿಯೇ ಇದ್ದರೂ ಆ ಆ ಕಾರ್ಯದಿಂದ ಅಭಿವ್ಯಕ್ತವಾಗುವುದು.* ತರ್ಕದಿಂದಲೂ ಆಗಮಗಳಿಂದಲೂ ಇದು ಇದೆ ಎಂದು ಸಾಧಿಸಬಹುದು.

* ಶಕ್ತಯಃ ಸರ್ವಭಾವಾನಾಮಚಿಂತ್ಯಾ ಅಪೃಥಕ್‌ಸ್ಥಿತಾಃ ।
ಸ್ವರೂಪೇ ನೈವ ದೃಶ್ಯಂತೇ ದೃಶ್ಯಂತೇ ಕಾರ್ಯತಸ್ತು ತಾಃ ॥
ಸೂಕ್ಷ್ಮಾವಸ್ಥಾ ಹಿ ಸಾ ತೇಷಾಂ ಸರ್ವಭಾವಾನುಗಾಮಿನೀ ।
ಇದಂತಯಾ ವಿಧಾತುಂ ಸಾ ನ ನಿಷೇದ್ಧುಂ ಚ ಶಕ್ಯತೇ ॥

ಸೂಜಿಕಲ್ಲಿನಲ್ಲಿ ಕಬ್ಬಿಣವನ್ನು ತನ್ನಲ್ಲಿಗೆ ಎಳೆದುಕೊಳ್ಳುವ ಶಕ್ತಿಯನ್ನು ಅನೇಕರು ಕಂಡಿರುವರು. ಇದರಂತೆಯೇ ಎಲ್ಲಾ ಕಡೆಯೂ ತಿಳಿಯಬಹುದು. ಈ ಶಕ್ತಿ ಆರು ದ್ರವ್ಯಗಳಲ್ಲಿಯೂ ಇರುವುದು.

ಸತ್ತ್ವಗುಣಲಕ್ಷಣ—ಪ್ರಕಾಶ, ಸುಖ, ಲಾಘವ ಇವುಗಳೊಳಗೆ ಒಂದಕ್ಕೆ ಕಾರಣವಾಗಿ, ಅತೀಂದ್ರಿಯವಾಗಿ, ಶಕ್ತಿವ್ಯತಿರಿಕ್ತವಾದ ಅದ್ರವ್ಯವು ಸತ್ತ್ವಗುಣ ವೆನಿಸುವುದು. ರಜಸ್ತಮೋನಿರಾಸಕ್ಕಾಗಿ ಮೊದಲನೆಯ ದಳವೂ, ಸ್ಪರ್ಶಶಬ್ದ ರೂಪಾದಿ ನಿರಾಸಕ್ಕಾಗಿ ಎರಡನೆಯ ಪದವೂ, ಶಕ್ತಿವ್ಯಾವೃತ್ತಿಗಾಗಿ ಶಕ್ತಿವ್ಯತಿರಿಕ್ತ ಎಂಬ ಮೂರನೆಯ ಪದವೂ ಜೀವೇಶ್ವರಾದಿವ್ಯಾವೃತ್ತಿಗಾಗಿ ಅದ್ರವ್ಯವೆಂಬ ಪದವೂ ಲಕ್ಷಣವಾಕ್ಯದಲ್ಲಿ ಉಪಯೋಗಿಸಲ್ಪಟ್ಟಿವೆ. ಇದು ಶುದ್ಧ, ಮಿಶ್ರ ಎಂದು ಎರಡು ವಿಧವಾಗಿರುವುದು. ರಜಸ್ತಮಸ್ಸುಗಳಿಲ್ಲದ ದ್ರವ್ಯದಲ್ಲಿರುವ ಸತ್ತ್ವವೇ ಶುದ್ಧ ಸತ್ತ್ವವು. ಇದು ನಿತ್ಯವಿಭೂತಿಯಲ್ಲಿರುವ ದ್ರವ್ಯಗಳಲ್ಲಿ ಮಾತ್ರ ಇರುವುದು. ರಜಸ್ತಮಸ್ಸುಗಳೊಡಗೂಡಿದ ದ್ರವ್ಯಗಳಲ್ಲಿರುವ ಸತ್ತ್ವವು ಮಿಶ್ರಸತ್ತ್ವವು. ಇದು ತ್ರಿಗುಣದ್ರವ್ಯದಲ್ಲಿ ಇದೆ. ಅದಕ್ಕೆ ಸಂಬಂಧಿಸಿದ ಜೀವನಲ್ಲಿಯೂ ಗೌಣ ವಾಗಿ ಉಪಯೋಗದಲ್ಲಿ ಇದೆ.

ರಜೋಗುಣ ಲಕ್ಷಣ—ರಾಗ, ತೃಷ್ಣಾ, ಲೋಭ, ಪ್ರವೃತ್ತಿಗೆ ಕಾರಣವಾಗಿ, ಅತೀಂದ್ರಿಯವಾಗಿ ಶಕ್ತಿವ್ಯತಿರಿಕ್ತವಾಗಿ ಇರುವ ಅದ್ರವ್ಯವು ರಜೋಗುಣ ವೆನಿಸುವುದು.

ತಮೋಗುಣ ಲಕ್ಷಣ—ಮೋಹ, ಪ್ರಮಾದ, ಜಡತೆಗಳಿಗೆ ಕಾರಣವಾಗಿ, ಅತೀಂದ್ರಿಯವಾಗಿ, ಶಕ್ತಿವ್ಯತಿರಿಕ್ತವಾಗಿ ಇರುವ ಅದ್ರವ್ಯವು ತಮೋಗುಣ ವೆನಿಸುವುದು.

ಸತ್ತ್ವ, ರಜಸ್ಸು, ತಮಸ್ಸು ಎಂಬ ಈ ಮೂರು ಗುಣಗಳೂ ಪ್ರಕೃತಿದ್ರವ್ಯದ ಪರಿಣಾಮವಾದ ಸಕಲ ಪದಾರ್ಥಗಳಲ್ಲಿಯೂ ಇದ್ದೇ ಇರುವುವು; ಇವುಗಳಿಂದ ವ್ಯಾಪಿಸಲ್ಪಡದ ವಸ್ತುವೇ ಇಲ್ಲ. ಪ್ರಕೃತಿವಶ್ಯರಾದ ಜೀವಾತ್ಮರುಗಳಲ್ಲಿಯೂ ಸಂಬಂಧಿಸಿ, ಅನಿತ್ಯಗಳಾಗಿ ಮುಂದೆ ಮುಂದೆ ಅನುವರ್ತಿಸುತ್ತ ಇರುವುವು. ಪ್ರಳಯಾವಸ್ಥೆಯಲ್ಲಿ ಈ ಮೂರು ಗುಣಗಳೂ ಹೆಚ್ಚುಕಡಮೆಯಿಲ್ಲದೆ ಸಾಮ್ಯವನ್ನು ಹೊಂದಿಯೂ, ಸೃಷ್ಟಿಸ್ಥಿತಿಗಳಲ್ಲಿ ಬಹಳ ಹೆಚ್ಚುಕಡಮೆಯನ್ನು ಹೊಂದಿಯೂ, ಸೃಷ್ಟಿ ಸ್ಥಿತಿ ಸಂಹಾರ ರೂಪಕಾರ್ಯಗಳಲ್ಲಿ ಭಗವಂತನಿಗೆ ಉಪಯುಕ್ತಗಳಾಗಿ ಇರುವುವು. ಜೀವಾತ್ಮರುಗಳಲ್ಲಿಯೋ ಎಂದರೆ ಈಶ್ವರಸಂಕಲ್ಪವೆಂಬ ಸಹಕಾರಿಕಾರಣ ಪ್ರಭಾವದಿಂದ ಈ ಗುಣಗಳೊಳಗೆ ಒಂದು ಮತ್ತೊಂದನ್ನು ಮೆಟ್ಟಿ ತಗ್ಗಿಸುತ್ತಲೂ, ಅಥವಾ ಹೆಚ್ಚಿಸುತ್ತಲೂ, ಪರಸ್ಪರ ಸಹಾಯಮಾಡುತ್ತಲೂ ಆ ಆ ಜೀವಾತ್ಮರ ಅದೃಷ್ಟಾನುಸಾರವಾಗಿ ಬುದ್ಧಿ, ನಡತೆ, ಕಾರ್ಯಪ್ರವೃತ್ತಿ, ಕಾರ್ಯಫಲ ಇವುಗಳಲ್ಲಿ

ನಾನಾವಿಧ ವಿಚಿತ್ರರೀತಿ ಭೇದಗಳನ್ನು ತೋರಿಸುತ್ತ ಇರುವವು. ಆದುದರಿಂದಲೇ ಒಂದೇ ವಸ್ತುವನ್ನು ನೋಡಿದ ಅನೇಕರಿಗೆ ಪ್ರೀತಿ, ದ್ವೇಷ, ಅಸೂಯೆ, ಆಶ್ಚರ್ಯ, ಔದಾಸೀನ್ಯ ಮುಂತಾದ ನಾನಾಭಾವಗಳು ಒಬ್ಬೊಬ್ಬರಿಗೆ ಒಂದೊಂದು ತೆರನಾಗಿ ತೋರಿಬರುವುವು. ಅಲ್ಲದೆ ಒಬ್ಬನಿಗೇ ಒಂದೇ ವಸ್ತುವಿನಲ್ಲಿಯೇ ತನ್ನ ಅವಸ್ಥಾಭೇದ ಕಾಲಭೇದಗಳಿಂದ ಪ್ರೀತಿ ದ್ವೇಷಾಸೂಯಾದಿ ನಾನಾಭಾವಗಳುಂಟಾಗಬಹುದು. ಇವುಗಳಿಗೆಲ್ಲಾ ಈ ಗುಣಗಳ ತಾರತಮ್ಯವೇ ಕಾರಣವು. ಮುಖ್ಯವಾಗಿ ಸತ್ತ್ವಗುಣವು ಸಮ್ಯಕ್‌ಜ್ಞಾನರೂಪವಾಗಿ, ಸುಖಾದಿಗಳಿಗೆ ಕಾರಣವಾಗಿ ಮೋಕ್ಷಪ್ರದವಾಗುವುದು. ರಜೋಗುಣವು ಕರ್ಮಸಂಗವನ್ನು ಕೊಟ್ಟು ದುಃಖಾದಿ ಹೇತುವಾಗಿ ಸ್ವರ್ಗಾದಿ ಫಲಪ್ರದವಾಗುವುದು. ತಮೋಗುಣವು ನಿದ್ರಾಲಸ್ಯಾದಿ ಹೇತುವಾಗಿ ನರಕಪ್ರದವಾಗುವುದು. ಸಾತ್ತ್ವಿಕ ರಾಜಸ ತಾಮಸಕಾರ್ಯಗಳು ವೃದ್ಧಿಹೊಂದಿದಾಗ ಬುದ್ಧಿ, ಆಹಾರ, ದಾನ, ಶ್ರದ್ಧೆ ಇವುಗಳಲ್ಲಿ ಉಂಟಾಗುವ ಭೇದಗಳನ್ನು ಭಗವದ್ಗೀತೆಯಲ್ಲಿ ವಿವರಿಸಿದೆ. ಅಲ್ಲಿ ತಿಳಿಯಬಹುದು *

೬೦. **ಪ್ರಶ್ನೆ**— ನ್ಯಾಯಶಾಸ್ತ್ರದಲ್ಲಿ 'ಇಪ್ಪತ್ತುನಾಲ್ಕು ಗುಣಗಳು ಇರುವುವು' ಎಂದು ಹೇಳಿರುವಾಗ ಇಲ್ಲಿ ಹತ್ತೇ ಗುಣಗಳು ಎಂದು ಹೇಳುವುದು ಹೇಗೆ ಸಂಗತವಾಗುವುದು? ಅವನ್ನು ಹೇಳದೆ ಇದ್ದರೆ ನ್ಯೂನತೆಯಲ್ಲವೇ?

ಉತ್ತರ—ನಾವು ಇಲ್ಲಿ ನಿರೂಪಿಸಿ ಹೇಳಿರುವ ಹತ್ತು ಅದ್ರವ್ಯಗಳಲ್ಲಿಯೇ ಅವುಗಳೆಲ್ಲವೂ ಅಂತರ್ಭೂತವಾಗಿರುವುದರಿಂದ ಬೇರೆ ಹೇಳಬೇಕಾದುದೇ ಇಲ್ಲ. ಹೇಗೆಂದರೆ—ಜೀವಾತ್ಮರುಗಳ ಗುಣವಿಶೇಷ ಎಂದು ಅವರು ಹೇಳಿರುವ ಬುದ್ಧಿ, ಸುಖ, ದುಃಖ, ಇಚ್ಛೆ, ದ್ವೇಷ, ಪ್ರಯತ್ನ ಎಂಬ ಇವು ಆರೂ ಜ್ಞಾನವಿಶೇಷ

---

* ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಂ ॥
ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಂ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥
ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಂ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಂ ॥
ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಂ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥
ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ ।
ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ ॥
(ಭಗವದ್ಗೀತಾ, ೧೪ನೆಯ ಅಧ್ಯಾಯ, ಶ್ಲೋಕ ೫–೯)
ಯಜಂತೇ ಸಾತ್ತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ ।
ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜಂತೇ ತಾಮಸಾ ಜನಾಃ ॥ (೧೭–೪)

ರೂಪವೇ ಆದುದರಿಂದ ಧರ್ಮಭೂತಜ್ಞಾನದಲ್ಲಿಯೇ ಅಂತರ್ಭವಿಸುವುವು. ಧರ್ಮ, ಅಧರ್ಮ ಎಂಬ ಇವೆರಡೂ ಸರ್ವೇಶ್ವರನ ಪ್ರೀತ್ಯಪ್ರೀತಿ ರೂಪಗಳಾದುದರಿಂದ ಈಶ್ವರಜ್ಞಾನದಲ್ಲಿ ಅಂತರ್ಭವಿಸುವುವು. ಸಂಸ್ಕಾರದ ಮೂರು ಪ್ರಭೇದಗಳಲ್ಲಿ ಸ್ಮರಣಹೇತುವಾದ ಭಾವನೆ ಎಂಬ ಸಂಸ್ಕಾರವು ಜ್ಞಾನವಿಶೇಷ ರೂಪವೇ ಆದುದರಿಂದ ಜೀವಾತ್ಮರ ಧರ್ಮಭೂತಜ್ಞಾನದಲ್ಲಿ ಅಂತರ್ಭವಿಸುವುದು. ವೇಗ ಎಂಬ ಸಂಸ್ಕಾರವು ವೇಗೋತ್ಪಾದನ ಕಾರಣಗಳಿಂದಲೇ ನಿರ್ವಾಹವಾಗುವುದರಿಂದ ಬೇರೆ ಅಂಗೀಕರಿಸಬೇಕಾದುದಾಗಿಲ್ಲ. ಸ್ಥಿತಿಸ್ಥಾಪಕ ಎಂಬ ಸಂಸ್ಕಾರವು (elasticity) ಸಂಯೋಗವೆಂಬ ಅದ್ರವ್ಯದಲ್ಲಿ ಅಂತರ್ಭೂತವಾಗುವುದು. ವಿಭಾಗ, ಪೃಥಕ್ತ್ವ ಎಂಬ ಈ ಎರಡೂ ಸಂಯೋಗಾಭಾವರೂಪಗಳೇ ಹೊರತು ಬೇರೆಯಲ್ಲ. ಪರತ್ವಾಪರತ್ವಗಳು ದೇಶ ಕಾಲ ಸಂಯೋಗವಿಶೇಷಗಳೇ ಆಗಿರುವುದರಿಂದ ಸಂಯೋಗದಲ್ಲಿ ಅಂತರ್ಭವಿಸುವುವು. ಸಂಖ್ಯಾ, ಪರಿಮಾಣ, ದ್ರವತ್ವ, ಸ್ನೇಹ ಎಂಬ ಇವುಗಳು ಆ ಆ ದ್ರವ್ಯಗಳ ಸ್ವರೂಪಗಳೇ ಆಗಿರುವುವು. ಗುರುತ್ವ ಎಂಬುದು ಶಕ್ತಿ ಎಂಬ ಅದ್ರವ್ಯದಲ್ಲಿ ಅಂತರ್ಭವಿಸುವುದು. ಆದುದರಿಂದ ಇವುಗಳನ್ನು ನಾವು ಬೇರೆಯಾಗಿ ಹೇಳಲಿಲ್ಲ. ಇನ್ನೂ ಸರ್ವದ್ರವ್ಯಗಳಲ್ಲಿಯೂ ಇರುವುದಾಗಿ ಶ್ರುತಿ ಸ್ಮೃತ್ಯಾದಿ ಶಾಸ್ತ್ರಗಳಿಂದ ಸಿದ್ಧವಾದ ಸತ್ತ್ವ, ರಜಸ್ಸು, ತಮಸ್ಸುಗಳನ್ನು ಅಂಗೀಕರಿಸದೆಯೂ ಹೇಳದೆಯೂ ಇರುವುದರಿಂದ ನ್ಯಾಯಶಾಸ್ತ್ರಕಾರರಿಗೇ ನ್ಯೂನತೆ ಇದೆಯೇ ಹೊರತು ನಮಗಿಲ್ಲ.

೬೧. ಪ್ರಶ್ನೆ—ಗೌತಮ ಕಣಾದ ಮಹರ್ಷಿಪ್ರಣೀತವಾದ ನ್ಯಾಯವೈಶೇಷಿಕ ಶಾಸ್ತ್ರಗಳು ಸರ್ವಶಾಸ್ತ್ರೋಪಕಾರಕವೆಂದು ಪ್ರಸಿದ್ಧವಾಗಿ ಎಲ್ಲರಿಂದಲೂ ಅಂಗೀಕೃತವಾಗಿರುವಾಗ ಅವನ್ನು ತಿರಸ್ಕರಿಸಬಹುದೋ?

ಉತ್ತರ—ನಾವು ಆ ಶಾಸ್ತ್ರಗಳನ್ನು ಪೂರ್ತಿಯಾಗಿ ತಿರಸ್ಕರಿಸುವುದಿಲ್ಲ. ಅವುಗಳಲ್ಲಿ ಯುಕ್ತಿಯುಕ್ತವಾಗಿ ವೇದಶಾಸ್ತ್ರಗಳಿಗೆ ವಿರುದ್ಧವಲ್ಲದ ಭಾಗಗಳನ್ನು ಆದರದಿಂದ ಸ್ವೀಕರಿಸುತ್ತೇವೆ. ವೇದಾಂತಸಿದ್ಧಾಂತಕ್ಕೆ ವಿರುದ್ಧವಾದುದನ್ನು ಖಂಡಿಸಿ ತ್ಯಜಿಸುತ್ತೇವೆ. ಒಬ್ಬರು ಧರ್ಮಾರ್ಥವಾಗಿ ಕಟ್ಟಿದ ಕೆರೆಯಲ್ಲಿ ಉಪಯೋಗವಾದಷ್ಟು ತಿಳಿನೀರನ್ನು ಕುಡಿಯಬಹುದೇ ಹೊರತು ಕೆರೆಯಲ್ಲಿದೆ ಎಂದು ಅದರ ಕೆಸರನ್ನೂ ತೆಗೆದುಕೊಳ್ಳಬೇಕೋ? ಆದುದರಿಂದ ಅವರು ಹೇಳಿದ—ಪರಮಾಣುಗಳೇ ಜಗತ್ಕಾರಣ; ವೇದಗಳು ಈಶ್ವರಕೃತ; ಈಶ್ವರನನ್ನು ಅನುಮಾನ ಪ್ರಮಾಣದಿಂದ ಗೊತ್ತುಮಾಡಬಹುದು; ಜೀವಾತ್ಮರು ವಿಭು; ಉಪಮಾನವು ಬೇರೆ ಪ್ರಮಾಣ; ದಿಕ್ಕು ಬೇರೆ ದ್ರವ್ಯ; ಸಂಖ್ಯಾ, ಪರಿಮಾಣ, ಪೃಥಕ್ತ್ವ, ವಿಭಾಗ, ಪರತ್ವಾಪರತ್ವ, ಗುರುತ್ವ, ದ್ರವತ್ವಗಳು ಬೇರೆ ಗುಣಗಳು; ಸಾಮಾನ್ಯ, ವಿಶೇಷ, ಸಮವಾಯಗಳು ಬೇರೆ ಪದಾರ್ಥಗಳು; ಪರಮಾಣು, ಪಾಕಾದಿಗಳು —

ಇವೆಲ್ಲವೂ ಶ್ರುತಿವಿರುದ್ಧವಾಗಿಯೂ ಸೂತ್ರಕಾರಾದಿ ವಿರುದ್ಧವಾಗಿಯೂ ಇರುವುದ ರಿಂದ ವೇದಾಸ್ತಿಗಳು ಅಂಗೀಕರಿಸುವುದಿಲ್ಲ. ಅವಿರುದ್ಧಗಳನ್ನು ಅಂಗೀಕರಿಸಿಯೇ ಇದ್ದಾರೆ.

ಅಕ್ಷಪಾದ ಪ್ರಣೀತೇ ಚ ಕಾಣಾದೇ ಸಾಂಖ್ಯಯೋಗಯೋಃ ।
ತ್ಯಾಜ್ಯಃ ಶ್ರುತಿವಿರುದ್ಧಾಂಶಃ ಪ್ರಮಾಣಶರಣೈರ್ನೃಭಿಃ ॥

ಎಂದು ಪೂರ್ವಿಕರಿಂದಲೇ ನಿರೂಪಿಸಲ್ಪಟ್ಟಿರುವುದು.

ಪ್ರಮೇಯಪ್ರಕಾಶದಲ್ಲಿ ಅದ್ರವ್ಯಪರಿಚ್ಛೇದವು ಮುಗಿಯಿತು.

ಇಂತು ವಿದ್ವಾನ್ ಜಯರಾಮವೆಂಕಟಾಚಾರ್ಯರಿಂದ ರಚಿತವಾದ ವಿಶಿಷ್ಟಾದ್ವೈತ ದೀಪಿಕೆಯಲ್ಲಿ ಪ್ರಮೇಯಪ್ರಕಾಶವು ಸಂಪೂರ್ಣವಾಯಿತು.

iii ಸಮನ್ವಯಪ್ರಕಾಶ

೨೨. ವೇದಗಳ ಸಮುದಾಯಾರ್ಥ

ವೇದಶಬ್ದಕ್ಕೆ—'ವೇದಯತಿ ಇತಿ ವೇದಃ' ಎಂಬ ವ್ಯುತ್ಪತ್ತಿಯಿಂದ, ಅರಿಯ ಬೇಕಾದ ಸಕಲಾರ್ಥಗಳನ್ನು ಚೆನ್ನಾಗಿ ತಿಳಿಯಪಡಿಸುವುದು ಎಂದು ಅರ್ಥವು. ಈ ವೇದಗಳು ಪೂರ್ವಭಾಗವಾದ ಕರ್ಮಕಾಂಡದಲ್ಲಿ ಯಜ್ಞಾದಿ ಸತ್ಕರ್ಮ ಗಳನ್ನು ಸಾಂಗವಾಗಿ ಆಚರಿಸುವ ಕ್ರಮಗಳನ್ನೂ ಆ ಆಚರಣೆಯಿಂದ ಉಂಟಾ ಗುವ ಐಹಿಕಾಮುಷ್ಮಿಕಗಳಾದ ನಾನಾವಿಧ ಫಲಗಳನ್ನೂ ಆ ಫಲಗಳನ್ನು ಅನು ಭವಿಸುವ ಲೋಕಗಳನ್ನೂ ತಿಳಿಯಪಡಿಸುವುವು; ಉತ್ತರ ಭಾಗವಾದ ಬ್ರಹ್ಮಕಾಂಡ ದಲ್ಲಿ ಈ ಸಂಸಾರಸುಖವೆಂಬ ಫಲವು ದುಃಖಮಿಶ್ರ, ನಶ್ವರ, ಹೇಯ ಎಂದು ಜರೆದು, ಅನಂತವಾಗಿ ಸ್ಥಿರವಾದ ಫಲವನ್ನು ಪಡೆಯಬೇಕೆಂದು ಉಪದೇಶಿಸಿ, ಅದಕ್ಕಾಗಿ ಜೀವಸ್ವರೂಪವನ್ನೂ ಪರಬ್ರಹ್ಮಸ್ವರೂಪವನ್ನೂ ಆ ಪರಬ್ರಹ್ಮನ ಗುಣ ವಿಭವಾದಿಗಳನ್ನೂ ವಿವರಿಸಿ, ಮೋಕ್ಷೋಪಾಯಗಳನ್ನು ವಿಧಿಸಿ, ನಿರವಧಿಕಾತಿಶಯ ವಾದ ಮೋಕ್ಷಾನಂದವನ್ನು ಹೊಗಳಿ, ಅದನ್ನು ಪಡೆವ ಕ್ರಮಗಳನ್ನು ವಿವರಿ ಸುವುವು. ವೇದಗಳು ಅಂತರಾಳಿಕವಾಗಿ ಏನೇನನ್ನು ಹೇಳಿದ್ದರೂ ಪರಬ್ರಹ್ಮನನ್ನೇ ವಿವರಿಸಿ ಹೊಗಳುವುವು ಎಂದು ಪ್ರಾಜ್ಞರು ಹೇಳುವರು.

ಇದರ ಸ್ಥಿತಿಯನ್ನು ವಿಚಾರಿಸಿ ನೋಡಿದರೆ—ಲೋಕದಲ್ಲಿ ಸ್ತೋತ್ರ ಪಾಠಕರು ರಾಜರನ್ನು ಹೊಗಳುವಾಗ ಆ ರಾಜರ ಗುಣಕೀರ್ತನ ಮಾಡುವುದು ಮಾತ್ರವೇ ಅಲ್ಲದೆ, ದೇಶದವರೂ ರಾಷ್ಟ್ರದವರೂ ಅಧಿಕಾರಿಗಳೂ ಸಹ ಆ ರಾಜನ

ಅಪ್ಪಣೆಯನ್ನು ಶಿರಸಾವಹಿಸಿ ನಡೆದುಕೊಳ್ಳುವ ರೀತಿಗಳನ್ನೂ, ಅದಕ್ಕೆ ಮೆಚ್ಚಿ ರಾಜನು ಅವರವರಿಗೆ ಯೋಗ್ಯತೆಗೆ ತಕ್ಕಂತೆ ಕೊಡುವ ಜೀವನವನ್ನೂ, ಅಧಿಕಾರಿಗಳ ಸ್ಥಿತಿಯನ್ನೂ, ರಾಜನ ಸಂಪತ್ಸಮೃದ್ಧಿಯನ್ನೂ, ಜನರು ರಾಜನ ಸಮ್ಮುಖಕ್ಕೆ ಹೋಗಿ ಸೇರುವ ಬಗೆಯನ್ನೂ, ಆ ರಾಜನ ಸಮ್ಮುಖದಲ್ಲಿರುವವರು ಪಡೆವ ಸುಖ ಸಂಪತ್ತುಗಳನ್ನೂ ವರ್ಣಿಸಿದರೂ ರಾಜನನ್ನೇ ಹೊಗಳಿದಂತಾಯಿತು ಎನ್ನುವರು. ಅದರಂತೆ ವೇದದಲ್ಲಿಯೂ, ಭಗವಂತನ ಗುಣಪ್ರಶಂಸೆ ಮಾಡುವುದು ಮಾತ್ರವೇ ಅಲ್ಲದೆ ಚತುರ್ವರ್ಣ ಚತುರಾಶ್ರಮದವರು ಎನಿಸುವ ರಾಷ್ಟ್ರದೇಶದವರು ಮಾಡುವ ವರ್ಣಾಶ್ರಮ ಧರ್ಮ ಯಾಗಾದಿ ಕರ್ಮಗಳೆಂಬ ಭಗವದಾಜ್ಞಾನುವರ್ತನ ರೂಪ ವಾದ ಸೇವೆಗಳನ್ನೂ, ಅದಕ್ಕೆ ಮೆಚ್ಚಿ ಭಗವಂತನು ಅವರವರಿಗೆ ಕೊಡುವ ಐಹಿಕಾಮುಷ್ಮಿಕ ಫಲಗಳೆಂಬ ಸಂಬಳಗಳನ್ನೂ, ಅಧಿಕಾರಿಸ್ಥಾನೀಯರಾದ ಇಂದ್ರಾದಿಗಳ ಅಧಿಕಾರದ ನೆಲೆಯನ್ನೂ, ಜೀವಾತ್ಮರುಗಳೆಂಬ ಸೇವಕರ ನೆಲೆ ಯನ್ನೂ, ಮೋಕ್ಷೋಪಾಯಗಳೆಂಬ ಭಗವಂತನ ಸಮ್ಮುಖಕ್ಕೆ ಸೇರುವ ಮಾರ್ಗ ಗಳನ್ನೂ, ಮೋಕ್ಷಾನಂದವೆಂಬ ಭಗವಂತನ ಸಮ್ಮುಖದವರ ಸುಖಸಂಪತ್ತನ್ನೂ ನಿರೂಪಿಸುವುದರಿಂದ ಈ ವೇದವೆಲ್ಲಾ ಪರಬ್ರಹ್ಮನನ್ನೇ ಹೊಗಳಿದಂತಾಗುವುದು ಎಂಬುದು ಸಿದ್ಧವಾಯ್ತು. ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟೇ ಭಗವದ್ಗೀತೆ ಯಲ್ಲಿ ಭಗವಂತನು "ವೇದೈಶ್ಚ ಸರ್ವೈರಹಮೇವ ವೇದ್ಯಃ" ಸಕಲ ವೇದಗಳೂ ನನ್ನನ್ನೇ ಹೊಗಳುವುವು ಎಂದೂ, ಹೀಗೆಯೇ ಸಕಲವೇದಗಳೂ "ಸರ್ವೇ ವೇದಾ ಯತ್ಪದಮಾಮನಂತಿ" "ಸರ್ವೇ ವೇದಾ ಯತ್ರೈಕಂ ಭವಂತಿ" ನಾವೆಲ್ಲಾ ಈ ಪರ ಬ್ರಹ್ಮನನ್ನೇ ಹೇಳುವೆವು ಎಂದೂ, ಏಕಕಂಠವಾಗಿ ಹೇಳುವುದರಿಂದ ನ್ಯಾಯಸಾಧನ ಗಳಲ್ಲ ವಾದಿಪ್ರತಿವಾದಿಗಳಿಬ್ಬರೂ ಒಪ್ಪಿ ಆ ಒಪ್ಪಿತಕ್ಕೆ ಕೈ ಬರೆಹಕೊಟ್ಟ ನಿರ್ಣಯದ ಸ್ಥಿರವಾಗುವಂತೆ ಈ ನಿರ್ಣಯವು ಅವಿಚಾಲ್ಯವಾಗಿ ನಿಲ್ಲುವುದು.

೩೩. ವೇದಾಂತವಾಕ್ಯಗಳ ಸ್ವರೂಪ ವಿಭಾಗ

ತತ್ತ್ವಬೋಧನಾರ್ಥವಾಗಿ ಹೊರಟ ವೇದಾಂತವಾಕ್ಯಗಳು ಭೇದಶ್ರುತಿ, ಅಭೇದಶ್ರುತಿ, ಘಟಕಶ್ರುತಿ, ಕಾರಣಶ್ರುತಿ, ಸಗುಣಶ್ರುತಿ, ನಿರ್ಗುಣಶ್ರುತಿ, ನಿರ್ವಿ ಕಾರಶ್ರುತಿ, ಶೋಧಕಶ್ರುತಿ, ಭೇದನಿಷೇಧಶ್ರುತಿ, ತತ್ತ್ವಪರಶ್ರುತಿ ಎಂದು ಸ್ಥೂಲ ವಾಗಿ ಹತ್ತು ರಾಶಿಯಾಗಿರುವುವು. ಅವುಗಳ ಸ್ವರೂಪವನ್ನೂ ಕಾರ್ಯವನ್ನೂ ವಿವರಿ ಸುತ್ತೇವೆ:—

(೧) **ಭೇದಶ್ರುತಿ** —ಹಿಂದಣ ಪ್ರಕರಣಗಳಲ್ಲಿ ವಿವರಿಸಿದಂತೆ ಜೀವಾತ್ಮರು ಗಳಿಗೆ ಇರುವ ಪರಸ್ಪರ ಸ್ವರೂಪಭೇದ, ಅಚಿತ್ತುಗಳಿಗೆ ಇರುವ ಅನ್ಯೋನ್ಯ ಸ್ವರೂಪ ಭೇದ, ಚಿತ್ತುಗಳಿಗೂ ಅಚಿತ್ತುಗಳಿಗೂ ಇರುವ ಅನ್ಯೋನ್ಯ ಸ್ವರೂಪಭೇದ, ಚಿತ್ತುಗಳಿಗೂ ನಾರಾಯಣನಿಗೂ ಇರುವ ಪರಸ್ಪರ ಸ್ವರೂಪಭೇದ, ಅಚಿತ್ತುಗಳಿಗೂ

ನಾರಾಯಣನಿಗೂ ಇರುವ ಅನ್ಯೋನ್ಯ ಸ್ವರೂಪಭೇದ—ಹೀಗಿರುವ ಐದು ವಿಧವಾದ ಭೇದಗಳನ್ನು ಇದ್ದುದು ಇದ್ದಂತೆ ಯಥಾರ್ಥವಾಗಿ ಬೋಧಿಸುವುದಕ್ಕಾಗಿ ಹೊರಟಿರುವುದು (೨) ಅಭೇದಶ್ರುತಿ—ಕಾರ್ಯಕಾರಣವಸ್ತುಗಳಿಗೆ ಅಭೇದವನ್ನೂ ಚೇತನಾಚೇತನಪ್ರಪಂಚಕ್ಕೂ ಪರಬ್ರಹ್ಮಕ್ಕೂ ಅಭೇದವನ್ನೂ ಚೇತನಾ ಚೇತನ ವಿಶಿಷ್ಟಸ್ವರೂಪಕ್ಕೂ ಸರ್ವಜ್ಞತ್ವಾದಿ ವಿಶಿಷ್ಟಸ್ವರೂಪಕ್ಕೂ ಅಭೇದವನ್ನೂ ವಾಸ್ತವವಾಗಿ ಹೇಳಲು ಹೊರಟಿರುವುದು. (೩) ಘಟಕಶ್ರುತಿ—ಹೀಗೆ ಭೇದಶ್ರುತಿಗೂ ಅಭೇದಶ್ರುತಿಗೂ ಆಪಾತತಃ ತೋರಿಬರುವ ವಿರೋಧವನ್ನು ಪರಿಹರಿಸುವುದಕ್ಕಾಗಿ ಚಿದಚಿದ್ರೂಪವಾದ ಪ್ರಪಂಚಕ್ಕೂ ಪರಬ್ರಹ್ಮನಾದ ನಾರಾಯಣನಿಗೂ ಶರೀರ ಶರೀರಿಭಾವಾದಿ ಸಂಬಂಧವಿರುವುದೆಂದು ಬೋಧಿಸುವುದರ ಮೂಲಕ ಆ ಭೇದಾಭೇದಶ್ರುತಿಗಳ ಸೌಹಾರ್ದವನ್ನು ವಾಸ್ತವವಾಗಿ ಬೋಧಿಸಲು ಹೊರಟಿರುವುದು. (೪) ಕಾರಣಶ್ರುತಿ—ಚಿದಚಿದಾತ್ಮಕವಾದ ಸ್ಥೂಲಪ್ರಪಂಚಕ್ಕೆ ಸೂಕ್ಷ್ಮ ಚಿದಚಿಚ್ಛರೀರಕನಾದ ಶ್ರೀಮನ್ನಾರಾಯಣನೇ ತ್ರಿವಿಧಕಾರಣನಾಗಿರುವನು ಎಂದು ಅವನ ಸರ್ವಜಗತ್ಕಾರಣತ್ವವನ್ನು ಸ್ಥಾಪಿಸಿ ಅವನ ಪರತ್ವಮಾಹಾತ್ಮ್ಯಗಳನ್ನು ಪ್ರಕಾಶಗೊಳಿಸುವುದು. (೫) ಸಗುಣಶ್ರುತಿ—ಶ್ರೀಮನ್ನಾರಾಯಣನು ಸರ್ವಜ್ಞ, ಸರ್ವಶಕ್ತ, ಮುಮುಕ್ಷೂಪಾಸ್ಯ, ಮೋಕ್ಷಪ್ರದ ಎಂಬ ಅವನ ಈ ಕಲ್ಯಾಣಗುಣಗಳನ್ನು ಬೋಧಿಸುತ್ತ ಹಿಂದೆ, ಹೇಳಿದ (ಪುಟ ೭೩) ಕಾರಣತ್ವೋಪಯೋಗಿಯಾದ ಗುಣ, ಸಮಾಶ್ರಯಣೀಯತ್ವೋಪಯೋಗಿಯಾದ ಗುಣ ಇವುಗಳನ್ನು ಸಮರ್ಥಿಸುವುದು. (೬) ನಿರ್ಗುಣಶ್ರುತಿ—ಸರ್ವೇಶ್ವರನಲ್ಲಿ ಸತ್ತ್ವರಜಸ್ತಮಸ್ಸೆಂಬ ಹೇಯಗುಣಗಳು ಎಂತೂ ಯಾವಾಗಲೂ ಅವಕಾಶವನ್ನು ಪಡೆಯಲಾರವು ಎಂದು ಬೋಧಿಸುವುದು ಇದರಿಂದ "ಸರ್ವೇಶ್ವರನು ಚಿದಚಿಚ್ಛರೀರಕನಾದರೆ, ಪ್ರಕೃತಿಸಂಸೃಷ್ಟನಾದ ಜೀವಾತ್ಮನಿಗೆ ಪ್ರಕೃತಿಸಂಸರ್ಗದಿಂದ ಸ್ವಭಾವಾನ್ಯಥಾಭಾವರೂಪವಿಕಾರ ಬಂದಂತೆ, ಈಶ್ವರನಿಗೂ ಪ್ರಕೃತಿಶರೀರಕತ್ವ ಪ್ರಯುಕ್ತವಾಗಿ ಅದೇ ಹೇಯಗುಣಸಂಬಂಧವು ಬಾರದೆ ಹೇಗೆ ತಪ್ಪುವುದು ಎಂಬ ಸಂಶಯವನ್ನೂ ಆಕ್ಷೇಪವನ್ನೂ ಪರಿಹರಿಸಿ ಸರ್ವಜ್ಞತ್ವ ಸರ್ವಶಕ್ತತ್ವಾದಿಗುಣಗಳಿಗೆ ಈ ಹೇಯಗುಣ ಸಂಬಂಧದಿಂದ ಯಾವ ಕೊರತೆಯೂ ಇಲ್ಲ ಎಂಬುದನ್ನು ಸಹ ಸ್ಥಿರಪಡಿಸುವುದು (೭) ನಿರ್ವಿಕಾರಶ್ರುತಿ—ಸರ್ವೇಶ್ವರನಲ್ಲಿ ಯಾವವಿಧವಾದ ವಿಕಾರಗಳೂ ಇಲ್ಲವೆಂದು ಬೋಧಿಸುವುದು: ಎಂದರೆ ವಿಶೇಷಣವಾದ ಅಚಿತ್ಪದಾರ್ಥದಲ್ಲಿ ಸ್ವರೂಪ ಸ್ವಭಾವಗಳೆರಡಕ್ಕೂ ಮಾರುಪಾಡಿರುವುದರಿಂದ ಎರಡುವಿಧವಾದ ವಿಕಾರಗಳೂ ಉಂಟು; ಚಿತ್ಪದಾರ್ಥದಲ್ಲಿ ಸ್ವಭಾವವಿಕಾರಮಾತ್ರವೇ ಹೊರತು ಸ್ವರೂಪವಿಕಾರವಿಲ್ಲ; ಸರ್ವೇಶ್ವರನಲ್ಲಿ ಈ ಎರಡುವಿಧ ವಿಕಾರಗಳೂ ಇಲ್ಲವೇ ಇಲ್ಲ—ಎಂದು ತೋರಿಸಿ, ಶೋಧಕಶ್ರುತಿಗೆ ಸಹಾಯಮಾಡುವುದು (೮) ಶೋಧಕಶ್ರುತಿ (ಸಮ

ನ್ವಯ ಶ್ರುತಿ)—ಹಿಂದೆ ಹೇಳಿದ ಶ್ರುತಿವಾಕ್ಯಗಳಲ್ಲಿ ಆಪಾತತಃ ತೋರಿಬರುವ ವಿರೋಧದ ಪರಿಹಾರಕ್ರಮವನ್ನು ನಿರೂಪಣವಾಕ್ಯಗಳಿಂದ ವಿವರಿಸಿ ಹೇಳುವುದು: ಎಂದರೆ ಕಾರಣ ಶ್ರುತಿಗಳಿಂದ ಈ ಸ್ಥೂಲಪ್ರಪಂಚಕ್ಕೆ ಸೂಕ್ಷ್ಮ ಚಿದಚಿದ್ವಿಶಿಷ್ಟನಾದ ನಾರಾಯಣನೇ ಕಾರಣನು ಎಂದು ಸಿದ್ಧಿಸಿತು; ಅಭೇದಶ್ರುತಿಯಿಂದ ಕಾರಣಕ್ಕೂ ಕಾರ್ಯಕ್ಕೂ ಅಭೇದವಿದೆ ಎಂದೂ ಸಿದ್ಧವಾಯಿತು; ಹೀಗಾದರೆ ಕಾರ್ಯರೂಪವಾದ ಈ ಜಗತ್ತಿನಲ್ಲಿ ತೋರುವ ಸಕಲದೋಷಗಳೂ ಕಾರ್ಯಾಭಿನ್ನವಾಗಿ ಕಾರಣವಾದ ನಾರಾಯಣನಲ್ಲಿ ಇರಲೇಬೇಕು ಎಂಬ ಆಕ್ಷೇಪ ಬರುವುದಿಲ್ಲವೇ? ಇದಕ್ಕಾಗಿ ಜಗತ್ಕಾರಣತ್ವವನ್ನು ಒಪ್ಪಿದರೆ ವಿಕಾರಾದಿದೋಷವುಂಟೆಂದೂ ಒಪ್ಪಬೇಕು: ವಿಕಾರವನ್ನು ಒಪ್ಪದಿದ್ದರೆ ಜಗತ್ಕಾರಣತ್ವವನ್ನೂ ಬಿಡಬೇಕಾಗಿ ಬರುವುದು; ಇವೆರಡೂ ಹೇಗೆ ಸಂಗತವಾಗಬಹುದು? ಇತ್ಯಾದಿಯಾದ ಆಕ್ಷೇಪಗಳನ್ನು ನೀಗಿಸುವುದು. ಎಂತೆಂದರೆ— ಚಿದಚಿದ್ವಿಶಿಷ್ಟಸ್ವರೂಪವು ಜಗತ್ತಿಗೆ ಉಪಾದಾನಕಾರಣವಾಗಿರುವುದು. ಅದರಲ್ಲಿ ಸತ್ಯತ್ವ, ಜ್ಞಾನತ್ವ, ಆನಂದತ್ವ, ಅಮಲತ್ವಾದಿರೂಪವಾದ ಶುದ್ಧ ವಿಶೇಷ್ಯಸ್ವರೂಪವು ಕಾರಣವಲ್ಲ. ಕಾರ್ಯಪ್ರಪಂಚದಲ್ಲಿ ತೋರುವ ದೋಷವು ವಿಶೇಷ್ಯವಾದ ಬ್ರಹ್ಮಾಂಶದಲ್ಲಿ ಇಲ್ಲವೇ ಇಲ್ಲ; ವಿಶೇಷಣಾಂಶವಾದ ಪ್ರಕೃತಿಯಲ್ಲಿ ಮಾತ್ರವೇ ಇರುವುದು. ಆದುದರಿಂದ ಶುದ್ಧವಿಶೇಷ್ಯಾಂಶವು ಯಾವಾಗಲೂ ನಿರ್ಮಲವಾಗಿ ನಿರ್ವಿಕಾರವಾಗಿಯೇ ಇರುವುದು. ಪರಬ್ರಹ್ಮನ ಶರೀರೈಕದೇಶವಾದ ಪ್ರಕೃತಿ ಸ್ವತಂತ್ರವಾಗಿ ಜಗತ್ಕಾರಣವೂ ಅಲ್ಲ; ಈಶ್ವರನು ಪ್ರಕೃತಿಯನ್ನು ಪರಿಣಾಮಗೊಳಿಸುವ ಪ್ರೇರಣಶಕ್ತಿಯಿಂದಲೇ ಅದು ಜಗತ್ತಾಗಿ ಪರಿಣಮಿಸಿದರೂ ಈ ಪ್ರೇರಣಕರ್ತೃತ್ವದಿಂದ ಇವನಿಗೆ ಜಗತ್ಕಾರಣತ್ವದ ವಿಷಯದಲ್ಲಿ ಯಾವ ಅಡ್ಡಿಯೂ ಇಲ್ಲ. ಆದುದರಿಂದ ಜಗತ್ಕಾರಣತ್ವ, ನಿರ್ವಿಕಾರತ್ವ ಇವೆರಡೂ ನಾರಾಯಣನಲ್ಲಿ ಸುಸಂಗತವಾಗಿಯೇ ಇರುವುವು ಎಂದು ಸಮನ್ವಯಪಡಿಸುವುದು. (೯) ಭೇದನಿಷೇಧಶ್ರುತಿ—ಭೇದಶ್ರುತಿಯಿಂದ ವಿಧಿಸಲ್ಪಟ್ಟ ಪರತಂತ್ರಭೇದಕ್ಕೆ ವಿರುದ್ಧವಾದ ಸ್ವತಂತ್ರಭೇದವು ಎಲ್ಲಿಯೂ ಇಲ್ಲ ಎಂದು ಹೇಳುವುದು: ಎಂದರೆ—ನಾರಾಯಣನಿಗೆ ವಿಶೇಷಣವಾಗದೆ ಇರುವ ಸ್ವತಂತ್ರ ಚಿದಚಿತ್ಪದಾರ್ಥಗಳು ಇಲ್ಲ; ಈ ಚಿದಚಿದ್ವಿಶೇಷಣಗಳೊಡನೆ ಕೂಡಿದ ವಿಶೇಷ್ಯವು ನಾರಾಯಣನೊಬ್ಬನೇ ಅಲ್ಲದೆ ಬೇರೊಬ್ಬನಿಲ್ಲ ಎಂದು ನಿರ್ಣಯಿಸುವುದು. (೧೦) ತತ್ತ್ವಪರಶ್ರುತಿ—ಕಾರಣವಾಕ್ಯಗಳಲ್ಲಿ ಕಾರಣವಸ್ತುವನ್ನು ನಿರ್ದೇಶಿಸುವುದಕ್ಕಾಗಿ ಅಲ್ಲಲ್ಲಿ ಹೇಳಿರುವ ಸತ್, ಬ್ರಹ್ಮ ಆತ್ಮ ಶಂಭು, ಶಿವ, ಪ್ರಜಾಪತಿ, ಇಂದ್ರ, ಅಗ್ನಿ ಮುಂತಾದ ಸಮಸ್ತ ಶಬ್ದಗಳೂ ಅಪರ್ಯವಸಾನವೃತ್ತಿಯಿಂದಲಾಗಲಿ* ಅವಯವ ವ್ಯುತ್ಪತ್ತಿಯಿಂದಲಾಗಲಿ

* ಶಬ್ದಗಳಿಗೆ ಪರ್ಯವಸಾನವೃತ್ತಿ, ಅಪರ್ಯವಸಾನವೃತ್ತಿ ಎಂಬ ಎರಡು ಶಕ್ತಿಗಳು ಇರುವುವು. ಇವೆರಡೂ ಶಬ್ದಕ್ಕೆ ಅರ್ಥದೊಂದಿಗೆ ಇರುವ ಸಂಬಂಧಗಳು. ಇವುಗಳಲ್ಲಿ ಪರ್ಯವಸಾನವೃತ್ತಿ

ಸರ್ವಶಬ್ದವಾಚ್ಯನಾದ ನಾರಾಯಣನನ್ನೇ ಜಗತ್ಕಾರಣನನ್ನಾಗಿ ಹೇಳುವುವೇ ಹೊರತು ಅಗ್ನೀಂದ್ರಾದಿಗಳನ್ನಲ್ಲ; ಅಗ್ನಿ, ಇಂದ್ರ, ಪ್ರಜಾಪತಿ, ಶಂಭು ಮುಂತಾದವರು ಕರ್ಮವಶ್ಯರಾಗಿ ಸೃಷ್ಟಿಗೂ ಸಂಹಾರಕ್ಕೂ ಒಳಪಟ್ಟೇ ಇರುವುದರಿಂದ ಇವರು ಯಾರೂ ಸಕಲಜಗತ್ಕಾರಣರಲ್ಲ ಎಂಬ ತಾತ್ಪರ್ಯವನ್ನು* ತೋರಿಸುವುದಕ್ಕಾಗಿ ಆ ಅಗ್ನೀಂದ್ರ ಪ್ರಜಾಪತಿ ಶಿವಶಂಭ್ವಾದಿಶಬ್ದಗಳ ಜತೆಯಲ್ಲಿ ನಾರಾಯಣ ಶಬ್ದವನ್ನೂ ಸಹ ಸೇರಿಸಿ ಅನೇಕಾವೃತ್ತಿ † ಪಠನಮಾಡಿ, ಕಾರಣಪ್ರಕರಣದಲ್ಲಿ ಹೇಳಿದ ಶಬ್ದಗಳೆಲ್ಲವೂ ನಾರಾಯಣಪರಗಳೇ ಎಂದು ನಿರ್ಣಯಿಸಿಯೂ, ಕಾರಣ ವಾಕ್ಯಗಳ ವಿರೋಧಗಳನ್ನು ಪರಿಹರಿಸಿಯೂ, ಸರ್ವಕಾರಣವಾಕ್ಯಗಳಿಗೂ ಐಕಮತ್ಯವನ್ನು ನಾರಾಯಣನಲ್ಲಿಯೇ ಪರ್ಯವಸಾನಗೊಳಿಸಿಯೂ‡, ನಾರಾಯಣನೇ ಸರ್ವಕಾರಣ, ಪರತತ್ತ್ವ ಎಂಬುದನ್ನು ಸ್ಥಿರಪಡಿಸುವುದು.

ವೇದಗಳು ನಾರಾಯಣನ ಸ್ವರೂಪಗುಣವಿಭವಗಳನ್ನು ಹಲವುಕಡೆ ಹಲವು ವಿಧವಾಗಿ ಹೇಳಿ ತಿಳಿಯಪಡಿಸಿರುವುವು. ಪರಮಾತ್ಮನನ್ನು ಸಗುಣನೆಂದೂ ನಿರ್ಗುಣನೆಂದೂ, ದೊಡ್ಡ ವಸ್ತುಗಳಿಗಿಂತಲೂ ಮತ್ತಷ್ಟು ದೊಡ್ಡವನೆಂದೂ ಚಿಕ್ಕ ವಸ್ತುಗಳಿಗಿಂತಲೂ ಮತ್ತಷ್ಟು ಚಿಕ್ಕವನೆಂದೂ, ಆಕಾರವುಳ್ಳವನೆಂದೂ ಆಕಾರವಿಲ್ಲದವ

ಎಂಬುದು ಮುಖ್ಯ ವಿಶೇಷ್ಯವನ್ನು ಬೋಧಿಸದೆ ವಿಶೇಷಣಮಾತ್ರ ಬೋಧನೆಯಿಂದ ಕೃತಕೃತ್ಯವಾಗಿ ನಿಂತುಬಿಡುವ ಶಕ್ತಿ; ಇದು ಲೌಕಿಕವ್ಯವಹಾರಾದಿಗಳಲ್ಲಿ ಗ್ರಹಿಸಲ್ಪಡುವುದು. ಅಪರ್ಯವಸಾನವೃತ್ತಿ ಎಂಬುದು ಮುಖ್ಯ ವಿಶೇಷ್ಯಪರ್ಯಂತವಾಗಿ ಬೋಧಕವಾಗಿಯೇ ಕೃತಕೃತ್ಯವಾಗುವ ಶಕ್ತಿ. ಇದು ವೇದಾಂತ ವಾಕ್ಯಗಳಿಂದ ಗ್ರಹಿಸಲ್ಪಡುವುದು. ಇದೇ ಮುಖ್ಯವೃತ್ತಿ. ಇಲ್ಲಿ ವಿಶೇಷಣವೆಂಬುದು ಆ ಆ ಆಕಾರವಿಶೇಷವುಳ್ಳ ಅಚಿತ್ಪರಿಣಾಮವಾದ ದೇವ ಮನುಷ್ಯಾದಿ ಶರೀರವ್ಯಕ್ತಿಗಳು. ಆ ವ್ಯಕ್ತಿಗಳಿಗೆ ವಿಶೇಷ್ಯವು ಅವುಗಳ ಸತ್ತೆಗೆ ಹೇತುವಾದ ಜೀವಾತ್ಮನು. ಮುಖ್ಯವಿಶೇಷ್ಯ ಎಂಬುದು ಆ ಶರೀರಾದಿ ವಿಶಿಷ್ಟ ಜೀವಾತ್ಮರಿಗೂ ಅಂತರ್ಯಾಮಿಯಾಗಿ ಅವರ ಸತ್ತಾಹೇತುವಾದ ಸರ್ವೇಶ್ವರನು. ಜೀವಾತ್ಮನು ಶರೀರಕ್ಕೆ ವಿಶೇಷ್ಯವಾಗಿಯೂ, ಸರ್ವೇಶ್ವರನಿಗೆ ವಿಶೇಷಣವಾಗಿಯೂ ಇರುವನು. ಸರ್ವೇಶ್ವರನಿಗೆ ಮತ್ತೊಬ್ಬ ಅಂತರ್ಯಾಮಿ ಇಲ್ಲದುದರಿಂದ ಅವನು ಮುಖ್ಯ ವಿಶೇಷ್ಯನಾಗಿರುವನು. ಆದುದರಿಂದ ಸಮಸ್ತ ಶಬ್ದಗಳಿಗೂ ಪರಮಾತ್ಮಪರ್ಯಂತ ಬೋಧಕತ್ವವೇ ಮುಖ್ಯವೃತ್ತಿ ಎನಿಸುವುದು. ಈ ಅಪರ್ಯವಸಾನವೃತ್ತಿಯೇ "ತತ್ತ್ವಮಸಿ" ಎಂಬ ವಾಕ್ಯದಲ್ಲಿ ತ್ವಂಪದಕ್ಕೆ ಶ್ವೇತಕೇತುಶರೀರ, ಅದಕ್ಕೆ ಅಂತರ್ಯಾಮಿಯಾದ ಜೀವಾತ್ಮಾ, ಆ ಜೀವಾತ್ಮನಿಗೆ ಅಂತರ್ಯಾಮಿಯಾದ ಪರಮಾತ್ಮಾ ಎಂದು ಈ ಪರಮಾತ್ಮಪರ್ಯಂತ ಅರ್ಥವನ್ನು ಹೇಳಿ, ತತ್ತ್ವಂಪದಗಳಿಗೆ ಸಾಮಾನಾಧಿಕರಣ್ಯವನ್ನು ಸುಸಂಗತವನ್ನಾಗಿ ಮಾಡುವುದು.

† ಬ್ರಹ್ಮಾ ನಾರಾಯಣಃ, ಶಿವಶ್ಚ ನಾರಾಯಣಃ, ಶಕ್ರಶ್ಚ ನಾರಾಯಣಃ, ದ್ಯಾವಾಪೃಥಿವ್ಯೌ ಚ ನಾರಾಯಣಃ, ನಾರಾಯಣ ಏವೇದಂ ಸರ್ವಂ (ನಾರಾಯಣೋಪನಿಷತ್)

‡ ವೇದವಿತ್ಪ್ರವರಪ್ರೋಕ್ತವಾಕ್ಯ ನ್ಯಾಯೋಪಬೃಂಹಿತಾಃ ।
ವೇದಾಸ್ಸಾಂಗಾ ಹರಿಂ ಪ್ರಾಹುಃ ಜಗಜ್ಜನ್ಮಾದಿ ಕಾರಣಂ ॥

ನೆಂದೂ, ವಾಕ್ಕಿಗೂ ಮನಸ್ಸಿಗೂ ಗೋಚರನಲ್ಲವೆಂದೂ, ವೇದವೇದ್ಯನೆಂದೂ, ಉತ್ಪತ್ತಿವಿನಾಶಾದಿಗಳಿಲ್ಲದವನೆಂದೂ, ಮತ್ಸ್ಯಕೂರ್ಮಾದಿರೂಪದಿಂದ ಹುಟ್ಟಿದನೆಂದೂ ವೇದಗಳು ಹೇಳಿದರೆ ಮಂದಬುದ್ಧಿಗಳಿಗೆ ವಿರೋಧ ತೋರುವುದರಿಂದ ಅರ್ಥನಿಶ್ಚಯವು ಹುಟ್ಟಲಾರದು ; ಸದಾಚಾರ್ಯೋಪದೇಶಗಳಿಂದ ಕೇಳಿ ತಿಳಿದವರಿಗೆ ಈ ವಿರೋಧವೊಂದೂ ತಲೆದೋರದೆ ತಾತ್ಪರ್ಯನಿರ್ಣಯವಾಗುವುದು. ಹೇಗೆಂದರೆ—**ಸಗುಣನೆಂದರೆ** ವಾತ್ಸಲ್ಯ ಸ್ವಾಮಿತ್ವ ಸೌಶೀಲ್ಯಾದಿ ಕಲ್ಯಾಣಗುಣಗಳುಳ್ಳವನೆಂದರ್ಥವು. **ನಿರ್ಗುಣ** ಎಂದರೆ—ರಾಜಸ ತಾಮಸಾದಿ ಹೇಯಗುಣಗಳೊಂದೂ ಇಲ್ಲದವನೆಂದು ಅರ್ಥವು. ಇದರಿಂದ ನಾರಾಯಣನಲ್ಲಿ ಸದ್ಗುಣಗಳೆಲ್ಲವೂ ನೆಲೆಗೊಂಡಿರುವುವು, ದುರ್ಗುಣಗಳಾವುವೂ ಇಲ್ಲ ಎಂದು ಮೀಮಾಂಸಾನ್ಯಾಯ ಸಹಾಯದಿಂದ ತಾತ್ಪರ್ಯನಿರ್ಣಯವಾಗುವುದು. (ಹೀಗೆಯೇ ಮುಂದೆಯೂ ನ್ಯಾಯಸಹಾಯದಿಂದ ತಾತ್ಪರ್ಯನಿರ್ಣಯವನ್ನು ಮಾಡಿಕೊಳ್ಳಬೇಕು.) **ದೊಡ್ಡವುಗಳಿಗಿಂತಲೂ ದೊಡ್ಡವನು** ಎಂದರೆ--ಈ ಹದಿನಾಲ್ಕುಲೋಕಗಳನ್ನೂ ತನ್ನ ಉದರದಲ್ಲಿ ಕೊಂಡವನು ಎಂದೂ **ಚಿಕ್ಕವುಗಳಿಗಿಂತ ಚಿಕ್ಕವನೆಂದರೆ**—ಅಣುಪರಿಮಾಣನಾದ ಜೀವಾತ್ಮನಲ್ಲಿಯೂ ಅಂತರ್ಯಾಮಿಯಾಗಿ ನೆಲೆಸಿರುವನೆಂದೂ ಅರ್ಥ ತೋರುವುದರಿಂದ ಸಕಲ ಪದಾರ್ಥಗಳ ಒಳಗೂ ಹೊರಗೂ ವ್ಯಾಪಿಸಿರುವನೆಂದೂ ನಾರಾಯಣನ ಸರ್ವಾಂತರಾತ್ಮತ್ವ ಸರ್ವವ್ಯಾಪಕತ್ವಗಳು ಸುವ್ಯಕ್ತವಾಗುವುವು **ಸಾಕಾರನೆಂದರೆ**—ಅಪ್ರಾಕೃತವಾದ ಶರೀರವುಳ್ಳವನೆಂದೂ, **ನಿರಾಕಾರನೆಂದರೆ** ಹೇಯಾಸ್ಪದವಾದ ಪ್ರಾಕೃತಶರೀರವಿಲ್ಲದವನೆಂದೂ ತಾತ್ಪರ್ಯ ತೋರುವುದರಿಂದ ತನ್ನ ದಿವ್ಯಾತ್ಮಸ್ವರೂಪಕ್ಕೆ ತಕ್ಕ ತನ್ನ ಇಚ್ಛಾನುಗುಣವಾದ ದಿವ್ಯಮಂಗಳವಿಗ್ರಹವುಳ್ಳವನೆಂದು ವ್ಯಕ್ತವಾಗುವುದು. **ವಾಕ್ಕಿಗೂ ಮನಸ್ಸಿಗೂ ಗೋಚರನಲ್ಲವೆಂದರೆ**-ಸ್ವರೂಪವೂ ವಿಗ್ರಹವೂ ಇವೆರಡರ ಗುಣಗಳೂ ಐಶ್ವರ್ಯವೂ ಇಷ್ಟೆಂದು ಮಿತಿಮಾಡಿ ಯಾರಿಂದಲೂ ಹೇಳಲೂ ತಿಳಿಯಲೂ ಶಕ್ಯನಲ್ಲ ಎಂಬುದು. **ವೇದವೇದ್ಯನೆಂದರೆ**—ಇವನೇ ಶ್ರಿಯಃಪತಿ, ಅಖಿಲಹೇಯಪ್ರತ್ಯನೀಕ, ಜಗತ್ಕಾರಣ, ಸರ್ವಾಂತರ್ಯಾಮಿ, ಮೋಕ್ಷಪ್ರದ ಎಂಬಿವೇ ಮುಂತಾದ ಇವನ ಮಹಿಮೆಗಳನ್ನು ವೇದದಲ್ಲಿ ತಿಳಿಯಬಹುದು ಎಂದು ಅರ್ಥವು. ಇದರಿಂದ ಪ್ರಾಜ್ಞರೂಕೂಡ ತಾವು ತಿಳಿಯಲು ಸಾಧ್ಯವಾದಷ್ಟು ತಿಳಿದು, ಇನ್ನೂ ಅಪಾರವಾದ ಮಹಿಮೆಗಳು ಉಂಟೆಂದು ಕೊನೆಗಾಣದೆ ನಿಲ್ಲಬೇಕಾಗಿವೆ ಎಂದು ದೃಢಪಡುವುದು. **ಉತ್ಪತ್ತಿವಿನಾಶಾದಿಗಳಿಲ್ಲವೆಂದರೆ**—ಕರ್ಮಾಧೀನವಾದ ಜನ್ಮಾದಿಗಳಿಲ್ಲವೆಂದೂ, **ರಾಮಕೃಷ್ಣಾದಿರೂಪದಿಂದ ಹುಟ್ಟಿದನೆಂದರೆ**—ದುಷ್ಟನಿಗ್ರಹ, ಶಿಷ್ಟಪರಿಪಾಲನ, ಧರ್ಮಸಂಸ್ಥಾಪನಾರ್ಥವಾಗಿ ತನ್ನ ಇಚ್ಛೆಯಿಂದ ಮನುಷ್ಯಾದ್ಯಾಕಾರವನ್ನು ಕೈಕೊಂಡು ಆವಿರ್ಭವಿಸಿದನೆಂದೂ ತೋರುವುದರಿಂದ ಅವನ ಅವತಾರವು ಕರ್ಮಾ

ಧೀನವಲ್ಲ, ಲೋಕಾನುಗ್ರಹಾರ್ಥವಾಗಿಯೇ ಆದುದು ಎಂದು ಸಿದ್ಧವಾಗುವುದು. ಈರೀತಿ ವಿರೋಧವಿಲ್ಲದಂತೆ ಸಕಲ ವೇದಾನ್ತವಾಕ್ಯಗಳನ್ನೂ ಸಮರಸವಾಗಿ ಒಂದುಗೂಡಿಸಿ ತಿಳಿದುಕೊಳ್ಳಬೇಕು *.

೬೪. ವೈಷಮ್ಯ, ಪಾರತಂತ್ರ್ಯ, ನಿರ್ದಯತ್ವ ದೋಷಪರಿಹಾರ

ವೇದಗಳಲ್ಲಿ ಸರ್ವೇಶ್ವರನ ಸರ್ವನಿಯಾಮಕತ್ವವನ್ನು ವಿವರಿಸುವ ಸ್ಥಲಗಳಲ್ಲಿ ಕೆಲವು ವಿರೋಧಗಳು ತೋರುವಂತಿರುವುದು. ಹೇಗೆಂದರೆ—ಸರ್ವೇಶ್ವರನು ಈ ಸಂಸಾರದಲ್ಲಿ ಒಬ್ಬೊಬ್ಬನಿಗೆ ಪಟ್ಟಾಭಿಷೇಕ, ಆಧಿಕ್ಯೈಶ್ವರ್ಯ, ನಿತ್ಯಾರೋಗ್ಯ ಮುಂತಾದ ಸುಖಗಳನ್ನೂ ಒಬ್ಬೊಬ್ಬನಿಗೆ ಶಿರಶ್ಛೇದ, ನಿತ್ಯದಾರಿದ್ರ್ಯ, ರೋಗ ಮುಂತಾದ ದುಃಖಗಳನ್ನೂ ಉಂಟುಮಾಡಿರುವುದರಿಂದ ಇವನು ವಿಷಮ (ಪಕ್ಷಪಾತಿ) ಎಂದೂ, ಅವರವರ ಕರ್ಮಾನುಗುಣವಾಗಿ ಫಲಗಳನ್ನು ಕೊಡುವುದರಿಂದ ಕರ್ಮಕ್ಕೆ ಪರತಂತ್ರನೆಂದೂ, ಪಾಪಿಗಳು ಪಡುವ ದುಃಖಗಳನ್ನು ತನಗೆ ಶಕ್ತಿಯಿದ್ದರೂ ಪರಿಹರಿಸದೆ ನೋಡುತ್ತಿರುವುದರಿಂದ ನಿರ್ದಯನು ಎಂದೂ ಮಂದಬುದ್ಧಿಗಳಿಗೆ ತೋರುವುದು. ಇದರ ಸ್ಥಿತಿಯನ್ನು ಸರಿಯಾಗಿ ವಿಚಾರಿಸಿ ನೋಡಿದರೆ ಇದೊಂದೂ ಅವನಲ್ಲಿಲ್ಲ. ಹೇಗೆಂದರೆ—ಅವನು ಸರ್ವಸ್ವಾಮಿಯಾಗಿರುವುದರಿಂದ ಅವನ ಸೇವಕರು ಎನಿಸುವ ಜೀವಾತ್ಮರುಗಳೆಲ್ಲರಲ್ಲಿಯೂ ಸಮಬುದ್ಧಿಯಿಂದ ಎಲ್ಲರೂ ಅವರವರ ಇಚ್ಛೆ ಬಂದಂತೆ ಊಳಿಗವನ್ನು ಮಾಡಿ ಬದುಕಬಹುದು ಎಂದು ಎಣಿಸಿ, ಶಾಸ್ತ್ರಗಳ ಮೂಲಕವಾಗಿ ಈರೀತಿಯಲ್ಲಿ ನಡೆದವರಿಗೆ ಮೋಕ್ಷಸುಖ, ಈರೀತಿಯಲ್ಲಿ ನಡೆದವರಿಗೆ ಇಹಪರಸೌಖ್ಯಗಳು, ತಪ್ಪುದಾರಿಯಲ್ಲಿ ಹೋದವರಿಗೆ ಇಂಥಿಂಥ ದುಃಖಪ್ರಾಪ್ತಿ ಎಂದು ಕಟ್ಟಳೆಮಾಡಿ ತಿಳಿಸಿ, ಆ ಕಟ್ಟಳೆಯಲ್ಲಿ ಯಾರು ಯಾರು ಯಾವ ಯಾವ ತೆರದಲ್ಲಿ ನಡೆವರೋ ಅವರವರಿಗೆ ಗೊತ್ತುಮಾಡಿದ ಆ ಆ ಕರ್ಮಫಲಗಳನ್ನು ತಪ್ಪದೆ ಕೊಡುವುದರಿಂದ ಭಗವಂತನು ಸರ್ವಸಮನು, ಪಕ್ಷಪಾತಿಯಲ್ಲ; ಅವನಿಗೆ ಒಬ್ಬರಲ್ಲಿಯೂ ವೈಷಮ್ಯವಿಲ್ಲ. ಈರೀತಿಯಾಗಿ ಅವರವರ ಕರ್ಮಾನುಗುಣವಾಗಿ ಫಲಗಳನ್ನು ಕೊಟ್ಟರೂ ಅವನು ಸ್ವತಂತ್ರನಲ್ಲದೆ ಪರತಂತ್ರನಲ್ಲ; ತಾನೇ ಏರ್ಪಡಿಸಿದ ಕಟ್ಟಳೆಗಳೊಳಗೆ ಐಚ್ಛಿಕವಿಷಯಗಳಲ್ಲಿ ಅವರಾಗಿ ಪ್ರವರ್ತಿಸಿದವರಿಗೆ ಆ ಆ ಕರ್ಮಫಲಗಳನ್ನು ಕೊಡುವುದು ಪಾರತಂತ್ರ್ಯವೆನಿಸಲಾರದು. ಹೀಗೆಯೇ ಪಾಪಿಗಳಿಗೆ ಪಾಪಾನುಗುಣವಾಗಿ ದುಃಖವನ್ನು ಕೊಟ್ಟರೂ, ಅಜ್ಞಾನಿಗಳ

---

* ಯತ್ ಬ್ರಹ್ಮ ಜೀವ ಗುಣಶರೀರವಿಕಾರ ಜನ್ಮ
ಕರ್ಮಾದಿಗೋಚರವಿಧಿಪ್ರತಿಷೇಧವಾಚಃ ।
ಅನ್ಯೋನ್ಯಭಿನ್ನವಿಷಯಾ ನ ವಿರೋಧಗಂಧ
ಮರ್ಹಂತಿ ತನ್ನ ವಿಧಯಃ ಪ್ರತಿಷೇಧಬಾಧ್ಯಾಃ ॥ (ತತ್ತ್ವಸಾರ)

ಮುಂತಾದ ಒಬ್ಬೊಬ್ಬರಲ್ಲಿ ನೀತಿವಿಚಾರ ದಯೆಯನ್ನು ತೋರಿಸಿದುದರಿಂದ ಅವನು ಪರಮದಯಾಳುವೇ ಹೊರತು ನಿರ್ದಯನೂ ಅಲ್ಲ. ಇದಕ್ಕೆ ಒಂದು ದೃಷ್ಟಾಂತ ವನ್ನು ಕೊಡಬಹುದು. ಲೋಕದಲ್ಲಿ ಧಾರ್ಮಿಕನಾಗಿರುವ ಅರಸನೊಬ್ಬನು ತನ್ನ ದೇಶದಲ್ಲಿ ಪ್ರಜೆಗಳೊಳಗೆ ಈರೀತಿ ನಡೆವವರನ್ನು ಮನ್ನಿಸುವೆನು, ಈರೀತಿ ನಡೆವವ ರನ್ನು ದಂಡಿಸುವೆನು ಎಂದು ಮೊದಲೇ ಗೊತ್ತುಮಾಡಿ ತಿಳಿಸಿ, ಆ ಕಟ್ಟಳೆಯಂತೆ ಅವರು ಇವರು ಎಂಬ ಭೇದನೋಡದೆ ನಿಗ್ರಹಾನುಗ್ರಹಗಳನ್ನು ನಡೆಸುತ್ತಿದ್ದರೆ ರಾಜನು ಪಕ್ಷಪಾತವಿಲ್ಲದವನು, ಸರ್ವಸಮಾನು ಎನ್ನುವರು. ತಾನು ಮಾಡಿದ ಕಟ್ಟಳೆ ಯನ್ನು ಬಿಡದೆ ತಾನು ನಡೆಸುವುದರಿಂದ ಸ್ವತಂತ್ರನು ಎಂದೂ ಹೇಳುವರು. ತಪ್ಪು ಮಾಡಿದವರನ್ನು ದಂಡಿಸುವಾಗ ಎಲ್ಲಿಯಾದರೂ ಒಂದುಕಡೆಯಲ್ಲಿ ತಪ್ಪು ಇದ್ದರೂ ಮನ್ನಿಸಿದರೆ ಅರಸನು ದಯಾಳು ಎಂದೂ ಹೇಳುವರು.

೬೫. ಅದ್ವೈತಮತಸಾರ

ದ್ವೈತ* ಎಂದರೆ ಭೇದ, ಅದ್ವೈತ ಎಂದರೆ ಅಭೇದ. ಶುದ್ಧಾದ್ವೈತ ವೆಂಬ ಶಾಂಕರಮತದಲ್ಲಿ ಪ್ರಪಂಚಕ್ಕೂ ಪರಬ್ರಹ್ಮಕ್ಕೂ, ಜೀವಾತ್ಮರುಗಳಿಗೂ ಪರಬ್ರಹ್ಮಕ್ಕೂ ಭೇದವಿಲ್ಲ. ಈ ಮತದಲ್ಲಿ ಸಕಲ ವಿಶೇಷ† ಶೂನ್ಯವಾದ ಚೈತನ್ಯ ಮಾತ್ರವೇ ತ್ರಿಕಾಲಾಬಾಧ್ಯವಾದ ಸತ್ಯ. ಆ ಚೈತನ್ಯದಲ್ಲಿ ಮಾಯೆ, ಅವಿದ್ಯೆ ಇತ್ಯಾದಿ ಶಬ್ದಗಳಿಂದ ಹೇಳಲ್ಪಡುವ ಭಾವರೂಪಾಜ್ಞಾನವೆಂಬ ದೋಷದಿಂದ ಭ್ರಾಂತಿ ಪರಿಕಲ್ಪಿತವಾಗಿ ಪ್ರಪಂಚವು ತೋರುವುದು. ಇದಕ್ಕೆ ತತ್ತ್ವಜ್ಞಾನದಿಂದ ನಿವೃತ್ತಿ. ಮುತ್ತಿನಚಿಪ್ಪಿನಲ್ಲಿ ಇದು ಬೆಳ್ಳಿ ಎಂಬ ಬುದ್ಧಿ ಅನಾದಿ ಸಾದೃಶ್ಯವೆಂಬ ದೋಷದಿಂದ ಹುಟ್ಟುವುದು. ಇಲ್ಲಿ ದೋಷವಶದಿಂದ ಆ ಚಿಪ್ಪಿನಲ್ಲಿಯೇ ಉಂಟಾದ ಬೆಳ್ಳಿ ತೋರುವುದು. ಈ ಬುದ್ಧಿ ದೇಶಾಂತರದಲ್ಲಿದ್ದ ಸತ್ಯರಜತ ವಿಷಯವಲ್ಲ. ಇದು ಬೆಳ್ಳಿಯಲ್ಲ ಎಂಬ ಬುದ್ಧಿಯಿಂದಲೇ ಇದಕ್ಕೆ ನಿವೃತ್ತಿ. ಈ ದೃಷ್ಟಾಂತವನ್ನು ಮುಂದಿಟ್ಟುಕೊಂಡು ನಿರ್ವಿಶೇಷ† ಚೈತನ್ಯ ಮಾತ್ರ ಸ್ವರೂಪಬ್ರಹ್ಮದಲ್ಲಿ ಅವಿದ್ಯಾ

* ದ್ವಯೋಃ ಭಾವಃ ದ್ವಿತಾ, ದ್ವಿತೈವ ದ್ವೈತಂ, ಭೇದ ಇತಿ ಯಾವತ್; ನ ದ್ವೈತಂ ಅದ್ವೈತಂ, ಅಭೇದ ಇತಿ ಯಾವತ್.

† ನಿರ್ವಿಶೇಷ—ವಿಶೇಷ ಎಂದರೆ ಭೇದ; ಅದು ಮೂರುವಿಧ—ಸಜಾತೀಯ ಭೇದ, ವಿಜಾತೀಯಭೇದ, ಸ್ವಗತಭೇದ ಎಂದು. ಇಲ್ಲಿ ಜೀವಬ್ರಹ್ಮರಭೇದ ಸಜಾತೀಯ ಭೇದ, ಅಚಿದ್ಬ್ರಹ್ಮರುಗಳ ಭೇದ ವಿಜಾತೀಯಭೇದ, ಆನೃತತ್ವ ನಿತ್ಯತ್ವಾದಿ ಭೇದ ಸ್ವಗತಭೇದ; ಇವು ಮೂರೂ ಬ್ರಹ್ಮದಲ್ಲಿ ಇಲ್ಲ. ಚೈತನ್ಯಮಾತ್ರ ಎಂಬಲ್ಲಿ ಮಾತ್ರ ಶಬ್ದದಿಂದ ಜ್ಞಾತೃತ್ವಜ್ಞೇಯತ್ವಾದಿ ಧರ್ಮಗಳೂ ಬ್ರಹ್ಮನಲ್ಲಿ ಇಲ್ಲ ಎಂದು ಅರ್ಥ.

ದೋಷ ಕಲ್ಪಿತವಾದ ಪ್ರಪಂಚಕ್ಕೆ ಬ್ರಹ್ಮಸ್ವರೂಪಾಧಿಷ್ಠಾನ * ಜ್ಞಾನದಿಂದ ನಿವೃತ್ತಿಯನ್ನು ಒಪ್ಪಿಕೊಳ್ಳಬೇಕು. ಈ ಅವಿದ್ಯಾನಿವೃತ್ತಿಯೇ ಮೋಕ್ಷ ಎಂಬುದು. ಇಲ್ಲಿ ಶಂಕರಾಚಾರ್ಯರಿಗೂ ಅವರಿಗಿಂತ ಪೂರ್ವಿಕರಾದ ಭರ್ತೃಮಿತ್ರ ಮುಂತಾದ ಜರನ್ಮಾಯಾವಾದಿಗಳಿಗೂ ಜೀವೇಶ್ವರ ವಿಭಾಗವಿಷಯದಲ್ಲಿ ಎಷ್ಟೆಷ್ಟೋ ಒಳ ವಿವಾದಗಳು ಇರುವುವು. ಹೇಗೆಂದರೆ—(೧) ಚಿನ್ಮಾತ್ರ ಸಂಬಂಧಿಯಾದ ಮಾಯೆ ಯಲ್ಲಿ ಚಿತ್ಪ್ರತಿ ಬಿಂಬವೇ ಈಶ್ವರನು; ಆ ಮಾಯೆಯ ಪರಿಚ್ಛಿನ್ನವಾದ ಅನಂತ ಪ್ರದೇಶಗಳಲ್ಲಿ ಆವರಣ ವಿಕ್ಷೇಪಗಳಿಂದ * ಚಿತ್ಪ್ರತಿಬಿಂಬವೇ ಜೀವನು—ಎಂದು ಕೆಲವರ ಮತ. (೨) ತ್ರಿಗುಣಾತ್ಮಿಕೆಯಾದ ಮೂಲಪ್ರಕೃತಿಗೆ ಶುದ್ಧ ಸತ್ತ್ವ ಪ್ರಧಾನೆಯಾದ ಮಾಯೆ ಎಂದೂ, ಮಲಿನಸತ್ತ್ವ ಪ್ರಧಾನೆಯಾದ ಅವಿದ್ಯೆ ಎಂದೂ ಎರಡು ರೂಪಗಳುಂಟು. ಅದರಲ್ಲಿ ಮಾಯಾ-ಪ್ರತಿಬಿಂಬವೇ ಈಶ್ವರನು, ಅವಿದ್ಯಾ ಪ್ರತಿಬಿಂಬವೇ ಜೀವನು—ಎಂದು ಕೆಲವರ ಮತ. (೩) ಮೂಲಪ್ರಕೃತಿಯೊಂದೇ ವಿಕ್ಷೇಪಪ್ರಾಧಾನ್ಯದಿಂದ ಮಾಯೆ ಎನಿಸುವುದು. ತದ್ವಿಶಿಷ್ಟನೇ ಈಶ್ವರನು. ಆ ಮೂಲಪ್ರಕೃತಿಯೇ ಆವರಣಪ್ರಾಧಾನ್ಯದಿಂದ ಅವಿದ್ಯೆ ಎಂದೂ ಅಜ್ಞಾನ ವೆಂದೂ ಹೇಳಲ್ಪಡುವುದು. ತದ್ವಿಶಿಷ್ಟನೇ ಜೀವನು—ಎಂದು ಕೆಲವರ ಮತ. (೪) ಅವಿದ್ಯೆಯಲ್ಲಿ ಚಿತ್ಪ್ರತಿಬಿಂಬವೇ ಈಶ್ವರನು. ಅಂತಃಕರಣದಲ್ಲಿ ಚಿತ್ಪ್ರತಿಬಿಂಬವೇ ಜೀವನು—ಎಂದು ಕೆಲವರ ಮತ (೫) ಹೀಗೆಯೇ ಪ್ರಪಂಚನಿವೃತ್ತಿ ಧ್ಯಾನ ಜನ್ಯಾಪೂರ್ವದಿಂದ † ಆಗುವುದೆಂದು ಪ್ರಾಚೀನ ಮಾಯಾವಾದಿ ಪಕ್ಷ. ವಾಕ್ಯ ಜನ್ಯ ಬ್ರಹ್ಮಾಪರೋಕ್ಷಜ್ಞಾನದಿಂದ ಪ್ರಪಂಚನಿವೃತ್ತಿ ಎಂದು ಶಂಕರಾಚಾರ್ಯರ ಪಕ್ಷ. (೬-೯) ಹೀಗೆಯೇ ಏಕಾವಿದ್ಯೆ ಎಂದೂ, ನಾನಾವಿದ್ಯೆ ಎಂದೂ, ನಾನಾ ಜೀವಾತ್ಮರುಗಳು ಇರುವರು ಎಂದೂ, ಏಕಜೀವನೆಂದೂ ಪಕ್ಷಭೇದಗಳೂ ಇರುವುವು. (೧೦) ಹೀಗೆಯೇ "ಶುಕೋ ಮುಕ್ತೋ ವಾಮದೇವೋ ಮುಕ್ತಃ" ಎಂದು ಹೇಳಿ ರುವ ಶುಕ ವಾಮದೇವಾದಿಗಳಿಗೆ ತತ್ತ್ವಜ್ಞಾನವು ಹುಟ್ಟಿದೆ, ಮೋಕ್ಷಮಾತ್ರ ಇನ್ನೂ ಉಂಟಾಗಿಲ್ಲ ಎಂದೂ ಶುಕ ವಾಮದೇವಾದಿಗಳಿಗೆ ಒಬ್ಬರಿಗೂ ತತ್ತ್ವ ಜ್ಞಾನವೇ ಇನ್ನೂ ಹುಟ್ಟಿಲ್ಲ ಎಂದೂ ಪಕ್ಷಭೇದಗಳುಂಟು ಇರುವುವು. ಹೀಗೆ ಅಂತ ರಾಳಿಕ ಪಕ್ಷಭೇದಗಳು ಇದ್ದರೂ ನಿರ್ವಿಶೇಷ ಚೈತನ್ಯಮಾತ್ರವೇ ಸತ್ಯ, ಮಿಕ್ಕ ಪ್ರಪಂಚವೆಲ್ಲವೂ ಆ ಚೈತನ್ಯದಲ್ಲಿ ಅವಿದ್ಯಾ ಕಲ್ಪಿತವಾದುದರಿಂದ ಮಿಥ್ಯೆಎಂಬುದೇ ಸರ್ವಮಾಯಾವಾದಿಗಳೂ ಒಪ್ಪಿದ ಅದ್ವೈತಸಿದ್ಧಾಂತ ಸಾರವಾಗಿರುವುದು.

* ಅಧಿಷ್ಠಾನ=ಆಧಾರವಸ್ತು. ಆವರಣ=ವಸ್ತುಸ್ವರೂಪವನ್ನು ಮುಚ್ಚುವ ಅಜ್ಞಾನ. ವಿಕ್ಷೇಪ=ಆ ವಸ್ತುವನ್ನು ಬೇರೆ ವಸ್ತು ಎಂಬುದಾಗಿ ತೋರಿಸುವ ಅಜ್ಞಾನ.

† ಅಪೂರ್ವ ಎಂದರೆ- ಯಾಗಾದಿ ಜನ್ಯವಾಗಿ ಸ್ವರ್ಗಾದಿ ಫಲಜನಕವಾದ ಆತ್ಮನಿಷ್ಠವಾದ ಅದೃಷ್ಟ ಎಂಬ ಒಂದು ಧರ್ಮ.

ಈ ಮತದ ಖಂಡನಗಳನ್ನು ವಿಜ್ಞಾನಭಿಕ್ಷುಭಾಷ್ಯ, ಶ್ರೀಭಾಷ್ಯ, ಶತದೂಷಣಿ, ಪಂಚಮತಭಂಜನ, ದ್ವೈತಿಗಳ—ಮಧ್ವಭಾಷ್ಯಟೀಕಾ, ಸುಧಾ, ಮಾಯಾವಾದಖಂಡನಟೀಕಾ (ಮಂದಾರಮಂಜರೀ) ಮುಂತಾದ ಗ್ರಂಥಗಳಲ್ಲಿ ವಿಶೇಷವಾಗಿ ವಿವರಿಸಿರುವರು. ಅವುಗಳನ್ನು ಆ ಆ ಗ್ರಂಥಗಳಲ್ಲಿ ತಿಳಿಯಬಹುದು.

೬೬. ಸ್ವರೂಪಭೇದವಿದ್ದರೂ ಐಕ್ಯವ್ಯವಹಾರಕ್ಕೆ ಕಾರಣಗಳು

ಲೋಕದಲ್ಲಿ ಐಕ್ಯವ್ಯವಹಾರಕ್ಕೆ ಸ್ವರೂಪೈಕ್ಯವೇ ಮುಖ್ಯಕಾರಣವಾಗಿದೆ. ಇದನ್ನು (ನಾರಾಯಣಃ ಪರಂಬ್ರಹ್ಮ, ತತ್ತ್ವಂ ನಾರಾಯಣಃ ಪರಃ, ಶ್ರಿಯಃ ಪತಿರೇವ ಸರ್ವೇಶ್ವರಃ) ನಾರಾಯಣನೇ ಪರಬ್ರಹ್ಮ, ನಾರಾಯಣನೇ ಪರತತ್ತ್ವ, ಶ್ರಿಯಃಪತಿಯೇ ಸರ್ವೇಶ್ವರನು ಇತ್ಯಾದಿಯಾದ ವೇದಾಂತ ಶಾಸ್ತ್ರವಚನಗಳಲ್ಲಿಯೂ, (ಮೃದೇವ ಘಟಃ) ಘಟವು ಮೃತ್ತಿಕೆಯೇ ಅಲ್ಲದೆ ಬೇರಾಗಿಲ್ಲ ಎಂಬುದೇ ಮುಂತಾದ ಲೌಕಿಕ ವಾಕ್ಯಗಳಲ್ಲಿಯೂ ನಿಸ್ಸಂಶಯವಾಗಿ ಅರಿಯಬಹುದಾಗಿದೆ. ಆದರೆ ಇಂಥ ಸ್ವರೂಪೈಕ್ಯವು ಕೆಲವುಕಡೆ ಪ್ರಬಲ ಪ್ರಮಾಣಾಂತರಗಳಿಂದ ಬಾಧಿತವಾಗಿಯೂ, ಪ್ರಾಮಾಣಿಕವಾದ ಸ್ವರೂಪಭೇದದಿಂದಲೂ ವ್ಯಕ್ತಿಭೇದದಿಂದಲೂ ಅಸಂಗತವಾಗಿಯೂ ಇರುವುದುಂಟು. ಹಾಗಿದ್ದರೂ ಐಕ್ಯವ್ಯವಹಾರವು ರೂಢವಾಗಿಯೂ ಇರುವುದು. (ಆಯುರ್ಘೃತಂ, ಭಯಂ ಚೋರಃ, ಆದಿತ್ಯೋ ಯೂಪಃ) ತುಪ್ಪವೇ ಆಯುಸ್ಸು, ಭಯವೇ ಚೋರನು, ಯೂಪವು ಆದಿತ್ಯನೇ ಇವು ಮುಂತಾದ ಸ್ಥಲಗಳಲ್ಲಿ ಐಕ್ಯವ್ಯವಹಾರವು ತೋರಿಬಂದರೂ, ಪ್ರಬಲ ಪ್ರಮಾಣಗಳಿಂದ ಬಾಧಿತವಾಗಿ ಅಸಂಗತವಾಗಿಯೇ ಇರುವುವು. ಇವೆಲ್ಲ ಔಪಚಾರಿಕ ಪ್ರಯೋಗಗಳು. ಪ್ರಾಮಾಣಿಕವಾದ ಕೆಲವು ವಾಕ್ಯಗಳಲ್ಲಿ ಸ್ವರೂಪಭೇದವಿದ್ದರೂ ಐಕ್ಯವ್ಯವಹಾರ ನಿರ್ವಾಹಕ್ಕಾಗಿ ಆ ಐಕ್ಯವ್ಯವಹಾರ ನಿಮಿತ್ತಗಳಾದ ಕಾರಣಗಳನ್ನು ಶಾಸ್ತ್ರಕಾರರು ಗೊತ್ತುಮಾಡಿರುವರು. ಅವು ಯಾವುವೆಂದರೆ—

ಅವಿರೋಧಾಂತರಂಗತ್ವ ಜಾತಿ ಭೋಗಾದ್ಯಭೇದತಃ ।
ಐಕ್ಯೋಕ್ತಿರಪೃಥಕ್ಸಿದ್ಧೇಃ ದೇಶಕಾಲ ದಶಾದಿಭಿಃ ॥

ಅವಿರೋಧ—(ರಾಜಾನಸ್ಸರ್ವೇ ಏಕೀಭೂತಾಃ) ರಾಜರೆಲ್ಲರೂ ಒಂದಾದರು ಎಂದರೆ ವಿರೋಧವಿಲ್ಲದೆ ಐಕಮತ್ಯದಿಂದ ಒಟ್ಟುಗೂಡಿದರು ಎಂದರ್ಥ. ಇಲ್ಲಿ ಅವಿರೋಧವು ಐಕ್ಯವ್ಯವಹಾರಹೇತುವಾಗಿರುವುದು. ಅಂತರಂಗತ್ವ—(ರಾಮಸುಗ್ರೀವಯೋರೈಕ್ಯಂ ದೇವ್ಯೇವಂ ಸಮಜಾಯತ) ರಾಮಸುಗ್ರೀವರಿಗೆ ಇಷ್ಟೊಂದು ಐಕ್ಯವಾಯಿತು, ಎಂದರೆ ಗಾಢಸ್ನೇಹವು ಬೆಳೆಯಿತು. ಇಲ್ಲಿ ಅಂತರಂಗತ್ವವು ಐಕ್ಯಹೇತು. ಜಾತ್ಯಭೇದ—ಈ ರಾಶಿಯ ಭತ್ತವೂ ಆ ರಾಶಿಯ ಭತ್ತವೂ ಒಂದೇ ಇವೆರಡು ಭತ್ತದ ಜಾತಿಯೂ ಒಂದೇ ಎಂದರ್ಥ. ಭೋಗಸಾಮ್ಯ—(ಬ್ರಹ್ಮವೇದ

ಬ್ರಹ್ಮೈವ ಭವತಿ) ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುವನು. ಇವರಿಬ್ಬರಿಗೂ ಸಮಾನವಾದ ಭೋಗವುಂಟಾಗುವುದು ಎಂದರ್ಥ. ಇಲ್ಲಿ ಭೋಗಸಾಮ್ಯವು ಐಕ್ಯವ್ಯವಹಾರ ಹೇತುವಾಗಿರುವುದು. ಅಪೃಥಕ್ಸಿದ್ಧಿ—ಸರ್ವದೇಶ, ಸರ್ವಕಾಲ, ಸರ್ವಾವಸ್ಥೆಗಳಲ್ಲಿಯೂ ಎರಡು ವಸ್ತುಗಳಿಗೆ ಅಪೃಥಕ್ಸಿದ್ಧಿ ಸಂಬಂಧವಿದ್ದರೆ ಅವುಗಳಿಗೆ ಸ್ವರೂಪಭೇದವಿದ್ದರೂ ಐಕ್ಯವ್ಯವಹಾರವುಂಟು. ಈ ಜಗತ್ತಿನಲ್ಲಿರುವ ಸರ್ವವಸ್ತುಗಳೂ ಬ್ರಹ್ಮವೇ: ಎಂದರೆ—ಸರ್ವಪದಾರ್ಥಗಳೂ ಯಾವಾಗಲೂ ಬ್ರಹ್ಮಾಪೃಥಕ್ಸಿದ್ಧ ವಿಶೇಷಣಗಳಾಗಿ ಪರಬ್ರಹ್ಮ ಶರೀರಗಳಾಗಿಯೇ ಇರುವುವು ಎಂದರ್ಥ.

ಈ ಅವಿರೋಧ, ಅಂತರಂಗತ್ವ, ಜಾತ್ಯಭೇದ, ಭೋಗಸಾಮ್ಯ, ಅಪೃಥಕ್ಸಿದ್ಧಿ ಇವುಗಳೆಲ್ಲವೂ ವಸ್ತುಗಳಿಗೆ ಸ್ವರೂಪಭೇದವಿದ್ದರೂ ಐಕ್ಯವ್ಯವಹಾರಕ್ಕೆ ಕಾರಣಗಳಾಗಿರುವುವು.

೬೭. ವಿಶಿಷ್ಟಾದ್ವೈತಸಿದ್ಧಾಂತ ಪ್ರಮೇಯವಿವರಣ

ಈ ಪ್ರಪಂಚವು ತನ್ನ ಉತ್ಪತ್ತಿಯಲ್ಲಿಯೂ ಸ್ಥಿತಿಯಲ್ಲಿಯೂ ಸಕಲವಿಧವಾದ ಪ್ರವೃತ್ತಿಗಳಲ್ಲಿಯೂ ಪ್ರಳಯದಲ್ಲಿಯೂ ಸರ್ವೇಶ್ವರಾಧೀನವಾಗಿ ಅವನ ನಿಯಮನಕ್ಕೆ ಒಳಪಟ್ಟು ಶೇಷವಾಗಿ ಇರುವುದು. ಸರ್ವೇಶ್ವರನು ಈ ಪ್ರಪಂಚದ ಉತ್ಪತ್ತಿ, ಸ್ಥಿತಿ, ಲಯ, ವ್ಯಾಪನ ಇವುಗಳಲ್ಲಿ ಸರ್ವಪ್ರಕಾರಗಳಿಂದಲೂ ನಿಯಾಮಕನಾಗಿ ಸ್ವತಂತ್ರನಾಗಿರುವನು. ಪರಮಾತ್ಮನು ಸರ್ವಜ್ಞನಾಗಿಯೂ ಸರ್ವಶಕ್ತನಾಗಿಯೂ, ಈ ಪ್ರಪಂಚವು ಅಚಿದಂಶದಲ್ಲಿ ಅಜ್ಞವಾಗಿಯೂ, ಚಿದಂಶದಲ್ಲಿ ಅಸ್ವತಂತ್ರವಾಗಿಯೂ ಇರುವ ಕಾರಣದಿಂದ, ಚಿತ್, ಅಚಿತ್, ಈಶ್ವರ ಈ ಮೂವರೂ ಹೀಗೆ ಸ್ವರೂಪದಿಂದಲೇ ವಿಲಕ್ಷಣವಾಗಿ ಬೇರೆಬೇರೆಯಾಗಿರುವರು ಎಂಬುದು ಸಿದ್ಧವಾಗಿದೆ. ಆದರೂ ಈ ಪ್ರಪಂಚಪರಮಾತ್ಮರುಗಳಿಗೆ (ಸರ್ವಂ ಖಲ್ವಿದಂ ಬ್ರಹ್ಮ, ಅಯಮಾತ್ಮಾಬ್ರಹ್ಮ ಎಂಬ) ಅಭೇದಶ್ರುತ್ಯನುಸಾರವಾಗಿ, ಒಂದಾನೊಂದು ಆಕಾರದಿಂದ ಅಭೇದವನ್ನು ಒಪ್ಪಿ ಹೇಳಲೇಬೇಕಾಗಿದೆ. ಆ ಆಕಾರವು ಯಾವುದು ಎಂದು ವಿಚಾರಮಾಡಿದರೆ—ಸ್ವರೂಪೈಕ್ಯವಲ್ಲ ಎಂಬುದು ಭೇದಶ್ರುತಿವಾಕ್ಯಗಳಿಂದ ಕಂಠೋಕ್ತವಾಗಿಯೇ ಸಿದ್ಧವಾಗಿದೆ. ಆದುದರಿಂದ ಸ್ವರೂಪಭೇದವಿದ್ದರೂ ಐಕ್ಯವ್ಯವಹಾರಹೇತುಗಳು ಎಂದು ಹಿಂದೆ ಹೇಳಿದ ಕಾರಣಗಳಲ್ಲಿ ಒಂದಾದ ಅಪೃಥಕ್ಸಿದ್ಧವಿಶೇಷಣತ್ವರೂಪವಾದ ಶರೀರ ಶರೀರಿಭಾವದಿಂದಲೇ ಹೇಳಬೇಕೆಂಬುದು (ಯಸ್ಯಾತ್ಮಾ ಶರೀರಂ, ಯಸ್ಯ ಪೃಥಿವೀ ಶರೀರಂ ಇತ್ಯಾದಿ) ಶ್ರುತಿನ್ಯಾಯಾನುಸಾರವಾಗಿಯೂ ಭಾಷ್ಯಕಾರಾಭಿಮತವಾಗಿಯೂ ಇರುವುದು.

ಅಚಿತ್ಪ್ರಕರಣದಲ್ಲಿ ಹಿಂದೆ ಹೇಳಿದ (ಪುಟ ೫೫) ಶರೀರಲಕ್ಷಣಗಳಲ್ಲಿ, "ಕರ ಪಾದಾದಿಯುಕ್ತಂ ಶರೀರಂ, ಚೇಷ್ಟಾಶ್ರಯಶ್ಶರೀರಂ, ಭೋಗಾಯತನಂ ಶರೀರಂ" ಇತ್ಯಾದಿಯಾಗಿ ನೈಯಾಯಿಕಾದಿಗಳು ಹೇಳಿರುವ ಶರೀರಲಕ್ಷಣಗಳು ಅವ್ಯಾಪ್ತ್ಯಾದಿ ದೋಷದುಷ್ಟವಾದುದರಿಂದ ಶ್ರುತಿಸ್ಮೃತ್ಯಾದಿ ಸರ್ವಪ್ರಯೋಗಾನುಗುಣವಾ ಗಿಯೂ ಶ್ರುತ್ಯಾದಿ ಸಿದ್ಧವಾಗಿಯೂ ಇರುವ ಲಕ್ಷಣವನ್ನೇ ಶರೀರಲಕ್ಷಣವೆಂದು ಹೇಳಬೇಕಾಗಿರುವುದು. ಅದು ಅಂತಃಪ್ರವಿಷ್ಟ ಪುರುಷ ನಿಯಾಮ್ಯತ್ವಂ ಎಂದು ಹಿಂದಿಯೇ ತಿಳಿಸಿದ್ದೇವೆ. ಅದರಂತೆ ಶ್ರುತಿಸಿದ್ಧವಾದ ಶರೀರಲಕ್ಷಣವು ಸರ್ವಾಂಶದಲ್ಲಿಯೂ ನಾರಾಯಣನಿಗೆ ಆಧೇಯ ವಿಧೇಯ ಶೇಷವಾಗಿರುವ ಈ ಪ್ರಪಂಚದಲ್ಲಿ ಸಮನ್ವಿತವಾಗಿರುವುದರಿಂದ, ಈ ಪ್ರಪಂಚವು ನಾರಾಯಣನಿಗೆ ಶರೀರವಾಗಿಯೂ, ಈ ಪ್ರಪಂಚಕ್ಕೆ ನಾರಾಯಣನು ಅಂತರ್ಯಾಮಿಯಾಗಿಯೂ ಶರೀರಿಯಾಗಿಯೂ ಇದ್ದಾನೆಂದು ಸ್ಥಿರವಾಯಿತು.

ಲೋಕದಲ್ಲಿ ಮನುಷ್ಯ, ಪಶು, ಪಕ್ಷಿ ಮುಂತಾದ ವ್ಯವಹಾರಗಳಲ್ಲಿ ಶರೀರ ವಾಚಕಶಬ್ದದಿಂದ ಶರೀರಿಯನ್ನು ಹೇಳುವುದು ರೂಢವಾಗಿ ಸುಪ್ರಸಿದ್ಧವಾಗಿರುವು ದರಿಂದ ವೇದಾಂತವಾಕ್ಯಗಳು ಕೆಲವುಕಡೆ ಪರಬ್ರಹ್ಮನಿರೂಪಣ ಪ್ರಕರಣಗಳಲ್ಲಿ (ಸರ್ವಂ ಖಲ್ವಿದಂ ಬ್ರಹ್ಮ, ಅಯಮಾತ್ಮಾ ಬ್ರಹ್ಮ) ಪರಬ್ರಹ್ಮನು ಈ ಜಗತ್ತಿಗೆ ಶರೀರಿಯಾಗಿರುವುದರಿಂದ ಈ ಜಗತ್ತೆಲ್ಲವೂ ಪರಬ್ರಹ್ಮನೊಬ್ಬನೇ ಅಲ್ಲದೆ ಬೇರೆ ಅಲ್ಲ ಎಂದು ಹೇಳಿರುವುವು. ಈ ವೇದಾಂತವಾಕ್ಯಗಳ ತತ್ತ್ವಾರ್ಥವನ್ನು ತಿಳಿಯದೆ ಭ್ರಮಿಸಿ ಜಗತ್ತಿಗೂ ಪರಮಾತ್ಮನಿಗೂ ಸ್ವರೂಪಭೇದವಿಲ್ಲ ಎಂದೂ, ಸ್ವರೂಪೈ ಕ್ಯವೇ ಇರುವುದು ಎಂದೂ ಶುದ್ಧಾದ್ವೈತಿಗಳು ಹೇಳುವರು. ಅಲ್ಲದೆ "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಸಾಮಾನಾಧಿಕರಣ್ಯ ನಿರ್ವಾಹಕಕ್ಕಾಗಿ "ಬ್ರಹ್ಮವೊಂದೇ ಸತ್ಯ, ಮಿಕ್ಕುದೆಲ್ಲವೂ ಮಾಯಾಕಲ್ಪಿತ, ಮಿಥ್ಯಾ" ಎಂದು ಸರ್ವಾಪಲಾಪಮಾಡು ವರು. ಅವರು ಹೇಳುವ ಮಾತುಗಳೆಲ್ಲವೂ ಶಾಸ್ತ್ರನ್ಯಾಯವಿರುದ್ಧಗಳಾಗಿರುವುವು. ಹೀಗೆ ಶಾಸ್ತ್ರವಿರುದ್ಧವಾಗಿದ್ದರೂ ಇದನ್ನು ತಾವೂ ತಿಳಿದಿದ್ದರೂ ಅನೇಕರು ಈ ಪಕ್ಷವನ್ನೇ ಅಂಗೀಕರಿಸಿರುವರು. ವೇದತತ್ತ್ವಾರ್ಥವನ್ನು ತಿಳಿದ ಮಹಾತ್ಮರು ಸಕಲ ವೇದಶಾಸ್ತ್ರಾನುಗುಣವಾಗಿಯೂ ಯುಕ್ತಿಯುಕ್ತವಾಗಿಯೂ ಇರುವ ವಿಶಿಷ್ಟಾ ದ್ವೈತಮತವನ್ನೇ ಅಂಗೀಕರಿಸಿರುವರು ಈ ಸಿದ್ಧಾಂತದಿಂದಲೇ ಸಕಲ ಶಾಸ್ತ್ರ ಸಮನ್ವಯವೂ ಆಗುವುದು.

"ಎಲ್ಲಾ ಒಂದೇ ತತ್ತ್ವ" ಎಂಬುದು ಹೇಗೆಂದರೆ- ಯಾವನಾದರೂ ಒಬ್ಬನ ಶರೀರದಲ್ಲಿಯೇ ಪೃಥಿವ್ಯಾದಿಗಳಾದ ಇಪ್ಪತ್ತುನಾಲ್ಕು ತತ್ತ್ವಗಳೂ ಜೀವಾತ್ಮನೂ ಅಂತರ್ಯಾಮಿಯಾದ ಸರ್ವೇಶ್ವರನೂ ಸೇರಿ ಇಪ್ಪತ್ತಾರು ತತ್ತ್ವಗಳು ನೆಲೆಸಿದ್ದರೂ

'ಮನುಷ್ಯನೊಬ್ಬನಿರುತ್ತಾನೆ' ಎಂದು ವಿಶಿಷ್ಟೈಕ್ಯಬುದ್ಧಿ*ಯಿಂದ ಹೇಳುವಂತೆ, ಈ ಚೇತನಾಚೇತನಗಳೆಲ್ಲವೂ ಬೇರೆ ಬೇರೆಯಾಗಿದ್ದರೂ ಸರ್ವೇಶ್ವರನ ಶರೀರವಾಗಿರುವುದರಿಂದ ವಿಶಿಷ್ಟೈಕ್ಯಬುದ್ಧಿಯಿಂದ ಪರಮಾತ್ಮನೊಬ್ಬನೇ ಎಂದು ಹೇಳುವ ವಿಶಿಷ್ಟಾದ್ವೈತವು ಯುಕ್ತತಮವಾಗಿರುವುದು. ಈ ರೀತಿಯಾಗಿ ಶರೀರಾತ್ಮಭಾವದಿಂದ ಪ್ರಪಂಚಕ್ಕೂ ಪರಬ್ರಹ್ಮಕ್ಕೂ ಅಭೇದಬೋಧಕ ಸಾಮಾನಾಧಿಕರಣ್ಯವು† 'ನಾನು ದೇವನು, ನಾನು ಬ್ರಾಹ್ಮಣನು' ಎಂಬಂತೆ ಲೋಕರೀತಿಯಿಂದಲೂ ವೇದಮರ್ಯಾದೆಯಿಂದಲೂ ಸಂಭವಿಸಿಯೂ ಸಂಗತವಾಗಿಯೂ ಇರುವಲ್ಲಿ ಬಾಧ, ಉಪಚಾರ [illegible]ಾಧಿಕರಣ್ಯವನ್ನು ನಿರ್ವಹಿಸುವ ಪಕ್ಷಗಳೆಲ್ಲವೂ ತ್ಯಾಜ್ಯಗಳಾಗಿರುವುವು.

೬೮. ಈ ವಿಶಿಷ್ಟಾದ್ವೈತಸಿದ್ಧಾಂತವೊಂದನ್ನು ಹೊರತು ಮಿಕ್ಕ ಯಾವ ಸಿದ್ಧಾಂತದಲ್ಲಿಯೂ ಸಕಲ ಶ್ರುತಿಗಳಿಗೂ ಸಾಮಂಜಸ್ಯವು ಇಲ್ಲವೇ ಇಲ್ಲ. ಹೇಗೆಂದರೆ—

(೧) ಸಾಂಖ್ಯಮತದಲ್ಲಿ ಈಶ್ವರನನ್ನೇ ಅಂಗೀಕರಿಸಿಲ್ಲವಾದುದರಿಂದ ಸರ್ವೇಶ್ವರನನ್ನೂ ಅವನ ಸ್ವರೂಪ ಗುಣ ವಿಭವಗಳನ್ನೂ ಹೇಳುವ ಸರ್ವ ಶ್ರುತಿಗಳೂ ವಿರುದ್ಧವಾಗಿ ನಿರರ್ಥಕವಾಗುವುವು. (೨) ಯೋಗಸಿದ್ಧಾಂತದಲ್ಲಿ ಈಶ್ವರನನ್ನು ನಿಮಿತ್ತಕಾರಣ ಮಾತ್ರವಾಗಿ ಅಂಗೀಕರಿಸಿರುವುದರಿಂದ ಸರ್ವೇಶ್ವರನಿಗೆ ತ್ರಿವಿಧ ಕಾರಣತ್ವವೂ ಉಂಟೆಂದು ಹೇಳುವ ಶ್ರುತಿಗಳೆಲ್ಲವೂ ವಿರುದ್ಧಗಳಾಗುವುವು. (೩-೪) ನ್ಯಾಯವೈಶೇಷಿಕಮತಗಳಲ್ಲಿಯೂ ಯೋಗಸಿದ್ಧಾಂತದಂತೆಯೇ ಸರ್ವೇಶ್ವರನಿಗೆ ಉಪಾದಾನತ್ವವನ್ನು ಹೇಳುವ ಶ್ರುತಿಗಳ ವಿರೋಧಾದಿಗಳು ಇದ್ದೇ ಇರುವುವು. (೫) ಶುದ್ಧಾದ್ವೈತಮತದಲ್ಲಿ ಅಭೇದಶ್ರುತಿಯೊಂದು ಮಾತ್ರ ಕಥಂಚಿತ್ ಸಂಗತವಾಗಬಹುದಾದರೂ ಮಿಕ್ಕ ಭೇದಶ್ರುತಿ ಮುಂತಾದ ಸರ್ವ ಶ್ರುತಿಗಳೂ ವಿರುದ್ಧಗಳಾಗಿ ನಿರರ್ಥಕವಾಗುವುದರಿಂದ ಸಂಗತವಾಗಲಾರವು. ನಿರ್ವಿಶೇಷ ವಸ್ತುವಿಗೆ ಅವಿದ್ಯೆಯಿಂದ ತಿರೋಧಾನವೆಂದರೆ ಬ್ರಹ್ಮಕ್ಕೆ ಸ್ವರೂಪಹಾನಿಯೇ ಬಂದಂತೆ ಆಗುವುದು. ಜ್ಞಾನಸ್ವರೂಪವಾದ ಬ್ರಹ್ಮಕ್ಕೆ ಪ್ರಪಂಚಭ್ರಮವೆಂಬುದೂ, ಬ್ರಹ್ಮಕ್ಕೆ ವಸ್ತುಪರಿಚ್ಛೇದವು ಇಲ್ಲವೆಂಬುದೂ, ಸಾಮಾನಾಧಿಕರಣ್ಯವೂ ಬಂಧಮೋಕ್ಷವ್ಯವಸ್ಥೆಯೂ ಸಂಗತವಾಗಲಾರವು. (೬-೭) ಹೀಗೆಯೇ ಶುದ್ಧಾದ್ವೈತಮತವನ್ನು ತಾವೂ ಖಂಡಿಸಿದ್ದರೂ, ಸಯೂಥ್ಯರಾದ (ಒಂದೇ ಗುಂಪಿಗೆ

* ಒಟ್ಟಿನಲ್ಲಿ ನೋಡಿದರೆ ಒಂದು ಎಂಬ ತೋರಿಕೆ.

† ಸಾಮಾನಾಧಿಕರಣ್ಯ = ಬೇರೆ ಬೇರೆ ವಿಶೇಷಣಗಳೊಡನೆ ಕೂಡಿದ ವಿಶೇಷ್ಯವು ಒಂದೇ ಎಂದು ಸಮಾನವಿಭಕ್ತಿಯಿಂದ ತೋರಿಸುವಿಕೆ.

ಸೇರಿದ) ಯಾದವಪ್ರಕಾಶ, ಭಾಸ್ಕರ ಇವರ ಮತಗಳಲ್ಲಿಯೂ ಈ ಶಾಂಕರಮತದಲ್ಲಿ ಇರುವಂತೆಯೇ ಸಾಮಾನಾಧಿಕರಣ್ಯವೆಂಬುದು ಸರ್ವತ್ರ ಏಕರೂಪವಾಗಿ ಸಂಗತವಾಗುವುದಿಲ್ಲ. (೮) ದ್ವೈತಮತದಲ್ಲಿ ಭೇದಶ್ರುತಿಯೊಂದುಮಾತ್ರ ಸಂಗತವಾಗಬಹುದಾದರೂ ಅಭೇದಶ್ರುತಿ, ಘಟಕಶ್ರುತಿ, ಭೇದನಿಷೇಧಶ್ರುತಿ ಇವು ಯಾವುವೂ ಸಂಗತವಲ್ಲದೆ ವಿರುದ್ಧವಾಗುವುವು. (೯) ಮೀಮಾಂಸಕಮತದಲ್ಲಿ ಸೃಷ್ಟಿಪ್ರಳಯಗಳು, ಈಶ್ವರ, ಅವನ ಸ್ವರೂಪ ಗುಣವಿಭವಗಳು ಇವು ಒಂದನ್ನೂ ಅಂಗೀಕರಿಸಿಲ್ಲವಾದುದರಿಂದ ಇವುಗಳೆಲ್ಲವನ್ನೂ ಹೇಳುವ ಶ್ರುತಿವಾಕ್ಯಸಮೂಹಗಳೇ ವಿರೋಧಿಗಳಾಗಿರುವುವು.

ಆದುದರಿಂದ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣ ಮೊದಲಾದ ಸಕಲ ಶಾಸ್ತ್ರಗಳಿಗೂ ಐಕಮತ್ಯ ಸಾರಸ್ಯ ಸಾಮರಸ್ಯಗಳನ್ನು ಅಪೇಕ್ಷಿಸುವವರಿಗೆ ವಿಶಿಷ್ಟಾದ್ವೈತ ಸಿದ್ಧಾಂತವೇ ಆಶ್ರಯಸ್ಥಳವಾಗಿರುವುದು. ಮೇಲೆ ತೋರಿಸಿದ ದೋಷಗಳೊಂದೂ ಇಲ್ಲದೆ ನಿರ್ದುಷ್ಟವಾಗಿಯೂ ಸೂತ್ರಕಾರ ಹೃದಯಾನುಗುಣವಾಗಿಯೂ ಸೂತ್ರಕಾರರ ಸಾಕ್ಷಾತ್ ಶಿಷ್ಯರಾಗಿ ಆ ಸೂತ್ರಕ್ಕೆ ಭಾಷ್ಯವು ಮಾಡಿದ ಭಗವದ್ಬೋಧಾಯನರು ಮಾಡಿದ ವೃತ್ತಿಗ್ರಂಥಾನುಸಾರಿಯಾಗಿಯೂ ಇರುವ ಈ ಭಗವದ್ರಾಮಾನುಜಸಿದ್ಧಾಂತವೇ ಅನಾದ್ಯವಿಚ್ಛಿನ್ನಗುರುಪರಂಪರಾಪ್ರಾಪ್ತವಾಗಿ ಸರ್ವೋಜ್ಜೀವನಹೇತುವಾಗಿರುವುದು.

೬೯. ಅಶೇಷ ಚಿದಚಿದ್ವಿಶಿಷ್ಟನಾದ ನಾರಾಯಣನೇ ತತ್ತ್ವ.

"ನಾರಾಯಣಃ ಪರಂ ಬ್ರಹ್ಮ ತತ್ತ್ವಂ ನಾರಾಯಣಃ ಪರಃ'
'ತತ್ತ್ವಂ ಜಿಜ್ಞಾಸಮಾನಾನಾಂ ಹೇತುಭಿಸ್ಸರ್ವತೋಮುಖೈಃ
ತತ್ತ್ವಮೇಕೋ ಮಹಾಯೋಗೀ ಹರಿರ್ನಾರಾಯಣಃ ಪರಃ"

ಎಂಬಂತೆ ಅಶೇಷ ಚಿದಚಿದ್ವಿಶಿಷ್ಟನಾದ* ನಾರಾಯಣನೊಬ್ಬನೇ ತತ್ತ್ವ—ಎಂಬುದು ಸಕಲ ವೇದ ಶಾಸ್ತ್ರ ಸ್ಮೃತೀತಿಹಾಸ ಪುರಾಣಗಳ ಸಿದ್ಧಾಂತಸಾರವಾಗಿರುವುದು. ಇದೇ ವಿಶಿಷ್ಟಾದ್ವೈತಸಿದ್ಧಾಂತ† ಎಂಬುದು.

---

* ಚಿತಶ್ಚ ಅಚಿತಶ್ಚ ಚಿದಚಿತಃ; ಅಶೇಷಾಶ್ಚ ತೇ ಚಿದಚಿತಶ್ಚ ಅಶೇಷಚಿದಚಿತಃ; ಅಶೇಷ ಚಿದಚಿದ್ಭಿಃ ವಿಶಿಷ್ಟಂ ಅಶೇಷಚಿದಚಿದ್ವಿಶಿಷ್ಟಂ. ದ್ವಯೋಃ ಭಾವಃ ದ್ವಿತಾ, ದ್ವಿತೈವ ದ್ವೈತಂ (ಭೇದಃ); ನ ದ್ವೈತಂ ಅದ್ವೈತಂ (ಅಭೇದಃ); ವಿಶಿಷ್ಟಸ್ಯ ಅದ್ವೈತಂ ವಿಶಿಷ್ಟಾದ್ವೈತಂ ಸ್ವಸ್ಮಿಂಶ್ಚ ಸಮಸ್ತಚೇತನಾಚೇತನವಿಶಿಷ್ಟಂ ಬ್ರಹ್ಮ ಏಕಮೇವ ತತ್ತ್ವಂ-ಇತ್ಯರ್ಥಃ.

† ದ್ವಯೋಃ ಭಾವಃ ದ್ವಿತಾ (ಭೇದಃ); ದ್ವಿತಾಯಾಃ ಇದಂ ದ್ವೈತಂ, ಭಿನ್ನ ಮಿತ್ಯರ್ಥಃ; ತಸ್ಯೋದಸಿತ್ಯಾಹ್. ನ ವಿದ್ಯತೇ ದ್ವೈತಂ ಯಸ್ಮಾತ್ ತತ್ ಅದ್ವೈತಂ, ಸ್ವಸ್ಮಾತ್ ಸ್ವಸಮಾನಾಧಿಕಸ್ಯ

ವಿಶಿಷ್ಟಾದ್ವೈತ ಶಬ್ದಾರ್ಥವಿವರಣ

ವಿಶಿಷ್ಟ ಎಂದರೆ ವಿಶೇಷಣಗಳೊಡನೆ ಕೂಡಿದ ವಿಶೇಷ್ಯವು; ಅದ್ವೈತ ಎಂದರೆ ಅಭೇದ, ಐಕ್ಯ; ವಿಶಿಷ್ಟದ ಅದ್ವೈತ ಎಂದರೆ (ವಿಶೇಷ್ಯದ ಏಕತ್ವ) ವಿಶೇಷ್ಯವು ಒಂದೇ ಆಗಿರುವಿಕೆ ಎಂದು ಅರ್ಥ. ಇಲ್ಲಿ ಚಿತ್, ಅಚಿತ್ ಎಂಬ ಪದಾರ್ಥಗಳು ವಿಶೇಷಣಗಳಾಗಿಯೂ, ಇವುಗಳೊಡನೆ ಯಾವಾಗಲೂ ಸೇರಿಕೊಂಡೇ ಇರುವ ನಾರಾಯಣನು ವಿಶೇಷ್ಯವಾಗಿಯೂ, ಅಂಥ ಚಿದಚಿದ್ವಿಶಿಷ್ಟವಾದ ವಿಶೇಷ್ಯವು ಮತ್ತೊಂದು ಇಲ್ಲವಾದುದರಿಂದ ವಿಶೇಷ್ಯವು ಏಕನಾಗಿಯೂ ಇರುವ ಕಾರಣದಿಂದ ಈ ಸಿದ್ಧಾಂತವು ವಿಶಿಷ್ಟಾದ್ವೈತಸಿದ್ಧಾಂತ ಎನಿಸಿಕೊಂಡಿರುವುದು.

ಇಲ್ಲಿ ಅಶೇಷಚಿದಚಿದ್ವಿಶಿಷ್ಟ ಎಂಬ ಪದದಲ್ಲಿ, ಚಿತ್ತುಗಳೂ ಅಚಿತ್ತುಗಳೂ ಚಿದಚಿತ್ ಎಂಬ ದ್ವಂದ್ವಸಮಾಸದಿಂದ, ಚಿತ್ತುಗಳೂ ಅಚಿತ್ತುಗಳೂ ಸ್ವರೂಪತಃ ಬೇರೆ ಬೇರೆ ಎಂದೂ, ಚಿದಚಿತ್ ಪದದಲ್ಲಿ ಅಶೇಷ ಎಂಬ ಪದವನ್ನು ಪ್ರತ್ಯೇಕವಾಗಿ ಅನ್ವಯಿಸಿ ಇರುವುದರಿಂದ ಚಿತ್ಪದಾರ್ಥಗಳೂ ಅಚಿತ್ಪದಾರ್ಥಗಳೂ ಪ್ರತ್ಯೇಕವಾಗಿ ಅಸಂಖ್ಯಾತಗಳಾಗಿ ಬೇರೆ ಬೇರೆ ಇರುವುವು ಎಂದೂ, ವಿಶಿಷ್ಟಪದಪ್ರಯೋಗದಿಂದ ಚಿದಚಿತ್ ಎಂಬ ವಿಶೇಷಣಗಳಿಗೂ ನಾರಾಯಣ ಎಂಬ ವಿಶೇಷ್ಯಕ್ಕೂ ಸ್ವರೂಪದಿಂದ ಭೇದವಿರುವುದೆಂದೂ ಸಿದ್ಧವಾಯಿತು. ಹೀಗೆ ಐದುವಿಧವಾದ ವಿಶೇಷಣ ವಿಶೇಷ್ಯವಸ್ತುಗಳ ಭೇದಗಳನ್ನು ಒಳಕೊಂಡೇ ಆ ಭೇದಗಳಿಗೆ ವಿರುದ್ಧವಲ್ಲದ ವಿಶೇಷ್ಯೈಕ್ಯವು ಯಾವ ಸಿದ್ಧಾಂತದಲ್ಲಿ ಅಂಗೀಕರಿಸಲ್ಪಟ್ಟಿದೆಯೋ ಆ ಸಿದ್ಧಾಂತವು ವಿಶಿಷ್ಟಾದ್ವೈತಸಿದ್ಧಾಂತ ಎನಿಸಿಕೊಳ್ಳುವುದು. ಈ ಸಿದ್ಧಾಂತದಲ್ಲಿ ಅಶೇಷ ಚಿದಚಿದ್ವಿಶಿಷ್ಟನಾದ ಶ್ರೀಮನ್ನಾರಾಯಣನು ಒಂದೇ ತತ್ತ್ವ ಎಂಬುದೂ ಸಿದ್ಧವಾಯಿತು.

೭೦. ಪ್ರಶ್ನೆ—ಹೀಗೆ ಐದುವಿಧವಾದ ಭೇದಗಳನ್ನು ಅಂಗೀಕರಿಸಿದಮೇಲೆ ವಿಶೇಷಣ ವಿಶೇಷ್ಯಗಳಿಗೆ ಅಭೇದವುಂಟೆಂದು ಹೇಳುವುದು ಹೇಗೆ ಸಂಗತ? ಅಭೇದಶ್ರುತಿಯಲ್ಲಿ ಹೇಳಿದಂತೆ ಚೇತನಾಚೇತನಪ್ರಪಂಚಕ್ಕೂ ಬ್ರಹ್ಮಕ್ಕೂ ಅಭೇದವೆಂಬುದು ಹೇಗೆ ಸಂಗತ? ಅಭೇದ ಶ್ರುತ್ಯಾಶ್ರಯದಿಂದ ಅಭೇದ ಉಂಟೆಂದು ಹೇಳಿದರೆ ಐದುವಿಧ ಭೇದಗಳು ಹೇಗೆ ಸಂಗತ? ಹೀಗೆ ಭೇದಗಳನ್ನು ಒಪ್ಪಿದಮೇಲೆ

ಮಿತ್ಯರ್ಥಃ; ವಿಶಿಷ್ಟಂ ಚ ತತ್ ಅದ್ವೈತಂ ಚ ವಿಶಿಷ್ಟಾದ್ವೈತಂ; ತಥಾ ಚ ಚಿದಚಿದ್ವಿಶಿಷ್ಟಂ ಸ್ವಭಿನ್ನತಾದೃಶವಸ್ತುಶೂನ್ಯಂ ತತ್ತ್ವಮಿತ್ಯರ್ಥಃ. ವಿಶಿಷ್ಟಂ ಚ ವಿಶಿಷ್ಟಂ ಚ ವಿಶಿಷ್ಟೇ; ವಿಶಿಷ್ಟಯೋಃ ಅದ್ವೈತಂ ವಿಶಿಷ್ಟಾದ್ವೈತಂ, ಸ್ಥೂಲ ಚಿದಚಿದ್ವಿಶಿಷ್ಟ ಬ್ರಹ್ಮಸ್ವರೂಪಸ್ಯ, ಸೂಕ್ಷ್ಮ ಚಿದಚಿದ್ವಿಶಿಷ್ಟ ಬ್ರಹ್ಮಸ್ವರೂಪಸ್ಯ ಚ ಅದ್ವೈತಂ.

ಒಂದೇ ತತ್ತ್ವ ಎಂಬುದು ಹೇಗೆ ಸಂಗತ? ಆ ಭೇದಗಳಿಗೆ ವಿರುದ್ಧವಲ್ಲದ ವಿಶಿಷ್ಟೈಕ್ಯವೆಂತು? ಭೇದಾಭೇದಗಳಿಗೆ ವಿರೋಧವಿಲ್ಲದಿರುವುದು ಹೇಗೆ?

ಉತ್ತರ—ಈ ಸಂಶಯಗಳೆಲ್ಲವೂ ಹಿಂದೆ ಹೇಳಿದ ಶ್ರುತಿಗಳ ತಾತ್ಪರ್ಯಗಳನ್ನು ಸಮನ್ವಯಮಾಡಿ ಮನನಮಾಡಿಕೊಂಡವರಿಗೆ ಬರುವುದೇ ಇಲ್ಲ. ಆಪಾತತಃ ಇಂಥ ಸಂಶಯಗಳು ಬಂದರೂ ಆ ಶ್ರುತಿಗಳ ತಾತ್ಪರ್ಯಪರ್ಯಾಲೋಚನೆಯಿಂದ ತಾವೇ ಪರಿಹೃತವಾಗುವುವು. ಇದರ ವಿವರ ಹೇಗೆಂದರೆ—

ಲೋಕದಲ್ಲಿ ವಿಶೇಷಣಗಳು ವಿಶೇಷ್ಯಕ್ಕಿಂತ ಬೇರೆಯಾಗಿ ಇದ್ದೂ ತೋರಲೂ ಬಲ್ಲುವು ಕೆಲವುಂಟು; ಇವು ಒಬ್ಬ ಮನುಷ್ಯನಿಗೆ ದಂಡ ಕುಂಡಲಾದಿ ಪರಿಕರಗಳಂತೆ ಇರುವುವು. ಇವು **ಪೃಥಕ್ಸಿದ್ಧ ವಿಶೇಷಣಗಳು** ಎನಿಸಿಕೊಳ್ಳುವುವು. ಇವುಗಳಿಗೂ ವಿಶೇಷ್ಯಕ್ಕೂ ಯಾವಾಗಲೂ ಭೇದವು ಇದ್ದೇ ಇರುವುದು. ಹಾಗಲ್ಲದೆ ಶರೀರದೊಳಗೇ ಹುದುಗಿಕೊಂಡು, ವಿಶೇಷ್ಯಕ್ಕಿಂತ ಬೇರೆಯಾಗಿ ಇರದೆಯೂ ತೋರದೆಯೂ ಇರುವುವು ಕೆಲವುಂಟು; ಇವು ಆ ಮನುಷ್ಯನ ಜಾತಿ ಗುಣಾದಿಗಳಂತೆ ಇರುವುವು. ಇವು **ಅಪೃಥಕ್ಸಿದ್ಧ ವಿಶೇಷಣಗಳು** ಎನಿಸಿಕೊಂಡಿರುವುವು. ಇವುಗಳಿಗೆ ವಿಶೇಷ್ಯಬಹಿರ್ಭಾವ (ಹೊರಗಾಗಿರುವಿಕೆ) ಇಲ್ಲದಿರುವುದರಿಂದ ಯಾವಾಗಲೂ ವಿಶೇಷ್ಯದೊಡನೆಯೇ ಇದ್ದುಕೊಂಡು ಐಕ್ಯವ್ಯವಹಾರಕ್ಕೆ ಕಾರಣವಾಗಿಯೂ ಇರುವುವು. ಚಿದಚಿಚ್ಛರೀರಕನಾದ ಭಗವಂತನಿಗೆ ಚಿದಚಿತ್ತುಗಳು ಅಪೃಥಕ್ಸಿದ್ಧ ವಿಶೇಷಣಗಳಾಗಿ ಶರೀರಾಂತರ್ಗತವಾಗಿಯೇ ಇರುವುದರಿಂದ ಇಲ್ಲಿ ವಿಶೇಷಣ ವಿಶೇಷ್ಯಾಭೇದವೆಂಬುದು ಸಿದ್ಧವಾಯಿತು. ಆದರೆ ಈ ವಿಶೇಷಣಗಳಿಗೂ ವಿಶೇಷ್ಯಕ್ಕೂ ಸ್ವರೂಪಭೇದವು ಇದ್ದೇ ಇರುವುದು. 'ಆ ಮನುಷ್ಯನು ಒಬ್ಬನು ಬರುತ್ತಾನೆ ನೋಡು' ಎಂಬಲ್ಲಿ ಶರೀರವಿಶಿಷ್ಟಾತ್ಮನು ತೋರಿಬಂದರೂ, ಶರೀರವೇ ಆತ್ಮನಲ್ಲ, ಆತ್ಮನು ಶರೀರಮಾತ್ರವೂ ಅಲ್ಲ ಎಂಬುದು ಸಿದ್ಧವಾಗಿದೆಯಷ್ಟೆ. ಆದರೂ ವಿಶಿಷ್ಟೈಕ್ಯವು ಅನುಭವಸಿದ್ಧವಲ್ಲವೇ? ಹಾಗೆಯೇ 'ಆ ಮನುಷ್ಯನೊಬ್ಬನು ಬರುತ್ತಾನೆ ನೋಡು' ಎಂಬಲ್ಲಿ ಅವಯವಸಮೂಹರೂಪವಾದ ಶರೀರವೂ, ಆ ಶರೀರಕ್ಕೆ ಆತ್ಮನಾದ ಜೀವಾತ್ಮನೂ, ಜೀವಾಂತರ್ಯಾಮಿಯಾದ ಪರಮಾತ್ಮನೂ ಸಹ (ಇಪ್ಪತ್ತಾರು ತತ್ತ್ವಗಳೂ ಸಹ) ಸೇರಿದ್ದರೂ ವಿಶಿಷ್ಟೈಕ್ಯಬುದ್ಧಿಯಿಂದ ಒಬ್ಬ ಮನುಷ್ಯನೆಂದು ತೋರುವನು. ಆದರೂ ಶರೀರ, ಜೀವಾತ್ಮ, ಪರಮಾತ್ಮರುಗಳು ಸ್ವರೂಪತಃ ಅತ್ಯಂತ ಭಿನ್ನರಾಗಿ ವಿಲಕ್ಷಣರಾಗಿಯೇ ಇರುವರು. ವಿಶಿಷ್ಟೈಕ್ಯದಿಂದ ಒಂದೆಂದು ತೋರಿದಮಾತ್ರಕ್ಕೇ ಸ್ವರೂಪಭೇದವೇ ಇಲ್ಲವೆಂದಲ್ಲ. ಆದುದರಿಂದ ಈ ಸ್ವರೂಪಭೇದಗಳನ್ನು ಲಕ್ಷೀಕರಿಸಿ ಐದುವಿಧ ಭೇದಗಳೂ ಸಂಗತವಾಗುವುವು. ಅಪೃಥಕ್ಸಿದ್ಧಿ ಸಂಬಂಧದಿಂದ ವಿಶೇಷಣ ವಿಶೇಷ್ಯಗಳ ಅಭೇದವೂ,

ಚೇತನಾಚೇತನ ಪ್ರಪಂಚಕ್ಕೂ ಬ್ರಹ್ಮಕ್ಕೂ ಶರೀರ ಶರೀರಿಭಾವಸಂಬಂಧವಿರುವು ದರಿಂದ ಅಭೇದವೂ ಸಂಗತವಾಗುವುವು.

ಹೀಗೆ ಒಪ್ಪಿದ ಐದುವಿಧ ಭೇದಗಳೂ ಸ್ವರೂಪವಿಷಯಕವಾಗಿರುವುವು, ಐಕ್ಯವು ವಿಶಿಷ್ಟವಿಷಯಕವಾಗಿರುವುದು, ಆದುದರಿಂದ ಈ ಐದುಭೇದಗಳಿಗೂ ವಿಶಿಷ್ಟೈಕ್ಯದಿಂದ ಬಂದ ಅಭೇದಕ್ಕೂ ವಿಷಯಭೇದವಿರುವುದರಿಂದ ವಿರೋಧವೇ ಇಲ್ಲವಾಗಿ ಸಂಗತವಾಯಿತು. ಸೂಕ್ಷ್ಮಚಿದಚಿದ್ವಿಶಿಷ್ಟವಾದ ಬ್ರಹ್ಮವೇ ಕಾರಣ ಎಂದೂ, ಸ್ಥೂಲಚಿದಚಿದ್ವಿಶಿಷ್ಟಬ್ರಹ್ಮವೇ ಕಾರ್ಯ ಎಂದೂ, ಕಾರಣಕ್ಕಿಂತಲೂ ಕಾರ್ಯವು ಬೇರೆಯಲ್ಲವೆಂದೂ ಆದುದರಿಂದಲೇ ಸಮಸ್ತ ಚಿದಚಿದ್ವಿಶಿಷ್ಟನಾದ ನಾರಾಯಣನೊಬ್ಬನೇ ತತ್ತ್ವ ಎಂದೂ ಈ ವಿಶಿಷ್ಟೈಕ್ಯದಿಂದ ಸಿದ್ಧಿಸಿತು.

ಅಂತರ್ಯಾಮಿ ಬ್ರಾಹ್ಮಣಾದಿ ಘಟಕಶ್ರುತಿಗಳು 'ಅಪೃಥಕ್ಸಿದ್ಧವಾದ ಪ್ರಕಾರ ಗಳಿಂದ ವಿಶಿಷ್ಟವಾದ ಪ್ರಕಾರಿ ಒಂದು' ಎಂದು ವಿಶಿಷ್ಟೈಕ್ಯವನ್ನು ಹೇಳಿ, ಪ್ರಕಾರ ಪ್ರಕಾರಿಭಾವದಿಂದ ಸ್ವರೂಪತಃ ಭೇದವನ್ನೂ ವಿಶಿಷ್ಟವೇಷದಿಂದ ಐಕ್ಯವನ್ನೂ ಬೋಧಿಸುತ್ತ ಮೇಲೆಹೇಳಿದ ಆಕ್ಷೇಪಗಳನ್ನೆಲ್ಲಾ ಪರಿಹರಿಸಿಯೇ ಇರುವುವು.

೭೧. ಪ್ರಶ್ನೆ—ಶುದ್ಧಾದ್ವೈತಮತದಲ್ಲಿಯೂ ವಿಶಿಷ್ಟಾದ್ವೈತಮತದಲ್ಲಿಯೂ ಅದ್ವೈತವೇ ತತ್ತ್ವವೆಂಬುದು ಸಮಾನವಾಗಿದೆ. ಆದರೆ ವಿಶಿಷ್ಟಾದ್ವೈತಮತದಲ್ಲಿ ಈ ಅದ್ವೈತವನ್ನು ತಿಳಿಯಲು ತೊಡಕು ಹೆಚ್ಚು. ಶುದ್ಧಾದ್ವೈತದಲ್ಲಿ ಹೇಳುವಂತೆ ಸ್ವರೂಪಾದ್ವೈತವನ್ನು ಹೇಳಿದರೆ ಬಾಧಕವೇನು? ಅಂಥ ಅದ್ವೈತವನ್ನೂ ಸಂಗತ ವೆಂದೇ ಲಕ್ಷಾಧಿಕಜನರು ನಂಬಿ ಪ್ರಚಾರದಲ್ಲಿ ತಂದಿಲ್ಲವೇ?

ಉತ್ತರ—ತಮ್ಮ ಪೂರ್ವಿಕರು ಹೀಗೆ ಹೇಳಿದರೆಂದು ಲಕ್ಷಾಧಿಕಜನರು ನಂಬಿದ ಮಾತ್ರದಿಂದಲೇ ಶಾಸ್ತ್ರವಾಕ್ಯ ಪ್ರಮಾಣಗಳ ವಿರೋಧವು ತಪ್ಪುವುದೇ? ಅವುಗಳಿಗೆ ಪೂರ್ವಾಪರವಿರೋಧಗಳೂ ಶಾಸ್ತ್ರಾಂತರವಿರೋಧಗಳೂ ಬಾರದಂತೆ ಸಮನ್ವಯಿಸಿ ಅವಿಚಾಲ್ಯವಾಗಿ ಸ್ಥಿರೀಕರಿಸಿದ ಸಿದ್ಧಾಂತವೇ ನಂಬತಕ್ಕದಾಗಿದೆ. ಮಿಕ್ಕವು ಅಯಥಾರ್ಥ—ಎಂದು ತಿಳಿಯಬೇಕು. "ಸರ್ವಂ ಖಲ್ವಿದಂ ಬ್ರಹ್ಮ, ನೇಹ ನಾನಾಸ್ತಿ ಕಿಂಚನ ಸದೇವ ಸೋಮ್ಯೇದಮಗ್ರ ಆಸೀತ್, ಏಕಮೇವಾ ದ್ವಿತೀಯಂ" ಇತ್ಯಾದಿಗಳು ಅಭೇದಶ್ರುತಿಗಳು. ಇವುಗಳಿಗೆ ಅದ್ವೈತಿಗಳಲ್ಲಿ ಕೆಲವರು 'ಪರಬ್ರಹ್ಮವೊಂದೇ ಸತ್ಯ, ಈ ಪ್ರಪಂಚವೆಲ್ಲಾ ಮಿಥ್ಯೆ, ಇವು ಜೀವ ಪರಮಾತ್ಮರ ಸ್ವರೂಪೈಕ್ಯವನ್ನು ಹೇಳುವುವು' ಎಂದು ಹೇಳುವರು. ಮತ್ತೆ ಕೆಲವರು 'ಆ ಬ್ರಹ್ಮವೇ ಸತ್ಯೋಪಾಧಿಮಿಶ್ರವಾಗಿ ಭ್ರಾಂತವಾಗಿರುವುದು'

ಎನ್ನುವರು. ಇನ್ನು ಕೆಲವರು 'ಆ ಪರಬ್ರಹ್ಮವೇ ಚಿದಚಿದೀಶ್ವರಾತ್ಮಕವಾದ ಪ್ರಪಂಚವಾಗಿ ಭ್ರಮಿಸುವುದು' ಎಂದು ಹೇಳುವರು. ಹೀಗೆ ಜೀವಪರಮಾತ್ಮರ ಸ್ವರೂಪೈಕ್ಯವೇ ಅಭೇದಶ್ರುತಿಯ ಪರಮಾರ್ಥ ಎಂದು ಹೇಳಿದರೆ, ಅದಕ್ಕೆ ಜೀವಪರಮಾತ್ಮರಿಗೆ ಬಂಧದಶೆಯಲ್ಲಿಯೂ ಮೋಕ್ಷದಶೆಯಲ್ಲಿಯೂ ಸ್ವರೂಪಭೇದವು ಉಂಟು ಎಂದು ಹೇಳುವ (ದ್ವಾಸುಪರ್ಣಾ, ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ, ನಿತ್ಯೋ ನಿತ್ಯಾನಾಂ ಇತ್ಯಾದಿ) ನೂರಾರು ಭೇದಶ್ರುತಿಗಳೊಡನೆ ವಿರೋಧಬರುವುದು. ಅಲ್ಲದೆ ಆ ಬ್ರಹ್ಮವು ತಾನೇ ಅಜ್ಞಾನದಿಂದ ಸಂಸಾರವನ್ನು ಪಡೆವುದು, ಆ ಸಂಸಾರ ನಿವೃತ್ತಿಯೂ ಆ ಬ್ರಹ್ಮಜ್ಞಾನದಿಂದಲೇ ಉಂಟಾಗ ಬೇಕು ಎಂಬ ಹೇಳಿಕೆ—(ಯಸ್ಸರ್ವಜ್ಞಸ್ಸರ್ವವಿತ್ ಆನಂದೋಬ್ರಹ್ಮ, ಏಷಹ್ಯೇವಾನಂದಯಾತಿ) ಪರಬ್ರಹ್ಮನು ಸರ್ವಜ್ಞ, ಸರ್ವಶಕ್ತ, ಅನಂತ ಕಲ್ಯಾಣ ಗುಣಾಕರ, ನಿರತಿಶಯಾನಂದಯುಕ್ತ, ತನ್ನನ್ನು ಆಶ್ರಯಿಸಿದವರನ್ನು ಆನಂದ ಗೊಳಿಸುವನು ಎಂಬ ಶ್ರುತಿವಾಕ್ಯಗಳೊಡನೆ ವಿರೋಧಿಸುವುದು. ಆದುದರಿಂದ ಈ ಶ್ರುತಿಗಳಿಗೆ ಇವು ಯಥಾರ್ಥವಲ್ಲ. ಇವುಗಳ ಯಥಾರ್ಥವು ಯಾವು ದೆಂದರೆ—'ಸರ್ವಂ ಖಲ್ವಿದಂ ಬ್ರಹ್ಮ, ಅಯಮಾತ್ಮಾ ಬ್ರಹ್ಮ' ಇತ್ಯಾದಿ ಅಭೇದ ಶ್ರುತಿಗಳು 'ಈ ಪ್ರಪಂಚವು ಶರೀರ, ಪರಬ್ರಹ್ಮನು ಶರೀರಿ, ಶರೀರವಾಚಕ ಶಬ್ದ ಗಳಿಂದ ಶರೀರಿಯನ್ನು ಹೇಳಬಹುದು' ಎಂದು ಶರೀರ ಶರೀರಿಭಾವದಿಂದ ಉಂಟಾದ ವಿಶಿಷ್ಟೈಕ್ಯವನ್ನು ಹೇಳುವುವು; ಹೀಗೆ ಹೇಳಿದರೆ ಯಾವ ಶ್ರುತಿಗೂ ವಿರೋಧವಿಲ್ಲದೆ ಸರ್ವಶ್ರುತಿಸಮನ್ವಯವಾಗುವುದು ಎಂದು ಘಟಕಶ್ರುತಿ ಕಂಠೋಕ್ತವಾಗಿ ಹೇಳುತ್ತದೆ. ಮತ್ತು 'ನೇಹನಾನಾಸ್ತಿ ಕಿಂಚನ' ಎಂಬುದಕ್ಕೆ ಬ್ರಹ್ಮಶರೀರವಲ್ಲದ ಯಾವ ವಸ್ತುವೂ ಇಲ್ಲ, ಚಿದಚಿಚ್ಛರೀರಕವಾದ ಪರಬ್ರಹ್ಮನೊಂದೇ ಇರುವುದು—ಎಂದು ಯಥಾರ್ಥ. 'ಸದೇವ ಸೋಮ್ಯೇದಮಗ್ರ ಆಸೀತ್, ಏಕಮೇವಾ ದ್ವಿತೀಯಂ' ಎಂಬುದರ ಅರ್ಥವು—ಈ ಪ್ರಪಂಚಕ್ಕೆ ಪ್ರಳಯಕಾಲದಲ್ಲಿ ಸಮಾಪತ್ತಿರೂಪವಾದ ಕ್ರಿಯೆಯನ್ನೂ ಸತ್ತ್ವ ಎಂಬ ಸ್ಥಿತಿಯನ್ನೂ ಹೇಳಿ, ನಾಮರೂಪ ವಿಭಾಗವಿಲ್ಲದೆ ಮತ್ತೊಬ್ಬ ಅಧಿಷ್ಠಾತೃವೂ ಇಲ್ಲದೆ ಸತ್ತಿನೊಂದಿಗೆ ಸತ್ತಾಗಿ ಸೇರಿದ್ದಿತು ಎಂಬುದ ರಿಂದ ಪ್ರಳಯಕಾಲದಲ್ಲಿ ಚಿದಚಿಚ್ಛರೀರಕನಾದ ಪರಮಾತ್ಮನೊಬ್ಬನೇ ಇರುತ್ತಿ ದ್ದನು, ಈ ಪ್ರಪಂಚವು ಆಗಲೂ ಸತ್ಯವಾಗಿ ಸತ್ತೇ ಆಗಿದ್ದಿತು ಎಂದು ಫಲಿತ ವಾಯಿತು ಸರ್ವೇಶ್ವರನು ನಿರ್ಹೇತುಕಕರುಣೆಯಿಂದ ಜೀವಾತ್ಮರುಗಳನ್ನು ಉದ್ಧರಿಸಬೇಕೆಂದು ಸೃಷ್ಟಿಯನ್ನು ಮಾಡಲು ಸಂಕಲ್ಪಿಸಿ, ಪ್ರಳಯದಲ್ಲಿ ತನ್ನೊಳಗೆ ಹುದುಗಿದ್ದ ತನ್ನ ಶರೀರೈಕದೇಶವಾದ ಚಿದಚಿತ್ತುಗಳನ್ನು ಈ ಪ್ರಪಂಚರೂಪವಾಗಿ ಸೃಷ್ಟಿಸಿ, ನಾಮರೂಪ ವಿಭಾಗವನ್ನು ಮಾಡಿದನು. ಈ ಪ್ರಪಂಚವು ಪ್ರಳಯ ಕಾಲದಲ್ಲಿಯೂ ಸೃಷ್ಟಿಕಾಲದಲ್ಲಿಯೂ ಸತ್ಯವಾಗಿಯೇ ಇದ್ದಿತು. ಯಾವಾಗಲೂ

ಮಿಥ್ಯೆಯುಳ್ಳವೇ ಅಲ್ಲ. ಪ್ರಳಯದಲ್ಲಿ ಸೂಕ್ಷ್ಮರೂಪವಾಗಿ ಅಡಗಿದ್ದಿತು; ಸೃಷ್ಟಿಯಾದಾಗ ಸ್ಥೂಲವಾಗಿ ನಾಮರೂಪಗಳನ್ನು ಹೊಂದಿ ನಾನಾವಿಧವಾಗಿ ಪರಿಣಮಿಸಿತು. ತನ್ನ ಶರೀರೈಕದೇಶವಾದ ಸತ್ಯವಾದ ಚಿದಚಿತ್ತುಗಳನ್ನು ಪ್ರಪಂಚರೂಪವಾಗಿ ತಾನೊಬ್ಬನೇ ಸೃಷ್ಟಿಸಿದುದರಿಂದ ಈ ಪ್ರಪಂಚಕ್ಕೆ ನಾರಾಯಣನೊಬ್ಬನೇ ತ್ರಿವಿಧಕಾರಣನೂ ಆಗಿರುವನು. ಕಾರಣಕ್ಕಿಂತ ಕಾರ್ಯವು ಬೇರ್ಪಟ್ಟದಲ್ಲವಾದುದರಿಂದ ಸಮಸ್ತಚಿದಚಿಚ್ಛರೀರಕನಾದ ನಾರಾಯಣನು ಒಬ್ಬನೇ ತತ್ತ್ವ ಎಂದು ಅದ್ವೈತವು ವಿಶಿಷ್ಟರೂಪದಿಂದ ಸ್ಥಾಪಿತವಾಯಿತು. ವಿಶಿಷ್ಟೈಕ್ಯಬುದ್ಧಿಯಿಂದ ಏಕತ್ವವ್ಯವಹಾರವೂ ಬ್ರಹ್ಮಾಪೃಥಕ್ಸಿದ್ಧವಿಶೇಷಣವಲ್ಲದೆ ಇರುವ ಬೇರೆ ವಸ್ತುವೇ ಇಲ್ಲವೆಂದು ಭೇದನಿಷೇಧ ವ್ಯವಹಾರವೂ ಸಂಗತವಾದುವು.

೭೨. ಪ್ರಶ್ನೆ—ಅಪೃಥಕ್ಸಿದ್ಧಿಸಂಬಂಧ, ಶರೀರ ಶರೀರಿಭಾವ ಇವೆರಡನ್ನೂ ಅಂಗೀಕರಿಸಿರುವುದರಿಂದ ಮತ್ತೆ ಯಾವ ಮತದಲ್ಲಿಯೂ ಕಾಣದ ಕೇಳದ ಸರ್ವಶ್ರುತಿಸಾಮರಸ್ಯವು ಈ ಮತದಲ್ಲಿ ಪರಮಾಶ್ಚರ್ಯಕರವಾಗಿದೆ ಆದರೆ ಲೋಕದೊಳಗೆ ಎಲ್ಲಾ ಕಡೆಯೂ ಉಪಾದಾನಕಾರಣವೂ ನಿಮಿತ್ತಕಾರಣವೂ ಬೇರೆ ಬೇರೆಯೇ ಇರುವುದು ರೂಢವಾಗಿದೆ. ಪರಿಣಾಮಿ ವಸ್ತುವೇ ಉಪಾದಾನವಾಗಿದೆ. ಕರ್ತೃವಸ್ತುವೇ ನಿಮಿತ್ತವಾಗಿದೆ; ಹೀಗಿರುವಲ್ಲಿ ಪರಬ್ರಹ್ಮಕ್ಕೆ ನಿಮಿತ್ತಕಾರಣತ್ವವು ಸಂಗತವೇನೋ ಆಗುವುದು; ಪರಿಣಾಮಿಯಲ್ಲದ ಪರಬ್ರಹ್ಮನಿಗೆ ಶರೀರಪ್ರಾಯವಾದ ಪ್ರಕೃತ್ಯಂಶವು ಜಗತ್ತಾಗಿ ಪರಿಣಮಿಸಿದಮಾತ್ರಕ್ಕೇ ಬ್ರಹ್ಮವೇ ಉಪಾದಾನ ಕಾರಣವೆಂದು ಹೇಗೆ ಹೇಳಲಾಗುವುದು? ಒಂದೇ ವಸ್ತುವು ಉಪಾದಾನ, ನಿಮಿತ್ತ ಈ ಎರಡು ಕಾರಣವೂ ಹೇಗೆ ಆಗಬಲ್ಲುದು? ಇದನ್ನು ಲೋಕದಲ್ಲಿ ಎಲ್ಲಿಯೂ ಕಂಡಿಲ್ಲವಲ್ಲಾ.

ಉತ್ತರ—ಇದರ ಸಮಾಧಾನವು ಶೋಧಕಶ್ರುತಿವಾಕ್ಯನಿರೂಪಣ ಪ್ರಕರಣದಲ್ಲಿ ಹೇಳಿಯೇ ಆಗಿದೆ. ಲೋಕದಲ್ಲಿ ನಿಮಿತ್ತಕಾರಣಕ್ಕೂ ಉಪಾದಾನಕಾರಣಕ್ಕೂ ಭೇದವು ಮೃತ್ಪಿಂಡ ಕುಂಭಕಾರಾದಿ ಸ್ಥಳಗಳಲ್ಲಿ ತೋರಿ ಮನಸ್ಸಿನಲ್ಲಿ ಅಂಟಿ ಹೋಗಿದೆ. ಆದರೆ ಅವುಗಳಿಗೆ ಭೇದವು ಇರಲೇಬೇಕೆಂಬ ನಿಯಮವಿಲ್ಲ. ಪರಬ್ರಹ್ಮನು ನಿಮಿತ್ತ, ಉಪಾದಾನ ಈ ಎರಡು ವಿಧವಾಗಿಯೂ ಕಾರಣನಾಗಿದ್ದಾನೆ ಎಂಬುದನ್ನು ಶ್ರುತಿ ತಾನೇ ಜೇಡರಹುಳುವಿನ ದೃಷ್ಟಾಂತವನ್ನು ಕೊಟ್ಟು ಕಂಠೋಕ್ತವಾಗಿ ಸ್ಥಾಪಿಸಿರುವುದು. ಹೇಗೆಂದರೆ—ಜೇಡರಹುಳು ತನಗೆ ಸ್ವರೂಪವಿಕಾರಾದಿಗಳೊಂದೂ ಇಲ್ಲದಂತೆಯೇ ಸ್ವಶರೀರವೆಂಬ ವಿಶೇಷಣದ ಮೂಲಕವಾಗಿ ತನ್ನ ಹೊಕ್ಕುಳಿಂದ ಹುಟ್ಟಿದ ನೂಲಿಗೆ ತಾನು ಉಪಾದಾನವಾಗಿಯೂ, ನೂಲು ಹುಟ್ಟುವಂತೆ ಪ್ರೇರಿಸಿದುದರಿಂದ ತಾನೇ ನೂಲಿಗೆ ನಿಮಿತ್ತವಾಗಿಯೂ, ತಾನೇ ಆ

ನೂಲನ್ನು ನುಂಗಿ ಸಂಹರಿಸುವುದಾಗಿಯೂ ಇರುವುದು; ಅದರಂತೆಯೇ ಪರಬ್ರಹ್ಮನು ತನ್ನ ಶರೀರೈಕದೇಶವಾದ ಪ್ರಕೃತಿಯ ಮೂಲಕವಾಗಿ ಜಗತ್ತಿಗೆ ಉಪಾದಾನವಾಗಿಯೂ, ಆ ಪ್ರಕೃತಿಯನ್ನು ಪರಿಣಾಮಗೊಳಿಸುವುದರಿಂದ ನಿಮಿತ್ತವಾಗಿಯೂ, ತಾನೇ ಅದನ್ನು ಸಂಹರಿಸಿ ಲಯಕಾರಣವಾಗಿಯೂ ಇರುವನು.* ಆದುದರಿಂದ ಪರಬ್ರಹ್ಮನೇ ಪ್ರಪಂಚಕ್ಕೆ ತ್ರಿವಿಧಕಾರಣನು ಎಂದು ಪರಬ್ರಹ್ಮನ ಅಭಿನ್ನನಿಮಿತ್ತೋಪಾದಾನತ್ವವನ್ನು ಶ್ರುತಿ ಸ್ಥಾಪಿಸಿತು. ಮೃತ್ಪಿಂಡವು ತಾನು ಶರೀರಿಯಲ್ಲವಾದುದರಿಂದ ಉಪಾದಾನಮಾತ್ರವಾಗಿದೆ. ಕುಂಬಾರನು ಮೃತ್ಪಿಂಡ ಶರೀರಕನಲ್ಲವಾದುದರಿಂದ ನಿಮಿತ್ತಮಾತ್ರನಾಗಿರುವನು. ಜೇಡರಹುಳು ಪರಿಣಾಮಿಶರೀರವುಳ್ಳದಾಗಿಯೂ, ಶರೀರವನ್ನು ಪರಿಣಾಮಗೊಳಿಸಬಲ್ಲುದಾಗಿಯೂ ಇರುವುದರಿಂದ ನಿಮಿತ್ತೋಪಾದಾನವೆರಡೂ ಆಯ್ತು. ಇದರಂತೆಯೇ ಪರಬ್ರಹ್ಮನು ಸ್ವಶರೀರವಾದ ಪ್ರಕೃತಿಯನ್ನು ಪರಿಣಾಮಗೊಳಿಸುವ ಪ್ರೇರಕಶಕ್ತಿಯಿಂದಲೇ ಪ್ರಕೃತಿ ಜಗತ್ತಾಗಿ ಪರಿಣಮಿಸಿದರೂ ಆ ಪ್ರೇರಕತ್ವದಿಂದ ಇವನು ಜಗದುಪಾದಾನ ಎಂಬಂಶದಲ್ಲಿ ಯಾವ ಅಡ್ಡಿಯೂ ಇಲ್ಲ.

೭೩. ಪ್ರಶ್ನೆ—ಈ ಶುದ್ಧಾದ್ವೈತ ವಿಶಿಷ್ಟಾದ್ವೈತ ಸಿದ್ಧಾಂತಗಳಲ್ಲದೆ ಮತ್ತೆ ಯಾವುವಾದರೂ ಅದ್ವೈತಸಿದ್ಧಾಂತ ಪ್ರಭೇದಗಳುಂಟೋ? ಜೀವಾದ್ವೈತ ಬ್ರಹ್ಮಾದ್ವೈತಗಳೆಂದರೇನು?

ಉತ್ತರ—ಇವೆರಡೂ ಬೇರೆ ಸಿದ್ಧಾಂತಗಳಲ್ಲ; ಈ ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಅನುಕೂಲವಾಗಿ ಹೇಳಲ್ಪಟ್ಟ ವಿಷಯಗಳನ್ನು ತಿಳಿಸಲು ಹೊರಟಿರುವುವು. ಜೀವಾದ್ವೈತಶ್ರುತಿ ಪ್ರಕಾರಾದ್ವೈತವನ್ನೂ (ಎಲ್ಲಾ ಜೀವರೂ ಜ್ಞಾನಸ್ವರೂಪರಾಗಿ ಏಕಾಕಾರರಾಗಿರುವರು) ಬ್ರಹ್ಮಾದ್ವೈತಶ್ರುತಿ ಪ್ರಕಾರಿಭೇದವನ್ನೂ (ಬ್ರಹ್ಮಸದೃಶ, ಚಿದಚಿದ್ವಿಶಿಷ್ಟವಾದ ಮತ್ತೊಂದು ಪ್ರಕಾರಿ ಇಲ್ಲ, ಎಂಬ ನಿಷೇಧವನ್ನು) ತಿಳಿಸುವುವು.

ಜೀವಾದ್ವೈತಶ್ರುತಿ ಹೇಳುವ ಪ್ರಕಾರಾದ್ವೈತ

ಬೆಳ್ಳಿಯ ಅಂಗಡಿಗಳಲ್ಲಿ ಒಂದೇ ಬಣ್ಣದ ಬೆಳ್ಳಿಯ ಗಟ್ಟಿಯಿಂದ ಮಾಡಿದ ಸಮಾನವಾದ ತೂಕವುಳ್ಳ ನೂರಾರು ಬಟ್ಟಲುಗಳು ಇರುವುವು. ಯಾವುವಾದರೂ

* ಸೃಷ್ಟ್ವಾ ಸೃಜತಿ ಚಾತ್ಮಾನಂ ವಿಷ್ಣುಃ ಪಾಲ್ಯಂ ಚ ಪಾತಿ ಚ ।
ಉಪಸಂಹ್ರಿಯತೇ ಚಾಂತೇ ಸಂಹರ್ತಾ ಚ ಸ್ವಯಂ ಪ್ರಭುಃ ॥
ಊರ್ಣನಾಭಿರ್ಯಥಾ ಸೃಷ್ಟ್ವಾ ಸ್ವಯಂ ತನ್ತೂನ್ಗ್ರಸತೇ ಪುನಃ ।
ತಥಾ ಸೃಷ್ಟ್ವೇದಮಖಿಲಂ ಸ್ವಯಂ ತದ್ಗ್ರಸತೇ ಹರಿಃ ॥

ಒಂದು ಬಟ್ಟಲಿನ ತೂಕ, ಬೆಲೆಗಳನ್ನು ನಿಷ್ಕರ್ಷೆಮಾಡಿದಮೇಲೆ ತೆಗೆದುಕೊಳ್ಳುವಾಗ 'ಎಲ್ಲಾ ಬಟ್ಟಲೂ ಒಂದೇ, ಯಾವುದನ್ನಾದರೂ ತೆಗೆದುಕೊಳ್ಳಬಹುದು' ಎಂದು ಕೊಡುವವನೂ ಕೊಳ್ಳುವವನೂ ಸಹ ಒಪ್ಪಿ ಹೇಳುವರು. ಇಲ್ಲಿ ನೂರಾರು ಬಟ್ಟಲು ಕಣ್ಣಿಗೆ ಕಾಣುವಾಗ 'ಎಲ್ಲಾ ಬಟ್ಟಲೂ ಒಂದೇ' ಎಂದು ಹೇಳಿದಮಾತಿಗೆ 'ಬಣ್ಣ ಬೆಲೆ ಇವುಗಳು ಎಲ್ಲಾ ಬಟ್ಟಲುಗಳಿಗೂ ಒಂದೇ, ಅವುಗಳಲ್ಲಿ ಏನೂ ಭೇದವಿಲ್ಲ ಎಂದು ಅರ್ಥವೇ ಹೊರತು, ಎಲ್ಲಾ ಬಟ್ಟಲೂ ಒಂದು ಬಟ್ಟಲು ಎಂದು ಅರ್ಥವಲ್ಲ. ಅದರಂತೆ 'ದೇವ ತಿರ್ಯಙ್ಮನುಷ್ಯ ಸ್ಥಾವರರೂಪವಾದ ವಿವಿಧಶರೀರಗಳಲ್ಲಿರುವ ಎಲ್ಲಾ ಜೀವಗಳೂ ಒಂದೇ, ಎಂಬ ಮಾತಿಗೆ 'ಎಲ್ಲಾ ಶರೀರದಲ್ಲಿರುವ ಜೀವಾತ್ಮರುಗಳೂ ಜ್ಞಾನೈಕಾಕಾರರಾಗಿಯೇ ಇರುವರು; ಅವರಿಗೆ ಪ್ರಕಾರದಲ್ಲಿ ಯಾವ ಭೇದವೂ ಇಲ್ಲ' ಎಂದು ಅರ್ಥವೇ ಹೊರತು, ಎಲ್ಲಾ ಶರೀರದಲ್ಲಿಯೂ ಒಂದೇ ಜೀವನು ಇರುವನು, ಸ್ವರೂಪಭೇದವಿಲ್ಲ ಎಂದು ಅರ್ಥವಲ್ಲ. (ಪುಟ ೩೩) ಹೀಗೆ ಪ್ರಕಾರಾದ್ವೈತವೇ ಅರ್ಥ ಎಂಬುದನ್ನು ಶ್ರುತಿ, ವಿಷ್ಣುಪುರಾಣ, ಭಗವದ್ಗೀತಾದಿಗಳು ಸ್ಪಷ್ಟವಾಗಿ ಹೇಳಿರುವುವು.

ಬ್ರಹ್ಮಾದ್ವೈತಶ್ರುತಿ ಹೇಳುವ ಪ್ರಕಾರ್ಯದ್ವೈತ—ಬ್ರಹ್ಮಾದ್ವೈತಶ್ರುತಿ ಪ್ರಕಾರಭೇದವಿಶಿಷ್ಟಪ್ರಕಾರ್ಯೈಕ್ಯವನ್ನು ಹೇಳುವುದು: ಎಂದರೆ ಬ್ರಹ್ಮಸಮಾನವಾದ ಚಿದಚಿದ್ವಿಶಿಷ್ಟವಾದ ಮತ್ತೊಂದು ವಸ್ತು ಇಲ್ಲ ಎಂದೂ ಸ್ಥೂಲಸೂಕ್ಷ್ಮ ಚಿದಚಿದ್ವಿಶಿಷ್ಟ ಬ್ರಹ್ಮಸ್ವರೂಪಕ್ಕೂ ಸತ್ಯಜ್ಞಾನಾನಂದತ್ವ ವಿಶಿಷ್ಟ ಬ್ರಹ್ಮಸ್ವರೂಪಕ್ಕೂ ಭೇದವಿಲ್ಲ ಎಂದೂ ಅರ್ಥ. ಆದುದರಿಂದ ಈ ಬ್ರಹ್ಮಾದ್ವೈತಶ್ರುತಿ ವಿಶಿಷ್ಟಾದ್ವೈತಸಿದ್ಧಾಂತಕ್ಕೆ ಮತ್ತಷ್ಟು ಅನುಕೂಲವಾಗಿರುವುದು. (ಈ ಅಭಿಪ್ರಾಯವನ್ನು ಶ್ರುತಪ್ರಕಾಶಿಕೆಯಲ್ಲಿ ಆದಿಭರತ ಚತುಶ್ಶ್ಲೋಕೀವ್ಯಾಖ್ಯಾನದಲ್ಲಿ ವಿಶದವಾಗಿ ತಿಳಿಯಬಹುದು)

೭೪. ಇನ್ನುಮೇಲೆ ಈ ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಸಕಲಶ್ರುತಿಗಳೂ ಸಮರಸವಾಗಿಯೇ ಅನ್ವಯಿಸಿ ಸಂಗತವಾಗುವುದರಿಂದ ಇತರ ಮತಗಳಲ್ಲಿರುವಂತೆ ಇಲ್ಲಿ ಯಾವ ದೋಷವೂ ಇಲ್ಲವೆಂಬುದನ್ನು ವಿವರಿಸುತ್ತೇವೆ. ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ—(೧) ಭೇದಶ್ರುತಿಸ್ವಾರಸ್ಯ: ಹಿಂದೆಹೇಳಿದಂತೆ (ಪುಟ ೧೧೧, ೩೩) ಚಿತ್, ಅಚಿತ್, ಈಶ್ವರರುಗಳಿಗಿರುವ ಐದುವಿಧ ಭೇದಗಳನ್ನೂ ವಾಸ್ತವವಾಗಿ ಅಂಗೀಕರಿಸಿಯೇ ಇರುವುದರಿಂದ ಭೇದಶ್ರುತಿಸ್ವಾರಸ್ಯವೂ ಬಂದಿತು; ಅಲ್ಲದೆ ಚೇತನಭೇದವನ್ನು ಅಂಗೀಕರಿಸಿರುವುದರಿಂದ ವ್ಯಕ್ತಿಭೇದದಿಂದ ಬಂಧಮೋಕ್ಷ ವ್ಯವಸ್ಥೆಯೂ ಚೇತನಾಚೇತನಗಳಲ್ಲಿ ಗುಣದೋಷ ವ್ಯವಸ್ಥೆಯೂ ಸಿದ್ಧವಾದುವು. (೨) ಘಟಕಶ್ರುತಿಸ್ವಾರಸ್ಯ: ಪ್ರಪಂಚಕ್ಕೂ ಪರಬ್ರಹ್ಮಕ್ಕೂ ಶರೀರ ಶರೀರಿಭಾವವನ್ನು ಅಂಗೀಕರಿಸಿರುವುದರಿಂದ ಘಟಕಶ್ರುತಿ ಸ್ವಾರಸ್ಯವೂ ಬಂದಿತು. (ಪು ೧೧೧)

(೩) ಅಭೇದಶ್ರುತಿ ಸ್ವಾರಸ್ಯ: ಈ ಚೇತನಾಚೇತನಗಳು ಪರಬ್ರಹ್ಮಶರೀರಗಳಾಗಿವೆ; ಶರೀರವಾಚಕಶಬ್ದಗಳು ಶರೀರಿಪರ್ಯಂತ ಬೋಧಕವಾಗುವುದು ನ್ಯಾಯಸಿದ್ಧವಾಗಿದೆ; ಶರೀರಭೂತ ಚೇತನಾಚೇತನ ವಾಚಿಶಬ್ದಗಳು ಶರೀರಿಯಾದ ಪರಬ್ರಹ್ಮಪರ್ಯಂತ ಬೋಧಕವಾಗಿರುವುದರಿಂದ, ಚೇತನಾಚೇತನ ವಾಚಿಶಬ್ದಗಳಿಗೆ ಬ್ರಹ್ಮಶಬ್ದದೊಡನೆ ಸಾಮಾನಾಧಿಕರಣ್ಯವು ಸಂಗತವಾಯಿತು. ಈ ಶರೀರಶರೀರಿಭಾವದಿಂದ ಪ್ರಪಂಚಪರಮಾತ್ಮರುಗಳಿಗೆ ಅಭೇದವೆಂಬುದೂ ಸಿದ್ಧವಾಯಿತು; ಚೇತನಾಚೇತನ ವಿಶಿಷ್ಟಸ್ವರೂಪಕ್ಕೂ ಸರ್ವಜ್ಞತ್ವಾದಿ ವಿಶಿಷ್ಟ ಪರಬ್ರಹ್ಮಸ್ವರೂಪಕ್ಕೂ ತಾದಾತ್ಮ್ಯಬೋಧಕವಾದುದರಿಂದ, ಈ ಮೂರು ತೆರದಿಂದಲೂ ಅಭೇದಶ್ರುತಿ ಉಪಪನ್ನವಾಯಿತು (ಪುಟ ೧೦೨, ೫೯, ೧೧೦, ೧೧೭). (೪) ಕಾರಣಶ್ರುತಿಸ್ವಾರಸ್ಯ: ಹಿಂದೆ (ಪುಟ ೬೮) ಈ ಪ್ರಪಂಚಕ್ಕೆ ನಾರಾಯಣನು ಉಪಾದಾನ, ನಿಮಿತ್ತ, ಸಹಕಾರಿ ಎಂಬ ತ್ರಿವಿಧಕಾರಣವೂ ಆಗಿರುವನು ಎಂದು ಸ್ಥಾಪಿಸಿರುವುದರಿಂದ ಕಾರಣತ್ವಶ್ರುತಿ ಸಂಗತವಾಯಿತು; ಮತ್ತು ಈಶ್ವರನ ಅಭಿನ್ನನಿಮಿತ್ತೋಪಾದಾನತ್ವವೂ ಸ್ಥಾಪಿತವಾಯಿತು (ಪು. ೧೧೮-೧೧೯) (೫) ಸಗುಣಶ್ರುತಿಸ್ವಾರಸ್ಯ: ಸರ್ವೇಶ್ವರನ ಸಕಲ ಕಲ್ಯಾಣಗುಣಗಳೂ ವಾಸ್ತವವಾಗಿಯೇ ಉಂಟು ಎಂದು ಅಂಗೀಕರಿಸಿಯೂ (ಪುಟ ೭೨-೭೭) ಸ್ಥಾಪಿಸಿಯೂ ಇರುವುದರಿಂದ ಸಗುಣಶ್ರುತಿ ಸಂಗತವಾಯಿತು. (೬) ನಿರ್ಗುಣಶ್ರುತಿ ಸ್ವಾರಸ್ಯ: ಸರ್ವೇಶ್ವರನಲ್ಲಿ ಹೇಯ ಗುಣಾದಿಗಳೊಂದೂ ಇಲ್ಲ ಎಂದು (೧೦೨) ನಿರೂಪಿಸಿರುವುದರಿಂದ ಸಂಗತವಾಯಿತು. (೭) ನಿರ್ವಿಕಾರಶ್ರುತಿ ಸ್ವಾರಸ್ಯ: ಸತ್ಯಜ್ಞಾನಾನಂದತ್ವಾದಿ ವಿಶಿಷ್ಟಸ್ವರೂಪದಲ್ಲಿ ಯಾವದೋಷವೂ ತಟ್ಟುವುದಿಲ್ಲ (ಪುಟ ೧೦೩) ಎಂಬುದರಿಂದ ಸಾಧಿತವಾಯಿತು (೮) ಶೋಧಕಶ್ರುತಿಸ್ವಾರಸ್ಯ: ಸೂಕ್ಷ್ಮಪ್ರಕೃತಿ ಜೀವಶರೀರಕನಾದ ಪರಮಾತ್ಮನು ಪ್ರಪಂಚಕ್ಕೆ ಉಪಾದಾನಕಾರಣನಾದರೂ, ವಿಕಾರಾದಿದೋಷವು ಪ್ರಕೃತಿಜೀವಾತ್ಮರಿಗಲ್ಲದೆ ದಿವ್ಯಾತ್ಮಸ್ವರೂಪಕ್ಕಿಲ್ಲ ಎಂದು ಸ್ಥಾಪಿಸಿರುವುದರಿಂದ ಶೋಧಕಶ್ರುತಿ ಸಮಂಜಸವಾಯಿತು (ಪು. ೧೦೨-೧೦೩). (೯) ಭೇದನಿಷೇಧ ಶ್ರುತಿಸ್ವಾರಸ್ಯ: ಭೇದನಿಷೇಧವು ವಿಹಿತೈಕ್ಯವಿರೋಧಿಯಾದ ಸ್ವತಂತ್ರಭೇದವು ಇಲ್ಲವೆಂದು ತೋರಿಸಿರುವುದರಿಂದ ಸಂಗತವಾಯಿತು (ಪು. ೧೦೩). (೧೦) ತತ್ತ್ವಪರಶ್ರುತಿಸ್ವಾರಸ್ಯ: "ಜಗತ್ಕಾರಣನಿರೂಪಣಪ್ರಕರಣಗಳಲ್ಲಿ ಅಲ್ಲಲ್ಲಿ ಹೇಳಿರುವ ಸತ್, ಬ್ರಹ್ಮ, ಶಿವ, ಶಂಭು, ಪ್ರಜಾಪತಿ, ಇಂದ್ರಾದಿ ಶಬ್ದಗಳು ಅನಯವ ಶಕ್ತ್ಯಾದಿಗಳಿಂದ ಸರ್ವಾಂತರ್ಯಾಮಿಯಾದ ನಾರಾಯಣನನ್ನೇ ಜಗತ್ಕಾರಣನಾಗಿ ಹೇಳುವುವೇ ಹೊರತು, ಅಗ್ನೀಂದ್ರಾದಿಗಳನ್ನು ಅಲ್ಲ" ಎಂದು ಸ್ಥಾಪಿಸಿದುದರಿಂದ ಸುಸಂಗತವಾಯಿತು (ಪು. ೧೦೩-೧೦೪). ಹೀಗೆಯೇ ಉತ್ಪತ್ತಿ ನಿಷೇಧಶ್ರುತಿ— "ಜೀವಾತ್ಮರಂತೆ ಕರ್ಮಕೃತವಾದ ಉತ್ಪತ್ತಿ ಶ್ರೀಮನ್ನಾರಾಯಣನಿಗೆ ಇಲ್ಲ. ಅವತಾರಾದಿಗಳಿಗೆ ಭೃಗುಶಾಪಾದಿಗಳು ವ್ಯಾಜಮಾತ್ರವೇ ಹೊರತು ಕಾರಣಗಳಲ್ಲ ಎಂಬುದನ್ನು ಬೋಧಿಸುವುದು (ಪು. ೧೦೫).

ಇಂತು ಪ್ರತ್ಯಕ್ಷಾದಿ ಪ್ರಮಾಣಗಳು ಸವಿಶೇಷ ವಿಷಯಕಗಳೆಂದು ಅಂಗೀಕರಿಸಿದುದರಿಂದ ಪ್ರಮಾಣಸ್ವಾರಸ್ಯವೂ, ಮೇಲೆ ಹೇಳಿದಂತೆ ಪ್ರಮೇಯ ಸ್ವಾರಸ್ಯವೂ, ಸಕಲವಿಧ ಶ್ರುತಿಗಳ ಸಾಮಂಜಸ್ಯಸ್ವಾರಸ್ಯವೂ, ವೇದದ ಪೂರ್ವ ಭಾಗವು ಆರಾಧನ ಪ್ರಕಾರವನ್ನೂ ಉತ್ತರಭಾಗವು ಆರಾಧ್ಯ ಸ್ವರೂಪವನ್ನೂ ಬೋಧಿಸುವುದೆಂದು ನಿರೂಪಿಸಿದುದರಿಂದ ಸಂಪೂರ್ಣ ವೇದಸ್ವಾರಸ್ಯವೂ (ಪು. ೧೦೧) ಈ ವಿಶಿಷ್ಟಾದ್ವೈತಸಿದ್ಧಾಂತವೊಂದರಲ್ಲಿಯೇ ಸರ್ವಾಂಶದಲ್ಲಿಯೂ ಸಮಂಜಸವಾಗಿರುವುದು.

ಇಂತು ವಿದ್ವಾನ್ ಜಯರಾಮ ವೆಂಕಟಾಚಾರ್ಯ ರಚಿತವಾದ ವಿಶಿಷ್ಟಾದ್ವೈತ ದೀಪಿಕೆಯಲ್ಲಿ ಸಮನ್ವಯ ಪ್ರಕಾಶವು ಮುಗಿದುದು.

IV ಫಲಪ್ರಕಾಶ

೭೫. ಧರ್ಮಾರ್ಥ ಕಾಮ ಮೋಕ್ಷಗಳೆಂಬ ನಾಲ್ಕುವಿಧವಾದ ಪುರುಷಾರ್ಥಗಳೊಳಗೆ ಮೋಕ್ಷವೇ ಮುಖ್ಯ ಪುರುಷಾರ್ಥವೆಂದು ಎಲ್ಲಾ ಶಾಸ್ತ್ರಕಾರರೂ ಒಪ್ಪಿರುವರು; ಆದರೂ ಆ ಮೋಕ್ಷಸ್ವರೂಪವನ್ನೂ ಅದರ ಉಪಾಯವನ್ನೂ ಒಬ್ಬೊಬ್ಬರು ಒಂದೊಂದು ವಿಧವಾಗಿ ನಿರೂಪಿಸುವರು. ಹೇಗೆಂದರೆ—(೧) **ಲೋಕಾಯತಿಕನೆಂಬ** ಚಾರ್ವಾಕನು—'ಪೃಥಿವ್ಯಾದಿ ಭೂತಗಳ ಸೇರುವೆಯಲ್ಲಿ ಚೈತನ್ಯವೆಂಬ ಒಂದಾನೊಂದು ವಿಶೇಷ ಧರ್ಮವು ಹುಟ್ಟುವುದು; ಅದಕ್ಕೆ ಉಂಟಾದ ಸುಖದುಃಖಗಳೇ ಸ್ವರ್ಗ ನರಕಗಳೆನಿಸುವುವು, ಸಾಯುವಾಗ ಭೂತಗಳು ವಿಂಗಡವಾಗಿ ಆ ಸೇರುವೆ ತಪ್ಪಿದರೆ ಆ ಚೈತನ್ಯವು ನಾಶವಾಗುವುದು; ಅಲ್ಲಿಂದ ಮುಂದೆ ಲೋಕಾಂತರಗತಿ ಮುಂತಾದುದು ಏನೂ ಇಲ್ಲ; ಆ ಚೈತನ್ಯ ನಾಶವೇ ಮೋಕ್ಷ-ಎನ್ನುವನು. (೨) ಆರ್ಹತರು (ಜೈನರು)—ಈ ಪ್ರಪಂಚವು ಕಾರ್ಯಕಾರಣ ರೂಪದಿಂದ ನಿತ್ಯಾನಿತ್ಯವಾಗಿಯೂ, ಭಿನ್ನಾಭಿನ್ನವಾಗಿಯೂ, ಸತ್ಯಾಸತ್ಯವಾಗಿಯೂ ಇರುವುದು; ಜೀವಾತ್ಮರುಗಳು ಕರ್ಮಾನುರೂಪವಾದ ಶರೀರಗಳ ಪರಿಮಾಣಕ್ಕೆ ತಕ್ಕಂತೆ ತಮಗೂ ಪರಿಮಾಣವುಳ್ಳವರಾಗಿರುವರು; ಈ ಸಂಸಾರವು ಅನಾದಿ; ಮಲಧಾರಣಾದಿಗಳಿಂದಲೂ ಆತ್ಮಜ್ಞಾನದಿಂದಲೂ ಸಂಸಾರ ಸಂಬಂಧದಿಂದ ಬಿಡುಗಡೆ ಹೊಂದಿ ಊರ್ಧ್ವಗತಿಯನ್ನು ಪಡೆವುದೇ ಮೋಕ್ಷವು; ಸಮ್ಯಕ್ ಜ್ಞಾನ ದರ್ಶನ ಚಾರಿತ್ರಗಳೆಂಬ ರತ್ನತ್ರಯವೇ ಮೋಕ್ಷೋಪಾಯ—ಎನ್ನುವರು. (೩) ಬೌದ್ಧಮತದ ನಾಲ್ಕು ಪಂಗಡದೊಳಗೆ—ವೈಭಾಷಿಕನು 'ಈ ಜಗತ್ತು ಪರಮಾಣು ಸಮೂಹರೂಪವಾಗಿ ಪ್ರತ್ಯಕ್ಷಸಿದ್ಧವಾಗಿರುವುದು; ಪ್ರಪಂಚ ವಿಷಯಜ್ಞಾನವು ಕ್ಷಣಿಕ, ಅದೇ ಆತ್ಮನು, ಬೇರೊಂದು ಆತ್ಮನಿಲ್ಲ; ಇದರಲ್ಲಿ ಸ್ಥಿರತ್ವಬುದ್ಧಿಯೇ

ಸಂಸಾರವು, ಕ್ಷಣಿಕತ್ವಬುದ್ಧಿಯೇ ಮೋಕ್ಷವು—ಎಂದು ಹೇಳುವನು. ಸೌತ್ರಾಂತಿಕನಿಗೂ ಇದೇ ಸಿದ್ಧಾಂತವೇ; ಆದರೆ ಜಗತ್ತು ಪ್ರತ್ಯಕ್ಷವಲ್ಲ, ಅನುಮಾನಸಿದ್ಧವು, ವಿಷಯಸಂಸರ್ಗನಾಶವೇ ಮೋಕ್ಷ—ಎನ್ನುವನು. ಯೋಗಾಚಾರನು—ವಿಜ್ಞಾನಮಾತ್ರವೇ ತತ್ತ್ವ; ಬಾಹ್ಯಾರ್ಥವಿಲ್ಲ; ಜ್ಞಾತೃಜ್ಞೇಯಗಳು ಭ್ರಮಕಲ್ಪಿತ, ಅವೂ ಕ್ಷಣಿಕ, ಎಂದು ತಿಳಿವುದೇ ಮೋಕ್ಷ—ಎನ್ನುವನು. ಮಾಧ್ಯಮಿಕ (ಸರ್ವಶೂನ್ಯವಾದಿ)—ಪ್ರಮಾಣ, ಪ್ರಮೇಯ, ಪ್ರಮಾತಾ ಇವು ಮೂರೂ ಇಲ್ಲ, ಶೂನ್ಯವೇ ತತ್ತ್ವ, ಶೂನ್ಯದಿಂದ ಶೂನ್ಯವೆಂದು ತಿಳಿವುದೇ ಮೋಕ್ಷ—ಎನ್ನುವನು. (೪) ನೈಯಾಯಿಕ ವೈಶೇಷಿಕರುಗಳು—ಈ ಜಗತ್ತಿಗೆ ಪರಮಾಣುಗಳೇ ಉಪಾದಾನಕಾರಣವು, ಅನುಮಾನಪ್ರಮಾಣಸಿದ್ಧನಾದ ಈಶ್ವರನೇ ನಿಮಿತ್ತಕಾರಣವು, ಜಗತ್ತು ಸತ್ಯ, ಸಂಸಾರವು ಅನಾದಿ, ಈಶ್ವರೋಪಾಸನೆಯಿಂದ ಮೋಕ್ಷಸಿದ್ಧಿ, ಸಕಲ ವಿಶೇಷಗುಣೋಚ್ಛೇದವೇ ಮೋಕ್ಷ—ಎನ್ನುವರು. (೫) ಪಾಶುಪತರು—ಪರಮಾಣುಗಳು ಈ ಜಗತ್ತಿಗೆ ಉಪಾದಾನಕಾರಣ, ಆಗಮಸಿದ್ಧನಾದ ಈಶ್ವರನು ನಿಮಿತ್ತಕಾರಣ, ಸಂಸಾರವು ಅನಾದಿ, ಆಗಮೋಕ್ತ ಕರ್ಮಾನುಷ್ಠಾನದಿಂದ ಪಶುಪತಿಸಾಮ್ಯ ಹೊಂದುವುದೇ ಮೋಕ್ಷ—ಎಂದು ಕೆಲವರೂ, ಶಿವಸಾಮ್ಯವೇ ಮೋಕ್ಷವೆಂದು ಕೆಲವರೂ, ಚಿಚ್ಛಕ್ತಿ ಮಾತ್ರ ಉಳಿವುದೇ ಮೋಕ್ಷವೆಂದು ಕೆಲವರೂ ಹೇಳುವರು. (೬) ಸಾಂಖ್ಯರು—ಪ್ರಕೃತಿಯೇ ಸ್ವತಂತ್ರವಾಗಿ ಜಗತ್ತಿಗೆ ಉಪಾದಾನ ಕಾರಣವು; ಜಗತ್ತು ಸತ್ಯ; ಆತ್ಮರು ಅನೇಕರು, ನಿತ್ಯರು, ಚೈತನ್ಯರೂಪರು, ಪ್ರತಿ ಶರೀರದಲ್ಲಿಯೂ ಬೇರೆ ಬೇರೆ ಇರುವರು; ಆ ಪ್ರಕೃತಿಯೊಂದಿಗೆ ಜೀವಾತ್ಮರಿಗೆ ಉಂಟಾದ ಅನಾದಿಸಂಬಂಧವೇ ಸಂಸಾರ; ಸಂಸಾರವು ಪ್ರಕೃತಿಪುರುಷರ ಅನ್ಯೋನ್ಯಾಭೇದಭ್ರಮದಿಂದ ಹುಟ್ಟುವುದು; ಪ್ರಕೃತಿಪುರುಷ ವಿವೇಕದಿಂದ ಮೋಕ್ಷವುಂಟಾಗುವುದು—ಎನ್ನುವರು. ಇವರೇ ನಿರೀಶ್ವರ ಸಾಂಖ್ಯರು. (೭) ಯೋಗಿಗಳು (ಪಾತಂಜಲಯೋಗಮತದವರು)—ಇವರೂ ಸಾಂಖ್ಯರಂತೆಯೇ ಪ್ರಕೃತಿಯೇ ಜಗತ್ಕಾರಣ; ಜೀವಾತ್ಮರು ಚೇತನರು, ಅನೇಕರು, ಪ್ರತಿಶರೀರದಲ್ಲಿಯೂ ಬೇರೆ ಬೇರೆ ಇರುವರು, ಎಂದು ಹೇಳುವರು. ಆದರೆ ಸರ್ವೇಶ್ವರನಿರುವನು; ಯೋಗಜ್ಞಾನಪೂರ್ವಕವಾಗಿ ಈಶ್ವರೋಪಾಸನೆಯಿಂದ ಮೋಕ್ಷವುಂಟಾಗುವುದು—ಎಂದು ಹೇಳುವರು. (೮) ಪೂರ್ವಮೀಮಾಂಸಕರು—ಇವರಲ್ಲಿ ಕುಮಾರಿಲಭಟ್ಟ ಮತಾನುಸಾರಿಗಳಾದ ಭಾಟ್ಟರು ಎಂದೂ ಪ್ರಭಾಕರ ಮತಾನುಸಾರಿಗಳಾದ ಪ್ರಾಭಾಕರರು ಎಂದೂ ಎರಡು ಪಂಗಡ. ಇವರಿವರಿಗೆ ಎಷ್ಟೆಷ್ಟೋ ಒಳವಿವಾದಗಳಿದ್ದರೂ, ಆತ್ಮ, ಜಗತ್ತು, ಈಶ್ವರಾನಂಗೀಕಾರ ಈ ವಿಷಯಗಳಲ್ಲಿ ಏಕೀಭವಿಸಿರುವರು. ಇವರ ಮತದಲ್ಲಿ ಜಗತ್ತು ಪ್ರವಾಹರೂಪವಾಗಿ ನಿತ್ಯ, ಸತ್ಯ; ಸೃಷ್ಟಿ ಪ್ರಳಯಗಳು ಇಲ್ಲ; ಜೀವಾತ್ಮರು ದೇಹೇಂದ್ರಿಯಮನಃ ಪ್ರಾಣವಿಲಕ್ಷಣರಾಗಿ ವಿಭುವಾಗಿ ಪ್ರತಿಶರೀರ ಭಿನ್ನರಾಗಿದ್ದು ಅನಾದಿ

ಕರ್ಮವಶದಿಂದ ಸಂಸಾರವನ್ನು ಹೊಂದಿರುವರು; ಫಲಕಾಮನಾರಹಿತವಾಗಿ, ವೇದವಿಹಿತವಾದ ಯಜ್ಞಾದಿ ಕರ್ಮಗಳನ್ನು ಮಾಡಿದುದರಿಂದುಂಟಾದ ಅಪೂರ್ವವೇ ಮೋಕ್ಷಹೇತು, ಆ ಮೋಕ್ಷವು ಕೇವಲಾತ್ಮಪ್ರಾಪ್ತಿರೂಪ—ಎಂದು ಹೇಳುವರು (೯) ಶುದ್ಧಾದ್ವೈತಿಗಳು (ಶಾಂಕರರು)—ನಿರ್ವಿಶೇಷ ಚಿನ್ಮಾತ್ರಬ್ರಹ್ಮವೇ ತತ್ತ್ವ, ಅದು ಒಂದೇ ಸತ್ಯ, ಪ್ರಪಂಚವೆಲ್ಲವೂ ಅಸತ್ಯ; ಆ ಚಿನ್ಮಾತ್ರಬ್ರಹ್ಮವು ಮಾಯಾ ಶಬಳವಾಗಿ ಭ್ರಮಿಸುವುದೇ ಸಂಸಾರ, ವಾಕ್ಯಜನ್ಯ ಜ್ಞಾನದಿಂದ ಆ ಭ್ರಮನಿವೃತ್ತಿಯೇ (ಅವಿದ್ಯಾನಿವೃತ್ತಿಯೇ) ಮೋಕ್ಷ—ಎನ್ನುವರು. (೧೦) ಭಾಸ್ಕರಮತದವರು—ಆ ಬ್ರಹ್ಮವೇ ಸತ್ಯೋಪಾಧಿ ಮಿಶ್ರವಾಗಿದ್ದುಕೊಂಡು ಭ್ರಮಿಸುವುದೇ ಸಂಸಾರ. ವರ್ಣಾಶ್ರಮ ಧರ್ಮಯುಕ್ತವಾಗಿ ವಾಕ್ಯಜನ್ಯಜ್ಞಾನ ಪೂರ್ವಕವಾದ ಉಪಾಸನಾತ್ಮಕ ಜ್ಞಾನದಿಂದ ಆ ಉಪಾಧಿನಾಶವೇ ಮೋಕ್ಷ—ಎನ್ನುವರು (೧೧) ಯಾದವಪ್ರಕಾಶ ಮತದವರು—ಚಿದಚಿದೀಶ್ವರರು ಎಂಬ ಈ ಮೂವರೂ ಸನ್ಮಾತ್ರಬ್ರಹ್ಮದ ಪರಿಣಾಮವು, ಆ ಬ್ರಹ್ಮವು ಈ ಚಿದಚಿದೀಶ್ವರ ರೂಪವಾಗಿದ್ದುಕೊಂಡು ಭ್ರಮಿಸಿರುವುದು, ಅದಕ್ಕುಂಟಾದ ಈ ಭೇದಜ್ಞಾನವೇ ಸಂಸಾರ, ಜ್ಞಾನಕರ್ಮ ಸಮುಚ್ಚಯದಿಂದ ಭೇದಜ್ಞಾನ ಹೋಗುವುದೇ ಮೋಕ್ಷ—ಎನ್ನುವರು. (೧೨) ದ್ವೈತಿಗಳು—ಇವರು ಈ ಪ್ರಪಂಚಕ್ಕೆ ಪ್ರಕೃತಿಯೇ ಉಪಾದಾನಕಾರಣವು, ಬ್ರಹ್ಮಸ್ವರೂಪವು ಪ್ರಪಂಚಕ್ಕೆ ನಿಮಿತ್ತಕಾರಣ ಮಾತ್ರವು, ಗುಣಗುಣಿಗಳಿಗೆ ಅಭೇದವುಂಟು, ಚೇತನಾಚೇತನಗಳು ಬ್ರಹ್ಮಶರೀರವಲ್ಲ, ಜೀವಸ್ವರೂಪಗಳಿಗೆ ಅನ್ಯೋನ್ಯ ತಾರತಮ್ಯವುಂಟು, ಯೋಗ್ಯತಾನುಸಾರವಾಗಿ ಸ್ವರೂಪಾನಂದಾವಿರ್ಭಾವವೇ ಮೋಕ್ಷವು—ಎನ್ನುವರು.

ಹೀಗೆ ಮೋಕ್ಷ, ಮೋಕ್ಷೋಪಾಯಗಳ ವಿಷಯದಲ್ಲಿ ಅಭಿಪ್ರಾಯ ಭೇದವಿದ್ದರೂ ದುಃಖನಿವೃತ್ತಿ ಪೂರ್ವಕವಾದ ಸುಖಪ್ರಾಪ್ತಿಯೇ ಮೋಕ್ಷವೆಂದು ಎಲ್ಲರೂ ಒಪ್ಪಿರುವರು.

ಈ ವಿಶಿಷ್ಟಾದ್ವೈತಮತದಲ್ಲಿ—ಚಿತ್, ಅಚಿತ್, ಈಶ್ವರ ಎಂದು ತತ್ತ್ವಗಳು ಮೂರು. ಅವು ಸ್ವರೂಪತಃ ಬೇರೆ ಬೇರೆ, ಇತ್ಯಾದಿ ವಿಷಯಗಳನ್ನು ಪೂರ್ವ ಪ್ರಕರಣಗಳಲ್ಲಿಯೇ ವಿಶದವಾಗಿ ವಿವರಿಸಿರುವೆವು.

ವಿಶಿಷ್ಟಾದ್ವೈತಸಿದ್ಧಾಂತದಲ್ಲಿ ಮೋಕ್ಷಸ್ವರೂಪ

೭೭. ಅವಿದ್ಯಾ ಕರ್ಮವಾಸನಾದಿ ಸಕಲ ಪ್ರತಿಬಂಧಕ ನಿವೃತ್ತಿ ಪೂರ್ವಕವಾಗಿ ಅಪ್ರಾಕೃತ ವೈಕುಂಠಲೋಕದಲ್ಲಿ ಸೇರಿ ಗುಣವಿಗ್ರಹ

ವಿಭೂತಿವಿಶಿಷ್ಟನಾದ ಪರಬ್ರಹ್ಮನ ಅನುಭವದಿಂದಲೂ ಕೈಂಕರ್ಯದಿಂದಲೂ ಪಡೆದ ನಿತ್ಯ ನಿರತಿಶಯಾನಂದವೇ ಮೋಕ್ಷವು.

ಮೋಕ್ಷಸ್ವರೂಪವನ್ನು ವಿವರಿಸಲು ಹೊರಟ ಈ ಸೂತ್ರವಾಕ್ಯದಲ್ಲಿ— ಸಕಲ ಪ್ರತಿಬಂಧಕ, ನಿವೃತ್ತಿ, ಅಪ್ರಾಕೃತ, ವೈಕುಂಠಲೋಕ, ಗುಣವಿಗ್ರಹ ವಿಭೂತಿವಿಶಿಷ್ಟ, ಪರಬ್ರಹ್ಮ, ಅನುಭವ, ಕೈಂಕರ್ಯ ಎಂಬ ಎಂಟು ಮುಖ್ಯವಾದ ಪದಗಳಿರುವುವು. ಕ್ರಮವಾಗಿ ಈ ಪದಗಳ ಅರ್ಥವನ್ನು ವಿವರಿಸುತ್ತ ಘಟ್ಟಾರ್ಥವನ್ನು ವಿಶದಪಡಿಸುತ್ತೇವೆ:—

(೧) **ಸಕಲಪ್ರತಿಬಂಧಕ**—ಮೋಕ್ಷವೆಂದರೆ ಬಿಡುಗಡೆ; ಈ ಸಂಸಾರದಿಂದ ಬಿಡುಗಡೆಹೊಂದಿ ಸುಖವನ್ನು ಹೊಂದುವುದು ಎಂದರ್ಥ. ಪರಮಾನಂದರೂಪವಾದ ಈ ಮೋಕ್ಷವನ್ನು ಹೊಂದಲು ಪ್ರತಿಬಂಧಕಗಳು ಯಾವುವೆಂದರೆ—ಈ ಸಂಸಾರಚಕ್ರದಲ್ಲಿ ನಾನಾವಿಧ ದುಃಖಪರಂಪರೆಗಳನ್ನು ಅನುಭವ ಪಡಿಸುವ ಕರ್ಮಾದಿಸಂಬಂಧಗಳು (ಪುಟ ೩೧-೩೩). ಈ ಜೀವಾತ್ಮರು ಸರ್ವೇಶ್ವರನ ಸ್ವರೂಪವನ್ನೂ ತಮ್ಮ ಸ್ವರೂಪವನ್ನೂ ಮರೆತು, ದೇಹದಲ್ಲಿ ಆತ್ಮನೆಂಬ ಬುದ್ಧಿಯನ್ನೂ, ದೇಹಕ್ಕೆ ಸಂಬಂಧಿಸಿದ ವಸ್ತುಗಳಲ್ಲಿ ನನ್ನದು ಎಂಬ ಬುದ್ಧಿಯನ್ನೂ, ಶಬ್ದಾದಿವಿಷಯಗಳಲ್ಲಿ ಭೋಗ್ಯತಾ ಬುದ್ಧಿಯನ್ನೂ ಪಡೆದು, ಅದರಿಂದ ನಾನಾವಿಧ ಕಷ್ಟಗಳನ್ನು ಅನುಭವಿಸಿ ಮರಣಾನಂತರ ರೌರವಾದಿ ನರಕಗಳಲ್ಲಿ ನವೆದು ಕರ್ಮಶೇಷಫಲಾನುಭವಕ್ಕಾಗಿ ತಿರುಗಿ ಈ ಲೋಕಕ್ಕೆ ಬಂದು ಯಾವುವೋ ಶರೀರಗಳನ್ನು ಪರಿಗ್ರಹಿಸುವರು. ಇದೇ ಸಂಸಾರಚಕ್ರದಲ್ಲಿ ಸುತ್ತಾಟವೆಂಬುದು. ಈರೀತಿ ಜನ್ಮ ಜರಾ ಮರಣ ನರಕಾದಿಗಳಲ್ಲಿ ದುಃಖಪರಂಪರೆಗಳನ್ನು ಅನುಭವಪಡಿಸುವ ಅವಿದ್ಯಾಕರ್ಮವಾಸನಾಸಂಬಂಧವು ಮೋಕ್ಷಕ್ಕೆ ಪ್ರತಿಬಂಧಕವಾಗಿರುವುವು.

(೨) **ಈ ಪ್ರತಿಬಂಧಕಗಳ ನಿವೃತ್ತಿಕ್ರಮ**—ಭಗವತ್ಕಟಾಕ್ಷದಿಂದ ಭಗವದ್ಭಾಗವತ ವಿಷಯದಲ್ಲಿ ಅಭಿಮುಖ್ಯವುಂಟಾಗಿ, ಕುಲ ಶೀಲ ಜ್ಞಾನಾನುಷ್ಠಾನ ಸಂಪನ್ನನಾದ ಆಚಾರ್ಯನಲ್ಲಿ ಸಮಾಶ್ರಯಿಸಬೇಕು. ಅವನ ಉಪದೇಶಾನುಗ್ರಹಗಳಿಂದ ತ್ಯಾಜ್ಯೋಪಾದೇಯ ನಿಶ್ಚಯವನ್ನು ಪಡೆದು, ಇತರ ಪುರುಷಾರ್ಥಗಳಲ್ಲಿ ವೈರಾಗ್ಯವನ್ನೂ, ಮೋಕ್ಷದಲ್ಲಿ ಅತ್ಯಾದರವನ್ನೂ ಹೊಂದಿ ಪಂಚಸಂಸ್ಕಾರ ಸಂಪನ್ನ

ಪಂಚಸಂಸ್ಕಾರಗಳು—ತಾಪಃ ಪುಂಡ್ರಸ್ತಥಾ ನಾಮ ಮಂತ್ರೋ ಯಾಗಶ್ಚ ಪಂಚಮಃ ।
ಅಮೀ ತು ಪಂಚಸಂಸ್ಕಾರಾಃ ಪಾರಮೈಕಾಂತ್ಯಹೇತವಃ.

ತಾಪ=ತಪ್ತಚಕ್ರಾದಿ ಮುದ್ರಣ; ಪುಂಡ್ರ=[illegible]ರ್ಧ್ವಪುಂಡ್ರಧಾರಣ (ತಿರುಮಣ್ ಕಾಪ್ಪು); ನಾಮ=ದಾಸ್ಯನಾಮಧಾರಣ; ಮಂತ್ರ=ರಹಸ್ಯತ್ರಯ ಮಂತ್ರೋಪದೇಶ, ಅವುಗಳ ಅರ್ಥಜ್ಞಾಪನ; ಯಾಗ=ಭಗವದಾರಾಧನ ಕ್ರಮೋಪದೇಶ.

ನಾಗಬೇಕು. ಹೀಗೆ ಸಂಸ್ಕಾರಗಳಿಂದ ಶುದ್ಧನಾದಮೇಲೆ ಸಿದ್ಧೋಪಾಯಸ್ವೀಕಾರವನ್ನುಮಾಡಿ, ಪ್ರಪತ್ತಿಮಂತ್ರದಿಂದ ಆತ್ಮಸಮರ್ಪಣೆಯನ್ನು ಮಾಡಲು, ಆಗ ಭಗವಂತನು 'ಇವನು ನನ್ನವನು, ಇವನ ಸರ್ವರಕ್ಷಣಭರವೂ ನನ್ನದು' ಎಂದು ಈ ಚೇತನನಲ್ಲಿ ಅಭಿಮಾನವನ್ನಿಡುವನು. ಭಗವದಭಿಮಾನಪಾತ್ರನಾದಮೇಲೆ ಪ್ರತಿನಿತ್ಯವೂ ರಹಸ್ಯತ್ರಯಮಂತ್ರಗಳ ಅರ್ಥಾನುಸಂಧಾನವನ್ನು ಮಾಡುತ್ತಿದ್ದರೆ, ಅದರಿಂದ ಕ್ರಮವಾಗಿ ಚೇತನನಿಗೆ ಸ್ವಸ್ವರೂಪ, ಪರಸ್ವರೂಪ, ಪುರುಷಾರ್ಥ ಸ್ವರೂಪಗಳ ಜ್ಞಾನವು ಚೆನ್ನಾಗಿ ಪರಿಪಕ್ವವಾಗಿ (ಪುಟ ೭೭-೮೦) ಸರ್ವೇಶ್ವರನೇ ಸರ್ವರಕ್ಷಕನೆಂಬ ದೃಢನಿಶ್ಚಯವೂ ತನ್ನಲ್ಲಿ ಆಕಿಂಚನ್ಯ† ಅನನ್ಯಗತಿಕತ್ವ‡ಗಳ ಜ್ಞಾನವೂ ಮನಸ್ಸಿನಲ್ಲಿ ನೆಲೆನಿಲ್ಲುವುವು. ಅನಂತರದಲ್ಲಿ ಈಶ್ವರನ ಅಖಿಲಹೇಯ ಪ್ರತ್ಯನೀಕತ್ವಶಕ್ತಿಯಿಂದ (ಪು ೭೧) ಆಶ್ರಿತಚೇತನನ ಅವಿದ್ಯಾಕರ್ಮವಾಸನಾ ರೂಪವಾದ ಮೋಕ್ಷಪ್ರತಿಬಂಧಕಗಳೆಲ್ಲವೂ ನಷ್ಟವಾಗುವುವು. ಆಮೇಲೆ ಚೇತನನಿಗೆ ಭಗವತ್ಪ್ರಾಪ್ತಿಯಲ್ಲಿ ತ್ವರೆಯೂ, ಭಗವಂತನಿಗೆ 'ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂ ಗತಿಂ'§ ಎಂಬಂತೆ ಆ ಚೇತನನಲ್ಲಿ ಅಭಿಮಾನಪೂರ್ವಕ ಸ್ಮರಣವೂ ಉಂಟಾಗುವುವು.

(೩) ಅಪ್ರಾಕೃತ— ಎಂಬ ಪದಕ್ಕೆ ಪ್ರಕೃತಿಯ ಎಲ್ಲೆಯನ್ನು ಅತಿಕ್ರಮಿಸಿದ ಮೇಲೆ ಭಗವದನುಗ್ರಹದಿಂದ ದೊರೆವ–ಎಂದರ್ಥ. (ಇದು ವೈಕುಂಠಲೋಕಕ್ಕೆ ವಿಶೇಷಣವಾಗಿ ಮೇಲಣ ಸೂತ್ರವಾಕ್ಯದಲ್ಲಿ ಹೇಳಲ್ಪಟ್ಟಿದೆ.) ಅಂಥ ಪ್ರಪನ್ನನಾದ ಚೇತನನಿಗೆ ಅವನ ದೇಹಾವಸಾನಕಾಲದಲ್ಲಿ, ಹೃದಯಾಂತಸ್ಸ್ಥಿತನಾದ ಹಾರ್ದ ಪುರುಷನ (ಭಗವಂತನ) ಅನುಗ್ರಹದಿಂದ ಮಾರ್ಗವಿಶೇಷಪ್ರಕಾಶವೂ, ಹೃದಯ ಗುಹೆಯಿಂದ ಹೊರಟು ಬ್ರಹ್ಮರಂಧ್ರದಲ್ಲಿರುವ ಸುಷುಮ್ನಾನಾಡಿಯ ಮೂಲಕವಾಗಿ ದೇಹವನ್ನು ಬಿಟ್ಟು ನಿರ್ಗಮನವೂ, ಬಳಿಕ ಕ್ರಮಕ್ರಮವಾಗಿ ಸೂಕ್ಷ್ಮಶರೀರದಿಂದ ಸೂರ್ಯಮಂಡಲವನ್ನು ಭೇದಿಸಿಕೊಂಡು ಹೊರಟು ಮುಂದೆ ಅರ್ಚಿರಾದಿ ಮಾರ್ಗ

† ಮನೋರಥಪ್ರಾಪ್ತಿಗೆ ಕಾರಣವಾಗುವಂತೆ ತನ್ನಲ್ಲಿ ಏನೂ ಇಲ್ಲದಿರುವಿಕೆ, ಉಪಾಯಾಂತರ ಶೂನ್ಯತೆ.

‡ ಸರ್ವೇಶ್ವರನಿಗಿಂತ ಬೇರಾದ ಭಕ್ತ್ಯಾದಿಗಳನ್ನು ಉಪಾಯವನ್ನಾಗಿ ಪಡೆಯದಿರುವಿಕೆ, ಸಿದ್ಧೋಪಾಯ ನಿಷ್ಠೆ.

§ ಆ ಚೇತನನ ಅಂತಿಮದಶೆಯಲ್ಲಿ ನಾನೇ ಅವನನ್ನು ನೆನೆಸಿಕೊಳ್ಳುವೆನು, ಅವನನ್ನು ಮೋಕ್ಷಕ್ಕೆ ಕರೆದುಕೊಂಡುಹೋಗುವೆನು—ಎಂದು ವರಾಹ ಚರಮಶ್ಲೋಕ ತಾತ್ಪರ್ಯ.

ಗಮನವೂ, ಅಲ್ಲಲ್ಲಿ ಆತಿವಾಹಿಕ* ಸತ್ಕಾರವೂ, ಆವರಣಾತಿಕ್ರಮಣವೂ, ಪ್ರಕೃತಿ ಸೀಮಾತಿಕ್ರಮಣವೂ, ವಿರಜಾನದೀಸ್ನಾನವೂ, ಅದರಿಂದ ಅಲ್ಲಿ ವಾಸನಾರೇಣುವನ್ನೂ† ಸೂಕ್ಷ್ಮಶರೀರವನ್ನೂ ತೊಲಗಿಸಿಕೊಂಡು ಅಮಾನವ ಕರಸ್ಪರ್ಶವೂ, ಭಗವತ್ಸಂಕಲ್ಪಸಿದ್ಧವಾದ ಅಪ್ರಾಕೃತ ದಿವ್ಯದೇಹಪ್ರಾಪ್ತಿಯೂ, ಅಪಹತ ಪಾಪ್ಮತ್ವಾದಿ ಗುಣಗಣಪ್ರಾದುರ್ಭಾವವೂ ಉಂಟಾಗುವುವು.

(೪) ವೈಕುಂಠಲೋಕಪ್ರಾಪ್ತಿ—ಅನಂತರದಲ್ಲಿ ಕಾಲಕೃತಪರಿಣಾಮವಿಲ್ಲದ ನಿತ್ಯಾನಂದಮಯವಾದ ವೈಕುಂಠಲೋಕಕ್ಕೆ ಪ್ರವೇಶವನ್ನು ಮಾಡಿ ದಿವ್ಯಾಲಂಕಾರಗಳಿಂದ ಅಲಂಕೃತನಾಗಿ, ಗರುಡನು ತಂದ ದಿವ್ಯವಿಮಾನದಮೇಲೆ ಕುಳಿತು, ಅಪ್ರಾಕೃತ ದಿವ್ಯಗೋಪುರಮಾರ್ಗವಾಗಿ ವೈಕುಂಠ ದಿವ್ಯನಗರವನ್ನು ಪ್ರವೇಶಿಸಿ, ಆನಂದಮಯವಾದ ದಿವ್ಯಾಸ್ಥಾನಮಂಟಪವನ್ನು ಕ್ರಮದಿಂದ ಸೇರುವನು. (ಈ ವಿಷಯವು ಕೌಷೀತಕ್ಯುಪನಿಷತ್ತಿನಲ್ಲಿ ವಿಶದವಾಗಿದೆ.)

(೫) ಗುಣವಿಗ್ರಹವಿಭೂತಿವಿಶಿಷ್ಟ (ಪರಬ್ರಹ್ಮ) – ಆ ದಿವ್ಯಾಸ್ಥಾನಮಂಟಪದಲ್ಲಿ, ಸರ್ವಾಶ್ಚರ್ಯಮಯವಾದ ದಿವ್ಯಸಿಂಹಾಸನದಲ್ಲಿ, ನಾನಾಶಕ್ತಿಮಯವಾದ ದಿವ್ಯಕಮಲದ ಮೇಲುಗಡೆ ಸಕಲವಿಧ ಕೈಂಕರ್ಯನಿರತನಾದ ಆದಿಶೇಷನ ಮೇಲೆ ಬಿಜಯಮಾಡಿರುವ, ಜ್ಞಾನ ಶಕ್ತಿ ಬಲೈಶ್ವರ್ಯಾದಿ ಸಕಲ ಕಲ್ಯಾಣಗುಣಗಳಿಂದಲೂ ಕಾಂತಿ ಸೌಕುಮಾರ್ಯ ಲಾವಣ್ಯ ಯೌವನಾದಿ ಗುಣಾಲಂಕೃತವಾದ ದಿವ್ಯಮಂಗಳ ವಿಗ್ರಹದಿಂದಲೂ ಅನಂತಾನಂತ ಪರಿಜನ ಪರಿಚಾರಕ ಪರಿಚ್ಛದಗಳಿಂದಲೂ ನಿತ್ಯಮುಕ್ತರಿಂದಲೂ ಕೂಡಿದ ಸರ್ವೇಶ್ವರನಾದ ಶ್ರೀಮನ್ನಾರಾಯಣನನ್ನು ಕಂಡು ಸಾಷ್ಟಾಂಗಪ್ರಣಾಮವನ್ನು ಮಾಡುವನು ಆ ದಿವ್ಯಮಂಗಳ ವಿಗ್ರಹವು‡ ಭಗವಂತನಿಗೆ ಸ್ವರೂಪಗುಣಗಳಾದ ಜ್ಞಾನಶಕ್ತ್ಯಾದಿ ಷಡ್ಗುಣಗಳಿಗಿಂತ ಅತ್ಯಂತಾಭಿಮತವಾಗಿ, ಅನುರೂಪವಾಗಿ, ಪಂಚೋಪನಿಷನ್ಮಯವಾಗಿ, ನಿತ್ಯವಾಗಿ ಏಕರೂಪವಾಗಿ, ದಿವ್ಯಾತ್ಮಸ್ವರೂಪಕ್ಕೆ ಪ್ರಕಾಶಕವಾಗಿ, ನಿರವಧಿಕತೇಜೋರೂಪವಾಗಿ, ಯೋಗಿಧ್ಯೇಯವಾಗಿ, ಸಕಲ ಪಾಪಹರವಾಗಿ, ಸರ್ವಭೂಷಣಾಲಂಕೃತವಾಗಿ, ಸಕಲಜನ ಮನೋನೇತ್ರಾಕರ್ಷಕವಾಗಿ, ಸರ್ವಾವತಾರಮೂಲವಾಗಿ, ಸರ್ವಾಶ್ಚರ್ಯಮಯವಾಗಿ ಇರುವುದು.

(೬) ಪರಬ್ರಹ್ಮ—ಹೀಗೆ ಮುಕ್ತಪ್ರಾಪ್ಯವಾದ ಪರಬ್ರಹ್ಮವು ನಾರಾಯಣನೇ; ಪರತ್ವ ಚಿಹ್ನಗಳಾದ ಜಗತ್ಕಾರಣತ್ವ, ಮುಮುಕ್ಷೂಪಾಸ್ಯತ್ವ, ಮೋಕ್ಷಪ್ರದತ್ವ

---

* ವೈಕುಂಠಕ್ಕೆ ಹೋಗುವಾಗ ದಾರಿತೋರಿಸಿ ಸತ್ಕಾರಮಾಡಿ ಸಹಾಯಮಾಡುವವರು.

† ಸಂಸಾರವಾಸನೆಯೆಂಬ ಕೊಳೆ, ಇದನ್ನು ವಿರಜಾಸ್ನಾನದಿಂದ ಕಳೆವುದು.

‡ ದಿವ್ಯಮಂಗಳವಿಗ್ರಹದ ಯಥಾವಸ್ಥಿತವರ್ಣನವು—ಸ್ತೋತ್ರರತ್ನ, ವೈಕುಂಠಗದ್ಯ, ಪಂಚಸ್ತವ, ಪಾಂಚರಾತ್ರ ಶಾಸ್ತ್ರಸಂಹಿತೆಗಳು—ಇವುಗಳಲ್ಲಿ ವಿಶದವಾಗಿದೆ.

ಮುಂತಾದುವುಗಳು ನಾರಾಯಣನಿಗೊಬ್ಬನಿಗಲ್ಲದೆ ಮತ್ತೆ ಯಾರಿಗೂ ಇಲ್ಲ ಎಂದೂ, ಆದುದರಿಂದ ನಾರಾಯಣನೇ ಪರತತ್ತ್ವ, ನಾರಾಯಣನೇ ಪರಬ್ರಹ್ಮ ಎಂದೂ, ಮಹೋಪನಿಷತ್ತು, ಸುಬಾಲೋಪನಿಷತ್ತು, ನಾರಾಯಣೋಪನಿಷತ್ತು ಇವುಗಳೂ, ಸಕಲ ವೇದಗಳೂ, ಶ್ರೀ ರಾಮಾಯಣ ಮಹಾಭಾರತ ಎಂಬ ಇತಿಹಾಸಗಳೂ, ಪಾದ್ಮ ಮುಂತಾದ ಸಾತ್ತ್ವಿಕ ಪುರಾಣಗಳೂ* ಘಂಟಾಘೋಷವಾಗಿ ಹೇಳಿ ವಿಶದಪಡಿಸಿರುವುವು.

(೭) ಬ್ರಹ್ಮಾನುಭವ—ಆನಂದಮಯನಾದ ಈ ಪರಬ್ರಹ್ಮನನ್ನು ನಿತ್ಯವಾಗಿ ಅನುಭವಿಸುತ್ತ, ಮುಕ್ತರು ನಿರತಿಶಯಾನಂದವನ್ನು ಪಡೆವರು. ಆ ಬ್ರಹ್ಮಾನಂದಕ್ಕೆ ಪಾರವೇ ಇಲ್ಲ. ವಿಚ್ಛಿತ್ತಿಯೇ ಇಲ್ಲ, ದುಃಖಗಂಧವೇ ಇಲ್ಲ, ಅದಕ್ಕಿಂತ ಮೇಲಾದ ಮತ್ತೊಂದು ಆನಂದ ಇಲ್ಲವೇ ಇಲ್ಲ, ಎಂದು ವೇದಾಂತಶಾಸ್ತ್ರಗಳಲ್ಲಿ ವಿಶದವಾಗಿರುವುದು.

(೮) ಕೈಂಕರ್ಯ—ಈರೀತಿಯಾಗಿ ಕೊನೆಮೊದಲಿಲ್ಲದ ನಿತ್ಯವಾದ ಘನವಾದ ಬ್ರಹ್ಮಾನಂದವನ್ನು ಅನುಭವಿಸುತ್ತ ಇರುವ ಮುಕ್ತರು, ಈ ಪರಮಾನಂದವನ್ನು ತಮಗೆ ದಯಪಾಲಿಸಿದ ಪರಬ್ರಹ್ಮನಾದ ಶ್ರೀಮನ್ನಾರಾಯಣನಲ್ಲಿ ನಿರತಿಶಯವಾದ ಪ್ರೀತಿಯಿಂದ "ಯೇನ ಯೇನ ಧಾತಾ ಗಚ್ಛತಿ" ಎಂಬಂತೆ ಸರ್ವವಿಧವಾದ ಕಿಂಕರವೃತ್ತಿಗಳನ್ನೂ ಪ್ರೀತಿಪ್ರೇರಿತರಾಗಿಯೇ ಮಾಡುತ್ತ, ಆ ನಾರಾಯಣನ ಮುಖೋಲ್ಲಾಸದಿಂದ ನಿತ್ಯತೃಪ್ತರಾಗಿ ಮತ್ತಷ್ಟು ನಿರತಿಶಯಾನಂದವನ್ನು ಅನುಭವಿಸುತ್ತಿರುವರು.

ಪ್ರಶ್ನೆ – ಮೋಕ್ಷದಲ್ಲಿ ಆನಂದಮಯವಾದ ಬ್ರಹ್ಮಾನುಭವದಂತೆ ಕೈಂಕರ್ಯವೂ ಇರಬೇಕೆಂದು ಅಂಗೀಕರಿಸುವುದು ಸಂಗತವೋ ? ಕೈಂಕರ್ಯವೆಂದರೆ ಕಿಂಕರವೃತ್ತಿ (ಸೇವಾವೃತ್ತಿ, ದಾಸಭಾವ). ಆ ಕಿಂಕರವೃತ್ತಿ ದುಃಖರೂಪವಾಗಿಯೇ ಅಲ್ಲವೆ ಲೋಕದಲ್ಲಿ ಎಲ್ಲೆಲ್ಲಿಯೂ ಅನುಭವದಿಂದ ಗೊತ್ತಾಗಿರುವುದು ? ಅಲ್ಲದೆ 'ಸರ್ವಂ ಪರವಶಂ ದುಃಖಂ' ಎಂದು ನಿಂದಿತವಾಗಿಯೂ ಇರುವಲ್ಲಿ ಅದೇ ಪುರುಷಾರ್ಥವೆಂದು ಹೇಳಬಹುದೇ ?

ಉತ್ತರ—ಲೋಕದಲ್ಲಿ ಕಿಂಕರಭಾವವೆಲ್ಲಾ ಅಪುರುಷಾರ್ಥವಲ್ಲ; ಪ್ರಿಯತಮ ವಿಷಯದಲ್ಲಿ ಕೈಂಕರ್ಯವು ಪುರುಷಾರ್ಥವಾಗಿಯೇ ಇರುವುದು ಎಂಬುದು ಸಂಸಾರಿಗಳಿಗೆಲ್ಲರಿಗೂ ಅನುಭವಸಿದ್ಧವಾಗಿಯೇ ಇರುವುದು. ಕಿಂಕರವೃತ್ತಿ ಎಂದು ನಿಷೇಧಿಸಿದುದು ಇತರಸೇವೆಯನ್ನು, ಪುರುಷಾರ್ಥವಾದ ಸೇವೆಯನ್ನಲ್ಲ; ಪರಮಾತ್ಮಕೈಂಕರ್ಯವು ಪುರುಷಾರ್ಥವಾಗಿದೆ ಎಂಬುದು ಧರ್ಮಿಗ್ರಾಹಕಪ್ರಮಾಣ

---

* ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ ।
ಆದೌ ಮಧ್ಯೇ ತಥಾಂತೇ ಚ ವಿಷ್ಣುಸ್ಸರ್ವತ್ರ ಗೀಯತೇ ॥

ದಿಂದ ಸಿದ್ಧವಾಗಿದೆ. ಅಲ್ಲದೆ ಕೇವಲ ಸಾಧಕತ್ವದಿಗೆ [illegible] ಅಸಮ್ಮತವಾಗಿಯೂ ಶಿಕ್ಷಾರೂಪವಾಗಿಯೂ ಪಾಪಫಲರೂಪವಾಗಿಯೂ ಬಂದದ್ದೆ ಆಗ ಅಪುರುಷಾರ್ಥವಾಗುವುದು. ಇಲ್ಲಿ ಪ್ರಯುಕ್ತವಾದ [illegible] ಪರಮಾತ್ಮನಿಂದ ಮುಕ್ತನಾದುದರಿಂದಲೂ, ಅದನ್ನು ಪ್ರೀತಿಪೂರ್ವಕವಾಗಿ ತಾನೇ ಅಪೇಕ್ಷಿಸಿ ಮಾಡುವುದರಿಂದಲೂ ಅಸಮ್ಮತವಲ್ಲ, ಶಿಕ್ಷಾರೂಪವೂ ಅಲ್ಲ, ‘[illegible]’ ಎಂದು ವ್ಯಾಖ್ಯಾನಕಾರರು [illegible] ಬಿಟ್ಟೇ ಮೋಕ್ಷಕ್ಕೆ ಬಂದಿರುವುದರಿಂದ ಪಾಪಾ[illegible].

ಪ್ರಶ್ನೆ—ಮೋಕ್ಷದಶೆಯಲ್ಲಿ ಜೀವಾತ್ಮನಿಗೆ ‘ಪರಬ್ರಹ್ಮನೊಂದಿಗೆ’ ಐಕ್ಯವುಂಟಾಗುವುದು ಎಂದು ಹೇಳಿರುವುದರಿಂದ ಕೈಂಕರ್ಯವು ಎಂಬುದು ಹೇಗೆ ಸಂಗತ?

ಉತ್ತರ—ಆಗಲೂ ಐಕ್ಯ ಇಲ್ಲವೇ ಇಲ್ಲ. ಮೋಕ್ಷಪ್ರತಿಪಾದಕವಾಕ್ಯಗಳಿಗೂ ಹೇಯಯೋಗ್ಯವಾಗಿದ್ದ ಜೀವಾತ್ಮನಿಗೂ ಐಕ್ಯವೆಂಬುದು ಅಗತ್ಯವೇ ಇಲ್ಲ; ಹಾಗೆ ಐಕ್ಯವುಂಟೆಂದರೆ ಮೇಲಿನ— ‘ಪರಮಂ ಸಾಮ್ಯಮುಪೈತಿ’. ಎಂಬುದೇ ಪರಮಾತ್ಮನೊಂದಿಗೆ ಸಮಾನನಾಗುತ್ತಾನೆ [illegible] ವಚನಗಳು ವಿರೋಧಿಸುವುವು.

ಪ್ರಶ್ನೆ—ಛಾಂದೋಗ್ಯದಲ್ಲಿ ‘ಸ ಸ್ವರಾಡ್ ಭವತಿ’ ಎಂದು ಶ್ರುತಿಸಿದ್ಧವಾದ ಸ್ವಾತಂತ್ರ್ಯವು ಹೇಗೆ ಸಂಗತವಾಗುವುದು?

ಉತ್ತರ—‘ಸ ಸ್ವರಾಡ್’ ಎಂಬುದಕ್ಕೆ ಕರ್ಮಾಧೀನನಲ್ಲ ಎಂದು ತಾತ್ಪರ್ಯ. [illegible]

ಪ್ರಶ್ನೆ—ಹಾಗಾದರೆ ಸಾಮ್ಯವು ಹೇಗೆ ಬಂದಿತು?

ಉತ್ತರ—ಭೋಗಮಾತ್ರದಿಂದಲೇ ಸಾಮ್ಯ. ಅದನ್ನೇ ಸಾಮ್ಯವು ಎಂದು ಹೇಳುವುದು.

ಪ್ರಶ್ನೆ—‘ಅಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ’ ಎಂಬಂತೆ ಶರೀರವೇ ಇಲ್ಲದಿರುವ ಮುಕ್ತಜೀವನಿಗೆ ಶರೀರಸಾಧ್ಯವಾದ ಕೈಂಕರ್ಯವೆಂಬುದು ಆಗುವುದೆಂದರೇನು?

ಉತ್ತರ—ಶರೀರವಿಲ್ಲವೆಂದು ಹೇಳುವರು ಹೇಗೆ? “ಸ ಏಕಧಾ ಭವತಿ, ದ್ವಿಧಾ ಭವತಿ, ಶತಧಾ ಭವತಿ, ಸಹಸ್ರಧಾ ಭವತಿ” (ಛಾಂದೋಗ್ಯ ೭-೨೬-೨) ಎಂದು ಶ್ರುತಿಯಲ್ಲಿಯೇ ಮುಕ್ತಜೀವಾತ್ಮನು ತನ್ನ ಪರಮಪುರುಷಾರ್ಥವಾದ ಪರಮಾತ್ಮಕೈಂಕರ್ಯದಲ್ಲಿ ತನಗೆ ಬೇಕೆಂದು ಇಷ್ಟಪಡುವಾಗೆಲ್ಲಾ ನಾನಾ ಶರೀರಗಳನ್ನು

ಪರಿಗ್ರಹಿಸಿ ಅನೇಕ ಶರೀರಗಳಿಂದಲೂ ಕೈಂಕರ್ಯಗಳನ್ನು ಮಾಡುವನು—ಎಂದು ಹೇಳಿರುವುದರಿಂದ ಶರೀರವಿಲ್ಲವೆ ಇಲ್ಲ; 'ಅಶರೀರಂ' ಎಂಬ ವಾಕ್ಯಕ್ಕೆ ಮುಕ್ತನಿಗೆ ಕರ್ಮಕೃತವಾದ ನಶ್ವರವಾದ ಶರೀರವಿಲ್ಲ ಎಂದೇ ಅರ್ಥವು; ಶುದ್ಧ ಸತ್ತ್ವಮಯ ವಾದ ಭಗವದನುಭವಕೈಂಕರ್ಯಯೋಗ್ಯವಾದ ದಿವ್ಯಶರೀರವುಂಟು ಎಂದು ಶ್ರುತಿಯೇ ಹೇಳಿರುವುದು.

ಪ್ರಶ್ನೆ—ಸರ್ವೇಶ್ವರನು ಸ್ವತಂತ್ರನಾಗಿಯೂ ಸತ್ಯಸಂಕಲ್ಪನಾಗಿಯೂ ಇರುವುದರಿಂದ, ಸಂಸಾರಿಯಾದ ಚೇತನನಿಗೆ ಮೋಕ್ಷವನ್ನು ಕೊಟ್ಟಂತೆಯೇ ಮೋಕ್ಷಹೊಂದಿದ ಚೇತನನನ್ನು ತಿರುಗಿ ಸಂಸಾರಕ್ಕೆ ಪುನರಾವೃತ್ತಿಯಿಂದ ಕಳುಹಿಸಲೂ ಬಹುದೋ?

ಉತ್ತರ—ಪರಮದಯಾಳುವಾದ ಸರ್ವೇಶ್ವರನು ಹಾಗೆ ಎಂದೂ ಮಾಡುವುದಿಲ್ಲ, ಕಾರಣವೂ ಇಲ್ಲದುದರಿಂದ ಪುನರಾವೃತ್ತಿಯೆಂದಿಗೂ ಆಗಲಾರದು; ಹೇಗೆಂದರೆ— ಈ ಚೇತನನನ್ನು ಪಡೆಯಲು ಸರ್ವೇಶ್ವರನು, ಜಾಯಮಾನ ಕಟಾಕ್ಷ ಮೊದಲುಗೊಂಡು ಮೋಕ್ಷಲಾಭಪರ್ಯಂತವಾಗಿ ಎಷ್ಟೋ ಕೃಷಿ ಮಾಡಿ 'ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ,' 'ಸ ಮಹಾತ್ಮಾ ಸುದುರ್ಲಭಃ' ಎಂಬ ರೀತಿಯಾಗಿ ತನಗೆ ಅಲಭ್ಯಲಾಭವಾದಂತೆ ಪಡೆದಿರುವ ಇಷ್ಟು ಪ್ರೀತಿಪಾತ್ರನಾದ ಈ ಚೇತನನನ್ನು ತಿರುಗಿ ಪುನರಾವೃತ್ತಿಯಿಂದ ಸಂಸಾರಮಂಡಲಕ್ಕೆ ಕಳುಹಿಸುವುದೇ ಇಲ್ಲ ಮತ್ತು ಈ ಸಂಸಾರಹೇತುವಾದ ಕರ್ಮವು ಈ ಚೇತನನಿಗೆ ನಿಶ್ಶೇಷವಾಗಿ ನಷ್ಟವಾಗಿರುವುದರಿಂದಲೂ ಪುನರಾವೃತ್ತಿಯಿಲ್ಲ; ಅಲ್ಲದೆ 'ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ' ಎಂದು ಪ್ರತಿಜ್ಞೆಯನ್ನು ಮಾಡಿಕೊಟ್ಟಿದ್ದಾನೆ; ಆದುದರಿಂದ ಪುನರಾವೃತ್ತಿ ಪ್ರಸಂಗವೇ ಇಲ್ಲದಂತೆ ಜೀವಾತ್ಮನು ಮೋಕ್ಷದಲ್ಲಿ ನಿತ್ಯಾನಂದವನ್ನು ಅನುಭವಿಸುತ್ತಿರುವನು ಎಂದು ಸಿದ್ಧವಾಯಿತು.

ಆದುದರಿಂದ ಗುಣವಿಗ್ರಹ ವಿಭೂತಿವಿಶಿಷ್ಟನಾದ ಪರಮಾತ್ಮನ ಅನುಭವದಿಂದುಂಟಾದ ಪ್ರೀತಿಕಾರಿತ ಕೈಂಕರ್ಯವೇ ಪರಮಪುರುಷಾರ್ಥವು ಎಂದು ವಿಶಿಷ್ಟಾದ್ವೈತಸಿದ್ಧಾಂತಸಾರವಾಗಿರುವುದು.

ಇದನ್ನೇ ಉಪನಿಷತ್ಸಾರವಾದ ತಿರುವಾಯ್‌ಮೊಳಿಯ (೩-೯-೧) (ಎಮ್ಮಾವೀಟ್ಟು) ಎಂಬ ಶ್ರೀ ಸೂಕ್ತಿಯಲ್ಲಿ ಮೋಕ್ಷಸ್ವರೂಪವನ್ನು ನಿಷ್ಕರ್ಷಿಸಿ (ಒಳಿವಿಲ್ ಕಾಲಮೆಲ್ಲಾಂ) ಎಂಬ ಶ್ರೀ ಸೂಕ್ತಿಯಲ್ಲಿ ಕೈಂಕರ್ಯ ಪ್ರಾರ್ಥನೆಯನ್ನು

ಮಾಡಿ, ಶ್ರೀ ಪರಾಂಕುಶಭಗವತ್ಪಾದರು (ನಮ್ಮಾಳ್ವಾರರು) ವಿವರವಾಗಿ ನಿರೂಪಿಸಿರುವರು. ದ್ರಾವಿಡವೇದವ್ಯಾಖ್ಯಾನದ ಈಡುಮುಪ್ಪತ್ತಾರಾಯಿರಪ್ಪಡಿ ಗ್ರಂಥದಲ್ಲಿ ಈ ಮೋಕ್ಷಸ್ವರೂಪವೆಲ್ಲ ಪ್ರತ್ಯಕ್ಷವಿಷಯವಾಗುವಷ್ಟು ವಿಶದವಾಗಿ ತಿಳಿದುಕೊಳ್ಳಬಹುದು.

ಪ್ರಶ್ನೆ— ವೇದಾಂತಶಾಸ್ತ್ರಪಾಂಡಿತ್ಯವೂ ದ್ರಾವಿಡಪ್ರಬಂಧಾರ್ಥಪಾಂಡಿತ್ಯವೂ ಇಲ್ಲದಿರುವುದರಿಂದ ನಾವು ತಿರುವಾಯ್ಮೊಳಿಯನ್ನು ಈಗ ಓದಲಾಗುವುದಿಲ್ಲ. ಮುಂದೆ ಓದಿ ತಿಳಿದುಕೊಳ್ಳಬೇಕೆಂದು ಅಪೇಕ್ಷೆಯೂ ಇದೆ. ಈಗ ದಿವ್ಯಪ್ರಬಂಧಗಳ ಸ್ವರೂಪ ಸ್ವಭಾವ ವಿಷಯಾರ್ಥಗಳನ್ನು ತಮ್ಮಿಂದ ಕೇಳಬಯಸುತ್ತೇವೆ.

ಉತ್ತರ— ವೇದಾಂತಶಾಸ್ತ್ರಪಾಂಡಿತ್ಯವೂ ದ್ರಾವಿಡಪ್ರಬಂಧಾರ್ಥಪಾಂಡಿತ್ಯವೂ ಇಲ್ಲದವರಿಗೆ ತಿರುವಾಯ್ಮೊಳಿಯ ನಿಜಾರ್ಥವೆಲ್ಲಾ ತಿಳಿಯುವುದು ಅಸಾಧ್ಯ. ರಹಸ್ಯಶಾಸ್ತ್ರ ತಾತ್ಪರ್ಯಗಳನ್ನು ಆಚಾರ್ಯೋಪದೇಶದಿಂದ ತಿಳಿದವರಿಗೆ ಮಾತ್ರವೇ ತಿರುವಾಯ್ಮೊಳಿಯ ರಸಾನುಭವವು ಸುಲಭವಾಗಿ ಸಾಧ್ಯವಾಗುವುದು. ಆದರೂ ಇಲ್ಲಿ ಬಾಲಬೋಧಾರ್ಥವಾಗಿಯೂ, ನಿಮಗೆ ಇನ್ನಷ್ಟು ಮುಂದೆ ದಿವ್ಯಪ್ರಬಂಧಗಳನ್ನು ಓದಿ ತಿಳಿವುದಕ್ಕಾಗಿಯೂ ಅವುಗಳ ಒಟ್ಟು ತಾತ್ಪರ್ಯವನ್ನು ಸಂಗ್ರಹವಾಗಿ ಹೇಳಲು ಯತ್ನಿಸುತ್ತೇವೆ.

೨೨. ದಿವ್ಯಪ್ರಬಂಧಗಳ ಅವತಾರ ಕ್ರಮ

ಸರ್ವೇಶ್ವರನು—ಅಜ್ಞರಾದ ಸಂಸಾರಿಚೇತನರು ಜ್ಞಾನಪ್ರಕಾಶವನ್ನು ಪಡೆದು ಅಜ್ಞಾನವನ್ನು ತೊಲಗಿಸಿಕೊಂಡು ಸದಸದ್ವಿವೇಕವನ್ನು ಪಡೆವುದಕ್ಕಾಗಿ ವೇದಗಳನ್ನೂ ಅವಕ್ಕೆ ಉಪಬೃಂಹಣವಾದ ಶಾಸ್ತ್ರಗಳನ್ನೂ ಪ್ರಕಾಶಪಡಿಸಿದನು. ತ್ಯಾಜ್ಯಗಳನ್ನು ಬಿಡುವುದೂ ಉಪಾದೇಯಗಳನ್ನು ಕೈಕೊಳ್ಳುವುದೂ ವಿವೇಕಫಲವು. ಎಲ್ಲರಿಗೂ ದುಃಖವು ತ್ಯಾಜ್ಯವಾಗಿಯೂ ಸುಖವು ಉಪಾದೇಯವಾಗಿಯೂ ಇರುವುವು. ಅನಂತಕ್ಲೇಶಭಾಜನವಾದ ಈ ಸಂಸಾರದಲ್ಲಿ ಸಿಕ್ಕಿ ನರಳುವುದಕ್ಕಿಂತಲೂ ಮೇಲ್ಪಟ್ಟ ದುಃಖವು ಮತ್ತೊಂದಿಲ್ಲ; ನಿತ್ಯವಿಭೂತಿಯಲ್ಲಿ ಸೇರಿ ಸದಾ ಭಗವದನುಭವಕೈಂಕರ್ಯ ಮಾಡುವುದಕ್ಕಿಂತಲೂ ಮೇಲ್ಪಟ್ಟ ಸುಖವಿಲ್ಲ. ಈ ಸಂಸಾರ ಸಂಬಂಧವೆಂಬ ದುಃಖಕ್ಕೆ ಹೇತು—ಅರ್ಥಪಂಚಕಜ್ಞಾನವಿಲ್ಲದಿರುವಿಕೆಯೇ; ಮೋಕ್ಷವೆಂಬ ಮಹಾನಂದಕ್ಕೆ ಹೇತು—ಅರ್ಥಪಂಚಕಜ್ಞಾನವೇ. ಕೆಲವರಿಗೆ ಅರ್ಥಪಂಚಕಜ್ಞಾನವುಂಟಾಗಲು ಕಾರಣ—ಸತ್ತ್ವಗುಣದಲ್ಲಿ ಹೊದ್ದಿಕೊಂಡಿರುವಿಕೆ. ಕೆಲವರಿಗೆ ಆ ಜ್ಞಾನವುಂಟಾಗದಿರಲು ಕಾರಣ—

ರಜಸ್ತಮೋಗುಣಗಳಲ್ಲಿ ಹೊದ್ದಿಕೊಂಡಿರುವಿಕೆ. ರಜಸ್ತಮೋಗುಣಗಳಿಗೆ ಮೂಲ ಕಾರಣವು ಸಂಸಾರದಲ್ಲಿ ಜನನವು; ಸತ್ತ್ವಗುಣದಲ್ಲಿ ಹೊದ್ದಿಕೊಂಡಿರುವುದಕ್ಕೆ ಕಾರಣವು ಜಾಯಮಾನಕಟಾಕ್ಷವು. ಅನಾದಿಯಿಂದ ಅಚಿತ್ಸಂಬಂಧ ಮೂಲಕವಾಗಿ ಅವಿದ್ಯೆ, ಅದರಿಂದ ಪುಣ್ಯಪಾಪಗಳು, ಆ ಮೂಲಕವಾಗಿ ಜನನವು, ಅದರಿಂದ ರಜಸ್ತಮೋವೃದ್ಧಿ, ಅದರ ಮೂಲಕವಾಗಿ ಅರ್ಥಪಂಚಕಜ್ಞಾನವಿಲ್ಲದಿರುವಿಕೆ, ಅದರಿಂದ ಸಂಸಾರದುಃಖವು ಉಂಟಾಗುವುದು—ಎಂದೂ; ನಾರಾಯಣ ಸಂಬಂಧ ಜ್ಞಾನದಿಂದ ಭಗವತ್ಸೌಹಾರ್ದವು, ಅದರ ಮೂಲಕವಾಗಿ ಕೃಪೆ, ಅದರ ಮೂಲಕವಾಗಿ ಜಾಯಮಾನಕಟಾಕ್ಷ, ಅದರಿಂದ ಸತ್ತ್ವವೃದ್ಧಿ, ಅದರಿಂದ ಅರ್ಥಪಂಚಕ ಜ್ಞಾನ, ಅದರ ಮೂಲಕವಾಗಿ ಮೋಕ್ಷ ಉಂಟಾಗುವುದು—ಎಂದೂ ಹೇಳಿದ ಹಾಗಾಯಿತು. ಶಾಸ್ತ್ರಗಳು ಅನೇಕವಾಗಿಯೂ ಅತಿ ದುರವಗಾಹವಾಗಿಯೂ ಇರುವುದರಿಂದ ಅವುಗಳ ತಾತ್ಪರ್ಯವು ಕೈಸೇರುವಂತೆ ಅಧಿಕರಿಸುವುದು ದುರ್ಲಭವು. ಆದುದರಿಂದ ಸರ್ವೇಶ್ವರನು ಸಂಸಾರಿ ಜನೋಜ್ಜೀವನಕ್ಕಾಗಿ ಬದರಿಕಾಶ್ರಮದಲ್ಲಿ ನರನಾರಾಯಣರೂಪದಿಂದ ತಾನೇ ಶಿಷ್ಯನಾಗಿಯೂ ತಾನೇ ಆಚಾರ್ಯನಾಗಿಯೂ ಅವತರಿಸಿ ಶಿಷ್ಯನಾದ ನರನಿಗೆ ಸಕಲಶಾಸ್ತ್ರ ತಾತ್ಪರ್ಯಸಾರವಾದ ಮೂಲಮಂತ್ರವನ್ನು ಉಪದೇಶಿಸಿ ಪ್ರಕಾಶಗೊಳಿಸಿದನು. ಮನು ವ್ಯಾಸಾದಿಗಳಿಗೆ ಅಂತರ್ಯಾಮಿಯಾಗಿ ನಿಂತು ಅವರುಗಳ ಮೂಲಕವಾಗಿ ಪ್ರಕಾಶಗೊಳಿಸಿದ ಶಾಸ್ತ್ರಗಳಿಗೆಲ್ಲಾ ಚೇತನರ ದೇಹವಿಶಿಷ್ಟರೂಪದಮೇಲೆ ಲಕ್ಷ್ಯವು; ತಾನಾಗಿ ನಿಂತು ಪ್ರಕಾಶಗೊಳಿಸಿದ ಮೂಲಮಂತ್ರಕ್ಕೆ ಚೇತನರ ನಿಷ್ಕೃಷ್ಟರೂಪದಮೇಲೆ ಲಕ್ಷ್ಯವು; ಎಂದರೆ, ಬ್ರಾಹ್ಮಣದೇಹವನ್ನು ಪಡೆದು ದೇಹಸಾಧ್ಯವಾದ ವೇದವಿಹಿತ ಯಜ್ಞಯಾಗಾದಿ ಕರ್ಮಗಳನ್ನೂ ಜ್ಞಾನಯೋಗಾದಿಗಳನ್ನೂ ಆಚರಿಸಿ ಪುರುಷಾರ್ಥಗಳನ್ನು ಪಡೆಯಬೇಕು ಎಂಬುದರಲ್ಲಿ ಶಾಸ್ತ್ರಗಳಿಗೆ ತಾತ್ಪರ್ಯವು; ಇದೇ ಪ್ರವೃತ್ತಿ ಮಾರ್ಗವು. ಸರ್ವೇಶ್ವರನು ತಾನಾಗಿ ನಿಂತು ಪ್ರಕಾಶಗೊಳಿಸಿದ ಮೂಲ ಮಂತ್ರಕ್ಕೆ ಚೇತನರು ಭಗವಚ್ಛೇಷತ್ವ ಪಾರತಂತ್ರ್ಯಜ್ಞಾನದಿಂದ ಪುರುಷಾರ್ಥವನ್ನು ಪಡೆಯಬೇಕು ಎಂಬುದರಲ್ಲಿ ತಾತ್ಪರ್ಯವು; ಇದೇ ನಿವೃತ್ತಿ ಮಾರ್ಗವು. ಅಂತರವಾದ ಆತ್ಮಸ್ವರೂಪಾಂಶದಲ್ಲಿ ಅಭಿನಿವೇಶವಿಲ್ಲದೆ ಆಗಂತುಕವಾಗಿ ಮೇಲೆ ಬಂದ ದೇಹದಲ್ಲಿ ಲಕ್ಷ್ಯವಿಟ್ಟ ಶಾಸ್ತ್ರಗಳನ್ನು ಅಧಿಕರಿಸಬೇಕಾದರೆ ಉತ್ತಮವರ್ಣ ಜನ್ಮ, ವೇದಾಧಿಕಾರ, ಆಚಾರ ಮುಂತಾದ ಯೋಗ್ಯತೆಯುಂಟಾಗಿರಬೇಕು; ಚೇತನರ ನಿಷ್ಕೃಷ್ಟಸ್ವರೂಪದಲ್ಲಿ ಲಕ್ಷ್ಯವಿಟ್ಟ ಮೂಲಮಂತ್ರ ಜ್ಞಾನಕ್ಕೆ ಸರ್ವರೂ ಅಧಿಕಾರಿಗಳು.

ಶಾಸ್ತ್ರನಿಷ್ಠರಾದ ಉಪಾಸಕರು—ದೊಡ್ಡ ನದಿಯನ್ನು ಈಜಿ ದಾಟಬೇಕೆಂದಿರುವ ಜನರು ಬೆಂಡು ಮುಂತಾದುವನ್ನು ಒಂದು ಕೈಯಲ್ಲಿ ಇರುಕಿಕೊಂಡು

ಮತ್ತೊಂದು ಕೈಯಿಂದ ಹಿಂದೆ ಬಗೆದು ತಳ್ಳುತ್ತಾ ಆಚೆ ದಡವನ್ನು ಸೇರಬಯಸುತ್ತಿರುವಂತೆ, ಕರ್ಮಜ್ಞಾನಾದಿ ರೂಪವಾದ ಸ್ವಯತ್ನಗಳನ್ನೂ ತತ್ಸಾಧ್ಯವಾದ ಭಗವತ್ಕೃಪೆಯನ್ನೂ ಅವಲಂಬಿಸಿ ಸಂಸಾರಸಮುದ್ರವನ್ನು ದಾಟಲೆಳಸುವವರು. ಮೂಲಮಂತ್ರನಿಷ್ಠರಾದ ಪ್ರಪನ್ನರೋ ಎಂದರೆ ಪರಿಗ್ರಹಿಸಿದ್ದ ಎರಡು ಕೈಗಳನ್ನೂ ಬಿಟ್ಟು ನಿರ್ಭರರಾಗಿರುವವರಂತೆ, ಸಿದ್ಧೋಪಾಯವೆಂಬ ತೆಪ್ಪವನ್ನು ಹತ್ತಿ ಕುಳಿತು ಕೇವಲ ಭಗವತ್ಕೃಪೆಯೇ ಉತ್ತಾರಕ ಎಂದು ನಿಶ್ಚಯಿಸಿ ಭಗವತ್ಪ್ರಾಪ್ತಿಕಾಲವನ್ನು ನಿರೀಕ್ಷಿಸಿಕೊಂಡಿರುವರು.

ವೇದಾದಿ ಶಾಸ್ತ್ರಗಳನ್ನು ಚತುರ್ಮುಖ ಮನು ವ್ಯಾಸಾದಿ ಮಹರ್ಷಿಗಳ ಮೂಲಕ ಪ್ರಕಾಶಗೊಳಿಸಿದಂತೆಯೇ, ಸರ್ವೇಶ್ವರನು ಈ ನಿವೃತ್ತಿಮಾರ್ಗ ಬೋಧಕವಾದ ವೇದಾಂತರಹಸ್ಯ ಶಾಸ್ತ್ರಗಳನ್ನು ಆಳ್ವಾರುಗಳ ಮೂಲಕವಾಗಿ ಪ್ರಕಾಶಪಡಿಸಿದನು. ಆ ಆಳ್ವಾರುಗಳಿಗೆ ನಿರ್ಹೇತುಕವಾದ ಕಟಾಕ್ಷದಿಂದ ಅಜ್ಞಾನವನ್ನು ಸವಾಸನವಾಗಿ ತೊಲಗಿಸಿ ಯಥಾರ್ಥಜ್ಞಾನವುಂಟಾಗುವಂತೆ ಅನುಗ್ರಹಿಸಿ, ಅವರುಗಳ ಹೃದಯದಲ್ಲಿ ತಾನೇ ನಿಂತು, ವೈಣಿಕನು ವೀಣೆಯಮೂಲಕ ಹಾಡು ಹಾಡಿಸುವಂತೆ, ಅವರುಗಳ ಮೂಲಕವಾಗಿ ದಿವ್ಯಪ್ರಬಂಧಗಳೆಂಬ ರಹಸ್ಯ ಶಾಸ್ತ್ರಗಳನ್ನು ಪ್ರಕಾಶಪಡಿಸಿದನು. ಸರ್ವೇಶ್ವರನು ವೇದವನ್ನು ಮೊದಲು ಚತುರ್ಮುಖನಿಗೆ ಹೇಳಿಕೊಟ್ಟು ಅವನ ಶಿಷ್ಯಪ್ರಶಿಷ್ಯರ ಮೂಲಕವಾಗಿ ಪ್ರಚಾರಗೊಳಿಸಿದಂತೆಯೇ, ಇಲ್ಲಿಯೂ ತಾನೇ ಆಳ್ವಾರುಗಳಿಗೆ ಆಚಾರ್ಯನಾಗಿ ಅವರ ಹೃದಯದಲ್ಲಿ ನಿಂತು ಸಂತೆಯನ್ನು ಹೇಳಿಕೊಟ್ಟು, ಅವರು ಅನೂಚ್ಚಾರಣವನ್ನು ಮಾಡಿ ಕಲಿತು ತಮ್ಮ ಶಿಷ್ಯರ ಮೂಲಕ ಪ್ರಚಾರಪಡಿಸುವಂತೆ ಮಾಡಿದನು.

ವೇದಕ್ಕೆ ಆಥರ್ವಣ, ಕಾಣ್ವ, ತೈತ್ತಿರೀಯ ಎಂದು ಮುಂತಾಗಿ ಪ್ರಥಮಾಧ್ಯಯನಮಾಡಿದವರಿಂದ ಗುರುತಿನ ಹೆಸರು ಬಂದಿರುವಂತೆಯೇ ಈ ತಿರುವಾಯ್ಮೊಳಿಗೂ ಪ್ರಥಮಾಧ್ಯಯನಮಾಡಿದ ನಮ್ಮಾಳ್ವಾರರ ನಾಮಧೇಯದಿಂದ ಶಠಕೋಪರ್ಶೊಲ್ ಎಂದು ಹೆಸರು ಬಂದಿದೆ.

ಹೀಗೆ ಲೋಕೋಜ್ಜೀವನಾರ್ಥವಾಗಿ ಭಗವನ್ನಿಯಮನದಿಂದ ಅವತರಿಸಿಯೂ ಭಗವದನುಗ್ರಹದಿಂದಲೇ ದಿವ್ಯಜ್ಞಾನವನ್ನು ಪಡೆದೂ ಬೆಳಗುತ್ತಿರುವ ಹತ್ತುಮಂದಿ ಆಳ್ವಾರುಗಳೊಳಗೆ ನಮ್ಮಾಳ್ವಾರು ಅಂಗಿಯಾಗಿಯೂ ಮಿಕ್ಕ ಆಳ್ವಾರುಗಳು ಅವರ ಅಂಗಪ್ರಾಯರಾಗಿಯೂ ಇರುವರು. ಈ ಆಳ್ವಾರುಗಳು ರಚಿಸಿದ ದಿವ್ಯಪ್ರಬಂಧಗಳೊಳಗೆ ನಮ್ಮಾಳ್ವಾರರವರ ನಾಲ್ಕು ಪ್ರಬಂಧಗಳು ನಾಲ್ಕು ವೇದಸ್ಥಾನೀಯವಾಗಿಯೂ, ಚತುಷ್ಪದಿಚೂಡಾಮಣಿಯಾದ ತಿರುಮಂಗೈಮನ್ನರ್ ಮಾಡಿದ

ತಿರುವಾಯ್ಮೊಳಿ ಮುಂತಾದ ಆರು ಪ್ರಬಂಧಗಳು ಆ ವೇದಗಳ ಅಂಗಸ್ಥಾನೀಯ ವಾಗಿಯೂ, ಮಿಕ್ಕ ಆಳ್ವಾರುಗಳ ಪ್ರಬಂಧಗಳು ಉಪಾಂಗಸ್ಥಾನೀಯವಾಗಿಯೂ ಇರುವುವು.

ಇನ್ನೂ ಈ ಪ್ರಬಂಧಗಳಿಗೆ ವಕ್ತೃವೈಲಕ್ಷಣ್ಯ ಪ್ರಮೇಯವೈಲಕ್ಷಣ್ಯ ಗಳಿಂದಲೂ ಬಂದ ಅತಿಶಯವಿಶೇಷವುಂಟು. ಸಮುದ್ರಜಲವು ಮೊದಲು ಉಪ್ಪು ಪ್ಪಾಗಿ ವಿರಸವಾಗಿಯೂ ಸೂರ್ಯ ಚಂದ್ರಗ್ರಹಣ ಮುಂತಾದ ಪರ್ವಕಾಲಗಳಲ್ಲಿ ಹೊರತು ಮಿಕ್ಕವೇಳೆಯಲ್ಲಿ ಮುಟ್ಟಕೂಡದೆಂಬ ಕಾಲನಿಯಮವಾದಿಗಳುಳ್ಳ ದಾಗಿಯೂ ಇದ್ದರೂ, ಅದನ್ನೇ ಮೇಘವು ಗ್ರಹಿಸಿ ಮಳೆನೀರಾಗಿ ಸುರಿಸಿದಾಗ ಆ ಮೇಘಸ್ಪರ್ಶದಿಂದ ಅದೇ ಸಮುದ್ರಜಲವು ತನ್ನ ವಿರಸತ್ವವನ್ನು ನೀಗಿಕೊಂಡು ಮಧುರವಾಗಿ ಸರ್ವಕಾಲದಲ್ಲಿಯೂ ಸರ್ವರಿಗೂ ಭೋಗ್ಯವಾಗಿರುವುದು. ಅದೇ ರೀತಿಯಲ್ಲಿ ಅಧ್ಯಯನಕಾಲನಿಯಮ, ಅಧಿಕಾರಿನಿಯಮ ಮುಂತಾದ ನಿರ್ಬಂಧ ಗಳುಳ್ಳ ವೇದವಿದ್ಯಾಸಮುದ್ರವು ಆಳ್ವಾರುಗಳ ಹೃದಯದಲ್ಲಿ ತಂಗಿದ್ದು ವಾಕ್ಕಿನಿಂದ ಹೊರಟು ಕಾಲನಿಯಮ, ಅಧಿಕಾರಿನಿಯಮ ಮುಂತಾದ ನಿರ್ಬಂಧಗಳೊಂದೂ ಇಲ್ಲದೆ ಶೆನ್ದಮಿೞ್ ವೇದಂ ಎಂಬ ಆಕಾರವನ್ನು ಹೊಂದಿ ಸರ್ವದಾ ಸರ್ವ ಜನ ರಿಗೂ ಭೋಗ್ಯವಾಗಿ ಉಪಜೀವ್ಯವಾಗಿರುವುದು.

ಪರಮಾತ್ಮನ ಅವತಾರವಿಶೇಷಗಳಿಗೆ ಅನುಸಾರವಾಗಿ ವೇದವೂ ತನ್ನ ಅವತಾರಗಳನ್ನು ಬದಲಾಯಿಸುತ್ತ ಬಂದಿರುವುದು. ಹೇಗೆಂದರೆ—ಬ್ರಹ್ಮಾದಿಗಳ ವಾಙ್ಮನಸ್ಸುಗಳಿಗೂ ಗೋಚರಿಸದ ಪರಮಪದದಲ್ಲಿ ನೆಲೆಸಿದ್ದ ಪರಮಾತ್ಮನು ಚೇತನೋಜ್ಜೀವನಕ್ಕಾಗಿ ದಯೆಯಿಂದ ಶ್ರೀರಾಮಾವತಾರವನ್ನು ಮಾಡಿ ಸೌಲಭ್ಯದಿಂದ ಸಕಲಜನ ದೃಷ್ಟಿಗೋಚರನಾಗಿ ಕೊನೆಗೆ ಕೋಸಲದೇಶದ ಪ್ರಾಣಿ ಗಳಿಗೆಲ್ಲಾ ವೈಕುಂಠದಲ್ಲಿ ನಿತ್ಯಪದವಿಯನ್ನಿತ್ತು ಅನುಗ್ರಹಿಸಿದನು. ಅವನ ಸೌಲ ಭ್ಯಾದಿಗಳನ್ನನುಸರಿಸಿ ವೇದವೂ ತನ್ನ ಪರತ್ವಾದಿಗಳನ್ನು ಬಿಟ್ಟು ವಾಲ್ಮೀಕಿ ಮುಖ ದಿಂದ ಶ್ರೀರಾಮಾಯಣರೂಪದಲ್ಲಿ* ಅವತರಿಸಿ ವೇದಾನ್ತಾರ್ಥಗಳನ್ನು ಪ್ರಕಾಶ ಪಡಿಸುತ್ತ ಅರ್ಥಾನುಸಂಧಾನ ಪಾರಾಯಣಾದಿಗಳಮೂಲಕ ಜನರ ಮನೋರಥ ಗಳನ್ನು ಸಲ್ಲಿಸುತ್ತಿರುವುದು. ಆ ಭಗವಂತನೇ ರಾಮಕೃಷ್ಣಾದಿ ವಿಭವಾವತಾರ ಗಳಿಗಿಂತ ಸುಲಭನಾಗಿ ಶ್ರೀರಂಗ, ವೇಂಕಟಾದ್ರಿ ಮುಂತಾದ ದಿವ್ಯದೇಶಗಳಲ್ಲಿ ಅರ್ಚಾರೂಪದಿಂದ ನೆಲೆಸಿರಲು, ವೇದವೂ ಆ ಭಗವದಭಿಪ್ರಾಯಾನುಸಾರವಾಗಿ

* ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃ ಪ್ರಾಚೇತಸಾದಾಸೀತ್ಸಾಕ್ಷಾದ್ರಾಮಾಯಣಾತ್ಮನಾ ।

ಆಳ್ವಾರುಗಳ ಮುಖಾರವಿಂದಗಳಿಂದ ದಿವ್ಯಪ್ರಬಂಧರೂಪದಲ್ಲಿ ಆವಿರ್ಭವಿಸಿ ಸಕಲ ವೇದಾನ್ತರಹಸ್ಯಾರ್ಥಗಳನ್ನೂ ವೇದಾನಧಿಕಾರಿಗಳಾದ ಸ್ತ್ರೀಶೂದ್ರಾದಿಗಳಿಗೂ ಸುಬೋಧವಾಗುವಂತೆ ಪ್ರಕಾಶಪಡಿಸಿ ಸರ್ವೋಜ್ಜೀವನಹೇತುವಾಯಿತು (ಪುಟ ೧೯).

ನಮ್ಮಾಳ್ವಾರವರು ಭಗವತ್ಪ್ರೇರಿತರಾಗಿ ತಾವು ಮಾಡಿದ ದಿವ್ಯಪ್ರಬನ್ಧಗಳು ನಾಲ್ಕರೊಳಗೆ ಮೊದಲನೆಯದಾದ ತಿರುವಿರುತ್ತಂ ಎಂಬ ಪ್ರಬನ್ಧದಲ್ಲಿ ಮೋಕ್ಷಕ್ಕೆ ಮುಖ್ಯಪ್ರತಿಬಂಧಕವಾದ ಸಕಲ ಸಂಸಾರಸಂಬನ್ಧದ ನಿವೃತ್ತಿಯನ್ನು ಭಗವನ್ತನಲ್ಲಿ ಪ್ರಾರ್ಥಿಸಿದರು. ತಿರುವಾಶಿರಿಯಂ ಎಂಬ ಎರಡನೆಯ ಪ್ರಬಂಧದಲ್ಲಿ ಸಂಸಾರ ಸಂಬಂಧ ನಿವೃತ್ತಿಯನ್ನು ಪಡೆದವರು ಯಾವಜ್ಜೀವವೂ ಅನುಭವಿಸಲು ಯೋಗ್ಯವಾದ ಭಗವಂತನ ವಾತ್ಸಲ್ಯ ಸೌಲಭ್ಯಾದಿಗುಣಗಳನ್ನು ಇಲ್ಲಿ ಅನುಭವಿಸುತ್ತಲೇ ಇದ್ದರು. ಮೂರನೆಯ ಪ್ರಬಂಧವಾದ ಪೆರಿಯತಿರುವನ್ದಾದಿಯಲ್ಲಿ ಆ ಭಗವದನುಭವದಲ್ಲಿ ತಮಗೆ ಉಂಟಾದ ಅತ್ಯಧಿಕವಾದ ಆದರಾತಿಶಯವನ್ನು ಬ ಅಡಿಗಡಿಗೆ ಹೇಳುತ್ತಲೇ ಇದ್ದರು. ನಾಲ್ಕನೆಯ ದಿವ್ಯಪ್ರಬಂಧವಾದ ತಿರುವಾಯ್ಮೊಳಿಯಲ್ಲಿ ತಮ್ಮ ಅಭಿನಿವೇಶವು ಈಡೇರುವಂತೆ ಭಗವಂತನನ್ನು ಪರಿಪೂರ್ಣವಾಗಿ ಅನುಭವಿಸಿ, ಆನಂದಿಸಿ, ಕೃತಾರ್ಥರಾದ ವಿಷಯವನ್ನು ವಿವರಿಸಿದರು. ಆದುದರಿಂದ ಫಲಪ್ರಕಾಶದ ಆರಂಭದಲ್ಲಿ ಹೇಳಿದಂತೆ "ಸಕಲ ಪ್ರತಿಬಂಧಕ ನಿವೃತ್ತಿಪೂರ್ವಕವಾಗಿ ಅಪ್ರಾಕೃತ ದಿವ್ಯವೈಕುಂಠಲೋಕದಲ್ಲಿ ಸೇರಿ ಗುಣವಿಗ್ರಹ ವಿಭೂತಿವಿಶಿಷ್ಟನಾದ ಶ್ರೀಮನ್ನಾರಾಯಣನ ಅನುಭವದಿಂದಲೂ ಕೈಂಕರ್ಯದಿಂದಲೂ ಪಡೆದ ನಿತ್ಯನಿರತಿಶಯಾನನ್ದವೇ ಮೋಕ್ಷವು"—ಎಂಬ ಅಂಶವೇ ನಮ್ಮಾಳ್ವಾರವರ ನಾಲ್ಕು ದಿವ್ಯಪ್ರಬಂಧಗಳಿಂದಲೂ ನಿರೂಪಿತವಾಗಿದೆ.

---

೭೮. ತಿರುವಾಯ್ಮೊಳಿಯ ಒಂದೊಂದು ಶತಕದ ತಾತ್ಪರ್ಯಸಂಗ್ರಹ

ನಮ್ಮಾಳ್ವಾರವರು ತಿರುವಾಯ್ಮೊಳಿಯ ಮೊದಲನೆಯ ಶತಕದಲ್ಲಿ ಭಗವತ್ಕೈಂಕರ್ಯವೇ ಪರಮಪುರುಷಾರ್ಥ ಎಂಬುದನ್ನು ಪ್ರಕಾಶಪಡಿಸಿದರು. ಎರಡನೆಯ ಶತಕದಲ್ಲಿ—ಪುರುಷಾರ್ಥವಾದ ಆ ಕೈಂಕರ್ಯಕ್ಕೆ ಬಾಧ್ಯವಿರೋಧಿಯಾದ ಪ್ರಕೃತಿ

---

* ಈ ದ್ರಾವಿಡಪ್ರಬಂಧಗಳ ವೇದತ್ವವೂ ಅತಿಶಯವೂ ಪ್ರಾಮಾಣಿಕತ್ವವೂ ಶ್ರೀ ಪಾಂಚರಾತ್ರದ ವಾಸುದೇವಸಂಹಿತೆ, ಅನಿರುದ್ಧಸಂಹಿತೆ, ಪಾರಮೇಶ್ವರಸಂಹಿತೆ ಇವುಗಳಲ್ಲಿಯೂ, ಬ್ರಹ್ಮವೈವರ್ತಪುರಾಣ (೨೯ನೆಯ ಅಧ್ಯಾಯ), ಮಾರ್ಕಂಡೇಯಪುರಾಣ (ಮಧ್ಯಮಭಾಗದ ಭಗವದ್ಧರ್ಮನಿರೂಪಣದಲ್ಲಿ ಸೇನೇಶ—ಸನತ್ಕುಮಾರ ಸಂವಾದ), ಗುರುಪರಂಪರಾಪ್ರಭಾವ (೧೫-೧೧೭ ಪುಟ) ಇವುಗಳಲ್ಲಿಯೂ ವಿಶದೀಕೃತವಾಗಿದೆ.

ಸಂಬಂಧವನ್ನೂ ಕೈಂಕರ್ಯವು ಸ್ವಪ್ರಯೋಜನಾರ್ಥ ಎಂಬ ಅನ್ತರವಿರೋಧಿಯನ್ನೂ ನೀಗಿಸಿಕೊಳ್ಳಲೇಬೇಕು ಎಂದು ಕಳಕಳಿಯಿಂದ ಸಮರ್ಪಿಸಿದರು. ಮೂರನೆಯ ಶತಕದಲ್ಲಿ—ಇಂಥ ವಿರೋಧಿಯನ್ನು ನೀಗಿದ ಕೈಂಕರ್ಯಸ್ವರೂಪವು ಭಾಗವತ ಶೇಷತ್ವಪರ್ಯನ್ತವಾದ ಭಗವತ್ಕೈಂಕರ್ಯವೇ ಎಂದು ವಿವರಿಸಿದರು. ನಾಲ್ಕನೆಯ ಶತಕದಲ್ಲಿ—'ಇಂಥ ಕೈಂಕರ್ಯಕ್ಕೆ ವಿರೋಧಿ ಐಶ್ವರ್ಯ ಕೈವಲ್ಯಗಳಲ್ಲಿ ವಾಸನೆಯೇ ಎಂದು ಹೇಳಿದರು. ಐದನೆಯ ಶತಕದಲ್ಲಿ—ಅಂಥ ವಿರೋಧಿಗಳನ್ನು ಕೃಪಾಪೂರ್ವಕವಾಗಿ ನೀಗಿಸುವನೂ ಆ ಶ್ರೀಮನ್ನಾರಾಯಣನೇ ಎಂದು ಸ್ಥಾಪಿಸಿದರು. ಆರನೆಯ ಶತಕದಲ್ಲಿ—ಆಶ್ರಿತವಿರೋಧಿನಿರಸನಶೀಲನಾದ ಆ ಭಗವಂತನ ಚರಣಾರವಿಂದಗಳಲ್ಲಿ ಶರಣಾಗತಿಯನ್ನು ಮಾಡಿದರು. ಏಳನೆಯ ಶತಕದಲ್ಲಿ ಲಕ್ಷ್ಮೀಪುರುಷಕಾರಪೂರ್ವಕವಾಗಿ ಶರಣಹೊಕ್ಕರೂ ದಗ್ಧಪಟನ್ಯಾಯದಿಂದ ಸಂಸಾರವು ತನ್ನನ್ನು ಅನುಸರಿಸುತ್ತಿರುವ ಸ್ಥಿತಿಯನ್ನು ನೋಡಿ ವಿಷಾದಪಟ್ಟರು. ಎಂಟನೆಯ ಶತಕದಲ್ಲಿ—ಹೀಗೆ ಶರಣಾಗತರಾಗಿದ್ದರೂ ಸಂಸಾರವು ತನ್ನನ್ನು ಅನುವರ್ತಿಸುವುದು ತಾನು ಆತ್ಮಾತ್ಮೀಯಗಳಲ್ಲಿ ವಾಸನಾರುಚಿಗಳನ್ನು ಸಂಪೂರ್ಣವಾಗಿ ತೊಲಗಿಸಿಕೊಳ್ಳದೇ ಇದ್ದುದರಿಂದಲೋ ಎಂದು ಪರಾಮರ್ಶಿಸಿ, ತನ್ನಲ್ಲಿ ಅಂಥ ವಾಸನಾರುಚಿಗಳೊಂದೂ ಇಲ್ಲ ಎಂದು ತೀರ್ಮಾನಿಸಿಕೊಂಡರು. ಒಂಬತ್ತನೆಯ ಶತಕದಲ್ಲಿ—ತಾನು ವಾಸನಾರುಚಿರಹಿತನಾಗಿದ್ದರೂ ಭಗವಂತನು ರಕ್ಷಿಸದೆ ಇರಲು ಕಾರಣವೇನೋ ಎಂದು ಅತಿಶಂಕೆ ಮಾಡಲು, ಭಗವಂತನು (ಇವರ ಮಾನಸಪ್ರತ್ಯಕ್ಷಗೋಚರನಾಗಿ)—ನಾನು ನಾರಾಯಣನು, ಸರ್ವಶಕ್ತಿಯುಕ್ತನು, ನಿಮ್ಮ ಸಕಲಾಪೇಕ್ಷಿತಗಳನ್ನೂ ಕೈಗೂಡಿಸುವೆನು, ಎಂದು ಹೇಳಿ ಅನುಗ್ರಹಿಸಲು, ಅವನ ಸೌಶೀಲ್ಯಗುಣದಲ್ಲಿ ಮಗ್ನರಾದರು. ಹತ್ತನೆಯ ಶತಕದಲ್ಲಿ—ಭಗವಲ್ಲಾಭದಲ್ಲಿ ಆಳ್ವಾರವರ ತವಕವನ್ನು ಕಂಡು, ಭಗವಂತನು ಇವರಿಗೆ ಅರ್ಚಿರಾದಿ ಗತಿಯನ್ನು ತೋರಿಸಿ, ಇವರ ಅಪೇಕ್ಷಿತ ಸಂವಿಧಾನಗಳನ್ನು ಮಾಡಿ, ಪರಿಪೂರ್ಣ ದಿವ್ಯಾನುಭವಗಳನ್ನು ಅನುಗ್ರಹಿಸಿದನು—ಎಂಬುದನ್ನು ನಿರೂಪಿಸಿದರು.

ಅಲ್ಲದೆ ತಿರುವಿರುತ್ತಂ, ತಿರುವಾಶಿರಿಯಂ, ಪೆರಿಯ ತಿರುವನ್ದಾದಿ ಈ ಮೂರು ಪ್ರಬಂಧಗಳೂ ಮೂಲಮಂತ್ರ, ಚರಮಶ್ಲೋಕಗಳ ಅರ್ಥವನ್ನೂ ತಿರುವಾಯ್ ಮೊೞಿ ದ್ವಯದ ಅರ್ಥವನ್ನೂ ವಿಶದೀಕರಿಸುವುವೆಂದು ಬೇರೆ ಒಂದು ಯೋಜನೆಯೂ ಉಂಟು.

೭೫. ಕೊನೆಯದಾದ **ತಿರುವಾಯ್‌ಮೊೞಿ** ಎಂಬ ದಿವ್ಯಪ್ರಬಂಧವು ಮೋಕ್ಷಪ್ರಾಪ್ತಿಸಾಧನವಾದ ಅರ್ಥಪಂಚಕವನ್ನು ವಿಶದಪಡಿಸುವುದು ಎಂಬ ಅಭಿಪ್ರಾಯವನ್ನು ಪೂರ್ವಾಚಾರ್ಯರು ಈ ಶ್ಲೋಕದಿಂದ ಸಂಗ್ರಹಿಸಿ ಹೇಳಿರುವರು—

ಶ್ರೀಃಪತಿಶ್ಚೇತನಸ್ಯಾಸ್ಯ ಹೇತುತ್ವೇನ ಸಮಾಪ್ತಿಭಾಃ ।
ಅನಿಷ್ಟಹಾನಿರಿಷ್ಟಸ್ಯ ಪ್ರಾಪ್ತಿಂ ಚ ಶತಕೈಃ ಸ್ಮೃತಃ ॥

ಇಲ್ಲಿ ಶ್ರೀಃಪತಿಃ ಎಂಬುದರಿಂದ ಪ್ರಾಪ್ಯವಾದ ಪರಬ್ರಹ್ಮದ ಸ್ವರೂಪವೂ, ಚೇತನಸ್ಯ ಎಂದು ಜೀವಾತ್ಮಸ್ವರೂಪವೂ, ಹೇತುತ್ವೇನ ಎಂದು ಉಪಾಯದ ಸ್ವರೂಪವೂ, ಅನಿಷ್ಟಹಾನಿಃ ಎಂದು ಪ್ರಾಪ್ತಿವಿರೋಧಿಸ್ವರೂಪವೂ ಅದರ ಹಾನಿಯೂ, ಇಷ್ಟಸ್ಯ ಪ್ರಾಪ್ತಿಂ ಎಂದು ಪ್ರಾಪ್ಯವಾದ ಫಲವೂ ವಿವರಿಸಲ್ಪಟ್ಟು ಮೋಕ್ಷಸಾಧನವಾದ ಅರ್ಥಪಂಚಕವೂ ಸೂಚಿತವಾಗಿರುವುದು. ಈ ಕ್ರಮಾನುಸಾರವಾಗಿಯೇ, ೧-೨ನೆಯ ಶತಕಗಳು ಪ್ರಾಪ್ಯವಾದ ಪರಬ್ರಹ್ಮದ ಸ್ವರೂಪವನ್ನೂ, ೩-೪ನೆಯ ಶತಕಗಳು ಪ್ರಾಪ್ತೃವಾದ ಪ್ರತ್ಯಗಾತ್ಮನ ಸ್ವರೂಪವನ್ನೂ, ೫-೬ನೆಯ ಶತಕಗಳು ಪ್ರಾಪ್ತ್ಯುಪಾಯ ಸ್ವೀಕಾರವನ್ನೂ, ೭-೮ನೆಯ ಶತಕಗಳು ಪ್ರಾಪ್ತಿವಿರೋಧಿ ನಿವೃತ್ತಿಯ ಕ್ರಮವನ್ನೂ, ೯-೧೦ನೆಯ ಶತಕಗಳು ಪರಬ್ರಹ್ಮಪ್ರಾಪ್ತಿರೂಪವಾದ ಫಲಸಿದ್ಧಿಯನ್ನೂ ನಿರೂಪಿಸುವುವು. ಅದರಲ್ಲಿಯೂ ಪರಮಾತ್ಮನು ಪರತತ್ತ್ವವು, ಸರ್ವರಕ್ಷಕನು ಎಂದು ನಿರೂಪಿತವಾಗಿದೆ ಮೊದಲನೆಯ ಶತಕದಲ್ಲಿ ಮೊದಲನೆಯ ದಶಕವು ರಕ್ಷಕತ್ವಕ್ಕೆ ತಕ್ಕಂತೆ ಸರ್ವಸ್ಮಾತ್ಪರ ಎಂಬುದನ್ನೂ, ಎರಡನೆಯ ದಶಕವು ಸರ್ವಸಮಾಶ್ರಯಣೀಯ ಎಂಬುದನ್ನೂ, ಮೂರನೆಯದು ಅದಕ್ಕೆ ತಕ್ಕ ಸೌಲಭ್ಯಗುಣವುಳ್ಳವನೆಂಬುದನ್ನೂ, ನಾಲ್ಕನೆಯದು ಆಶ್ರಿತಾಪರಾಧಗಳನ್ನು ಕ್ಷಮಿಸುವ ಸ್ವಭಾವವುಳ್ಳವನು ಎಂಬುದನ್ನೂ, ಐದನೆಯ ದಶಕವು ಸೌಶೀಲ್ಯಗುಣವನ್ನೂ, ಆರನೆಯದು ಸುಲಭವಾಗಿ ಆರಾಧಿಸಲು ಸಾಧ್ಯನು ಎಂಬುದನ್ನೂ, ಏಳನೆಯದು ಅವನನ್ನು ಆಶ್ರಯಿಸುವುದು ಭೋಗ್ಯವಾಗಿರುವುದು ಎಂಬುದನ್ನೂ, ಎಂಟನೆಯದು ಆಶ್ರಿತವಿಷಯದಲ್ಲಿ ಅತ್ಯಂತ ಸರಳಸ್ವಭಾವನು ಎಂಬುದನ್ನೂ, ಒಂಬತ್ತನೆಯದು ಅನುಭವಯೋಗ್ಯವಾಗುವಂತೆ ಮಾಡಿ ಸಕಲ ಭೋಗಗಳನ್ನೂ ಕೊಡುವನು ಎಂಬುದನ್ನೂ, ಹತ್ತನೆಯ ದಶಕವು ನಿರ್ಹೇತುಕವಾಗಿ ಮಹೋಪಕಾರಿ ಎಂಬುದನ್ನೂ ಹೇಳುವುದರಿಂದ ಪರಮಶೇಷಿಯಾದ ಭಗವಂತನ ರಕ್ಷಕತ್ವ ಪೂರ್ತಿಯನ್ನು ಸ್ಥಾಪಿಸಿದಂತಾಯಿತು.

೮೦. ಭಗವದ್ರಾಮಾನುಜಾಚಾರ್ಯರು ತಮ್ಮ ಅಂತಿಮದಶೆಯಲ್ಲಿ, ಉಪದೇಶ ವಿಶೇಷವನ್ನು ಪಡೆಯಲು ತಮ್ಮಲ್ಲಿಗೆ ಬಂದ ಶಿಷ್ಯಮಂಡಲಿಗೆ ಈ ರೀತಿಯಾಗಿ ನಿರೂಪಿಸಿದರು—"ಸಕಲ ವೇದ, ಶಾಸ್ತ್ರ, ದಿವ್ಯಪ್ರಬಂಧ, ಆಚಾರ್ಯಶ್ರೀಸೂಕ್ತಿ ಇವುಗಳನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ನೋಡಿದುದರಲ್ಲಿ ಫಲಿತವಾದ ವಿಷಯವೇನೆಂದರೆ—ಎಂಥ ಮೋಕ್ಷಾಧಿಕಾರಿಗೂ ದ್ವಯಮಂತ್ರವೇ ಅನುಸಂಧೇಯವು; ಲಕ್ಷ್ಮೀನಾರಾಯಣರೆಂಬ ದಿವ್ಯದಂಪತಿಗಳೇ ಉಪಾಸ್ಯರು; ಶ್ರೀಮನ್ನಾರಾಯಣನ

ಕೈಂಕರ್ಯವೇ ಪುರುಷಾರ್ಥವು; ಭಾಗವತಾಪಚಾರವೇ ಮೋಕ್ಷವಿರೋಧಿ; ಆಚಾರ್ಯಾಭಿಮಾನವೇ ಮೋಕ್ಷೋಪಾಯವು. ಹೀಗೆ ಭಾಗವತಾಪಚಾರಕ್ಕೆ ಅವಕಾಶಕೊಡದೆ, ಆಚಾರ್ಯಾಭಿಮಾನಕ್ಕೆ ಪಾತ್ರನಾಗಿ, ಶ್ರೀಮನ್ನಾರಾಯಣನನ್ನೇ ಭಜಿಸುತ್ತ, ಅವನ ಕೈಂಕರ್ಯವನ್ನೇ ಪುರುಷಾರ್ಥವಾಗಿ ಎಣಿಸಿ, ದ್ವಯಾನುಸಂಧಾನವನ್ನು ಮಾಡುತ್ತಿದ್ದರೆ ಆ ಚೇತನನಿಗೆ ಶ್ರೀಮನ್ನಾರಾಯಣನು ಸಕಲ ಶ್ರೇಯಸ್ಸುಗಳನ್ನೂ ದಯಪಾಲಿಸುವನು.

ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಸ್ಸದಾ ॥
ಪ್ರಪ್ಯಾಂಧೋಽಜವಿನಾಶಾಯ ಮಾನಧ್ವಾಂತಕ್ಷಯಾಯ ಚ ।
ಶ್ರೀಮಾನಾವಿರಭೂದ್ಭೂಮೌ ರಾಮಾನುಜದಿವಾಕರಃ ॥
ಪ್ರಾಚೀನಾನಾಂ ಸುಶಕ್ಯಾನಾಂ ಫಲಾಯ ತಪಸಾಂ ನೃಣಾಂ ।
ಜಗದ್ಧಿತಾತ್ಮನೇ ಭೂಯಾದ್ಯತಿರಾಜಾಯ ಮಂಗಳಂ ॥

ಇಂತು ವಿಶಿಷ್ಟಾದ್ವೈತದೀಪಿಕೆಯ ಫಲಪ್ರಕಾರವು ಮುಗಿದುದು.

ಇಂತು ಆಸ್ಥಾನ ವಿದ್ವಾನ್ ಜಯರಾಮ ವೆಂಕಟಾಚಾರ್ಯರಿಂದ ರಚಿತವಾದ ವಿಶಿಷ್ಟಾದ್ವೈತದೀಪಿಕೆ ಸಂಪೂರ್ಣವಾಯಿತು.

ಶ್ರೀಃ

ಸಮರ್ಪಣಂ

ಶ್ರೀಶ್ರೈಲಾನಂತಯೋರ್ಗ್ರಂಥಸ್ಯ ಸಂಸ್ಕಾರಂ ಬಹು ಸುಧಾಕರಂ ।
ನಾರಾಯಣಾದಿಭ್ರಾತೃಭ್ಯಃ ಸಮರ್ಪಯದ್ದೇಶಿಕಃ ॥
ಜಯರಾಮೋ ವೇಂಕಟಾದ್ರಿಶ್ಚ ಪಾಠೇಷು ಪರಿಶ್ರುತೌ ।
ಶ್ರೀಶಠಾರಾತಿಯೋಗೀಂದ್ರಂ ಸ್ಮೃತ್ವಾ ಶ್ರೀಮಂತಂ ಸಮರ್ಪಯತ್

ಮಂಗಳಾಶಾಸನಂ

ವೇಂಕಟಾಚಾರ್ಯರಚಿತಾ ಟೀಕಾ ದಿವ್ಯಪ್ರಬೋಧಿಕಾ ।
ಗುರುಸ್ತಸ್ಯ ಪದಾಂಭೋಜೇ ಸತ್ಪಾತ್ರೇ ವಿನಿಯೋಜಿತಾ ॥
ಶ್ರೀಯತಿಪತಿಪಾದಾಬ್ಜ ಪರಿಷ್ಕಾರೈಕತತ್ಪರಾ ।
ಸದ್ದರ್ಶನಪ್ರಕಾಶೇನ ಜೀಯಾದಾಚಂದ್ರತಾರಕಂ ॥